ಮಂಗಳೂರು
ಶುಕ್ರವಾರ, 27 ಮಾರ್ಚ್ 2026
ಸಂಪುಟ 48, ಸಂಚಿಕೆ 8, ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಅಲ್-ಖೈದಾ ನಂಟು: 12 ಮಂದಿ ಸೆರೆ | ೦೭
ಶ್ರೀರಾಮನೆಂದರೆ ಅಮಿತಾನಂದಸ್ವರೂಪೀ | ವಿಶೇಷ ಪುಟ ೧೨
ಶ್ರೀರಾಮನವಮಿ ಹಬ್ಬದ ಶುಭಾಶಯ

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುನರ್ವಸು

ದಿನದ ಮಾತು

ಅಹಂಕಾರವೇ ಎಲ್ಲಾ ಸದ್ಗುಣಗಳ ಅತಿ ಪ್ರಬಲ ವೈರಿ. ಆತ್ಮ ವಿಶ್ವಾಸದ ಹೆಸರಿನಲ್ಲಿ ಸ್ವಪ್ರತಿಷ್ಠೆ ಬೆಳೆಸಬಾರದು.

▲ಶ್ರೀ ಗುರೂಜಿ

ಧುರಂಧರ: ಸಂಭಾಷಣೆ ಮತ್ತು ಬಲೂಚ್ ಪ್ರಶ್ನೆ!

ಉಘೇ ವೀರ ಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ಜಿಬಿಎ ಚೊಚ್ಚಲ ಬಜೆಟ್ ಇಂದು, ನಾಳೆ ಮಂಡನೆ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ 2026–27ನೇ ಸಾಲಿನ ಚೊಚ್ಚಲ ಆಯ-ವ್ಯಯವನ್ನು ಮಾ.27 ಹಾಗೂ 28ರಂದು ಮಂಡನೆಯಾಗಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ನಗರ ಪಾಲಿಕೆಯಾಗಿ ರಚನೆಯಾದ ನಂತರ ಮೊದಲ ಬಾರಿಗೆ ಪಂಚ ಪಾಲಿಕೆಗಳ ಬಜೆಟ್ ಮಂಡನೆಯನ್ನು ಮಾಡಲಾಗುತ್ತದೆ. ಇದಕ್ಕಾಗಿ ಅಧಿಕಾರಿಗಳು ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ. ಮಾ.27ರಂದು ಬೆಳಗ್ಗೆ 9:30ಕ್ಕೆ ವೈಟ್‌ಫೀಲ್ಡ್‌ನ ಎಂ.ಎಲ್. ಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಪೂರ್ವ ನಗರ ಪಾಲಿಕೆ, ಮ.12:30ಕ್ಕೆ ಟೌನ್ ಹಾಲ್‌ನಲ್ಲಿ ಕೇಂದ್ರ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ. ಮಾ.28ರಂದು ಬೆಳಗ್ಗೆ 9:30ಕ್ಕೆ ಯಲಹಂಕ ನ್ಯೂ ಟೌನ್ ಅಂಬೇಡ್ಕರ್ ಭವನದಲ್ಲಿ ಉತ್ತರ ನಗರ ಪಾಲಿಕೆ, ಮ.12:30ಕ್ಕೆ ಮಲ್ಲೇಶ್ವರನ ಐಪಿಪಿ ಸೆಂಟರ್‌ನಲ್ಲಿ ಪಶ್ಚಿಮ ನಗರ ಪಾಲಿಕೆ ಬಜೆಟ್, ಮ.2:30ಕ್ಕೆ ಜಿಲ್ಲಾ ಪಂಚಾಯ್ತಿ ಸಭಾಂಗಣ, ಬನಶಂಕರಿ ದೇವಸ್ಥಾನ ಹತ್ತಿರ, ದಕ್ಷಿಣ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೂರ್ಯ ಮಂದಿರದ ಮೇಲೆ ಧ್ವಜಾರೋಹಣ

• ಪುಟ ೭





ರಾಮನವಮಿ ಹಿನ್ನೆಲೆ ಕಲಬುರಗಿ ನಗರದಲ್ಲಿ 15 ಅಡಿ ಎತ್ತರದ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನ ಅದ್ದೂರಿ ಶೋಭಾಯಾತ್ರೆ ಜರುಗಿತು. 2 ಲಕ್ಷಕ್ಕೂ ಅಧಿಕ ರಾಮ ಭಕ್ತರು ಶೋಭಾಯಾತ್ರೆಗೆ ಸಾಕ್ಷಿಯಾದರು.

ಲಕ್ಷಾಂತರ ರಾಮಭಕ್ತರ ಜೈ ಘೋಷ

ಕಲಬುರಗಿಯಲ್ಲಿ ಶ್ರೀರಾಮನ ಅದ್ದೂರಿ ಶೋಭಾಯಾತ್ರೆ

• **ಕಲಬುರಗಿ:** ರಾಮನವಮಿ ಅಂಗವಾಗಿ ಬಿಸಿಲು ನಾಡಾದ ಕಲಬುರಗಿಯಲ್ಲಿ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನ 15 ಅಡಿ ಎತ್ತರದ ಮೂರ್ತಿಯ ಅದ್ದೂರಿ ಮೆರವಣಿಗೆಯೂ ಗುರುವಾರ ಲಕ್ಷಾಂತರ ರಾಮಭಕ್ತರ ಜೈ ಘೋಷಗಳ ಮಧ್ಯೆ ವೈಭವಮಯವಾಗಿ ನಡೆಯಿತು.

ನಗರದ ಹೊರವಲಯದ ಚೆಕ್‌ಪೋಸ್ಟ್ ಬಳಿಯ ರಾಮತೀರ್ಥ ಮುಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಶರಣಬಸವೇಶ್ವರರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ, ಪಾಳಾದ ಗುರುಮೂರ್ತಿ ಶಿವಾಚಾರ್ಯರು ಸೇರಿದಂತೆ ಜಿಲ್ಲೆಯ ವಿವಿಧ ಮಠಾಧೀಶರ ನೇತೃತ್ವದಲ್ಲಿ ಅದ್ದೂರಿ ಶೋಭಾಯಾತ್ರೆಗೆ ಚಾಲನೆ ನೀಡಿದ್ದು, ಚೆಕ್ ಪೋಸ್ಟ್‌ನಿಂದ ಹೊರಟ ಶೋಭಾಯಾತ್ರೆ, ದೇವಿ ನಗರ, ಖಾದ್ರಿ ಚೌಕ್, ಶೆಟ್ಟಿ ಟಾಕೀಸ್, ಸೂಪರ್ ಮಾರ್ಕೆಟ್, ಜನತಾ ಬಜಾರ್, ಸಿಟಿ ಸೆಂಟರ್ ಮಾಲ್ ಮುಖಾಂತರ ನಗರದ ಜಗತ್ ವೃತ್ತದಲ್ಲಿ ಸಂಪನ್ನಗೊಂಡಿತು. ಶೋಭಾಯಾತ್ರೆಯ ಮಾರ್ಗದುದ್ದಕ್ಕೂ ರಾಮ ಭಕ್ತರಿಗಾಗಿ ವಿವಿಧ ಸಂಘ ಸಂಸ್ಥೆಗಳು, ಉದ್ಯಮಿಗಳಿಂದ ಪ್ರಸಾದ, ತಂಪು ಪಾನೀಯ ವ್ಯವಸ್ಥೆ ಮಾಡಲಾಗಿತ್ತು. ನಗರದ ಚೆಕ್ ಪೋಸ್ಟ್ ನಿಂದ ರಾಮನವಮಿ ಉತ್ಸವ ಸಮಿತಿ ಹಾಗೂ ಮಹೇಶ್ ಗೊಬ್ಬುರ ನೇತೃತ್ವದ ಆದಿ ಪುರುಷ ರಾಮನವಮಿ ಉತ್ಸವ ಸಮಿತಿಯ ಎರಡು ಶೋಭಾಯಾತ್ರೆ ಹೊರಟರೇ, ರಾಮಮಂದಿರದಿಂದ ಇನ್ನೊಂದು ಶೋಭಾಯಾತ್ರೆ ಜರುಗಿತು. ಶೋಭಾಯಾತ್ರೆಯಲ್ಲಿ 2 ಲಕ್ಷಕ್ಕೂ ಅಧಿಕ ರಾಮ ಭಕ್ತರು ಪಾಲ್ಗೊಂಡು, ಭಕ್ತಿಯ ಸಂಭ್ರಮದಲ್ಲಿ ಮಿಂದೆದ್ದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಮುಖ್ಯಮಂತ್ರಿಗಳ ಜತೆ ಇಂದು ಮೋದಿ ಸಭೆ

ಸನ್ನದ್ಧತೆ ಪರಾಮರ್ಶೆ



• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆಯಲ್ಲಿ ರಾಜ್ಯಗಳ ಸನ್ನದ್ಧತೆ ಮತ್ತು ಯೋಜನೆಗಳನ್ನು ಪರಿಶೀಲಿಸಲು ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಚುನಾವಣೆ ಎದುರಿಸಲಿರುವ ರಾಜ್ಯಗಳ ಹೊರತುಪಡಿಸಿ, ಉಳಿದೆಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಂವಾದ ನಡೆಸಲಿದ್ದಾರೆ. ಟೀಮ್ ಇಂಡಿಯಾ ಸ್ಫೂರ್ತಿಯಲ್ಲಿ ಸಂಘಟಿತ ಪ್ರಯತ್ನ ಗಳನ್ನು ಉತ್ತೇಜಿಸುವುದು ಪ್ರಸ್ತುತ ಸಂವಾದದ ಮೂಲಾಶಯವೆಂದು ಮೂಲಗಳು ತಿಳಿಸಿವೆ.

ಪ. ಏಷ್ಯಾ ಸಂಘರ್ಷ ಹಿನ್ನೆಲೆಯಲ್ಲಿ ಇಂಧನ, ಆಹಾರ ಮತ್ತು ಭದ್ರತೆ ಕುರಿತು ರಾಜ್ಯಗಳ ಸನ್ನದ್ಧತೆಗಳಿಗೆ ಸಂಬಂಧಿಸಿ ಪ್ರಧಾನಿ ಮೋದಿಯವರು ಶುಕ್ರವಾರ ಸಂಜೆ ವಿಡಿಯೊ ಕಾನ್ಫರೆನ್ಸಿಂಗ್ ಮುಖೇನ ವಿವಿಧ ರಾಜ್ಯಗಳ ಸಿಎಂಗಳ ಜತೆ ಸಂವಾದ ನಡೆಸುವರು. ಚುನಾವಣಾ ನೀತಿ ಸಂಹಿತೆ ಕಾರಣ, ಚುನಾವಣಾ ಹೊಸ್ತಿಲಲ್ಲಿರುವ ರಾಜ್ಯಗಳು ಈ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ.



ಇದು ಮೊದಲ ಸಭೆ: ಫೆ.28 ರಂದು ಶುರುವಾಗಿರುವ ಪ. ಏಷ್ಯಾ ಸಂಘರ್ಷಕ್ಕೆ ಸಂಬಂಧಿಸಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮೋದಿ ಸಂವಾದ ನಡೆಸುತ್ತಿರುವುದು ಇದು ಮೊದಲು. ಸಂಪುಟ ಸಚಿವಾಲಯವು ಚುನಾವಣೆಗೆ ಸಜ್ಜಾಗಿರುವ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಅಸ್ಸಾಂ, ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ಮುಖ್ಯ ಕಾರ್ಯದರ್ಶಿಗಳ ಜತೆ ಪ್ರತ್ಯೇಕ ಸಭೆ ನಡೆಸಲಿದೆ. ➡ಪುಟ ೪

- ಭಾರತ ಸೇರಿ 5 ದೇಶಗಳಿಗೆ ಮಾತ್ರ ಹಾರ್ಮುಜ್ ಮುಕ್ತ ಎಂದ ಇರಾನ್
- ಯುದ್ಧ ತೀವ್ರಗೊಳಿಸಿದರೆ ಬಾಬ್ ಜಲಸಂಧಿ ಬಂದ್: ಇರಾನ್ ಎಚ್ಚರಿಕೆ
- ಭಾರತದಲ್ಲಿ 2 ತಿಂಗಳಿಗಾಗುವಷ್ಟು ಇಂಧನ ದಾಸ್ತಾನು: ಕೇಂದ್ರ
- ಅಬುಧಾಬಿಯಲ್ಲಿ ಭಾರತೀಯ ಸಾವು
- ಹಾರ್ಮುಜ್ ಮುಚ್ಚಿಸಿದ್ದ ಇರಾನ್ ನೌಕಾಪಡೆ ಮುಖ್ಯಸ್ಥನ ಹತ್ಯೆಗೈದ ಇಸ್ರೇಲ್

ದೇಶದಲ್ಲಿ ಭದ್ರತಾ ಸಂಸ್ಥೆಗಳು ಸನ್ನದ್ಧ ಸ್ಥಿತಿಯಲ್ಲಿ: ಪ್ರಧಾನಿ

ಕೆಲವು ಶಕ್ತಿಗಳು ಇಂತಹ ಸನ್ನಿವೇಶಗಳ ದುರ್ಲಾಭ ಪಡೆಯಲೆತ್ನಿಸುವ ಆತಂಕವಿದೆ ಎಂದು ಪ.ಏಷ್ಯಾ ಬಿಕ್ಕಟ್ಟು ಸೃಜಿಸಲಿರುವ ಆಂತರಿಕ ಭದ್ರತಾ ಆಯಾಮಗಳತ್ತ ಪ್ರಧಾನಿ ಗಮನ ಸೆಳೆದಿದ್ದರು. ಈ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಭದ್ರತಾ ಸಂಸ್ಥೆಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದೆ ಮತ್ತು ಕರಾವಳಿ, ಗಡಿ, ಸೈಬರ್, ವ್ಯೂಹಾತ್ಮಕ ನೆಲೆಗಳ ಸಹಿತ ಎಲ್ಲಾ ರಂಗಗಳಲ್ಲೂ ಭದ್ರತೆಯನ್ನು ಮತ್ತಷ್ಟು ಬಲಪಡಿಸಲಾಗಿದೆ. ➡ಪುಟ ೪

ಅನಗತ್ಯವಾಗಿ ಎಲ್‌ಪಿಜಿ ಖರೀದಿಸಬೇಡಿ: ಸಚಿವ

• **ಬೆಂಗಳೂರು:** ರಾಜ್ಯದಲ್ಲಿ ಅಭಾವ ಸಂದರ್ಭದಲ್ಲಿ ಅನಗತ್ಯವಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿ



ಮಾಡಬೇಡಿ. ಅನಿಲವನ್ನು ಮಿತವಾಗಿ ಬಳಕೆ ಮಾಡಿ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಗುರುವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಗ್ರಾಹಕರು ಗ್ಯಾಸ್ ಏಜೆನ್ಸಿ ಹತ್ತಿರ ಹೋಗಿ ಸರತಿ ನಿಲ್ಲುವುದು ಬೇಡ. ➡ಪುಟ ೪

ರಾಜ್ಯದ ಹಿತ ಕಾಪಾಡಿದ್ದರಿಂದ 17ನೇ ಬಜೆಟ್ ಮಂಡಿಸಿದೆ

ಜನ, ಶಾಸಕರ ಆಶೀರ್ವಾದ ನನಗಿದೆ

ಸಿಎಂ ಹೇಳಿಕೆ



• **ವಿಧಾನ ಪರಿಷತ್:** 1994–95ರಲ್ಲಿ ಐದು ವರ್ಷ ಹಣಕಾಸು ಮಂತ್ರಿ ಆಗಿದ್ದೆ, ಧರಂಸಿಂಗ್ ಮುಖ್ಯಮಂತ್ರಿ ಆಗಿದ್ದಾಗ ಹಣಕಾಸು ಸಚಿವನಾಗಿದ್ದೆ, ಮುಖ್ಯಮಂತ್ರಿ ಆದ ಬಳಿಕವೂ ಹಣಕಾಸು ಮಂತ್ರಿಯಾಗಿದ್ದೇನೆ. ನಾನು ರಾಜ್ಯದ ಜನರ ಹಿತ ಕಾಪಾಡುವ ಕೆಲಸ ಮಾಡದೇ ಇದ್ದರೆ ಹಣಕಾಸು ಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ. ಕರ್ನಾಟಕದಲ್ಲಿ 17 ಬಜೆಟ್ ಮಂಡಿಸಿದ್ದು ಇತಿಹಾಸ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಬಜೆಟ್ ಮೇಲಿನ ಚರ್ಚೆಗೆ ಮೇಲ್ಮನೆಯಲ್ಲಿ ಸುದೀರ್ಘವಾಗಿ ಉತ್ತರಿಸಿದ ಅವರು. ಇಷ್ಟು ಅವಕಾಶ ಸಿಗಬೇಕಾದರೆ ಜನತೆಯ ಆಶೀರ್ವಾದ, ಶಾಸಕರ ಆಶೀರ್ವಾದ, ಹೈಕಮಾಂಡ್‌ನ ವಿಶ್ವಾಸ ಇದೆ. ಇಲ್ಲದಿದ್ದರೆ ಇಷ್ಟೊಂದು ಬಾರಿ ನನ್ನನ್ನು ಏಕೆ ಹಣಕಾಸು ಮಂತ್ರಿ ಮಾಡುತ್ತಿದ್ದರು. ಯಾರೇ,. ಯಾವುದೇ, ಟೀಕೆ ಮಾಡಿದರೂ ಟೀಕೆಗಳು ಸಕಾರವಾಗಿರಬೇಕು. ನಿಮ್ಮ ಟೀಕೆಗಳನ್ನು ಸ್ವಾಗತಿಸುತ್ತೇನೆ ಎಂದರು. ➡ಪುಟ ೪

ಉಪ ಸಮರ ಹಿನ್ನೆಲೆ ವಿಶೇಷ ಸಂಪುಟ ಸಭೆ ಮುಂದೂಡಿಕೆ

ಪರಿಶಿಷ್ಟರ ಒಳ ಮೀಸಲು ಸದ್ಯಕ್ಕಿಲ್ಲ

• **ಬೆಂಗಳೂರು:** ರಾಜ್ಯದಲ್ಲಿ ಅತ್ಯಂತ ಸೂಕ್ಷ್ಮ ವಿಚಾರವಾಗಿರುವ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಕಲ್ಪಿಸುವ ಕುರಿತು ಚರ್ಚಿಸಲು ಕರೆಯಲಾಗಿದ್ದ ವಿಶೇಷ ಸಚಿವ ಸಂಪುಟ ಸಭೆಯನ್ನು ರಾಜ್ಯ ಸರ್ಕಾರವು ದಿಢೀರ್ ಮುಂದೂಡಿದೆ. ಶುಕ್ರವಾರ (ಮಾ.27) ಮಧ್ಯಾಹ್ನ 12



ಗಂಟೆಗೆ ನಿಗದಿಯಾಗಿದ್ದ ಮಹತ್ವದ ಸಚಿವ ಸಂಪುಟದ ವಿಶೇಷ ಸಭೆಯು, ರಾಜ್ಯದ 2 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ನೀತಿ ಸಂಹಿತೆಯ ಕಾರಣಕ್ಕೆ ಮುಂದೂಡಿದೆ.

ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆ ಮಾದರಿ ನೀತಿ ಸಂಹಿತೆ ಅನ್ವಯದ ಕುರಿತು ಸಂಪುಟಕ್ಕೆ ಮಾಹಿತಿ ಕೊಡಲಾಯಿತು. ➡ಪುಟ ೪

ವಿಧೇಯಕಗಳಿಗೆ ಘಟನೋತ್ತರ ಅನುಮೋದನೆ

ವಿಧಾನ ಮಂಡಲದಲ್ಲಿ ಮಂಡನೆಯಾಗಿ ಅಂಗೀಕೃತಗೊಂಡಿರುವ ಮೂರು ವಿಧೇಯಕಗಳಿಗೆ ಸಚಿವ ಸಂಪುಟ ಸಭೆಯು ಘಟನೋತ್ತರ ಅನುಮೋದನೆ ನೀಡಿದೆ. ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ, 2026 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2026 ಹಾಗೂ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ (ತಿದ್ದುಪಡಿ) ವಿಧೇಯಕ, 2026ಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಟಿಕೆಟ್‌ಗಾಗಿ ಶಾಸಕರ ಬೇಡಿಕೆ

ನಾಳೆಯಿಂದ ಐಪಿಎಲ್ ಪಂದ್ಯಗಳು ಆರಂಭ

• **ಬೆಂಗಳೂರು:** 2026ರ ಆವೃತ್ತಿಯ ಐಪಿಎಲ್ ಪಂದ್ಯಗಳು ಶನಿವಾರದಿಂದ ಆರಂಭವಾಗಲಿವೆ. ಮೊದಲ ಪಂದ್ಯ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದರ ನಡುವೆಯೇ ಸದನದಲ್ಲೂ ಐಪಿಎಲ್ ಟಿಕೆಟ್ ಹವಾ ಜೋರಾಗಿದ್ದು, ಟಿಕೆಟ್‌ಗಾಗಿ ಬಿಜೆಪಿ ಶಾಸಕರು, ಕಾಂಗ್ರೆಸ್ ಶಾಸಕರು ಪಕ್ಷಾತೀತವಾಗಿ ಬೇಡಿಕೆ ಇಟ್ಟಿದ್ದಾರೆ. ಕೊನೆಗೆ ಸ್ಪೀಕರ್ ಪ್ರತಿಯೊಬ್ಬ ಶಾಸಕರಿಗೂ 4 ಟಿಕೆಟ್ ವ್ಯವಸ್ಥೆ ಮಾಡಿಸಲು ಸರ್ಕಾರಕ್ಕೆ ಸೂಚಿಸಿದರು.

ಈ ಬಗ್ಗೆ ಪ್ರತಿಪಕ್ಷನಾಯಕ ಆರ್. ಅಶೋಕ್ ಮಾತನಾಡಿ, ನಾವು ಒಂದು ಟಿಕೆಟ್‌ಗಾಗಿ ಅಂಗಲಾಚಬೇಕು. ನನ್ನ ಹೆಸರಲ್ಲೇ ಟಿಕೆಟ್ ಕಳಹಿಸುತ್ತಾರೆ. ಆದರಲ್ಲಿ ನನ್ನ ಹೆಂಡಿತಿಯನ್ನೂ ಕಳುಹಿಸಲು ಆಗಲ್ಲ. ➡ಪುಟ ೪

ಅಧ್ಯಾಪಕನಿಗೆ ಧರ್ಮದೇಟು

ವೈದ್ಯ ವಿದ್ಯಾರ್ಥಿನಿಗೆ ಪ್ರಪೋಸ್ ಮಾಡಿದ ಅಬ್ದುಲ್ ಬಂಧನ



• **ನೆಲಮಂಗಲ:** ಗೃಹ ಸಚಿವ ಡಾ.ಪರಮೇಶ್ವರ್ ಒಡೆತನದ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನಲ್ಲಿ ಬುಧವಾರ ಮಧ್ಯಾಹ್ನ ಹೈಡ್ರಾಮಾ ನಡೆದಿದೆ. ತರಗತಿಯಲ್ಲೇ ವೈದ್ಯ ವಿದ್ಯಾರ್ಥಿನಿಯೊಬ್ಬಳಿಗೆ ಚಾಕಲೇಟ್ ನೀಡಿ ಪ್ರಪೋಸ್ ಮಾಡಲು ಯತ್ನಿಸಿದ ಉಪನ್ಯಾಸಕನಿಗೆ ವಿದ್ಯಾರ್ಥಿಗಳು ಹಿಗ್ಗಾ ಮುಗ್ಗ ಥಳಿಸಿದ್ದಾರೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,39,500 (2,41,500)	ಅಪರಂಜಿ ಚಿನ್ನ: 14,620 (14,550)	ಆಭರಣ ಚಿನ್ನ: 13,465 (13,445)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	
ಷೇರು ಸೂಚ್ಯಂಕ	ಬಿಎಸ್ಇ 75,273 (1,205↑)	ಎನ್ಎಸ್ಇ 23,306 (394↑)	$1 = ₹93.88		

ಕಿರುಸುದ್ದಿ

ಇನ್ಸ್ಪಾಯರ್ ಅವಾರ್ಡ್ – ಮನಕ್ ಯೋಜನೆಗೆ ಆಯ್ಕೆ

ಕುಂದಾಪುರ: ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ 2025–26ನೇ ಸಾಲಿನ ಇನ್ಸ್ಪಾಯರ್ ಅವಾರ್ಡ್ – ಮನಕ್ ಯೋಜನೆಗೆ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಅಮಿತ್ ಆರ್. ನಾಯ್ಕ್ ಆಯ್ಕೆಯಾಗಿದ್ದಾರೆ. ಇವರಿಗೆ ಶಾಲಾ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಬೋಧಕ ಹಾಗೂ ಬೋಧಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.



ಇನ್ಸ್ಪಾಯರ್ ಅವಾರ್ಡ್‌ಗೆ ಆಯ್ಕೆ

ಕುಂದಾಪುರ: ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ 2025–26ನೇ ಸಾಲಿನ ಇನ್ಸ್ಪಾಯರ್ ಅವಾರ್ಡ್‌ಗೆ ಕುಂದಾಪುರ ತಾಲೂಕಿನ ಹಲ್ಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಲ್ಲಿನ 7ನೇ ತರಗತಿಯ ಇಬ್ಬರು ವಿದ್ಯಾರ್ಥಿನಿಯರು ಆಯ್ಕೆಯಾಗಿದ್ದಾರೆ. ಐಶ್ವರ್ಯ ಅವರು ರೈತರಿಗೆ ಜೀವ ರಕ್ಷಕ ಉಪಕರಣ ಎಂಬ ವಿಜ್ಞಾನ ಕಾರ್ಯನಿರ್ವಹಣಾ ಮಾದರಿಗಾಗಿ ಹಾಗೂ ಗಾನ್ವಿ ಶೆಟ್ಟಿ ಅವರು 'ಸ್ವಯಂ ಜಾಲ ಕವಚ ಹೊಂದಿರುವ ಸುರಕ್ಷಿತ ಒಳಚರಂಡಿ ಮ್ಯಾನ್‌ಹೋಲ್' ಎಂಬ ವಿಜ್ಞಾನ ಕಾರ್ಯನಿರ್ವಹಣಾ ಮಾದರಿಗಾಗಿ ಆಯ್ಕೆಗೊಂಡಿದ್ದಾರೆ. ಮುಖ್ಯ ಶಿಕ್ಷಕಿ ಶಶಿಕಲಾ ಮತ್ತು ಸಹ ಶಿಕ್ಷಕಿ ಸುಜಾತ, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರು ಮತ್ತು ಸದಸ್ಯರು ವಿದ್ಯಾರ್ಥಿಗಳ ಸಾಧನೆಯನ್ನು ಅಭಿನಂದಿಸಿದ್ದಾರೆ.




ಭಾರತದ ಸಂವಿಧಾನ ಪೀಠಿಕೆ ಬೋರ್ಡ್ ಅಳವಡಿಕೆ

ಮಂಗಳೂರು: ರಾಜ್ಯದ ಎಲ್ಲಾ ಸರಕಾರಿ ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ ಭಾರತದ ಸಂವಿಧಾನ ಪೀಠಿಕೆ ಬೋರ್ಡ್ ಅಳವಡಿಕೆಗೆ ರಾಜ್ಯ ಸರಕಾರ ತಿಳಿಸಿದ್ದು, ಇದರಂತೆ ಎಲ್ಲಾ ಕಡೆಗಳಲ್ಲಿ ಪ್ರಚಾರ ಹಾಗೂ ಬೋರ್ಡ್ ಅಳವಡಿಕೆಯನ್ನು ನಡೆಸಲಾಗುತ್ತಿದೆ ಎಂದು ನೇತಾಜಿ ಸುಭಾಸ್ ಚಂದ್ರ ಭೋಸ್ ಗ್ರಾಮೀಣ ಸೇವಾ ಅಭಿವೃದ್ಧಿ ಸಂಸ್ಥೆ ತಿಳಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ವಿಷಯದ ಕುರಿತಂತೆ ಪ್ರಚಾರ ನಡೆಸಲಾಗುತ್ತಿದೆ. ಎಲ್ಲಾ ಸ್ತರದ ಬ್ಯಾಂಕ್‌ಗಳು, ಹಾಲು ಉತ್ಪಾದಕರ ಸಂಘ ಸಹಿತ ವಿವಿಧ ಕಡೆಗಳಲ್ಲಿ ಸಂವಿಧಾನ ಪೀಠಿಕೆ ಅಳವಡಿಕೆ ಕುರಿತಂತೆ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ ಎಂದು ಸಂಸ್ಥೆಯ ರಾಜ್ಯ ವ್ಯವಸ್ಥಾಪಕ ಸಂಗೊಳ್ಳಿ ಸೋಮಣ್ಣ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಂಸ್ಥೆಯ ಜಿಲ್ಲಾಧ್ಯಕ್ಷೆ ವಿದ್ಯಾಲಕ್ಷ್ಮೀ ಕಾರ್ತಿಕ್, ಅಂಕಿತ ಉಪಸ್ಥಿತರಿದ್ದರು.

ಕಿರುಗೂರು ಗ್ರಾಮದಲ್ಲಿ ಹುಲಿ ದಾಳಿಗೆ ಕರು ಬಲಿ

ಮಡಿಕೇರಿ: ಮಡಿಕೇರಿ ಹೊರವಲಯದಲ್ಲಿ ಹುಲಿಯ ಸಂಚಾರ ಕಂಡುಬಂದಿರುವ ಬೆನ್ನಲ್ಲೇ ದಕ್ಷಿಣ ಕೊಡಗಿನ ಕಿರುಗೂರು ಗ್ರಾಮದಲ್ಲಿ ಕರುವೊಂದನ್ನು ಹುಲಿ ಬಲಿ ಪಡೆದುಕೊಂಡಿದೆ. ಕಿರುಗೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾರಣ ಎಂಬಲ್ಲಿನ ನಿವಾಸಿ ಎ. ಎಂ. ರವೀಂದ್ರ ಎಂಬವರಿಗೆ ಸೇರಿದ ಎರಡು ವರ್ಷ ಪ್ರಾಯದ ಕರುವನ್ನು ಕೊಟ್ಟಿಗೆಯಿಂದ ಎಳೆದೊಯ್ದು ಗದ್ದೆಯಲ್ಲಿ ಸ್ವಲ್ಪ ಭಾಗವನ್ನು ಕೊಂದು ಹಾಕಿದೆ. ಬುಧವಾರ ನಸುಕಿನ ವೇಳೆಯಲ್ಲಿ ಈ ಘಟನೆ ನಡೆದಿದ್ದು, ಘಟನೆ ಬಗ್ಗೆ ಮಾಹಿತಿ ತಿಳಿದ ಪೊನ್ನಂಪೇಟೆ ಅರಣ್ಯ ವಲಯದ ಉಪ ವಲಯ ಅರಣ್ಯಾಧಿಕಾರಿ ದಿವಾಕರ್, ಆರ್‌ಆರ್‌ಟಿ ಸಿಬ್ಬಂದಿ ಹಾಗೂ ಅರಣ್ಯ ಪಾಲಕರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ಹುಲಿ ಹೆಜ್ಜೆ ಗುರುತು ಆಧರಿಸಿ ಸುತ್ತಮುತ್ತ ಕೂಂಬಿಂಗ್ ನಡೆಸಿ, ಹುಲಿ ಗುರುತು ಪತ್ತೆಗೆ ಕ್ಯಾಮರಾಗಳನ್ನು ಅಳವಡಿಸಿದ್ದಾರೆ. ಜಾನುವಾರು ಹಂತಕ ಹುಲಿಯನ್ನು ಸೆರೆ ಹಿಡಿದು ಆತಂಕ ನಿವಾರಿಸುವಂತೆ ಹಾಗೂ ಕರುವಿನ ಮಾಲಕರಿಗೆ ಸೂಕ್ತ ಪರಿಹಾರ ನೀಡುವಂತೆ ರೈತ ಸಂಘದ ಮುಖಂಡರು ಹಾಗೂ ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.






ಪರ್ಯಾಯ ಪೀಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯದ ಸಂದರ್ಭದಲ್ಲಿ ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾಶ್ರೀಶ ಶ್ರೀಪಾದರು ಭೇಟಿ ನೀಡಿ ದರ್ಶನ ಪಡೆದರು. ಈ ಸಂದರ್ಭದಲ್ಲಿ ಶೀರೂರು ಮಠದ ಪಾರುಪತ್ಯೆಗಾರರಾದ ಶ್ರೀಶ ಭಟ್ ಕಡೆಕಾರು ಉಪಸ್ಥಿತರಿದ್ದರು.

ಗೌರವ ಡಾಕ್ಟರೇಟ್ ನೀಡಲು ಮಾರ್ಗಸೂಚಿ: ಉನ್ನತ ಶಿಕ್ಷಣ ಸಚಿವರ ನಡೆಗೆ ಎಬಿವಿಪಿ ಸ್ವಾಗತ

ಮಂಗಳೂರು: ರಾಜ್ಯದಲ್ಲಿ ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್ ಪದವಿಯ ಘನತೆಯನ್ನು ಉಳಿಸಲು ಸರ್ಕಾರ ತೆಗೆದುಕೊಂಡ ಕ್ರಮವನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸ್ವಾಗತಿಸಿದೆ.

ಇತ್ತೀಚಿನ ಬೆಳವಣಿಗೆಯಲ್ಲಿ ಕೆಲ ವ್ಯಕ್ತಿಗಳಿಗೆ ಅನೇಕ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡುತ್ತಿರುವುದು ಹಾಗೂ ಗೌರವ ಡಾಕ್ಟರೇಟ್ ಪದವಿಯನ್ನು ಮಾರಾಟ ಮಾಡುವ ವಿಷಯಗಳ ಬಗ್ಗೆಯೂ ಅನೇಕ ಅನುಮಾನಗಳು ಇತ್ತೀಚಿನ ದಿನಗಳಲ್ಲಿ ಕಂಡು ಬಂದಿದೆ ಎಂದು ಎಬಿವಿಪಿ ಕಳವಳ ವ್ಯಕ್ತಪಡಿಸಿದೆ.

ಅನೇಕ ಉದ್ಯಮಿಗಳಿಗೆ, ಬಿಲ್ಡರ್‌ಗಳಿಗೆ ಮತ್ತು ಶಿಕ್ಷಣ ಕ್ಷೇತ್ರದ ಸಂಬಂಧವೇ ಇಲ್ಲದ ವ್ಯಕ್ತಿಗಳಿಗೆ ನೀಡುವುದರಿಂದ ಈ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕೊರತೆಯಿರುವುದನ್ನು ಎತ್ತಿ ತೋರಿಸುತ್ತದೆ. ಇದು ಉನ್ನತ ಶಿಕ್ಷಣ ವ್ಯವಸ್ಥೆಯ ಗೌರವಕ್ಕೆ ಧಕ್ಕೆಯನ್ನು ಉಂಟುಮಾಡುವಂತಹ ವಿಷಯವಾಗಿದೆ. ಗೌರವ ಡಾಕ್ಟರೇಟ್ ಪದವಿಯು ಕೇವಲ ಪ್ರಶಸ್ತಿ ಅಲ್ಲ, ಅದು ಸಮಾಜದ ಮುಂದೆ ಒಬ್ಬರ ಸಾಧನೆಗೆ ನೀಡುವ ಅತ್ಯುನ್ನತ ಮಾನ್ಯತೆ. ಆದ್ದರಿಂದ, ಈ ಪದವಿಯನ್ನು ನೀಡುವಾಗ ಕಠಿಣ ಮಾನದಂಡಗಳು, ಅರ್ಹತೆ ಮತ್ತು ನೈತಿಕತೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಮುಖ್ಯವಾಗಿ ಯಾವುದೇ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡುವ ಸಂದರ್ಭದಲ್ಲಿ ಆ ವ್ಯಕ್ತಿಯು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಅನನ್ಯ ಕೊಡುಗೆಯನ್ನು ಮಾನದಂಡವಾಗಿ ಬಳಸಿಕೊಳ್ಳಬೇಕು ಎಂದು ಎಬಿವಿಪಿ ಹೇಳಿದೆ.



ರಾಜ್ಯ ಸರ್ಕಾರವು ಈ ವಿಷಯದಲ್ಲಿ ಗಂಭೀರವಾಗಿ ಕ್ರಮ ಕೈಗೊಂಡು, ಭವಿಷ್ಯದಲ್ಲಿ ಇಂತಹ ಅನಿಯಮಿತತೆಗಳು ನಡೆಯದಂತೆ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದು ಎಬಿವಿಪಿ ಆಗ್ರಹಿಸುತ್ತದೆ. ವಿದ್ಯಾರ್ಥಿ ಸಮುದಾಯದ ನಂಬಿಕೆಯನ್ನು ಉಳಿಸಲು ಹಾಗೂ ವಿಶ್ವವಿದ್ಯಾಲಯಗಳ ಗೌರವವನ್ನು ಕಾಪಾಡಲು ಈ ಕ್ರಮಗಳು ಅತ್ಯಗತ್ಯವಾಗಿದೆ ಎಂದು ಎಬಿವಿಪಿ ಪ್ರಕಟಣೆ ತಿಳಿಸಿದೆ.

ಕಾಸರಗೋಡು ಜಿಲ್ಲಾಧಿಕಾರಿಗಳಿಂದ 'ಮಾದರಿ ಬೂತ್' ಉದ್ಘಾಟನೆ

ಚುನಾವಣೆಗೆ ಹಸಿರು ಹೊದಿಕೆ!

ಕಾಸರಗೋಡು: ವಿಧಾನಸಭಾ ಚುನಾವಣೆ ಸಂಪೂರ್ಣವಾಗಿ ಪರಿಸರ ಸ್ನೇಹಿಯನ್ನಾಗಿ ಮಾಡುವ, ಹಸಿರು ಶಿಷ್ಟಾಚಾರ ಕಟ್ಟುನಿಟ್ಟಿ ಅನುಷ್ಠಾನಗೊಳಿಸುವ ಬಗ್ಗೆ ಪ್ರಚಾರಕ್ಕಾಗಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಕಲೆಕ್ಟರೇಟ್‌ನಲ್ಲಿ ಸ್ಥಾಪಿಸಿದ ಮಾದರಿ ಹಸಿರು ಚುನಾವಣಾ ಬೂತ್‌ನ್ನು ಗುರುವಾರ ಉದ್ಘಾಟಿಸಿದರು.

ಇದೇ ಸಂದರ್ಭ ಅವರು ಸಹಿ ಅಭಿಯಾನ ಕ್ಕೂ ಅವರು ಚಾಲನೆ ನೀಡಿದರು. ಚುನಾವಣೆಯಲ್ಲಿ ಹಸಿರು ಶಿಷ್ಟಾಚಾರ ಅನುಸರಿಸುವ ಮಹತ್ವ ಜನರಿಗೆ ನೆನಪಿಸಿದರು.



ಸಮಾರಂಭದಲ್ಲಿ ಶುಚಿತ್ವ ಮಿಷನ್ ಜಿಲ್ಲಾ ಸಂಯೋಜಕ ಪಿ.ಜಯನ್, ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್, ಸ್ಥಳೀಯಾಡಳಿತ ಇಲಾಖೆ ಸಹಾಯಕ ನಿರ್ದೇಶಕ ಮನೋಜ್ ಕುಮಾರ್ ಮತ್ತು ಜಿಲ್ಲಾ ಶುಚಿತ್ವ ಮಿಷನ್ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಲ್ಲಾ ಹಂತಗಳಲ್ಲಿ ಹಸಿರು ಸಂಹಿತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ಲಾಸ್ಟಿಕ್ ನಿರ್ಮೂಲನೆಗೆ ವ್ಯಾಪಕ ಸಿದ್ಧತೆಗಳು ನಡೆಯುತ್ತಿವೆ. ಸ್ಥಳೀಯಾಡಳಿತ ಸಂಸ್ಥೆಗಳ ನೇತೃತ್ವದಲ್ಲಿ ವಿವಿಧ ಇಲಾಖೆಗಳನ್ನು ಸಂಯೋಜಿಸುವ ಮೂಲಕ ಇದಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈ ಯೋಜನೆಯಲ್ಲಿ ಕ್ಲೀನ್ ಕೇರಳ ಕಂಪೆನಿ, ಕುಟುಂಬಶ್ರೀ ಮಿಷನ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಸಿರು ಕೇರಳ ಮಿಷನ್, ಕೆಎಸ್‌ಡಬ್ಲ್ಯೂಎಂಪಿ ಮುಂತಾದ ಸಂಬಂಧಿತ ಸಂಸ್ಥೆಗಳ ಸಕ್ರಿಯವಾಗಿ ಪಾಲ್ಗೊಳ್ಳುತ್ತಿವೆ.




ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಸ್ಥಾಪಿಸಲಾದ ಮಾದರಿ ಹಸಿರು ಚುನಾವಣಾ ಬೂತ್ ಉದ್ಘಾಟನೆಗೊಂಡ ಕ್ಷಣ...

ಹಸಿರು ಮಾನದಂಡಗಳನ್ನು ಅನುಸರಿಸಿಯೇ ವಿಧಾನಸಭಾ ಚುನಾವಣೆ

ಕಾಸರಗೋಡು: ವಿಧಾನಸಭಾ ಚುನಾವಣೆಯನ್ನು ಪರಿಸರ ಸ್ನೇಹಿ ರೀತಿಯಲ್ಲಿ ನಡೆಸಲು ಹಸಿರು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಚುನಾವಣಾ ಪ್ರಚಾರಕ್ಕಾಗಿ ಪಿವಿಸಿ ಫ್ಲೆಕ್ಸ್‌ಗಳ ಬದಲಿಗೆ 100 ಪ್ರತಿಶತ ಹತ್ತಿ ಬಟ್ಟೆ ಅಥವಾ ಕಾಗದದಿಂದ ಮಾಡಿದ ಬೋರ್ಡ್‌ಗಳು ಮತ್ತು ಬ್ಯಾನರ್‌ಗಳನ್ನು ಮಾತ್ರ ಬಳಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.



ಧ್ವಜಸ್ತಂಭಗಳನ್ನು ತಯಾರಿಸುವಾಗಲೂ ಪ್ಲಾಸ್ಟಿಕ್ ಮಿಶ್ರಿತ ಬಟ್ಟೆ ಅಥವಾ ನಾನ್ ನೇಯ್ದ ಪಾಲಿಪ್ರೊಪಿಲೀನ್ ಅನ್ನು ತಪ್ಪಿಸಬೇಕು ಮತ್ತು ಪರಿಸರ ಸ್ನೇಹಿ ವಸ್ತುಗಳನ್ನು ಮಾತ್ರ ಆಯ್ಕೆ ಮಾಡಬೇಕು. ಪ್ರಚಾರದ ಸಮಯದಲ್ಲಿ ಕುಡಿಯುವ ನೀರಿಗಾಗಿ ಏಕ ಬಳಕೆಯ ಪ್ಲಾಸ್ಟಿಕ್ ಬಾಟಲಿಗಳ ಬದಲಿಗೆ ಉಕ್ಕಿನ ಲೋಟಗಳು ಮತ್ತು ನೀರಿನ ವಿತರಕಗಳನ್ನು ಬಳಸಬೇಕು. ಅಭ್ಯರ್ಥಿಗಳ ಸ್ವಾಗತ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ಹಾರಗಳ ಬದಲಿಗೆ ಹೂವಿನ ಹಾರಗಳು, ಹತ್ತಿ ರಿಬ್ಬನ್ ಹಾರಗಳು, ಹತ್ತಿ ಶಾಲುಗಳು ಇತ್ಯಾದಿಗಳನ್ನು ಬಳಸಬಹುದು. ಪುಸ್ತಕಗಳು, ಉಕ್ಕಿನ ನೀರಿನ ಬಾಟಲಿಗಳು ಮತ್ತು ಹಣ್ಣಿನ ಬುಟ್ಟಿಗಳನ್ನು ಉಡುಗೊರೆಯಾಗಿ ನೀಡಬಹುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಪ್ರಚಾರ ವಾಹನಗಳನ್ನು ಅಲಂಕರಿಸಲು ಮತ್ತು ಕಮಾನುಗಳನ್ನು ನಿರ್ಮಿಸಲು ಪರಿಸರ ಸ್ನೇಹಿ ವಸ್ತುಗಳನ್ನು ಮಾತ್ರ ಬಳಸಲು ಕಾಳಜಿ ವಹಿಸಬೇಕು. ಚುನಾವಣೆ ಮುಗಿದ ತಕ್ಷಣ ಆಯಾ ರಾಜಕೀಯ ಪಕ್ಷಗಳು ಸ್ಥಾಪಿಸಿದ ಫಲಕಗಳು ಮತ್ತು ಧ್ವಜಗಳನ್ನು ತೆಗೆದು ವಿಂಗಡಿಸಿ ಹಸಿರು ಕ್ರಿಯಾ ಸೇನೆಗೆ ಹಸ್ತಾಂತರಿಸಬೇಕು. ಮತಗಟ್ಟೆಗಳು ಮತ್ತು ಮತ ಎಣಿಕೆ ಕೇಂದ್ರಗಳಲ್ಲಿ ತ್ಯಾಜ್ಯ ವಿಂಗಡಣೆಗೆ ಅಗತ್ಯ ಸೌಲಭ್ಯಗಳನ್ನು ಸಿದ್ಧಪಡಿಸಬೇಕು ಮತ್ತು ಪ್ಲಾಸ್ಟಿಕ್ ಮುಕ್ತ ವಾತಾವರಣವನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದಾರೆ.

ಏ.1ರಿಂದ 7ರವರೆಗೆ ಚಿಣ್ಣರ ಆರೋಗ್ಯ–ಬೇಸಿಗೆ ಶಿಬಿರ

ಮೂಡುಬಿದಿರೆ: ಕಳೆದ ಮೂರು ವರ್ಷಗಳಿಂದ ಆಳ್ವಾಸ್ ಆನಂದಮಯ ಆರೋಗ್ಯಧಾಮ ಆಯೋಜಿಸಿಕೊಂಡು ಬರುತ್ತಿರುವ ಬೇಸಿಗೆ ಶಿಬಿರ– 'ಚಿಣ್ಣರ ಆರೋಗ್ಯ' ಏ.1ರಿಂದ 7 ರವರೆಗೆ ಮಿಜಾರಿನ ಶೋಭಾವನ ಆವರಣದಲ್ಲಿರುವ ಆನಂದಮಯ ಆರೋಗ್ಯಧಾಮದಲ್ಲಿ ನಡೆಯಲಿದೆ.

ಈ ಶಿಬಿರವು ಪ್ರಕೃತಿ ಚಿಕಿತ್ಸೆಯ ತತ್ವಗಳು ಮತ್ತು ಆರೋಗ್ಯಕರ ಜೀವನಶೈಲಿಯ ಮೂಲಕ ಮಕ್ಕಳ ಮನಸ್ಸು ಮತ್ತು ದೇಹವನ್ನು ಪೋಷಿಸುವಂತೆ ವಿನ್ಯಾಸಗೊಳಿಸಲಾಗಿದೆ. ಮಕ್ಕಳು ಸರಳ ಮತ್ತು ನೈಸರ್ಗಿಕ ಚಿಕಿತ್ಸೆಗಳ ಬಗ್ಗೆ ಅನುಭವಾತ್ಮಕವಾಗಿ ಕಲಿಯುವ ಜೊತೆಗೆ ವಿವಿಧ ಮನೋರಂಜನಾತ್ಮಕ ಚಟುವಟಿಕೆಗಳು ಸದಾ ಮಕ್ಕಳನ್ನು ಚುರುಕಾಗಿಯೂ, ಕುತೂಹಲದಿಂದ ಕೂಡಿರುವಂತೆ ಮಾಡುತ್ತದೆ. ಭಾಗವಹಿಸುವವರಿಗೆ ಪೌಷ್ಟಿಕಾಂಶಯುಕ್ತ ಊಟ, ಆರೋಗ್ಯಕರ ತಿಂಡಿ–ತಿನಿಸುಗಳು ಮತ್ತು ನೈಸರ್ಗಿಕ ಪಾನೀಯಗಳನ್ನು ಒದಗಿಸಲಾಗುತ್ತದೆ. ಆರೋಗ್ಯಕರ ಜೀವನಶೈಲಿಯ ಕುರಿತು ಅರಿವು ಮೂಡಿಸಲು ಪೌಷ್ಟಿಕ ಆಹಾರ ಮತ್ತು ಆರೋಗ್ಯಕರ ಬದುಕಿನ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ. ಮಡ್ ಥೆರಪಿ ಹಾಗೂ 'ಗ್ರಾಟಿಟ್ಯೂಡ್ ಆಟಿಟ್ಯೂಡ್' (ಕೃತಜ್ಞತೆ ಮನೋಭಾವ) ಬೆಳೆಸುವ ತರಬೇತಿಗಳೂ ಶಿಬಿರದ ವಿಶೇಷ ಆಕರ್ಷಣೆಯಾಗಿವೆ. ಇದರೊಂದಿಗೆ ಜುಂಬಾ ತರಗತಿಗಳು ಮತ್ತು ತಜ್ಞ ವೈದ್ಯರಿಂದ ವಿಶಿಷ್ಟ ಹಾಗೂ ಸೃಜನಾತ್ಮಕ ತರಗತಿಗಳನ್ನು ನಡೆಸಲಾಗುತ್ತದೆ.

ಕ್ಯಾಂಪ್‌ನ ಕೊನೆಯಲ್ಲಿ 'ಗ್ರ್ಯಾಜುವೇಷನ್ ಡೇ' ಆಚರಿಸಲಾಗುತ್ತದೆ. ಆ ದಿನ ಮಕ್ಕಳಿಗೆ ಆಕರ್ಷಕ ಗಿಫ್ಟ್‌ಗಳು, ಬಹುಮಾನಗಳು ಹಾಗೂ ಭಾಗವಹಿಸುವಿಕೆಯ ಪ್ರಮಾಣಪತ್ರವನ್ನು ನೀಡಲಾಗುತ್ತದೆ.

ಶಿಬಿರದಲ್ಲಿ ಭಾಗವಹಿಸುವವರಿಗೆ ರೂ1500 ಶುಲ್ಕವನ್ನು ನಿಗದಿಪಡಿಸಲಾಗಿದೆ. ಆಸಕ್ತರು ನೋಂದಣಿಗಾಗಿ 7259105460 9995333677 ಸಂಖ್ಯೆಗಳನ್ನು ಸಂಪರ್ಕಿಸಬಹುದು.

ಶಿಬಿರದಲ್ಲಿ ...

ಯೋಗಾಭ್ಯಾಸ, ಪ್ರಾಣಿ–ಪಕ್ಷಿಗಳ ಆಸನಗಳು, ಸೂರ್ಯ ನಮಸ್ಕಾರ, ಸ್ಮರಣಶಕ್ತಿ ವೃದ್ಧಿಗೆ ಮೆಮೊರಿ ಗೇಮ್ಸ್, ಏಕಾಗ್ರತೆ ಹೆಚ್ಚಿಸಲು ಪ್ರಾಣಾಯಾಮ, ಉಸಿರಾಟ ವ್ಯಾಯಾಮಗಳು ಸೇರಿದಂತೆ ಹಲವಾರು ಚಟುವಟಿಕೆಗಳನ್ನು ಮಾಡಿಸಲಾಗುತ್ತದೆ. ಜೊತೆಗೆ ಕಲೆ, ಕರಕುಶಲ ಕಲೆ, ನೃತ್ಯ, ಸಂಗೀತ ಮತ್ತು ಚಿತ್ರಕಲೆ ಚಟುವಟಿಕೆಗಳ ಮೂಲಕ ಮಕ್ಕಳ ಸೃಜನಶೀಲತೆಯನ್ನು ಉತ್ತೇಜಿಸಲಾಗುತ್ತದೆ.

ಬ್ಯಾಡ್ಮಿಂಟನ್: ಗೌತಮ್–ಶಾಲಿನಿ ಜೋಡಿಗೆ ಕಂಚು



ಕುಂದಾಪುರ: ಮಾ. 18 ರಿಂದ 25 ರವರೆಗೆ ಗೋವಾದಲ್ಲಿ ನಡೆದ ಆಲ್ ಇಂಡಿಯಾ ಯೋನೆಕ್ಸ್ ಸನ್‌ರೈಸ್ 48ನೇ ಮಾಸ್ಟರ್ಸ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಮಿಶ್ರ ಡಬಲ್ಸ್ ವಿಭಾಗದಲ್ಲಿ ಕರ್ನಾಟಕದ ಗೌತಮ್ ಶೆಟ್ಟಿ ಮತ್ತು ಶಾಲಿನಿ ಶೆಟ್ಟಿ ಜೋಡಿ ಅತ್ಯುತ್ತಮ ಪ್ರದರ್ಶನ ನೀಡಿ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.

ದೇಶದ ವಿವಿಧ ರಾಜ್ಯಗಳಿಂದ ಬಂದ ಶ್ರೇಷ್ಠ ಆಟಗಾರರ ನಡುವೆ ನಡೆದ ಕಠಿಣ ಸ್ಪರ್ಧೆಯಲ್ಲಿ ಈ ಜೋಡಿ ಶಿಸ್ತಿನ ಆಟ, ಸಮನ್ವಯ ಮತ್ತು ದಿಟ್ಟ ಮನೋಭಾವದೊಂದಿಗೆ ಗಮನಾರ್ಹ ಸಾಧನೆ ಮಾಡಿದ್ದು, ಕಂಚಿನ ಪದಕವನ್ನು ಗೆದ್ದಿದ್ದಾರೆ. ಗೌತಮ್ ಶೆಟ್ಟಿ ಮತ್ತು ಶಾಲಿನಿ ಶೆಟ್ಟಿ ಅವರ ಈ ಸಾಧನೆಗೆ ಕ್ರೀಡಾ ವಲಯದಿಂದ ಪ್ರಶಂಸೆ ವ್ಯಕ್ತವಾಗಿದ್ದು, ಭವಿಷ್ಯದಲ್ಲಿಯೂ ಇವರು ಇನ್ನಷ್ಟು ಪದಕಗಳನ್ನು ಗೆದ್ದು ರಾಜ್ಯದ ಕೀರ್ತಿಯನ್ನು ಹೆಚ್ಚಿಸಲಿ ಎಂಬ ಆಶಯ ವ್ಯಕ್ತವಾಗಿದೆ.

ಹುಲಿ ಸೆರೆಗೆ ಡ್ರೋನ್, ಸಾಕಾನೆ ಬಳಸಿ ಶೋಧ ಕಾರ್ಯಾಚರಣೆ ಆರಂಭ

ಎರಡನೇ ದಿನವೂ ಪತ್ತೆಯಾಗದ ವ್ಯಾಘ್ರ


ಮಡಿಕೇರಿ: ನಗರದ ಹೊರವಲಯದ ಇಬ್ನಿವಳವಾಡಿ ಗ್ರಾಮದಲ್ಲಿ ಹುಲಿಯ ಓಡಾಟ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಅದರ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದೆ.

ಬುಧವಾರ ಸಂಜೆಯಿಂದ ರಾತ್ರಿ 10ಗಂಟೆಯವರೆಗೂ ಮೂರು ಸಾಕಾನೆಗಳಾದ ಕಂಜನ್, ಈಶ್ವರ, ಪ್ರಶಾಂತ್ ನೆರವಿನಿಂದ ಶೋಧ ಕಾರ್ಯ ನಡೆಸಲಾಗಿದ್ದರೂ ಹುಲಿ ಪತ್ತೆಯಾಗದಿರುವುದರಿಂದ ಗುರುವಾರ ಮುಂಜಾನೆಯಿಂದ ಥರ್ಮಲ್ ಡ್ರೋನ್ ಬಳಸಿ ಮತ್ತೆ ಕಾರ್ಯಾಚರಣೆ ಮುಂದುವರೆಸಲಾಗಿದೆ.

ಮಡಿಕೇರಿ ವಿಭಾಗದ ಡಿಸಿಎಫ್ ಅಭಿಷೇಕ್ ಅವರು ಕಾರ್ಯಾಚರಣೆಯ ನೇತೃತ್ವವಹಿಸಿದ್ದು, ಇತರ ಹಿರಿಯ ಅಧಿಕಾರಿಗಳು ಮತ್ತು 30ಕ್ಕೂ ಅಧಿಕ ಸಿಬ್ಬಂದಿಗಳು ಸಾಥ್ ನೀಡಿದ್ದಾರೆ.

ಕಳೆದ ಕೆಲವು ದಿನಗಳ ಹಿಂದೆ ಹಸುವೊಂದು ಕಾಡುಪ್ರಾಣಿಯ ದಾಳಿಗೆ ಒಳಗಾಗಿತ್ತು. ಆಗ ಚಿರತೆಯನ್ನು ಹೋಲುವ ಪರ್ಣದಿಂದ ಇದು ಸಂಭವಿಸಿರಬಹುದೆಂದು ಭಾವಿಸಲಾಗಿತ್ತು. ಆದರೆ, ಇಬ್ನಿವಳವಾಡಿಯ ಕಾಫಿ ತೋಟವೊಂದರ ಸಿಸಿ ಕ್ಯಾಮರಾದಲ್ಲಿ ಬುಧವಾರ ಹುಲಿ ಓಡಾಟದ ದೃಶ್ಯ ಸೆರೆಯಾದ ಹಿನ್ನೆಲೆಯಲ್ಲಿ ಗ್ರಾಮದ ಜನರು ಆತಂಕಗೊಂಡಿದ್ದರು.

ಇಬ್ನಿವಳವಾಡಿ ಸುತ್ತಮುತ್ತಲ 8–10 ಕಿ.ಮೀ. ವ್ಯಾಪ್ತಿಯಲ್ಲಿ ಈ ಹುಲಿಯ ಸಂಚಾರ ಹಿಂದಿನಿಂದಲೂ ಕಂಡು ಬಂದಿತ್ತೆನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಕಡಗದಾಳು ಪಂಚಾಯತ್‌ನ ಇಬ್ನಿವಳವಾಡಿ, ಸಿಂಕೋನ, ಕಡಗದಾಳು ವ್ಯಾಪ್ತಿಯಲ್ಲಿ ಹುಲಿಗಾಗಿ ಹುಡುಕಾಟ ನಡೆಸಲಾಗುತ್ತಿದೆ.

ಮುಂದುವರಿದ ಆತಂಕ

ಎರಡನೇ ದಿನವೂ ಹುಲಿಯ ಚಲನ ವಲನ ಕಂಡು ಬರದಿರುವುದರಿಂದ ಸುತ್ತಮುತ್ತಲ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಗ್ರಾಮಸ್ಥರು, ಶಾಲೆಗೆ ತೆರಳುವ ವಿದ್ಯಾರ್ಥಿಗಳು ಆತಂಕಗೊಂಡಿದ್ದಾರೆ. ಕಾಫಿ ತೋಟಗಳಲ್ಲಿ ತುಂತುರು ನೀರಾವರಿ, ಕಾಳುಮೆಣಸು ಕೊಯ್ಲು ಸೇರಿದಂತೆ ಇತರ ಚಟುವಟಿಕೆಗಳು ನಡೆಯುತ್ತಿರುವ ಸಮಯದಲ್ಲೇ ಹುಲಿ ಕಾಣಿಸಿಕೊಂಡಿರುವುದು ಮಾಲಕರಲ್ಲೂ ಆತಂಕ ಸೃಷ್ಟಿಸಿದೆ.

ನಿಷೇಧಾಜ್ಞೆ ಜಾರಿ

ಕಡಗದಾಳು ಪಂಚಾಯತ್ ವ್ಯಾಪ್ತಿಯ ಇಬ್ನಿವಳವಾಡಿ ಗ್ರಾಮದ ನೀರುಕೊಲ್ಲಿಯ ಸಮೀಪದ ತೋಟದಲ್ಲಿ ಹುಲಿ ಸಂಚರಿಸುತ್ತಿದ್ದು, ಸಾರ್ವಜನಿಕರ ಜೀವಕ್ಕೆ ಗಂಭೀರ ಅಪಾಯವಾಗುವ ಸಾಧ್ಯತೆ ಇದೆ. ಅರಣ್ಯ ಇಲಾಖೆಯ ಸಿಬ್ಬಂದಿ ಹುಲಿಯ ಚಲನವಲನವನ್ನು ನಿರಂತರವಾಗಿ ಗಮನಿಸುತ್ತಿದ್ದು, ಯಾವುದೇ ಅನಾಹುತ ಸಂಭವಿಸದಂತೆ ಮತ್ತು ಶಾಂತಿ ಕಾಪಾಡಲು ಮುನ್ನೆಚ್ಚರಿಕಾ ಕ್ರಮವಾಗಿ ಗ್ರಾಮಸ್ಥರು ಮತ್ತು ಸಾರ್ವಜನಿಕರು ಮುಂದಿನ ಎರಡು ಮೂರು ದಿನಗಳವರೆಗೆ ಎಚ್ಚರವಹಿಸಬೇಕು ಎಂದು ಕಡಗದಾಳು ಪಂಚಾಯಿತಿಯು ಪ್ರಕಟನೆಯಲ್ಲಿ ಕೋರಿದೆ. ಈ ಕುರಿತು ಸ್ವಚ್ಛತಾ ವಾಹನದಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರವನ್ನೂ ಮಾಡಲಾಗಿದೆ. ಸ್ಥಳದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಎಲ್ಲರೂ ಎಚ್ಚರವಾಗಿರಬೇಕು ಎಂದು ಅರಣ್ಯ ಇಲಾಖೆ ಮನವಿ ಮಾಡಿದೆ.

ದಿನಕ್ಕೆ ಒಂದೂವರೆ, ಎರಡು ಗಂಟೆ ಮಾತ್ರ ನೀರು ಸರಬರಾಜು

ಪೈಪ್‌ಲೈನ್‌ನಲ್ಲಿ ಸಪೂರ ನೀರು ಪೂರೈಕೆ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಶಕ್ತಿನಗರ ಸುತ್ತಲಿನ ಪ್ರದೇಶಗಳನ್ನು ಒಳಗೊಂಡಿರುವ ಮಂಗಳೂರು ಮಹಾನಗರ ಪಾಲಿಕೆಯ ಪದವು ಪಶ್ಚಿಮ ವಾರ್ಡ್‌ನ ಅಲ್ಲಲ್ಲಿ ಕಳೆದ ಜನವರಿಯಿಂದ ನೀರಿನ ಸಮಸ್ಯೆ ಇದೆ. ಈ ವಾರ್ಡ್‌ನ ಸೌಜನ್ಯ ರೋಡ್, ಸಹ್ಯಾದ್ರಿ ಲೇಔಟ್, ಕುಂಟಲ್ಪಾಡಿ, ಪ್ರೀತಿನಗರ ಪ್ರದೇಶಗಳಲ್ಲಿ ಜನತೆ ನೀರು ಸರಬರಾಜು ವ್ಯತ್ಯಯದಿಂದ ತೊಂದರೆ ಅನುಭವಿಸುತ್ತಿದ್ದಾರೆ.

ಪಡೀಲ್‌ನಿಂದ ನೀತಿನಗರ ಪಂಪ್‌ಹೌಸ್‌ಗೆ ನೀರು ಪೂರೈಕೆಗೊಂಡು ಅಲ್ಲಿಂದ ಪದವು ಪಶ್ಚಿಮ ವಾರ್ಡ್‌ಗೆ ನೀರು ಬರುತ್ತಿದೆ. ತುಂಬೆ ಡ್ಯಾಂನಿಂದ ಪೂರೈಕೆಯಾಗುವ ನೀರಿನ ಪ್ರಮಾಣದಲ್ಲಿ ಭಾರಿ ಇಳಿಮುಖವಾದ ಹಿನ್ನೆಲೆಯಲ್ಲಿ ಈ ವಾರ್ಡ್‌ಗೂ ಕಡಿಮೆ ನೀರು ಸರಬರಾಜು ಆಗುತ್ತಿದೆ.

ಪದವು ಪಶ್ಚಿಮ ವಾರ್ಡ್ ಗುಡ್ಡ ಪ್ರದೇಶಗಳಿಂದ ಕೂಡಿದೆ. ಹೀಗಾಗಿ ಎತ್ತರದ ಸ್ಥಳಗಳಿಗೆ ನೀರು ತಲುಪುತ್ತಿಲ್ಲ. ನೀರಿನ ಪೂರೈಕೆ ಕಡಿಮೆಯಾಗಿ ಪೈಪ್‌ಲೈನ್‌ನಿಂದ ಸಪೂರವಾಗಿ ನೀರು ಬರುತ್ತಿದೆ ಎಂಬುದು ಇಲ್ಲಿನ ಜನತೆಯ ಅಳಲು.

ನೀರು ತಲುಪದ ಸ್ಥಳಗಳಿಗೆ ಹಾಗೂ ಕಡಿಮೆ ನೀರು ಪೂರೈಕೆಯಾಗುವ ಪ್ರದೇಶಗಳಿಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ, ಬೇಡಿಕೆ ಇರುವಷ್ಟು ಪ್ರಮಾಣದಲ್ಲಿ ಟ್ಯಾಂಕರ್ ನೀರು ಸಿಗುತ್ತಿಲ್ಲ. ಮನಪಾ ಟ್ಯಾಂಕರ್ ಆರು ಸಾವಿರ ಲೀಟರ್ ಸಾಮರ್ಥ್ಯವಿದೆ. ಇಲ್ಲಿನ ಪ್ರದೇಶಗಳಿಗೆ ದೊಡ್ಡ ಟ್ಯಾಂಕರ್‌ಗಳು ತಲುಪಲು ಸಾಧ್ಯವಾಗುತ್ತಿಲ್ಲ. ಸಣ್ಣ ರಸ್ತೆಗಳಲ್ಲಿ ಸಂಚರಿಸಲು ಅನುಕೂಲವಾಗುವಂತೆ ಮನಪಾ ವತಿಯಿಂದ ಸಣ್ಣ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಿಕೊಡಬೇಕು ಎಂಬುದು ಸ್ಥಳೀಯರ ಮನವಿ.

ಮುಗ್ರೋಡಿಯಲ್ಲಿ ಬೋರ್‌ವೆಲ್ ಇದೆ. ಆದರೆ, ಈ ಕೊಳವೆಬಾಯಿ ಹಳೆಯದಾಗಿದ್ದು, ನೀರಿನ ಪ್ರಮಾಣ ಮಟ್ಟ ಇಳಿಕೆಯಾಗಿದೆ. ಇಲ್ಲಿನ ಮುಗ್ರೋಡಿ, ಕಾನಡ್ಕದಲ್ಲಿ ಬಾವಿಗಳಿದ್ದರೂ, ಅದರ ನೀರಿನ ಉಪಯೋಗ ಸಾಧ್ಯವಾಗುತ್ತಿಲ್ಲ. ಬಾವಿಗಳಿಗೆ ಪಂಪ್ ಅಳವಡಿಸಿದರೆ ಸ್ಥಳೀಯ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು.

ಜಲಸಿರಿ ಯೋಜನೆಯಡಿ ಪದವು ಪಶ್ಚಿಮ ವಾರ್ಡ್‌ನಲ್ಲಿ ನೀರಿನ ಪೈಪ್‌ಲೈನ್ ಅಳವಡಿಕೆ ಕಾರ್ಯ ಬಹುತೇಕ ಪೂರ್ಣಗೊಂಡಿದೆ.




ಪ್ರೀತಿನಗರದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ



ನಮ್ಮಲ್ಲಿ ಬೆಳಗ್ಗೆ 5.45ರಿಂದ 6.30ರವರೆಗೆ ಮಾತ್ರ ಮನಪಾ ಪೈಪ್‌ಲೈನ್‌ನಲ್ಲಿ ನೀರು ಪೂರೈಕೆ ಆಗುತ್ತಿದೆ. ನೀರು ಪೂರೈಕೆಯಲ್ಲಿ ಪ್ರೆಶರ್ ಇಲ್ಲದೆ ನಿಧಾನವಾಗಿ ನೀರು ಬರುತ್ತಿದೆ. ಇದರಿಂದಾಗಿ ನೀರಿನ ತೊಟ್ಟಿ ತುಂಬುತ್ತಿಲ್ಲ. ನಾವು ಖಾಸಗಿ ಟ್ಯಾಂಕರ್ ಮೂಲಕ ಹಣ ಪಾವತಿಸಿ ನೀರು ತರಿಸಿಕೊಳ್ಳುತ್ತಿದ್ದೇವೆ. ಮನಪಾ ವತಿಯಿಂದ ಪ್ರಸ್ತುತ ಪೂರೈಕೆಯಾಗುವ ನೀರನ್ನು ಉತ್ತಮ ಪ್ರೆಶರ್‌ನೊಂದಿಗೆ ಒಂದು ಗಂಟೆ ಹೆಚ್ಚುವರಿಯಾಗಿ ನೀಡಿದರೆ ನಮಗೆ ನೀರಿಗೆ ಸಮಸ್ಯೆ ಉಂಟಾಗದು. ಈ ಬಗ್ಗೆ ಮನಪಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

■ **ರಾಜನ್ ಪ್ರೀತಿನಗರ**
ಪದವು ಪಶ್ಚಿಮ ವಾರ್ಡ್ ನಿವಾಸಿ

ದಿನಕ್ಕೆ ಮೂರು ಗಂಟೆ ನೀರು ನೀಡಿ



ಈ ವಾರ್ಡ್‌ನಲ್ಲಿ ಬೆಳಗ್ಗೆ 5.30ರಿಂದ 7.30ರವರೆಗೆ ನೀರು ಬಿಡಲಾಗುತ್ತಿದೆ. ಕೆಲವು ಕಡೆಗಳಲ್ಲಿ ಬೆಳಗ್ಗೆ 5.30ರಿಂದ ಒಂದು ಗಂಟೆಗಳ ಕಾಲ ಮಾತ್ರ ನೀರು ಬರುತ್ತಿದೆ. ಪ್ರತಿದಿನ ನೀರು ಬರುತ್ತದೆ, ಆದರೆ, ಪ್ರೆಶರ್ ಇಲ್ಲ. ದಿನಕ್ಕೆ ಮೂರು ಗಂಟೆಗಳ ಕಾಲ ಉತ್ತಮ ಪ್ರೆಶರ್‌ನೊಂದಿಗೆ ನೀರು ಬಿಟ್ಟರೆ ಇಲ್ಲಿನ ನೀರಿನ ಸಮಸ್ಯೆ ಬಹುತೇಕ ಬಗೆಹರಿಯುತ್ತದೆ ಎಂಬುದು ಸ್ಥಳೀಯರ ಅಭಿಪ್ರಾಯ.

ಪದವು ಪಶ್ಚಿಮ ವಾರ್ಡ್‌ನ ಕೆಲವೆಡೆ ನೀರು ಪೂರೈಕೆ ಪೈಪ್‌ಲೈನ್‌ನಲ್ಲಿ ಪ್ರೆಶರ್ ಇಲ್ಲದೆ ನೀರಿನ ಸಮಸ್ಯೆ ಉಂಟಾಗಿದೆ. ಶಕ್ತಿನಗರ ಸುತ್ತಮುತ್ತಲಿನ ಪ್ರದೇಶದಲ್ಲಿ ಜನವಸತಿ, ಫ್ಲ್ಯಾಟ್‌ಗಳ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಭಾರಿ ಹೆಚ್ಚಳವಾಗಿದ್ದು, ನೀರಿನ ಪೂರೈಕೆ ಕಡಿಮೆಯಾಗಿದೆ. ನೀರಿನ ಕೊರತೆ ಉಂಟಾದ ಕಡೆಗಳಲ್ಲಿ ಮನಪಾ ಟ್ಯಾಂಕರ್ ನೀರು ಪೂರೈಕೆ ಆಗುತ್ತಿದೆ. ಸೌಜನ್ಯ ನಗರ, ಪ್ರಶಾಂತ್ ರೋಡ್ ಸಹಿತ ಮೂರು ಕಡೆಗಳಲ್ಲಿ ಕೊಳವೆಬಾವಿ ಕೊರೆಯಿಸುವಂತೆ ಮಂಗಳೂರು ಮಹಾನಗರ ಪಾಲಿಕೆಗೆ ನಮ್ಮ ಅಧಿಕಾರವಧಿಯ ಸಂದರ್ಭದಲ್ಲೇ ವಿನಂತಿ ಮಾಡಲಾಗಿತ್ತು. ಇದುವರೆಗೆ ಕೊಳವೆಬಾವಿ ನಿರ್ಮಾಣ ಆಗಿಲ್ಲ. ಜನರ ನೀರಿನ ಸಮಸ್ಯೆಗೆ ಮನಪಾ ಅಧಿಕಾರಿಗಳ ಮೂಲಕ ಸ್ಪಂದನೆ ಮಾಡಲಾಗುತ್ತಿದೆ. ಒಂದು ಗಂಟೆ ಹೆಚ್ಚುವರಿಯಾಗಿ ನೀರು ನೀಡಿದರೆ ಕುಂಟಲ್ಪಾಡಿಯಂತಹ ಎತ್ತರದ ಪ್ರದೇಶಗಳಿಗೆ ನೀರು ತಲುಪುತ್ತದೆ.



■ **ವನಿತಾ ಪ್ರಸಾದ್,** ಪದವು ಪಶ್ಚಿಮ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ನೀತಿನಗರದಲ್ಲಿ ಬೃಹತ್ ನೀರಿನ ಟ್ಯಾಂಕ್ ನಿರ್ಮಾಣಗೊಂಡಿದೆ. ಈ ಯೋಜನೆ ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಂಡು ಸಮರ್ಪಕವಾಗಿ ನೀರು ಒದಗಿಸಿದರೆ ಇಲ್ಲಿನ ನೀರಿನ ಸಮಸ್ಯೆ ಬಹುತೇಕ ಪರಿಹಾರವಾಗುತ್ತದೆ.

ನಾಳೆ ವಾರ್ಡ್ –22
ಕದ್ರಿ ಪದವು ಪರಿಸರದ ಸ್ಥಿತಿಗತಿ

ವಿಶ್ವ ಹಿಂದೂ ಪರಿಷದ್ ಮತ್ತು ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಶ್ರೀರಾಮೋತ್ಸವ

ಸ್ಥಳ: ಕದ್ರಿ, ಮೈದಾನ, ಮಂಗಳೂರು



ಪ್ರಭು ಶ್ರೀರಾಮಚಂದ್ರ ವಿಶ್ವಕ್ಕೇ ಆದರ್ಶ ಪುರುಷ ಪ್ರತಿಯೊಬ್ಬ ಸನಾತನ ಧರ್ಮದ ಉಪಾಸನೆ ಮಾಡುವವರ ಮನದಲ್ಲಿ ಮನೆ ಮಾಡಿ ನಿಂತ ಮೇರು ಪುರುಷ, ದೇಶದ ಸಮರ್ಥ ರಾಜನಾಗಿ, ತಂದೆ ತಾಯಿಯ ಆಜ್ಞಾಪಾಲಕ ಪುತ್ರನಾಗಿ, ಏಕಪತ್ನಿವ್ರತಸ್ಥ ಪತಿಯಾಗಿ, ತಮ್ಮಂದಿರಿಗೆ ಮಾದರಿ ಅಣ್ಣನಾಗಿ, ಪ್ರಜಾಪಾಲಕನಾಗಿ ಸರ್ವರಿಗೂ ಸಮಾನತೆಯ ಭಾವವನ್ನು ನೀಡಿದ ಶ್ರೀರಾಮ ಪ್ರಾತಃ ಸ್ಮರಣೀಯ.

ಪ್ರಭು ಶ್ರೀರಾಮನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ ಭವ್ಯವಾದ ರಾಮಮಂದಿರ ನಿರ್ಮಾಣ ಆಗಬೇಕು ಅನ್ನುವ ಸತ್ಸಂಕಲ್ಪದಿಂದ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಪ್ರಾರಂಭಿಸಿದ ಶ್ರೀ ರಾಮೋತ್ಸವದ ನಮ್ಮೆಲ್ಲರ ಪ್ರಾರ್ಥನೆಗೆ ಒಲಿದ ದೇವರು ನಮ್ಮ ಕಲ್ಪನೆಗೆ ಮೀರಿದ ಅಯೋಧ್ಯೆಯ ಭವ್ಯ ಮಂದಿರದಲ್ಲಿ ಪ್ರತಿಷ್ಠಾಪನೆ ಮಾಡುವುದನ್ನು ವೀಕ್ಷಿಸುವ ಸೌಭಾಗ್ಯವನ್ನು ಪಡೆದ ನಮಗೆ ಜೀವನದಲ್ಲಿ ಸಾರ್ಥಕತೆಯ ಭಾವವನ್ನು ಮೂಡಿಸಿದೆ. ಶ್ರೀರಾಮನ ಉಪಾಸನೆಯಿಂದ ನಮ್ಮ ದೇಶ ವಿಶ್ವಗುರುವಿನ ಸ್ಥಾನದಲ್ಲಿ ಮುನ್ನಡಿ ಇಡುತ್ತಿರುವುದು ಭಾರತೀಯರಾದ ನಮಗೆ ಹೆಮ್ಮೆಯ ವಿಚಾರ.

ಹಾಗಾಗಿ ವಿಶ್ವಕ್ಕೆ ಒಳಿತನ್ನು ಮಾಡುವ ಶ್ರೀರಾಮನ ನಾಮ ಸ್ಮರಣೆ ಮನೆ ಮನಗಳಲ್ಲಿ ನಿತ್ಯ ನಿರಂತರವಾಗಿ ನಡೆಯುವ ಮೂಲಕ ರಾಮ ರಾಜ್ಯದ ಕನಸು ನನಸಾಗುವ ನಿಟ್ಟಿನಲ್ಲಿ ಅಸಂಖ್ಯಾತ ರಾಮ ಭಕ್ತರ ನಿರ್ಮಾಣ ಮಾಡುವುದೇ ಶ್ರೀರಾಮೋತ್ಸವದ ಮೂಲ ಉದ್ದೇಶ. ಈ ವರುಷ 25ನೇ ವರ್ಷದ ಶ್ರೀರಾಮೋತ್ಸವದ ಬೆಳ್ಳಿಹಬ್ಬದ ಸಂಭ್ರಮ. ನಮ್ಮೆಲ್ಲ ಬಂಧುಗಳು ಸಕುಟುಂಬಿಕರಾಗಿ ಶ್ರೀರಾಮೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೃತಾರ್ಥರಾಗೋಣ.

ರಾಮ ಭಕ್ತರೇ,

ಸ್ವಸ್ತಿ । ಶ್ರೀ ವಿಶ್ವಾವಸು ನಾಮ ಸಂವತ್ಸರದ ಮೀನ ಮಾಸ, 12 ಚೈತ್ರ ಶುದ್ಧ 8 ಯು ದಿನಾಂಕ 26-03-2026ನೇ ಗುರುವಾರದಿಂದ ಮೊದಲ್ಗೊಂಡು ದಿನಾಂಕ 29-03-2026ನೇ ಆದಿತ್ಯವಾರದ ಪರ್ಯಂತ ಕದ್ರಿ ಮೈದಾನದಲ್ಲಿ ವೇದಮೂರ್ತಿ ಶ್ರೀ ಗಿರಿಧರ ಭಟ್ ರವರ ಪೌರೋಹಿತ್ಯದಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ಅವತರಿಸಿದ ಪುಣ್ಯ ದಿನದಂದು

25ನೇ ವರ್ಷದ ಶ್ರೀರಾಮೋತ್ಸವ ನಡೆಸುವುದೆಂದು ನಿಶ್ಚಯಿಸಿದ್ದೇವೆ.

ಆ ಪ್ರಯುಕ್ತ ಪ್ರತಿ ದಿನ ನಡೆಯುವ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸದ್ಭಕ್ತ ಬಾಂಧವರೆಲ್ಲರೂ ಸಕುಟುಂಬಿಕರಾಗಿ ಪಾಲ್ಗೊಂಡು, ತ್ರಿಕರಣಪೂರ್ವಕ ಸೇವೆ ಸಲ್ಲಿಸಿ ಪ್ರಭು ಶ್ರೀರಾಮಚಂದ್ರನ ಪೂರ್ಣಾನುಗ್ರಹಕ್ಕೆ ಪಾತ್ರರಾಗುವುದರೊಂದಿಗೆ ಅಖಂಡ ಭಾರತ ಸಂಕಲ್ಪ ಸಾಕಾರವಾಗುವಂತೆ ಸಂಕಲ್ಪಬದ್ಧರಾಗಬೇಕೆಂದು ಸಾದರದಿಂದ ವಿನಂತಿ.

ಕಾರ್ಯಕ್ರಮಗಳು

28-03-2026ನೇ ಶನಿವಾರ

ಬೆಳಿಗ್ಗೆ 8:00 ಗಂಟೆಗೆ : ಪ್ರಾತಃ ಪೂಜೆ, ಬೆಳಿಗ್ಗೆ 9:00 ರಿಂದ : ವಿಶ್ವಶಾಂತಿಗಾಗಿ ನರಸಿಂಹ ಹೋಮ.

ಬೆಳಿಗ್ಗೆ 9:30 ರಿಂದ : ವಿವಿಧ ಭಜನಾ ತಂಡಗಳಿಂದ ಭಜನಾ ಸಂಕೀರ್ತನೆ

ಮಧ್ಯಾಹ್ನ 12:00 ಗಂಟೆಗೆ : ಮಹಾಪೂಜೆ, ಪ್ರಸಾದ ವಿತರಣೆ



ಸಾಯಂಕಾಲ 4:00 ರಿಂದ : ಮಂಗಳೂರಿನ ಸನಾತನ ನಾಟ್ಯಾಲಯದ ವಿದುಷಿ ಶಾರದಾಮಣಿ ಶೇಖರ್ ರವರ ಶಿಷ್ಯ ವೃಂದದವರಿಂದ ನೃತ್ಯ ವೈಭವ

ಸಾಯಂಕಾಲ 6:00 ರಿಂದ: ಧಾರ್ಮಿಕ ಸಭಾ ಕಾರ್ಯಕ್ರಮ

ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು, ಶ್ರೀ ಸುಬ್ರಹ್ಮಣ್ಯ ಮಠ

ಅಧ್ಯಕ್ಷತೆ : ಶ್ರೀ ಜಿತೇಂದ್ರ ಎಸ್ ಕೊಟ್ಟಾರಿ, ಆಡಳಿತ ಪಾಲುದಾರರು. ಲೋಟಸ್ ಪ್ರಾಪರ್ಟೀಸ್

ದೀಪಪ್ರಜ್ವಲನೆ : ಶ್ರೀ ಪಿ ಪಿ ಹೆಗ್ಡೆ, ಖ್ಯಾತ ಹಿರಿಯ ನ್ಯಾಯವಾದಿಗಳು, ಕರ್ನಾಟಕ ಹೈಕೋರ್ಟ್

ಅಭ್ಯಾಗತರು : ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ, ಸಂಸದರು, ದಕ್ಷಿಣ ಕನ್ನಡ ಜಿಲ್ಲೆ

ರಾತ್ರಿ 7.30 ಗಂಟೆಗೆ : ಶ್ರೀ ದೇವರಿಗೆ ರಂಗಪೂಜೆ.

ರಾತ್ರಿ 8.00 ಗಂಟೆಗೆ: ಮಹಾಪೂಜೆ, ಪ್ರಸಾದ ವಿತರಣೆ

ರಾತ್ರಿ 8.15ರಿಂದ: ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್ ನಿರ್ದೇಶನದ ಚಾರಿತ್ರಿಕ ನಾಟಕ ಛತ್ರಪತಿ ಶಿವಾಜಿ

29-03-2026ನೇ ಆದಿತ್ಯವಾರ

ಬೆಳಿಗ್ಗೆ 8:00 ಗಂಟೆಗೆ : ಪ್ರಾತಃ ಪೂಜೆ, ಬೆಳಿಗ್ಗೆ 9:00 ರಿಂದ : ವಿಶ್ವ ಹಿಂದೂ ಪರಿಷದ್ ವತಿಯಿಂದ ನಡೆಯುವ ವಿವಿಧ ಬಾಲಸಂಸ್ಕಾರ ಕೇಂದ್ರದ ಮಕ್ಕಳಿಂದ ವೈವಿಧ್ಯಮಯ ಕಾರ್ಯಕ್ರಮ

ಮಧ್ಯಾಹ್ನ 12:00 ಗಂಟೆಗೆ : ಮಹಾಪೂಜೆ, ಪ್ರಸಾದ ವಿತರಣೆ.

ಮಧ್ಯಾಹ್ನ 12:15 ಗಂಟೆಗೆ : "ದೃಢನಾರಿ ಸದೃಢ ಭಾರತ"

ಮಹಿಳಾ ವಿಚಾರ ಗೋಷ್ಠಿ- ಉಪಸ್ಥಿತಿ:

ಶ್ರೀ ಟಿ ಎ ಪಿ ಶೆಣೈ, ಉಪಾಧ್ಯಕ್ಷರು, ವಿ.ಹಿಂ.ಪ ಕರ್ನಾಟಕ ದಕ್ಷಿಣ ಪ್ರಾಂತ

ಮಧ್ಯಾಹ್ನ 1:00 ರಿಂದ : ದುರ್ಗಾವಾಹಿನಿ ಮಂಗಳೂರು ಜಿಲ್ಲೆಯ ವತಿಯಿಂದ ನೃತ್ಯರೂಪಕ "ನಶಾ ಮುಕ್ತ ಯುವ" ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ



ಸಾಯಂಕಾಲ 5:00 ರಿಂದ : ಕಲರ್ಸ್ ಕನ್ನಡ ಖ್ಯಾತಿಯ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ತುಳುನಾಡ ಗಾನ ಗಂಧರ್ವ ಬಿರುದಾಂಕಿತ, ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದಿಂದ ಸಂಗೀತ ಕಾರ್ಯಕ್ರಮ-**ಗಾನ ಸಂಭ್ರಮ**

ಸಾಯಂಕಾಲ 6:00 ರಿಂದ: ಧಾರ್ಮಿಕ ಸಭಾ ಕಾರ್ಯಕ್ರಮ

ಆಶೀರ್ವಚನ : ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ, ಎಡನೀರು ಮಠ, ಕಾಸರಗೋಡು

ಅಧ್ಯಕ್ಷತೆ : ಶ್ರೀ ಕೃಷ್ಣ ಜೆ. ಪಾಲೆಮಾರ್, ಮಾಜಿ ಸಚಿವರು, ಕರ್ನಾಟಕ ಸರಕಾರ

ದೀಪಪ್ರಜ್ವಲನೆ : ಶ್ರೀ ಅರುಣ್ ಶ್ಯಾಮ್, ಖ್ಯಾತ ಹಿರಿಯ ನ್ಯಾಯವಾದಿಗಳು, ಕರ್ನಾಟಕ ಹೈಕೋರ್ಟ್

ಅಭ್ಯಾಗತರು : ಶ್ರೀ ದೀಪಕ್ ರಾಜ್ ಗೋಪಾಲ್, ವಿ.ಹಿಂ.ಪ ಕೇಂದ್ರೀಯ ಕೋಶಾಧ್ಯಕ್ಷರು ಮತ್ತು ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷರು ಹಾಗೂ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ರಾತ್ರಿ 8:00 ಗಂಟೆಗೆ: ಮಹಾಪೂಜೆ, ಪ್ರಸಾದ ವಿತರಣೆ.



ರಾತ್ರಿ 8:30 ಗಂಟೆಗೆ: ರಾವಣ ದಹನ

ಆಕರ್ಷಕ ಸುಡುಮದ್ದು ಪ್ರದರ್ಶನ

• ಪುರವಣಿ ಸಹಕಾರ: ಪ್ರದೀಪ್ ಸರಿಪಲ್ಲ

॥ ಸರ್ವಂ ರಾಮಮಯಂ । ರಾಮಾಯ ರಾಮ ಭದ್ರಾಯ ರಾಮಚಂದ್ರಾಯ ವೇದಸೇ । ರಘುನಾಥಾಯ ನಾಥಾಯ ಸೀತಾಯ ಪತಯೇ ನಮಃ ॥

ಮಂಗಳೂರು ಕದ್ರಿ ಮೈದಾನದಲ್ಲಿ ವಿಜೃಂಭಣೆಯಿಂದ ನಡೆಯುವ ರಾಮೋತ್ಸವಕ್ಕೆ ಶುಭ ಕೋರುವ

ಡಾ। ಎಂ.ಬಿ ಪುರಾಣಿಕ್
ಗೌರವಾಧ್ಯಕ್ಷರು
ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಸುನಿಲ್ ಆಚಾರ್
ಅಧ್ಯಕ್ಷರು
ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಸುದರ್ಶನ್ ಮೂಡುಬಿದಿರೆ
ಕಾರ್ಯಾಧ್ಯಕ್ಷರು
ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಹೆಚ್.ಕೆ. ಪುರುಷೋತ್ತಮ್
ಅಧ್ಯಕ್ಷರು
ವಿಶ್ವಹಿಂದೂ ಪರಿಷದ್, ಮಂಗಳೂರು

ಕದ್ರಿ ಮನೋಹರ್ ಶೆಟ್ಟಿ
ನಿಕಟಪೂರ್ವ ಮನಪಾ ಸದಸ್ಯರು
ಅಧ್ಯಕ್ಷರು, ಕದ್ರಿ ಕ್ರಿಕೆಟರ್ಸ್ (ರಿ.), ಕದ್ರಿ
ಅಧ್ಯಕ್ಷರು, ಕದಿರಿಕಾ ಚಾರಿಟೇಬಲ್ ಟ್ರಸ್ಟ್

ಉಮಾನಾಥ ಕೋಟ್ಯಾನ್
ಶಾಸಕರು,
ಮೂಲ್ಕಿ-ಮೂಡುಬಿದಿರೆ ವಿಧಾನಸಭಾ ಕ್ಷೇತ್ರ



ಜಿತೇಂದ್ರ ಪಟೇಲ್ ಮಾನಾರಾಮ್‌ಜೀ

ಶುಕರಾಜ್ ಎಸ್. ಕೊಟ್ಟಾರಿ
ನ್ಯಾಯವಾದಿ,
ಮಂಗಳೂರು

ದೇವಿಪ್ರಸಾದ್ ಶೆಟ್ಟಿ
ರಾಜೇಶ್ವರೀ ವಿದ್ಯಾಸಂಸ್ಥೆ ಸಾಣೂರು, ಕಾರ್ಕಳ
ವಿಭಾಗ ಕಾರ್ಯದರ್ಶಿ,
ವಿಶ್ವಹಿಂದೂ ಪರಿಷತ್, ಮಂಗಳೂರು

ಜಗದೀಶ್ ಶೇಣವ
ಗೌರವ ಸಲಹೆಗಾರರು
ಶ್ರೀರಾಮೋತ್ಸವ ಸಮಿತಿ ಮಂಗಳೂರು

ಪ್ರಶಾಂತ್ ಉಬರಂಗಳ
ಉಪಾಧ್ಯಕ್ಷರು
ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಮನೋಹರ್ ಸುವರ್ಣ
ಕಾರ್ಯದರ್ಶಿ
ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಕಿಶೋರ್ ಕೊಟ್ಟಾರಿ
ನಿಕಟಪೂರ್ವ
ಮಂಗಳೂರು ಮಹಾನಗರ ಪಾಲಿಕೆ ಸದಸ್ಯರು

ವೇದಮೂರ್ತಿ ಪೊಳಲಿ ಗಿರಿಪ್ರಕಾಶ್ ತಂತ್ರಿ
ಮಠಮಂದಿರ ಅರ್ಚಕ ಪುರೋಹಿತ ವಿಭಾಗ ಪ್ರಮುಖ್
ವಿಶ್ವಹಿಂದೂ ಪರಿಷದ್ ಮಂಗಳೂರು

ಚಿತ್ತರಂಜನ್ ಭಂಡಾರಿ
ಅಯಕಲಬಾವ

ಉಳ್ಳಾಲ ನಂದನ್ ಮಲ್ಯ
ಜಿಲ್ಲಾಧ್ಯಕ್ಷರು, ಬಿಜೆಪಿ ಯುವಮೋರ್ಚಾ, ದ.ಕ ಜಿಲ್ಲೆ

ರವೀಂದ್ರ ಡಿ. ಶೆಟ್ಟಿ ಮತ್ತು ಮಕ್ಕಳು
ಐಕಳಬಾವ

ವಸಂತ್ ಶೇಟ್
ಕೋಶಾಧಿಕಾರಿ
ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಪುಷ್ಪಲತಾ ಗಟ್ಟಿ
ವಕೀಲರು,
ಉಪಾಧ್ಯಕ್ಷರು, ಶ್ರೀರಾಮೋತ್ಸವ ಸಮಿತಿ, ಮಂಗಳೂರು

ಆಶಾ ರೈ
ವಕೀಲರು,
ಉಪಾಧ್ಯಕ್ಷರು,
ಶ್ರೀರಾಮೋತ್ಸವ ಸಮಿತಿ, ಮಂಗಳೂರು

ಶಕುಂತಳಾ ಕೆ. ಶೆಟ್ಟಿ
ವಕೀಲರು,
ಉಪಾಧ್ಯಕ್ಷರು,
ಶ್ರೀರಾಮೋತ್ಸವ ಮಹಿಳಾ ಸಮಿತಿ, ಮಂಗಳೂರು

ಹಿತೇಂದ್ರ ಜೆ. ಕೊಠಾರಿ
ಉದ್ಯಮಿ, ಮಂಗಳೂರು

ವಿಶು ಸುರತ್ಕಲ್
ವಾಸವಿ ಎಂಟರ್‌ಪ್ರೈಸಸ್
ಗಣೇಶಪುರ, ಕೈಕಂಬ

ಮಹೇಶ್ ಕೋಡಿಕಲ್
ಜಿಲ್ಲಾ ಗೋರಕ್ಷ ಪ್ರಮುಖ್
ವಿಶ್ವಹಿಂದೂ ಪರಿಷದ್, ಮಂಗಳೂರು

ನರಸಿಂಹ ಹೆಗ್ಡೆ ಕೆರೆಮನೆ
ಉಪಾಧ್ಯಕ್ಷರು
ಶ್ರೀ ರಾಮೋತ್ಸವ ಸಮಿತಿ, ಮಂಗಳೂರು

ಸುಧಾಕರ್ ರಾವ್ ಪೇಜಾವರ
ಕಾರ್ಯಾಧ್ಯಕ್ಷರು, ಮಲ್ಲಿಕ ಕಲಾ ವೃಂದ
ಶ್ರೀ ಕ್ಷೇತ್ರ ಕದ್ರಿ,
9448146051

ಕುಸುಮ ಎಚ್. ದೇವಾಡಿಗ
ಅಧ್ಯಕ್ಷರು, ಜಿಲ್ಲಾ ಸಣ್ಣ ಕೈಗಾರಿಕಾ ಸಂಘ, ಯೆಯ್ಯಾಡಿ

ಭುಜಂಗ ಕುಲಾಲ್
ಪ್ರಾಂತ ಸಹ ಸಂಚಾಲಕ
ಭಜರಂಗದಳ ಕರ್ನಾಟಕ

ಕೌಶಿಕ್ ಕದ್ರಿ
ಹಿಂದು ಮುಖಂಡರು

ಮುರಳಿಧರ್ ರಾವ್ ಅದ್ಯಪಾಡಿ
ಮುಖಂಡರು
ವಿಶ್ವ ಹಿಂದೂ ಪರಿಷತ್

ರವಿ ಕಾಪಿಕಾಡ್
ಜಿಲ್ಲಾ ಉಪಾಧ್ಯಕ್ಷರು
ವಿಶ್ವ ಹಿಂದೂ ಪರಿಷತ್ ಮಂಗಳೂರು

ಪ್ರಶಾಂತ್ ಭಂಡಾರಿ ಕುಮಂಗಿಲ
ಕಾರ್ಯದರ್ಶಿ ವಿಶ್ವಹಿಂದೂ ಪರಿಷತ್ ಸುರತ್ಕಲ್ ಪ್ರಖಂಡ

ಅವನಿಶ್ ಭಟ್
ವಿಶ್ವ ಹಿಂದೂ ಪರಿಷತ್
ಮಠ ಮಂದಿರ ಅರ್ಚಕ ಪುರೋಹಿತ ಜಿಲ್ಲಾ ಪ್ರಮುಖ್

ಉಪಚುನಾವಣೆ: ಕಾಂಗ್ರೆಸ್ಸಿಗೆ ಬಂಡಾಯದ ಭೀತಿ

ದಾವಣಗೆರೆ: ತೀವ್ರ ಕುತೂಹಲ ಮೂಡಿಸಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಕಣದಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಸಾದಿಕ್ ಪೈಲ್ವಾನ್ ಮನವೊಲಿಸಲು ಗುರುವಾರ ಪಕ್ಷದ ರಾಜ್ಯ ನಾಯಕರು ನಡೆಸಿದ ಹೈವೋಲ್ಟೇಜ್ ಸಂಧಾನ ಸಭೆ ವಿಫಲವಾಗಿದೆ. ಇದರೊಂದಿಗೆ ಸಾದಿಕ್ ಪೈಲ್ವಾನ್ ಕಣದಲ್ಲುಳಿಯುವುದು ಖಚಿತವಾಗಿದೆ. ಕಾಂಗ್ರೆಸ್ಸಿಗೆ ಬಂಡಾಯದ ಭೀತಿ ಎದುರಾಗಿದೆ.

ನಾಮಪತ್ರ ಹಿಂಪಡೆಯಲು ಗುರುವಾರ ಮಧ್ಯಾಹ್ನ 3 ಗಂಟೆವರೆಗೆ ಅವಕಾಶವಿತ್ತು. ಆದರೆ ಬೆಂಗಳೂರಿನಿಂದ ಕಾಂಗ್ರೆಸ್ ನಾಯಕರು ದಾವಣಗೆರೆ ಬರುವಷ್ಟರಲ್ಲಿ ಮಧ್ಯಾಹ್ನ 2.45 ಆಗಿತ್ತು. ಈ ವೇಳೆ ಸಾದಿಕ್ ಪೈಲ್ವಾನ್ ಮನೆ ಮುಂದೆ ಜಮಾಯಿಸಿದ್ದ ನೂರಾರು ಬೆಂಬಲಿಗರು ಕಾಂಗ್ರೆಸ್ ನಾಯಕರ ವಿರುದ್ಧ ಗೋ ಬ್ಯಾಕ್ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಸ್ಥಳೀಯ ಮುಖಂಡರು ನಾನಾ ರೀತಿಯಲ್ಲಿ ನಡೆಸಿದ್ದ ಸಂಧಾನ ಕೂಡ ವಿಫಲವಾಗಿದ್ದರಿಂದ ಬೆಂಗಳೂರಿನಿಂದ ಬಂದಿದ್ದ ಶಾಸಕ ರಿಜ್ವಾನ್ ಹರ್ಷದ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಮಹಮ್ಮದ್ ಸೇರಿದಂತೆ ಹಲವು ನಾಯಕರು ಸಾದಿಕ್ ಪೈಲ್ವಾನ್ ಜೊತೆ ಮಾತುಕತೆ ನಡೆಸಿದರೂ, ಸಂಧಾನ ಫಲ ನೀಡಲಿಲ್ಲ. ಯಾವುದೇ ಕಾರಣಕ್ಕೂ ನಾಮಪತ್ರ ವಾಪಾಸ್ ಪಡೆಯುವುದಿಲ್ಲ ಎಂದು ಸಾದಿಕ್ ಪೈಲ್ವಾನ್ ಸ್ಪಷ್ಟಪಡಿಸಿದ್ದಾರೆ.




ಅಂತಿಮ ಕಣದಲ್ಲಿ 25 ಮಂದಿ ಅಭ್ಯರ್ಥಿಗಳು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಉಮೇದುವಾರಿಕೆ ಸಲ್ಲಿಸಿದ್ದ 39 ಜನರ ಪೈಕಿ 11 ಅಭ್ಯರ್ಥಿಗಳು ಗುರುವಾರ ತಮ್ಮ ನಾಮಪತ್ರಗಳನ್ನು ವಾಪಾಸ್ಸು ಪಡೆದಿದ್ದು, ಪರಿಶೀಲನೆ ವೇಳೆ ಮೂವರ ನಾಮಪತ್ರಗಳು ಅಸಿಂಧುಗೊಂಡಿವೆ. ಚುನಾವಣೆಯ ಅಂತಿಮ ಕಣದಲ್ಲಿ 25 ಮಂದಿ ಅಭ್ಯರ್ಥಿಗಳು ಉಳಿದಿದ್ದಾರೆ. ಚುನಾವಣೆಗೆ ಒಟ್ಟು 39 ಅಭ್ಯರ್ಥಿಗಳು 45 ನಾಮಪತ್ರ ಸಲ್ಲಿಸಿದ್ದರು. ಇದರೊಂದಿಗೆ ಅಂತಿಮ ಕಣದಲ್ಲಿ 25 ಮಂದಿ ಉಳಿದಂತಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಬಾಗಲಕೋಟೆ: ಅಂತಿಮ ಕಣದಲ್ಲಿ 9 ಅಭ್ಯರ್ಥಿಗಳು

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಗುರುವಾರ 14 ಅಭ್ಯರ್ಥಿಗಳ ಪೈಕಿ 5 ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯನ್ನು ಹಿಂಪಡೆದ್ದಿದ್ದು, ಅಂತಿಮವಾಗಿ ಚುನಾವಣಾ ಕಣದಲ್ಲಿ 9 ಅಭ್ಯರ್ಥಿಗಳು ಇದ್ದಾರೆಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಅಂತಿಮ ಚುನಾವಣಾ ಕಣದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನಿಂದ ಉಮೇಶ ಹುಲ್ಲಪ್ಪ ಮೇಟಿ, ಭಾರತೀಯ ಜನತಾ ಪಾರ್ಟಿಯಿಂದ ಚರಂತಿಮಠ ವೀರಭದ್ರಯ್ಯ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಸಂತೋಷ ಸವ್ವಾಸೆ, ಜನತಾ ಚಳುವಳಿ ಭಾರತ ಪಕ್ಷದಿಂದ ತೇಜೋರಾಮಶೆಟ್ಟಿ ದೇವಾಂಗ, ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಗರಾಜ ಕಲಕುಟಗರ, ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರದಿಂದ ಆನಂದ ಜಕಾತಿ, ರವಿ ಶಿವಪ್ಪ ಪಡಸಲಗಿ ಉಳಿದುಕೊಂಡಿದ್ದಾರೆ.

ರಾಮ ಬಾಣ



ದಿನ ಭವಿಷ್ಯ

ಮೇಷ ಹೇಳಬೇಕಾದುದನ್ನು ಸರಿಯಾಗಿ ಹೇಳಿ. ಕೆಲವರಿಗೆ ಅದು ಅರ್ಥ ಆಗದಿರಬಹುದು. ಆರೋಗ್ಯ ಸಂಬಂಧಿ ಚಿಂತೆ. ಧನವ್ಯಯ.

ವೃಷಭ ಬಿಡುವಿರದ ದಿನ. ಕೆಲಸವನ್ನು ಆನಂದಿಸಿ. ಅದರಿಂದ ಒತ್ತಡ ಕಡಿಮೆ ಆದೀತು. ಆಪ್ತರ ಜತೆಗಿನ ಮಾತುಕತೆಯಿಂದ ಮನಸೋಲ್ಲಾಸ.

ಮಿಥುನ ಮನೆಯಲ್ಲಿ ನಿಮ್ಮ ನಿಲುವಿಗೇ ಅಂಟಿಕೊಂಡು ಸೌಹಾರ್ದ ಕೆಡಿಸದಿರಿ. ಕ್ಲಿಷ್ಟ ಪರಿಸ್ಥಿತಿ ಎದುರಾದೀತು. ಹೊಂದಾಣಿಕೆ ಸ್ವಭಾವ ಬೆಳೆಸಿಕೊಳ್ಳಿ.

ಕಟಕ ನಿಮ್ಮ ವ್ಯವಹಾರ ಉತ್ತಮಪಡಿಸಲು ಹೊಸ ಚಿಂತನೆ ರೂಪಿಸಿ. ಕಡಿಮೆ ಖರೀದಿಯಿಂದ ಹಣ ಉಳಿಸಬಹುದು. ಮೈ ನೋವು ಬಾಧಿಸಬಹುದು.

ಸಿಂಹ ಪ್ರತಿಕೂಲ ಸನ್ನಿವೇಶ ಎದುರಿಸುವಿರಿ. ಆದರೆ ಪಾಸಿಟಿವ್ ಚಿಂತನೆ ಬಿಡದಿರಿ. ಮನೆಯಲ್ಲಿ ಸೌಹಾರ್ದ ವಾತಾವರಣ. ಆರೋಗ್ಯ ಚಿಂತೆ ಮಾಯ.

ಕನ್ಯಾ ಗುರಿ ಸಾಧಿಸಲು ಕಠಿಣ ಶ್ರಮ ಬೇಕು. ಸಂಗಾತಿ ಜತೆ ಭಿನ್ನಮತ. ಹೊಟ್ಟೆ ಸಂಬಂಧಿ ಅನಾರೋಗ್ಯ.

ತುಲಾ ಆತ್ಮೀಯರ ಉನ್ನತಿಗೆ ಇಂದು ಪರಿಶ್ರಮ ಪಡುವಿರಿ. ವೃತ್ತಿಯಲ್ಲಿ ಉದ್ವಿಗ್ನ ಸ್ಥಿತಿ ಮೂಡಿದರೂ ಬಳಿಕ ಶಮನ. ಸಹೋದ್ಯೋಗಿ ಸಹಕಾರ.

ವೃಶ್ಚಿಕ ಆಪ್ತರ ಜತೆ ವ್ಯವಹರಿಸುವಾಗ ಹೃದಯದ ಭಾವಕ್ಕೆ ಬೆಲೆ ಕೊಡಿ. ಎಲ್ಲವನ್ನು ತರ್ಕದಿಂದ ಯೋಚಿಸದಿರಿ.

ಧನು ಮನಸ್ಸಿಗೆ ಸಮಾಧಾನ ತರುವ ನಿರ್ಧಾರ ತಾಳುವಿರಿ. ಸಂಬಂಧದಲ್ಲಿ ಪ್ರಗತಿ. ಎಲ್ಲರ ಜತೆ ಬೆರೆಯಲು ಗಮನ ಕೊಡಿ.

ಮಕರ ವೃತ್ತಿ ಕ್ಷೇತ್ರದಲ್ಲಿ ಉಂಟಾಗಿದ್ದ ಬಿಗು ಪರಿಸ್ಥಿತಿ ಶಮನವಾಗಲಿದೆ. ಸಂಘರ್ಷಕ್ಕಿಂತ ಸಹಕಾರ ಒಳ್ಳೆಯದು. ಆರ್ಥಿಕ ವ್ಯವಹಾರದಲ್ಲಿ ಲಾಭ.

ಕುಂಭ ಧಾರ್ಮಿಕ ಕ್ಷೇತ್ರ ದರ್ಶನ. ಸಮಸ್ಯೆ ಪರಿಹಾರಕ್ಕೆ ಯತ್ನ. ಮಕ್ಕಳ ಸಾಧನೆ ಸಮಾಧಾನ ತರಲಿದೆ. ಖರ್ಚು ಕಡಿಮೆ ಮಾಡಲು ಆದ್ಯತೆ ಕೊಡಿ.

ಮೀನ ವಾಗ್ವಾದ ನಡೆದೀತು. ಕೆಲವರು ನಿಮ್ಮನ್ನು ಅಣಕ ಮಾಡಿಯಾರು. ಸಹನೆ ಇರಲಿ. ಸುಖದುಃಖ ಬದುಕಿನ ಅವಿಭಾಜ್ಯ ಅಂಗ ಎಂದರಿಯಿರಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 4,9,1,7

2 ಕ್ಷೇತ್ರಗಳಲ್ಲೂ ಕಾಂಗ್ರೆಸ್‌ಗೆ ಜಯ: ಸಚಿವೆ ಹೆಬ್ಬಾಳಕರ್

ಕುಂದಾಪುರ: ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲೂ ಮುಂಬರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಗಳಿಸಲಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕುಂದಾಪುರದ ಕೋಟೇಶ್ವರ ಸಮೀಪದ ಯುವ ಮೆರಿಡಿಯನ್ ಹೆಲಿಪ್ಯಾಡ್ ಬಳಿ ಗುರುವಾರ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವರು, ಸಾಮಾನ್ಯವಾಗಿ ಉಪಚುನಾವಣೆಗಳಲ್ಲಿ ಅಧಿಕಾರದಲ್ಲಿರುವ ಪಕ್ಷದ ಕಡೆಗೆ ಮತದಾರರ ಒಲವಿರುತ್ತದೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಮನೆ ಮನೆಗೆ ತಲುಪಿವೆ. ಗ್ಯಾರಂಟಿ ಯೋಜನೆಗಳಿಂದ ಜನ ಸಾಮಾನ್ಯರಿಗೆ ಸಾಕಷ್ಟು ಅನುಕೂಲ ಆಗಿದೆ. ಅಭಿವೃದ್ಧಿಯ ಜೊತೆಗೆ ಜನರ ಆದಾಯ ಕೂಡ ಜಾಸ್ತಿ ಆಗಿದೆ. ಅದರಲ್ಲೂ ಮಹಿಳಾ ಮತದಾರರು ಸಂತೋಷದಲ್ಲಿದ್ದಾರೆ ಎಂದರು. ಎರಡು ಕ್ಷೇತ್ರಗಳಲ್ಲೂ ಗೆದ್ದೇ ಗೆಲ್ಲುತ್ತೇವೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಟಿಕೆಟ್ ಕೇಳುವ ಹಕ್ಕಿದೆ. ಗೆಲುವೊಂದೇ ನಮಗೆ ಮಾನದಂಡ. ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಕ್ಷೇತ್ರಕ್ಕೆ ಅವರ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಲಾಗಿದೆ. ಇದು ಹೈಕಮಾಂಡ್ ನಿರ್ಧಾರಕ್ಕೆ ನಾವು ಬದ್ಧ ಎಂದರು.

ಯಾವ ಜವಾಬ್ದಾರಿ ಕೊಟ್ಟರೂ ನಿಭಾಯಿಸುವೆ

ಬೆಂಗಳೂರು: ನನಗೆ ಇದೇ ಬೇಕು ಅದೇ ಬೇಕು ಎಂದೆಲ್ಲ ಇಲ್ಲ, ಯಾವ ಜವಾಬ್ದಾರಿ ಕೊಟ್ಟರೂ ಅದನ್ನು ಪ್ರಾಮಾಣಿಕವಾಗಿ ಮಾಡಬೇಕು. ಅದನ್ನು ಮಾಡುತ್ತಿದ್ದೇನೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು. ವಿಧಾನಸಭಾಧ್ಯಕ್ಷರ ಸ್ಥಾನದಲ್ಲಿ ಮಾಡುತ್ತಿರುವ ಕೆಲಸ ತೃಪ್ತಿ ಕೊಟ್ಟಿದೆ. ನನಗೆ ಇಂಥದ್ದೇ ಹುದ್ದೆ ಬೇಕೆಂದೇನು ಇಲ್ಲ. ಏನು ಕೊಟ್ಟರೂ ಜವಾಬ್ದಾರಿಯಿಂದ ನಿರ್ವಹಿಸುತ್ತೇನೆ. ಹುದ್ದೆ ಇಲ್ಲದಿದ್ದರೂ ಶಾಸಕನಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು. ವಿಧಾನಸಭೆಯ ಅವಧಿ ಪೂರ್ಣಗೊಳ್ಳುವ ಮೊದಲೇ ಗ್ರೂಪ್ ಫೋಟೋ ತೆಗೆಸಿದ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿದ ಅವರು, ವಿಧಾನಪರಿಷತ್ತಿನ ಸದಸ್ಯರು ಗ್ರೂಪ್ ಫೋಟೋ ತೆಗೆಸುತ್ತಿದ್ದಾರೆ ಎನ್ನುವ ವಿಚಾರ ಗೊತ್ತಾಯಿತು. ನಾವೂ ಫೋಟೋ ತೆಗೆಸೋಣ ಅಲ್ಲವೇ ಎಂದಾಗ ಅಧಿಕಾರಿಗಳೆಲ್ಲರೂ ಒಪ್ಪಿದರು. ಹೀಗಾಗಿ ವಿಧಾನಸಭಾ ಸದಸ್ಯರ ಗ್ರೂಪ್ ಫೋಟೋಗೆ ವ್ಯವಸ್ಥೆ ಮಾಡಿದ್ದೆವು ಅಷ್ಟೇ ಎಂದರು.

ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಪ್ರಸ್ತಾಪ

ಸರ್ಕಾರಕ್ಕೆ ಆದಾಯ ಕೊರತೆ

ವಿಧಾನಸಭೆ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಿಂದ 20,380 ಕೋಟಿ ರೂ. ಆದಾಯ ಕೊರತೆಗೆ ಕಾರಣವಾಗಿದ್ದು, ಇದರ ಪರಿಣಾಮ ವಿತ್ತೀಯ ಕೊರತೆಯು 2023-24ರಲ್ಲಿ 65,522 ಕೋಟಿ ರೂ. ಗಳಿಂದ 2024-25ರಲ್ಲಿ 58,030 ಕೋಟಿ ಇದೆ ಎಂದು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ವರದಿ ತಿಳಿಸಿದೆ.

ಗುರುವಾರ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಚಿವ ದಿನೇಶ್ ಗುಂಡೂರಾವ್ ಅವರು, 2024ಕ್ಕೆ ಕೊನೆಗೊಂಡ ರಾಜಸ್ವದ ವರದಿಯನ್ನು ಮಂಡಿಸಿದರು. 2025-26ರಲ್ಲಿ ಒಟ್ಟು 50,077 ಕೋಟಿ ರೂ. ಹಣವನ್ನು ವಿವಿಧ ಇಲಾಖೆಗಳಿಗೆ ಸಹಾಯಧನ ನೀಡಲಾಗಿದೆ. ಇದರಲ್ಲಿ ಇಂಧನ ಇಲಾಖೆಗೆ ಅತೀ ಹೆಚ್ಚು ಸಹಾಯಧನ ಸಿಕ್ಕಿದ್ದು, ಗೃಹಜ್ಯೋತಿ ಮತ್ತು ರೈತರ ಕೃಷಿ ಪಂಪ್ ಸೆಟ್ ಬಳಕೆಗೆ ಉಚಿತ ವಿದ್ಯುತ್‌ಗೆ 9,157.66 ಕೋಟಿ ನೀಡಲಾಗಿದೆ. ಶೇ.45ರಷ್ಟು ಸಹಾಯಧನವನ್ನು ಐದು ಗ್ಯಾರಂಟಿಗಳಿಗೆ ನೀಡಲಾಗಿದೆ.

ಜಿಡಿಪಿಯಲ್ಲಿ ರಾಜ್ಯದ ಬೆಳವಣಿಗೆ ಉತ್ತಮವಾಗಿದ್ದು, ತಲಾ ಆದಾಯದಲ್ಲಿ ದೇಶಕ್ಕಿಂತ ಮುಂದೆ ಇದೆ. ಬಜೆಟ್ ಹೊರತುಪಡಿಸಿ, ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಮಾಡಿರುವ ರಾಜ್ಯ ಸರ್ಕಾರದ ಸಾಲವು 14,154.91 ಕೋಟಿ ರೂ. ಇದೆ. ರಾಜ್ಯಕ್ಕೆ ಜಿಎಸ್‌ಟಿಯಿಂದ 52,971.23 ಕೋಟಿ ರೂ. ಬಾಕಿ ಇದ್ದು, ಜಿಎಸ್‌ಟಿ ದರಗಳನ್ನು ಇಳಿಸಿದ್ದರಿಂದ ಮುಂದಿನ ದಿನಗಳಲ್ಲಿ ರಾಜ್ಯಕ್ಕೆ ಜಿಎಸ್‌ಟಿ ಆದಾಯ ಕಡಿಮೆಯಾಗಲಿದೆ.

ಹಿಂದಿನ ವರ್ಷಕ್ಕೆ ಹೂಲಿಸಿದ್ದಲ್ಲಿ ರಾಜ್ಯದ ಲಾಭಾಂಶವು 2024-25ರಲ್ಲಿ ಶೇ.236 ರಷ್ಟು ಹೆಚ್ಚಾಗಿದೆ. 2025-25 ರಾಜ್ಯದ ಒಟ್ಟು ವೆಚ್ಚ 3,43,524 ಕೋಟಿ ರೂ. ಆಗಿದ್ದು ರಾಜಸ್ವ ವೆಚ್ಚ 2,78,987, ಬಂಡವಾಳ ವೆಚ್ಚ 57,906 ಮತ್ತು ಸಾಲ ಮತ್ತು ಮುಂಗಡಗಳಿಗಾಗಿ 6,631 ಕೋಟಿ ರೂ. ಹಂಚಿಕೆಯಾಗಿದೆ. 2024-25ರಲ್ಲಿ ನೀರಾವರಿ ಯೋಜನೆಗೆ ಅತೀ ಹೆಚ್ಚು 19,000 ಕೋಟಿ ರೂ. ದೊರೆತಿದ್ದರೂ ಅನೇಕ ಕಾಮಗಾರಿಗಳು ಅಪೂರ್ಣವಾಗಿವೆ ಎಂದು ವರದಿಯಲ್ಲಿ ಹೇಳಿದೆ.

ರಾಜಸ್ವ ಸಂಗ್ರಹ ಹೆಚ್ಚಳ

ರಾಜ್ಯ ಸರ್ಕಾರಕ್ಕೆ 2024-25ರ ಅವಧಿಯಲ್ಲಿ ಶೇ.10.63 ರಷ್ಟು ರಾಜಸ್ವ ಸಂಗ್ರಹ ಹೆಚ್ಚಳವಾಗಿದ್ದು, ಹಿಂದಿನ ವರ್ಷಕ್ಕೆ ಹೂಲಿಸಿದರೆ ಶೇ.14ರಷ್ಟು ಏರಿಕೆಯಾಗಿದೆ. ತೆರಿಗೆಯೇತರ ರಾಜಸ್ವವು ಶೇ.23.11 ರಷ್ಟು ಹೆಚ್ಚಾಗಿದೆ. ಪ್ರಮುಖವಾಗಿ ಅಬಕಾರಿ ಹಾಗೂ ಮುದ್ರಾಂಕ ಮತ್ತು ನೋಂದಣಿ ಇಲಾಖೆಗಳಿಂದ ರಾಜಸ್ವ ಇಳಿಕೆಯಾಗಿದೆ.



ನರೇಗಾ ಯೋಜನೆಗೆ ಅನುದಾನ ಇಳಿಕೆ

2024-25ರ ಅವಧಿಯಲ್ಲಿ ಮನರೇಗಾ ಯೋಜನೆಗೆ 1,513.38 ಕೋಟಿ ರೂ. ನೀಡಲಾಗಿದ್ದು, ಇದು 2023-24 ವರ್ಷಕ್ಕೆ ಹೂಲಿಸಿದರೆ ಶೇ.7.54 ರಷ್ಟು ಇಳಿಕೆಯಾಗಿದೆ. ಈ ಯೋಜನೆ ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಜನಸಂಖ್ಯೆ ಮತ್ತೊಮ್ಮೆ ನಗರಕ್ಕೆ ಮರಳಿದ್ದರಿಂದ ಇಳಿಕೆ ಆಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

5000 ಕೋಟಿ ರೂ. ಅನುದಾನ ಮೀಸಲಿಡಿ

ವಿಧಾನಸಭೆ: ಕಿತ್ತೂರು ಕರ್ನಾಟಕದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸಿ ಕನಿಷ್ಠ 5000 ಕೋಟಿ ರೂ.ಗಳ ಅನುದಾನವನ್ನು ಮೀಸಲಿಡುವುದಕ್ಕೆ ಒತ್ತಾಯಿಸಿ ಖಾಸಗಿ ನಿರ್ಣಯ ಮಂಡಿಸಲಾಯಿತು.

ಖಾಸಗಿ ಸದಸ್ಯರ ಕಾರ್ಯಕಲಾಪದಲ್ಲಿ ಕಾಂಗ್ರೆಸ್ ಶಾಸಕ ಎನ್.ಎಚ್. ಕೋನರಡ್ಡಿ ಈ ನಿರ್ಣಯ ಮಂಡಿಸಿದರು. ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಬೆಳಗಾವಿ ವಿಭಾಗದ (ಕಿತ್ತೂರು ಕರ್ನಾಟಕ) ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟೆ, ವಿಜಯಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಅಭಿವೃದ್ಧಿಯ ದೃಷ್ಟಿಯಿಂದ ಇನ್ನೂ ನಿರೀಕ್ಷಿತ ಮಟ್ಟ ತಲುಪಿಲ್ಲ.

ಈ ಭಾಗದ ಪ್ರಗತಿಗೆ ವಿಶೇಷ ಒತ್ತು ನೀಡುವ ಅವಶ್ಯಕತೆ ಇದ್ದು, ಬೇರೆ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಕಿತ್ತೂರು ಕರ್ನಾಟಕ ಭಾಗವು ಆರ್ಥಿಕವಾಗಿ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (ಶಿಕ್ಷಣ, ಆರೋಗ್ಯ ಸಾಕ್ಷರತೆ) ತೀರಾ ಹಿಂದುಳಿದಿದೆ.

ಈ ಭಾಗದ ಜಿಲ್ಲೆಗಳ ತಲಾ ಆದಾಯ ರಾಜ್ಯದ ಸರಾಸರಿಗಿಂತ ಕಡಿಮೆ ಇದ್ದು, ರಾಜ್ಯದಲ್ಲಿ ಅತೀ ಕಡಿಮೆ ತಲಾ ಆದಾಯ ಹೊಂದಿದೆ. ಈ ಪ್ರದೇಶದಲ್ಲಿ ಬೃಹತ್ ಕೈಗಾರಿಕೆ ಮತ್ತು ಮೂಲಸೌಕರ್ಯಗಳ ಕೊರತೆಯಿದೆ ಎಂದು ಹೇಳಿದರು.

> ಬಯಲುಸೀಮೆಯಲ್ಲಿ ನಮಗೆ ಏನೂ ಸಿಗುತ್ತಿಲ್ಲ. ಪ್ರತ್ಯೇಕ ಮಂಡಳಿ ಮಾಡಿ ಕಲ್ಯಾಣ ಕರ್ನಾಟಕದಂತೆ ಪ್ರತಿ ವರ್ಷ 5,000 ಕೋಟಿ ರೂ. ನೀಡಿದ್ದರೂ ಕನಿಷ್ಠ 2,500 ಕೋಟಿ ರೂ.ಗಳಾದರೂ ಕೊಡಿ. ಪ್ರತೀ ಶಾಸಕನಿಗೆ ತಲಾ 50 ಕೋಟಿ ರೂ.ಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ನೀಡಿ.
>
> ■ **ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

ಟಿಕೆಟ್‌ಗಾಗಿ ಶಾಸಕರ ಬೇಡಿಕೆ

ಪುಟ ೧➡ ಮಗನನ್ನು ಕಳುಹಿಸಲೂ ಆಗಲ್ಲ ಎಂದರು. ಅಲ್ಲದೇ, ಕ್ರಿಕೆಟ್‌ನವರಿಗೆ ದುಡ್ಡಿನ ಕೊರತೆನಾ? ನಮಗೆ ಅಲ್ಲಿ ಒಂದು ಪಾಸೂ ಕೊಡಲ್ಲ, ಕ್ರಿಕೆಟ್ ಸ್ಟೇಡಿಯಂ ಕಟ್ಟೋಕೆ ಸರ್ಕಾರದ ಹಣ ಬೇಕಾ? ಸಾಕಾಗಿದೆ ಮೊನ್ನೆ ಹನ್ನೊಂದು ಜನ ಸತ್ತಿದ್ದಾರೆ. ಜಾಗ ಕೊಟ್ಟಿರೋದು ಕ್ರಿಕೆಟ್ ಆಡಲು, ತರಬೇತಿ ನೀಡಲು, ಅವರ ಬಳಿ ಸಾವಿರಾರು ಕೋಟಿ ದುಡ್ಡಿದೆ. ಆದರೆ ನಾವು ಒಂದು ಟಿಕೆಟ್‌ಗೆ ಅಂಗಲಾಚಬೇಕು ಎಂದು ಅಶೋಕ್ ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ಮಾತನಾಡಿ, ಶಾಸಕರಿಗೆ ಒಂದು ಟಿಕೆಟ್ ಕೊಡುತ್ತಾರೆ. ಅದು ಸಾಮಾನ್ಯ ಗ್ಯಾಲರಿಯಲ್ಲಿ ಹೋಗಿ ಕುಳಿತುಕೊಳ್ಳಬೇಕು. ಮೊದಲು ಎರಡು ಟಿಕೆಟ್ ಕೊಡುತ್ತಿದ್ದರು. ಎಂಎಲ್‌ಎಗಳು ಕೂರಲು ಒಂದು ಅವಕಾಶ ಮಾಡಿಕೊಡಿ. ನಮ್ಮ ಮಕ್ಕಳು, ನಮ್ಮ ಮನೆಯವರು ಹೋಗುತ್ತಾರೆ ಎಂದರು. ನಾವು ವಿಐಪಿಗಳು ನಮಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು. ನಾವು ಕ್ರೀಡಾಂಗಣಕ್ಕೆ ಹೋದರೆ ಮರ್ಯಾದೆ ಇಲ್ಲ. ಶಾಸಕರು, ಸಚಿವರಿಗೆ ಪ್ರತ್ಯೇಕ ಗ್ಯಾಲರಿ ಮಾಡಿಸಿ ಎಂದು ಪಕ್ಷಾತೀತವಾಗಿ ಶಾಸಕರು ಒತ್ತಾಯ ಮಾಡಿದರು. ಈ ವೇಳೆ ಮಧ್ಯಪ್ರವೇಶ ಮಾಡಿದ ಸ್ಪೀಕರ್ ಖಾದರ್, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಕೆಎಸ್‌ಸಿಎಯವರನ್ನು ಕರೆದು ಮಾತಾಡಬೇಕು. ಅಲ್ಲಿ ಹೋಗಿ ಶಾಸಕರಿಗೆ ಅಗೌರವ ಆಗೋದು ಸರಿಯಲ್ಲ. ಶಾಸಕರ ಕುಟುಂಬಕ್ಕೆ ಕನಿಷ್ಠ 4 ಟಿಕೆಟ್ ಕೊಡಬೇಕು. ಅಲ್ಲಿ ಶಾಸಕರಿಗೆ ಗೌರವ ಕೊಡುವ ಕೆಲಸ ಆಗಬೇಕು ಎಂದು ಸರ್ಕಾರಕ್ಕೆ ಸೂಚಿಸಿದರು.

ಐಪಿಎಲ್ ಟಿಕೆಟ್‌ಗೆ ನನ್ನ ಹತ್ತಿರ ಬರಬೇಡಿ, ಡಿಸಿಎಂ ಹತ್ತಿರ ಹೋಗಿ ಅವರು ಕೊಡಿಸುತ್ತಾರೆ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು. ಇದಕ್ಕೆ ಉತ್ತರಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಶಾಸಕರು ಕೇಳುವುದರಲ್ಲಿ ತಪ್ಪೇನಿಲ್ಲ ಎಂದರು.

ಸನ್ನದ್ಧತೆ ಪರಾಮರ್ಶೆ

ಪುಟ ೧➡ ಪ.ಏಷ್ಯಾ ಸಂಘರ್ಷದಿಂದ ಸೃಜಿಸಲ್ಪಟ್ಟಿರುವ ಸಂಕ್ಲಿಷ್ಟ ಜಾಗತಿಕ ಸನ್ನಿವೇಶಗಳು ದೀರ್ಘಕಾಲ ಮುಂದುವರಿಯುವ ಆತಂಕವಿದೆ. ಹಾಗಾಗಿ ಕೋವಿಡ್ ಸಂದರ್ಭ ಒಗ್ಗಟ್ಟು ಮೆರೆದಂತೆ, ಪ್ರಸಕ್ತ ಏನೇ ಸವಾಲುಗಳು ಎದುರಾದರೂ ಒಗ್ಗಟ್ಟಾಗಿ ಎದುರಿಸಲು ಸನ್ನದ್ಧರಾಗಿರುವಂತೆ ದೇಶವಾಸಿಗಳನ್ನು ಉದ್ದೇಶಿಸಿ ಪ್ರಧಾನಿ ಮೋದಿ ಸೋಮವಾರ ಲೋಕಸಭೆಯಲ್ಲಿ ಹೇಳಿಕೆ ನೀಡಿದ್ದರು.

ಅನಗತ್ಯವಾಗಿ ಎಲ್‌ಪಿಜಿ ಖರೀದಿಸಬೇಡಿ: ಸಚಿವ

ಪುಟ ೧➡ ನಗರಗಳಲ್ಲಿ 25 ದಿನ, ಹಳ್ಳಿಗಳಲ್ಲಿ 45 ದಿನದ ನಂತರ ಎಲ್‌ಪಿಜಿ ರೀಫಿಲ್ಲಿಂಗ್‌ಗೆ ಅವಕಾಶವಿದೆ ಎಂದರು. ಅನಗತ್ಯವಾಗಿ ಗ್ಯಾಸ್ ಖರೀದಿ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಬೇಡಿ. ಪ್ರತನಿತ್ಯ 16 ಸಾವಿರ ವಾಣಿಜ್ಯ ಸಿಲಿಂಡರ್ ಕೊಡುತ್ತಿದ್ದೇವೆ. ಹೋಟೆಲ್‌ಗಳಿಗೆ ಅಗತ್ಯಕ್ಕಾಗಿ ಶೇ.20ರಷ್ಟು ಸಿಲಿಂಡರ್ ಪೂರೈಸುತ್ತಿದ್ದೇವೆ. ಆಸ್ಪತ್ರೆಗಳಿಗೆ ಶೇ.100 ರಷ್ಟು ಸಿಲಿಂಡರ್ ಪೂರೈಸುತ್ತಿದ್ದೇವೆ ಎಂದರು. ಹೋಟೆಲ್‌ಗಳಿಗೆ ಇನ್ನೂ ಹೆಚ್ಚಿನ ಸಿಲಿಂಡರ್ ಪೂರೈಕೆ ಮಾಡಲಾಗುತ್ತದೆ. ಈ ಬಗ್ಗೆ ಸೋಮವಾರ ಸಭೆ ಮಾಡಿ ನಿರ್ಧಾರ ಮಾಡುತ್ತೇವೆ. ಗ್ರಾಹಕರು ವಿನಾಕಾರಣ ಗ್ಯಾಸ್ ಏಜೆನ್ಸಿ ಬಳಿ ಸರತಿ ನಿಲ್ಲಬೇಡಿ. ಬುಕ್ ಮಾಡಿದರೆ ನಿಮ್ಮ ಮನೆಗೆ ಸಿಲಿಂಡರ್ ಬರುತ್ತದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.



ಭದ್ರತಾ ಸಂಸ್ಥೆಗಳು ಸನ್ನದ್ಧ ಸ್ಥಿತಿಯಲ್ಲಿ

ಪುಟ ೧➡ ಆದಷ್ಟು ಸಂಯಮ, ಸಹನೆ ಮತ್ತು ಜಾಗೃತ ಸ್ಥಿತಿಯಲ್ಲಿರುವಂತೆ ಕರೆ ನೀಡಿದ್ದ ಪ್ರಧಾನಿ ಮೋದಿ, ಅಪಪ್ರಚಾರ ಮುಖೇನ ಸನ್ನಿವೇಶದ ದುರ್ಲಾಭಕ್ಕೆ ಯತ್ನಿಸುವವರಿದ್ದಾರೆ. ಕಾಳಸಂತೆ ಅಥವಾ ಅಕ್ರಮ ದಾಸ್ತಾನುಗಾರರ ವಿರುದ್ಧ ನಿಗಾ ಇರಿಸಿ ಅಂತಹ ಶಕ್ತಿಗಳ ವಿರುದ್ಧ ತುರ್ತು ಕ್ರಮ ಕೈಗೊಳ್ಳುವಂತೆ ಎಲ್ಲಾ ರಾಜ್ಯ ಸರಕಾರಗಳನ್ನು ವಿನಂತಿಸಿದ್ದರು.

ಅಧ್ಯಾಪಕನಿಗೆ ಧರ್ಮದೇಟು

ಪುಟ ೧➡ ಈ ಘಟನೆಯ ವಿಡಿಯೋ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ತಾಲೂಕಿನ ಟಿ.ಬೇಗೂರಿನಲ್ಲಿರುವ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಉಪನ್ಯಾಸಕ ಅಬ್ದುಲ್ ಎಂಬಾತನ ವರ್ತನೆಯಿಂದಾಗಿ ಕ್ಯಾಂಪಸ್ ಬೆಚ್ಚಿಬಿದ್ದಿದೆ. ತರಗತಿಯಲ್ಲಿದ್ದ ವಿದ್ಯಾರ್ಥಿನಿಯ ಬಳಿ ಬಂದ ಅಬ್ದುಲ್, ಚಾಕಲೇಟ್ ನೀಡಿ ಅಸಭ್ಯವಾಗಿ ವರ್ತಿಸಿದ್ದಾನೆ ಎನ್ನಲಾಗಿದೆ. ಉಪನ್ಯಾಸಕನ ಈ ಅತಿರೇಕದ ನಡವಳಿಕೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿನಿ ಕೂಡಲೇ ಆತನನ್ನು ತರಾಟೆಗೆ ತೆಗೆದುಕೊಂಡಿದ್ದಾಳೆ. ವಿದ್ಯಾರ್ಥಿನಿಯ ಪ್ರತಿರೋಧದ ಬೆನ್ನಲ್ಲೇ ರೊಚ್ಚಿಗೆದ್ದ ಇತರೆ ವಿದ್ಯಾರ್ಥಿಗಳು ಉಪನ್ಯಾಸಕನ ಮೇಲೆ ಮುಗಿಬಿದ್ದಿದ್ದಾರೆ. ವಿದ್ಯಾರ್ಥಿಗಳ ಕೈಯಿಂದ ತಪ್ಪಿಸಿಕೊಳ್ಳಲು ಅಬ್ದುಲ್ ತನ್ನ ಕಾರಿನತ್ತ ಓಡುತ್ತಿದ್ದಾಗ ಆತನನ್ನು ಅಡ್ಡಗಟ್ಟಿ ವಿದ್ಯಾರ್ಥಿಗಳ ಗುಂಪು ಹಲ್ಲೆ ನಡೆಸಿದೆ. ಸಂತ್ರಸ್ತ ವಿದ್ಯಾರ್ಥಿನಿ ಚಪ್ಪಲಿಯಿಂದ ಹಲ್ಲೆ ಮಾಡಿದರೆ, ಉಳಿದ ವಿದ್ಯಾರ್ಥಿಗಳು ಕಾಲಿನಿಂದ ಒದ್ದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದ ಗೃಹ ಸಚಿವ ಒಡೆತನದ ಶಿಕ್ಷಣ ಸಂಸ್ಥೆಯಲ್ಲೇ ಹೆಣ್ಣು ಮಕ್ಕಳಿಗೆ ಇಂತಹ ಪರಿಸ್ಥಿತಿ ಬಂದೊದಗಿರುವುದು ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ. ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಧ್ಯಾಪಕ ವಿರುದ್ಧ ಪ್ರಕರಣ ದಾಖಲಾಗಿದೆ.

ಡಿಕೆಶಿ-ಮುನಿರತ್ನ ಜಟಾಪಟಿ

ವಿಧಾನಸಭೆ: ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಬಿಜೆಪಿ ಶಾಸಕ ಮುನಿರತ್ನ ನಡುವೆ ನಡೆದ ವೈಯಕ್ತಿಕ ಜಟಾಪಟಿಯಿಂದ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು. ಇವರಿಬ್ಬರ ಮಾತಿನ ಚಕಮಕಿಯು ಆಡಳಿತ ಪಕ್ಷದ ಶಾಸಕರು ಧರಣಿ ನಡೆಸಿದ ಪ್ರಸಂಗ ಜರುಗಿತು.

ಬೆಂಗಳೂರು ನಗರದ ಅಭಿವೃದ್ಧಿ ಕುರಿತಂತೆ ನಡೆದ ಚರ್ಚೆಯಲ್ಲಿ ಡಿ.ಕೆ.ಶಿವಕುಮಾರ್ ಉತ್ತರಿಸುವಾಗ ಆಡಿದ ಮಾತು ಮುನಿರತ್ನ ಅವರನ್ನು ಕೆರಳಿಸಿತು. ಪ್ರತಿಯಾಗಿ ಮುನಿರತ್ನ ಅವರೂ ಕೂಡ ಏರಿದ ಧ್ವನಿಯಲ್ಲಿ ಮಾತನಾಡಿದರು. ಇದಕ್ಕೆ ಆಡಳಿತ ಪಕ್ಷದ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮಾತನಾಡಿದಾಗ ವಿಪಕ್ಷ ನಾಯಕ ಆರ್.ಅಶೋಕ್ ಮಧ್ಯಪ್ರವೇಶಿಸಿ, ವೈಯಕ್ತಿಕ ವಿಚಾರ ಚರ್ಚೆಯಾಗುವುದು ಬೇಡ, ಉಪಮುಖ್ಯಮಂತ್ರಿ ಹಾಗೂ ಶಾಸಕರು ಬಳಸಿರುವ ಶಬ್ದಗಳನ್ನು ಮತ್ತು ವಿಚಾರವನ್ನು ಕಡತದಿಂದ ತೆಗೆಸಿ ಎಂಬ ಸಲಹೆ ಮಾಡಿದರು. ಮುನಿರತ್ನ ಅವರನ್ನು ಸಮಾಧಾನಪಡಿಸಲು ಸಭಾಧ್ಯಕ್ಷರು ಪದೇಪದೇ ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಬೆಂಗಳೂರು ಅಭಿವೃದ್ಧಿ ಕುರಿತಂತೆ ಪ್ರಸ್ತಾಪವಾದ ವಿಚಾರಗಳನ್ನು ಹೊರತುಪಡಿಸಿ ಉಳಿದೆಲ್ಲಾ ವಿಚಾರಗಳನ್ನು ಕಡತದಿಂದ ತೆಗೆಯಲು ಸೂಚಿಸಿದರು.

ಕ್ರೆಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ಸ್ ಅಳವಡಿಕೆ

ವಿಧಾನಪರಿಷತ್: ಆಲಮಟ್ಟಿ ಜಲಾಶಯವನ್ನು 509 ಅಡಿಗಳಿಂದ 524.56 ಅಡಿಗೆ ಎತ್ತರಿಸಲು ಪೂರಕವಾಗಿ 26 ರೇಡಿಯನ್ ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ಸ್ ಅಳವಡಿಕೆಗೆ ಮೇಲ್ಮನೆಯಲ್ಲಿ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಕುರಿತು ನಿರ್ಣಯವನ್ನು ಮಂಡಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಆಲಮಟ್ಟಿ ಜಲಾಶದಲ್ಲಿ ಹೂಳು ತುಂಬಿರುವುದು ಹಾಗೂ ಕರ್ನಾಟಕದ ಪಾಲಿನ ನೀರಿನ ಸದ್ಬಳಕೆಗೆ ಅಣೆಕಟ್ಟೆಯನ್ನು ಎತ್ತರಿಸಬೇಕಿದೆ. ಜಲಾಶಯದ ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್‌ಗಳ ಅಳವಡಿಸಬೇಕಿದೆ. ಅಣೆಕಟ್ಟೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಲಯದಲ್ಲಿ ಸದ್ಯಕ್ಕೆ ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಅರ್ಜಿಗಳಿಲ್ಲ. ಈ ಕುರಿತಂತೆ ನ್ಯಾಯಾಲಯ, ನ್ಯಾಯಾಧೀಕರಣದಿಂದ ಯಾವುದೇ ತಡೆಯಾಜ್ಞೆಯೂ ಇಲ್ಲ. ಹೀಗಾಗಿ ಜಲಾಶಯದಲ್ಲಿ 303 ಟಿಎಂಸಿ ನೀರು ಸಂಗ್ರಹಿಸಲು ಈ ನಿರ್ಣಯ ತರಲಾಗಿದೆ. ಇದನ್ನು ಕೆಳಮನೆ ಈಗಾಗಲೇ ಅಂಗೀಕರಿಸಿದೆ ಎಂದು ಸದನಕ್ಕೆ ವಿವರಿಸಿದರು. ಅದನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ಇದಕ್ಕೂ ಮೊದಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ವಿಧಾನಸಭೆಯಲ್ಲಿ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ (ತಿದ್ದುಪಡಿ) ವಿಧೇಯಕ 2026 ಅನ್ನು ಮಂಡಿಸಿದರು. ಸಾಮಾನ್ಯ ಹಾಗೂ ಸ್ಲೀಪರ್ ಬಸ್ ಮೇಲಿನ ತೆರಿಗೆಯನ್ನು ಕಡಿತಗೊಳಿಸುವುದು ಹಾಗೂ ಮತ್ತಿತರೆ ವಾಹನಗಳ ತೆರಿಗೆಯನ್ನು ಹೆಚ್ಚಿಸುವುದು ಮಸೂದೆಯ ಉದ್ದೇಶಯನ್ನು ವಿವರಿಸಿದರು.

ಅದನ್ನು ಸ್ವಾಗಿತಿಸಿ ಮಾತನಾಡಿದ ಬಿಜೆಪಿಯ ನವೀನ್ ಕೆ.ಎಸ್, ಶರವಣ ಅವರು, ಕರ್ನಾಟಕದಲ್ಲಿ ಅನ್ಯ ರಾಜ್ಯಗಳ ಬಸ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಿವೆ ಎಂದರು.

ಜನ, ಶಾಸಕರ ಆಶೀರ್ವಾದ ನನಗಿದೆ

ಪುಟ ೧➡ ಈ ಬಾರಿ 1.37 ಲಕ್ಷ ಕೋಟಿ ಸಾಲ ಪಡೆದಿದ್ದೇವೆ. ಆದರೆ, ಬಜೆಟ್ ಗಾತ್ರ 4.48 ಲಕ್ಷ ಕೋಟಿ ರೂ. ಇದೆ. 2025-26ಕ್ಕೆ ಕೇಂದ್ರ ಸರ್ಕಾರದ ಬೆಳವಣಿಗೆ ಶೇ.5.6 ರಷ್ಟಿದ್ದರೆ, ರಾಜ್ಯದ್ದು ಶೇ.9.6 ರಷ್ಟು ಇದೆ. ಕೇಂದ್ರ ಸರ್ಕಾರ 16.96 ಲಕ್ಷ ಕೋಟಿ ರೂ. ಸಾಲ ಮಾಡಿದೆ. ಡಾ.ಮನಮೋಹನ್ ಸಿಂಗ್ ಇದ್ದಾಗ 53.11 ಲಕ್ಷ ಕೋಟಿ ರೂ. ಸಾಲ ಮಾಡಿದ್ದರು. ಈಗ 217 ಕೋಟಿ ರೂ. ಸಾಲ ಮಾಡಿದ್ದಾರೆ ಎಂದು ವಿವರಿಸಿದರು. ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯ ಬಹಳ ಹಿಂದುಳಿದಿದೆ ಎಂದು ಸದಸ್ಯ ಸಿ.ಟಿ. ರವಿ ಸದನಕ್ಕೆ ಪ್ರಶ್ನಿಸಿದ್ದರು. ಹಾಗಾಗಿ ಬೇರೆ ರಾಜ್ಯದೊಂದಿಗೆ ತೆರಿಗೆಗೆ ಹೋಲಿಕೆ ಮಾಡಿದರೆ, 2024-25ರಲ್ಲಿ 2,3,393 ಕೋಟಿ ರೂ. ಆದಾಯ ಅಂದಾಜು ಮಾಡಲಾಗಿದ್ದು, 1.59(ಶೇ.92.2) ಲಕ್ಷ ಕೋಟಿ ರೂ. ಚೇತರಿಕೆ ಕಂಡುಬಂದಿದೆ. 2025ರಿಂದ 26ರಲ್ಲಿ 2,24,600 ಕೋಟಿ ರೂ. ಆದಾಯ ಅಂದಾಜು ಮಾಡಲಾಗಿದ್ದು, 2,10,600(ಶೇ.93.8) ಕೋಟಿ ರೂ. ಚೇತರಿಕೆಯಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಚೇತರಿಕೆಯಾಗಿರುವ ಶೇಕಡವಾರು ನಮ್ಮ ರಾಜ್ಯವೇ ಜಾಸ್ತಿ ಇದೆ ಎಂದರು.

ಪ್ರತಿ ಬಾರಿಯೂ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೋಲಿಕೆ ಮಾಡಿಕೊಳ್ಳಬೇಡಿ ಎಂದು ಪ್ರತಿಪಕ್ಷದ ನಾಯಕರು ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ರಾಜ್ಯ ಸರ್ಕಾರಗಳು ಆರ್ಥಿಕವಾಗಿ ಸದೃಢವಾದರೆ ಕೇಂದ್ರ ಸರ್ಕಾರವು ಸದೃಢವಾಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರ ಸದೃಢವಾದರೆ ಸಾಮಾನ್ಯವಾಗಿ ರಾಜ್ಯಗಳು ಪ್ರಬಲವಾಗುತ್ತವೆ. ಇದನ್ನೇ ಒಕ್ಕೂಟ ವ್ಯವಸ್ಥೆ ಎಂದು ಹೇಳುವುದು. ರಾಜ್ಯ ಸರ್ಕಾರದ ಬಜೆಟ್ ಅನ್ನು ನಾವು ಮುನ್ಸಿಪಾಲಿಟಿಗೆ ಹೋಲಿಕೆ ಮಾಡಲು ಆಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಹೋಲಿಕೆ ಮಾಡಲೇಬೇಕಾಗುತ್ತದೆ. ಕರ್ನಾಟಕದಿಂದ ಪ್ರತಿ ವರ್ಷ ಕೇಂದ್ರಕ್ಕೆ ಲಕ್ಷಾಂತರ ಕೋಟಿ ತೆರಿಗೆ ಪಾವತಿಸುತ್ತೇವೆ.

2025-26ರಲ್ಲಿ ಕರ್ನಾಟಕ ಕೇಂದ್ರಕ್ಕೆ 5 ಲಕ್ಷ ಕೋಟಿ ರೂ.ಗಿಂತಲೂ ಅಧಿಕ ತೆರಿಗೆ ಪಾವತಿಸಿದೆ. ಆದರೆ, ನಮಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುವುದು ಅಲ್ಪ ಪ್ರಮಾಣದ ಅನುದಾನ. ನಮ ರಾಜ್ಯಕ್ಕೆ ಅನ್ಯಾಯವಾದಾಗ ನಾವು ಪ್ರಶ್ನೆ ಮಾಡಲೇಬೇಕಾಗುತ್ತದೆ. ಟೀಕೆ ಮಾಡದಿದ್ದರೆ ಅದನ್ನು ಸರ್ವಾಧಿಕಾರಿ ಧೋರಣೆ ಆಗುತ್ತದೆ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳ ಉತ್ತರ ಖಂಡಿಸಿ, ಬಜೆಟ್‌ನಲ್ಲಿ ದಲಿತರಿಗೆ ದೊಡ್ಡ ಮಟ್ಟದ ಅನ್ಯಾಯ ಮಾಡಲಾಗಿದೆ. ಮುಖ್ಯಮಂತ್ರಿಗಳ ಬಜೆಟ್ ಮೇಲಿನ ಉತ್ತರವೂ ನಮಗೆ ಬೇಸರ ತರಿಸಿದೆ ಎಂದು ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ಮಾಡಿದರು.

ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆಯೇ ಕರ್ನಾಟಕ ಧನ ವಿನಿಯೋಗ ವಿಧೇಯಕ ಅಂಗೀಕಾರವಾಯಿತು.

ವಿದೇಶ ಪ್ರಯಾಣ ದುಂದು ವೆಚ್ಚವಲ್ಲವೇ?

ವಿಮಾನಯಾನ ಪ್ರಯಾಣ, ಹೆಲಿಕಾಪ್ಟರ್ ಪ್ರಯಾಣಕ್ಕೆ ದುಂದುವೆಚ್ಚ ಮಾಡಿರುವುದಾಗಿ ಪ್ರತಿಪಕ್ಷ ನಾಯಕರು ಆರೋಪಿಸಿದ್ದಾರೆ. ನಾನು 2023 ರಿಂದ ಈವ ರೆಗೂ ಮಾಡಿರುವ ಖರ್ಚು 12 ಕೋಟಿ ರೂ. ಉಳಿದ 2 ವರ್ಷಗಳಲ್ಲಿ ತಲಾ ₹21 ಕೋಟಿ ಮಾಡಿದ್ದೇನೆ. 2022-23ರಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ 37 ಕೋಟಿ ರೂ. ಖರ್ಚು ಮಾಡಿದ್ದಾರೆ. ಅಲ್ಲದೇ, ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶ ಪ್ರಯಾಣಕ್ಕೆ 814 ಕೋಟಿ ಹಣವನ್ನು ವೆಚ್ಚ ಮಾಡಿದ್ದಾರೆ. ಇದೆಲ್ಲ ವಿಪಕ್ಷದವರಿಗೆ ದುಂದುವೆಚ್ಚ ಅಲ್ಲವೇ? ಎಂದು ತಮ್ಮ ನಡೆಯನ್ನು ಮುಖ್ಯಮಂತ್ರಿಗಳು ಸಮರ್ಥಿಸಿಕೊಂಡರು.

ಪರಿಶಿಷ್ಟರ ಒಳ ಮೀಸಲು ಸದ್ಯಕ್ಕಿಲ್ಲ

ಪುಟ ೧➡ ಒಳ ಮೀಸಲಾಯಿತಿ ಸಂಬಂ ಧಿಸಿ ವಿಶೇಷ ಸಚಿವ ಸಂಪುಟ ಸಭೆ ಶುಕ್ರವಾರ ನಿಗದಿಯಾಗಿತ್ತು. ಇದು ಸಾರ್ವತ್ರಿಕವಾಗಿರುವ ತಾತ್ವಿಕ ವಿಷಯ ಆಗಿರುವುದರಿಂದ ಅಡ್ವೋಕೇಟ್ ಜನರಲ್ ಅವರು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದ್ದರಿಂದ ಚುನಾವಣಾ ನೀತಿ ಸಂಹಿತಿ ಹಿನ್ನೆಲೆಯಲ್ಲಿ ಅದನ್ನು ಮುಂದೂಡಲಾಗಿದೆ ಎಂದು ವಿವರಿಸಿದರು.

ಜಲಸಂಪನ್ಮೂಲ ಇಲಾಖೆಯಲ್ಲಿ 2003ರ ಮೊದಲು ನೇಮಕಾತಿ ಹೊಂದಿ ಇಲಾಖಾ ಬೇರ್ಪಡಿಕೆ ಸಂದರ್ಭದಲ್ಲಿ ಯಾವ ಇಲಾಖೆಗೆ ಸೇರುತ್ತೇವೆ ಎಂದು ಅಭಿಮತ ಸಲ್ಲಿಸದೇ ಜಲಸಂಪನ್ಮೂಲ ಇಲಾಖೆಯಲ್ಲೇ ಮುಂದುವರಿದಿರುವ 379 ಅಧಿಕಾರಿ ಹಾಗೂ ನೌಕರರನ್ನು ಜಲಸಂಪನ್ಮೂಲ ಇಲಾಖೆಯ ಆಯಾ ವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಪರಿಗಣಿಸಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ (ಆರ್‌ಬಿಎಸ್‌ಕೆ) ಯೋಜನೆಯಲ್ಲಿ ಅನುಮತಿಸಲಾದ 148 ಚಿಕಿತ್ಸಾ ಕಾರ್ಯವಿಧಾನಗಳು, ಅಲ್ಲದೇ ಆರ್‌ಬಿಎಸ್‌ಕೆ ಒಪ್ಪಂದ(ಎಂಒಯು)ದಲ್ಲಿ ಸೇರಿಲ್ಲದ ಹೆಚ್ಚಿನ ಚಿಕಿತ್ಸೆಗಳನ್ನು ಕೈಗೊಂಡಿದ್ದಕ್ಕಾಗಿ 2015-16ರಿಂದ 2018-19ನೇ ಆರ್ಥಿಕ ವರ್ಷದ ಬಾಕಿಯಿರುವ 23.30 ಕೋಟಿ ರೂ.ಗಳ ಮೊತ್ತದ ಬಿಲ್ಲುಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಅನುದಾನದಿಂದ ಪಾವತಿಸಲು ಸಮ್ಮತಿಸಲಾಗಿದೆ ಎಂದರು.

ಅಪರ ನಿಬಂಧಕರ ಹುದ್ದೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಎ.ಜಿ. ಗಂಗಾಧರ ಅವರನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ಅನುಮೋದನೆ ನೀಡಲಾಗಿದೆ. ಅಲ್ಲದೆ, ಲೋಕೋಪಯೋಗಿ ಇಲಾಖೆಯ ಸಿಂದಗಿ ಉಪ ವಿಭಾಗದ ಅಂದಿನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಶಾಂತ ಗಿಡ ದಾನಪ್ಪಗೋಳ ವಿರುದ್ಧ ಕರ್ನಾಟಕ ಲೋಕಾ ಕಾಯ್ದೆಯಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪ ಲೋಕಾಯುಕ್ತರು ಮಾಡಿರುವ ಶಿಫಾರಸ್ಸನ್ನು ಕೈಬಿಡಲು ತೀರ್ಮಾನಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಶ್ರೀರಾಮೋತ್ಸವದ ಮಾತೃ ಸಮಾವೇಶದಲ್ಲಿ ರಾಘವೇಶ್ವರ ಶ್ರೀಗಳಿಂದ ಪ್ರದಾನ

3 ಮಕ್ಕಳ ತಾಯಂದಿರಿಗೆ ಧನ್ಯಜನನೀ ಪ್ರಶಸ್ತಿ

ಹೊಸನಗರ: ಮೂರು ಅಥವಾ ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದ 87 ಮಾತೆಯರಿಗೆ ಧನ್ಯಜನನೀ ಪ್ರಶಸ್ತಿಯನ್ನು ಶ್ರೀರಾಮ ಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ನೀಡಿ ಗೌರವಿಸಿದರು.



ಹೊಸನಗರದ ಶ್ರೀ ರಾಮಚಂದ್ರಾಪುರ ಮಠದಲ್ಲಿ ನಡೆಯುತ್ತಿರುವ ಶ್ರೀರಾಮೋತ್ಸವದ ಮಾತೃ ಸಮಾವೇಶದಲ್ಲಿ ಮಾತನಾಡಿದ ಶ್ರೀಗಳು, ಸಂತಾನವೇ ಸಂಪತ್ತಾಗಿದ್ದು, ಮಕ್ಕಳು ಬೇಡ ಎಂಬ ಆಧುನಿಕ ಚಿಂತನೆ ದೇಶದ ವಿನಾಶಕ್ಕೆ ಕಾರಣವಾಗಬಹುದಾಗಿದೆ. ಮಿತ ಸಂತಾನದಿಂದ ಸಮಾಜವೇ ಕ್ಷಯವಾಗುವ ಆಪತ್ತು ಎದುರಾಗಿದ್ದು, ಸಮಾಜ ತಕ್ಷಣ ಎಚ್ಚೆತ್ತುಕೊಳ್ಳಬೇಕಿದೆ ಎಂದು ಹೇಳಿದರು.

ಮದುವೆಯ ಮೂಲ ಉದ್ದೇಶವೇ ಉತ್ತಮ ಸಂತಾನವನ್ನು ಪಡೆಯುವುದಾಗಿದ್ದು, ಒಂದೇ ಮಕ್ಕಳನ್ನು ಹೊಂದಿದರೆ ನಮ್ಮ ಜನಸಂಖ್ಯೆ ಅರ್ಧಕ್ಕೆ ಇಳಿದಂತೆ. ಇಬ್ಬರು ಮಕ್ಕಳನ್ನು ಪಡೆದರೆ ಅಲ್ಲಿಂದಲ್ಲಿಗೆ ಆದಂತಾಗುತ್ತದೆ. ಮೂರು ಮಕ್ಕಳನ್ನು ಪಡೆದಾಗ ಸಮಾಜ ಸಶಕ್ತವಾಗಲು ಸಾಧ್ಯ. ಮೂರು ಮಕ್ಕಳು ಎನ್ನುವಾಗ ತಲೆತಗ್ಗಿಸುವ ಆವಶ್ಯಕತೆ ಇಲ್ಲ. ಸಮಾಜ ಅಂತಹ ಮಾತೆಯರನ್ನು ಗೌರವಿಸಬೇಕಿದೆ ಎಂದರು.

ಡಿಸೆಂಬರ್ 2024 ರಲ್ಲಿ ನಡೆದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ ನಾವು ಈ ವಿಷಯವನ್ನು ಪ್ರಸ್ತಾಪಿಸಿದ್ದೆವು. ಅದು ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದ್ದು, ಹಿರಿಯ ವಯಸ್ಸಿನ ಅನೇಕರು ಯುವ ದಂಪತಿಗಳಿಗೆ ಮಕ್ಕಳೆಂಬ ಸಂಪತ್ತನ್ನು ಪಡೆಯುವಂತೆ ಪ್ರೇರಣೆ ನೀಡುತ್ತಿರುವುದು ಕಂಡುಬರುತ್ತಿದೆ. ತಾಯಿ ಎಂಬ ಪದವಿಯು ಜಗತ್ತಿನ ಎಲ್ಲಾ ಪದವಿಗಿಂತ ಬಹುದೊಡ್ಡ ಪದವಿಯಾಗಿದ್ದು, ಪ್ರಜಾ ಸಂಪತ್ತನ್ನು ಸಂವರ್ಧಿಸುವ ತಾಯಿಯನ್ನು ಸಮಾಜ ಗೌರವಿಸಬೇಕು. ಇಂದಿನ ಯುವ ಪೀಳಿಗೆ ದುಡಿಮೆಯಲ್ಲಿ ಮೈಮರೆತು ಪ್ರಜಾ ಸಂವರ್ಧನೆಯ ಕರ್ತವ್ಯದಿಂದ ದೂರವಾಗುತ್ತಿರುವುದು ಆತಂಕಕಾರಿ ಎಂದು ಕಳವಳ ವ್ಯಕ್ತಪಡಿಸಿದರು.

ಕಂಚಿಯ ಪರಮಾಚಾರ್ಯರು ಕೆಲವು ದಶಕಗಳ ಮೊದಲು 10 ಮಕ್ಕಳನ್ನು ಹೆತ್ತ ತಾಯಿಗೆ ವೀರಮಾತಾ ಪ್ರಶಸ್ತಿ ನೀಡಿ ಆಶೀರ್ವಾದ ಮಾಡುತ್ತಿದ್ದರು. ಅಭಿನವ ಶಂಕರರಾದ ಅವರು ಪ್ರಜಾ ಸಂಪತ್ತಿನ ಮಹತ್ವವನ್ನು ಅಂದೇ ಗುರುತಿಸಿದ್ದರು ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ರಾಮೋತ್ಸವದ ಪ್ರಯುಕ್ತ ಪುಷ್ಪ ರಥೋತ್ಸವ, ಪೂಗ ಪೂಜೆ, ಮಾತೆಯರಿಂದ ಕುಂಕುಮಾರ್ಚನೆ, ಅಖಂಡ ಭಜನೆಗೆ ಚಾಲನೆ ದೊರೆಯಿತು. ನಾಳೆ ಹಾಗೂ ನಾಡಿದ್ದು ರಾಮೋತ್ಸವದ ಅಂಗವಾಗಿ ರಾಮಜನ್ಮೋತ್ಸವ, ರಥೋತ್ಸವ, ಸೀತಾರಾಮ ಪಟ್ಟಾಭಿಷೇಕ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಎಸ್ಸೆಸ್ಸೆಲ್ಸಿ 30ರ ಪರೀಕ್ಷೆ 31ಕ್ಕೆ ಮುಂದೂಡಿಕೆ

ಬೆಂಗಳೂರು: 2026ನೇ ಸಾಲಿನ ಎಸ್ ಎಸ್ಎಲ್‌ಸಿ ಪರೀಕ್ಷೆ ವೇಳಾಪಟ್ಟಿಯಲ್ಲಿ ಮಹತ್ವದ ಬದಲಾವಣೆ ಮಾಡಿದ್ದು, ಮಹಾವೀರ ಜಯಂತಿ ರಜೆ ಬದಲಾವಣೆ ಹಿನ್ನಲೆಯಲ್ಲಿ ಮಾ.30 ರಂದು ನಿಗದಿಯಾಗಿದ್ದ ತೃತೀಯ ಭಾಷೆ ಪರೀಕ್ಷೆಯನ್ನು ಮಾ.31 ಕ್ಕೆ ಮುಂದೂಡಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ಈ ಹಿಂದೆ ಪ್ರಕಟಿಸಿದ್ದ ಅಂತಿಮ ವೇಳಾಪಟ್ಟಿ ಪ್ರಕಾರ ಮಾ.30 ರಂದು ತೃತೀಯ ಭಾಷೆ ಪರೀಕ್ಷೆಯನ್ನು ನಡೆಸಲು ನಿರ್ಧರಿಸಲಾಗಿತ್ತು. ಆದರೆ, ರಾಜ್ಯ ಸರ್ಕಾರವು ಮಹಾವೀರ ಜಯಂತಿ ಪ್ರಯುಕ್ತ ನೀಡಲಾಗಿದ್ದ ಸಾರ್ವತ್ರಿಕ ರಜೆಯನ್ನು ಮಾ.31ರ ಬದಲಾಗಿ ಮಾ.30 ರಂದು ಬದಲಾಯಿಸಿ ಆದೇಶಿಸಿದೆ. ಈ ಸರ್ಕಾರದ ಹೊಸ ಆದೇಶದ ಹಿನ್ನಲೆ ಪರೀಕ್ಷಾ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ. ಉಳಿದ ವಿಷಯಗಳ ಪರೀಕ್ಷೆಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಶಾಸಕರ ಹಾಜರಾತಿಗೆ ಬಯೋಮೆಟ್ರಿಕ್

ಬೆಂಗಳೂರು: ಮುಂದಿನ ವಿಧಾನಮಂಡಲ ಅಧಿವೇಶನದ ವೇಳೆಗೆ ಶಾಸಕರ ಹಾಜರಾತಿಗೆ ಬಯೋಮೆಟ್ರಿಕ್ ಬಳಸುವುದು ಹಾಗೂ ಕಾಗದರಹಿತ ಶಾಸನಸಭೆ ನಡೆಸಲು ಪ್ರಯತ್ನಿಸಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.



ಗುರುವಾರ ವಿಧಾನಸಭೆ ಕಾರ್ಯಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ಪ್ರಸ್ತುತ ಶಾಸಕರ ಹಾಜರಾತಿಗಾಗಿ ದಿನವಹಿಯನ್ನು ನಿರ್ವಹಣೆ ಮಾಡಲಾಗುತ್ತಿದೆ. ಪ್ರತಿ ಶಾಸಕರೂ ಅದರಲ್ಲಿ ಸಹಿ ಮಾಡಿ, ಪ್ರವೇಶದ ಸಮಯ ಬರೆಯ ಬೇಕಿದೆ. ಈ ವ್ಯವಸ್ಥೆಯನ್ನು ಬಯೋಮೆಟ್ರಿಕ್ ಮಾಡಲು ನಿರ್ಧರಿಸಲಾಗಿದೆ ಎಂದರು.

ಹಾಜರಾತಿಗೆ ಶಾಸಕರ ಬೆರಳಚ್ಚು ಮಾತ್ರ ಪಡೆಯಬೇಕಾ ಅಥವಾ ಮುಖದ ಚಿತ್ರ ಅಳವಡಿಸಬೇಕಾ ಎಂಬುದು ಇನ್ನೂ ನಿರ್ಣಯ ಮಾಡಿಲ್ಲ. ಕೆಲ ಹಿರಿಯ ಶಾಸಕರ ಬೆರಳಚ್ಚು ಬಾರದೆಯೂ ಇರಬಹುದು. ಆದ್ದರಿಂದ ಮುಖದ ಚಿತ್ರ ಪಡೆಯುವ ಆಲೋಚನೆಯೂ ಇದೆ. ಬಯೋಮೆಟ್ರಿಕ್ ಯಂತ್ರವನ್ನು ವಿಧಾನಸಭಾಂಗಣದ ಪ್ರವೇಶದ್ವಾರಗಳ ಬಳಿ ಅಳವಡಿಸುವ ಸಲಹೆಗಳು ಬಂದಿವೆ. ಮುಂದಿನ ಅಧಿವೇಶನದ ವೇಳೆಗೆ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಅನುಷ್ಠಾನಿಸುತ್ತೇವೆ ಎಂದು ವಿವರಿಸಿದರು.

ಈ ಮೊದಲು ವಿಧಾನಮಂಡಲದ ವೆಚ್ಚದಲ್ಲೇ ನಮ್ಮದೇ ಆದ ಅಪ್ಲಿಕೇಶನ್ ಅಭಿವೃದ್ಧಿಪಡಿಸಬೇಕೆಂಬ ಪ್ರಸ್ತಾಪವಿತ್ತು. ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಭಾಧ್ಯಕ್ಷರಾಗಿದ್ದಾಗಲೇ ಈ ಪ್ರಯತ್ನಗಳು ನಡೆದಿದ್ದವು. ಅದೇ ರೀತಿ ನೇವ ಅಳವಡಿಕೆಯ ಚರ್ಚೆಗಳು ಆಗಿದ್ದವು. ನೇವ ಅಳವಡಿಸಿಕೊಂಡರೆ ಕೇಂದ್ರ (ಸಂಸತ್) ಶೇ.60ರಷ್ಟು ಖರ್ಚನ್ನು ಭರಿಸುತ್ತದೆ. ಉಳಿದ ಶೇ.40 ರಷ್ಟು ಖರ್ಚನ್ನು ರಾಜ್ಯ ಕೊಡಬೇಕಾಗುತ್ತದೆ. ಹೀಗಾಗಿ ಅದನ್ನೇ ಆಯ್ಕೆ ಮಾಡಿಕೊಂಡಿದ್ದು, ಅದಕ್ಕೀಗ ಕೇಂದ್ರ ಸರ್ಕಾರವೂ ಸಮ್ಮತಿಸಿದೆ. ಮುಂದಿನ ವಾರ ನೇವ ತಂಡವು ರಾಜ್ಯಕ್ಕೆ ಆಗಮಿಸಿ ಇ- ವಿಧಾನ್ ಖರ್ಚು, ವೆಚ್ಚ, ಅದರ ಕಾರ್ಯ ನಿರ್ವಹಣೆ ಇತ್ಯಾದಿಗಳ ಬಗ್ಗೆ ವಿವರಿಸಲಿದ್ದು, 3 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸವಿದೆ ಎಂದರು.

ಶಾಸನಸಭೆ ಇನ್ನು ಡಿಜಿಟಲ್

ಸಂಸತ್ ಮಾದರಿಯಲ್ಲಿ ಕರ್ನಾಟಕ ವಿಧಾನಮಂಡಲ ಶಾಸನ ಸಭೆಯನ್ನು ಡಿಜಿಟಲೀಕರಿಸಲು ತೀರ್ಮಾನಿಸಿದೆ. ರಾಷ್ಟ್ರೀಯ ಇ-ವಿಧಾನ್ ಅಪ್ಲಿಕೇಶನ್ (ನೇವ) ಮೂಲಕ ಇದನ್ನು ಅನುಷ್ಠಾನಕ್ಕೆ ತರಲಾಗುವುದು. ಈಗಾಗಲೇ ಅನೇಕ ರಾಜ್ಯಗಳು ಇದೇ ಅಪ್ಲಿಕೇಶನ್ ಅಳವಡಿಸಿ ಕೊಂಡಿದ್ದು, ಕರ್ನಾಟಕ ವಿಧಾನಮಂಡಲಕ್ಕೂ ಇದನ್ನೇ ಅಳವಡಿಸಿಕೊಳ್ಳಲು ತೀರ್ಮಾನಿಸಿದ್ದೇವೆ ಎಂದರು.

ಕಿರುಸುದ್ದಿ

ಯಶಸ್ವಿ ಅಧಿವೇಶನ

ಬೆಂಗಳೂರು: ಹದಿನಾರನೆಯ ವಿಧಾನಸಭೆಯ 9ನೇ ಅಧಿವೇಶನದ ಮುಂದುವರಿದ ಉಪವೇಶನವು ಯಶಸ್ವಿಯಾಗಿ ನಡೆದಿದ್ದು, ಎರಡು ದಾಖಲೆಗಳಾಗಿವೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು. ವಿಧಾನಸಭೆಯ ಕಾರ್ಯಕಲಾಪವನ್ನು ಗುರುವಾರ ಅನಿರ್ದಿಷ್ಟ ಅವಧಿಗೆ ಮುಂದೂಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಕಾರ್ಯಕಲಾಪಗಳ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾ. 6ರಿಂದ 26ರವರೆಗೆ ಒಟ್ಟು 13 ದಿನಗಳ ಕಾಲ 80 ತಾಸು 12 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ. 2026–27ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾ.6ರಂದು ಮುಖ್ಯಮಂತ್ರಿಯವರು ಮಂಡಿಸಿದ್ದು, ಅದರ ಕುರಿತ ಸಾಮಾನ್ಯ ಚರ್ಚೆ ಮತ್ತು ಅನುದಾನಗಳ ಬೇಡಿಕೆಗಳ ಕುರಿತಾದ ಚರ್ಚೆಯಲ್ಲಿ 50 ಸದಸ್ಯರು ಭಾಗವಹಿಸಿ 24 ತಾಸು 45 ನಿಮಿಷಗಳ ಕಾಲ ಮಾತನಾಡಿದ್ದು ದಾಖಲೆಯಾಗಿದೆ. ಮಾ.24ರಂದು ಬೆಳಗ್ಗೆ 11.35ಕ್ಕೆ ಪ್ರಾರಂಭವಾದ ಸದನವು ಮರುದಿನ ಮುಂಜಾವ 1.42ರವರೆಗೆ (12 ತಾಸು 41 ನಿಮಿಷಗಳು) ನಡೆದಿರುವುದು ಕೂಡ ದಾಖಲೆಯಾಗಿದೆ ಎಂದರು. ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕಗಳೂ ಸೇರಿದಂತೆ ಒಟ್ಟು 12 ವಿಧೇಯಕಗಳನ್ನು ಮಂಡಿಸಿ, 11 ವಿಧೇಯಕಗಳನ್ನು ಅಂಗೀಕರಿಸಲಾಗಿದೆ. ನಿಯಮ 60ರಡಿಯಲ್ಲಿ ನೀಡಿದ್ದ ಎರಡು ನಿಲುವಳಿ ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಿರುವುದು ಸೇರಿ ಒಟ್ಟು ಐದು ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿದೆ. ಒಟ್ಟು 15 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ. ಒಟ್ಟು 2,791 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 195 ಪ್ರಶ್ನೆಗಳ ಪೈಕಿ 180 ಪ್ರಶ್ನೆಗಳಿಗೆ; ಲಿಖಿತ ಮೂಲಕ ಉತ್ತರಿಸುವ 2,503 ಪ್ರಶ್ನೆಗಳ ಪೈಕಿ 2,254 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ. ನಿಯಮ 351ರಡಿಯಲ್ಲಿ ಸ್ವೀಕೃತವಾದ 217 ಸೂಚನೆಗಳ ಪೈಕಿ 101 ಸೂಚನೆಗಳಿಗೆ, ಗಮನಸೆಳೆಯುವ 323 ಸೂಚನೆಗಳ ಪೈಕಿ 158 ಸೂಚನೆಗಳಿಗೆ ಚರ್ಚಿಸಿ ಉತ್ತರಗಳನ್ನು ಸ್ವೀಕರಿಸಲಾಗಿದೆ ಎಂದು ವಿವರಿಸಿದರು.

1ನೇ ತರಗತಿ ಪ್ರವೇಶಕ್ಕೆ ಎರಡು ತಿಂಗಳ ವಿನಾಯಿತಿ

ವಿಧಾನಸಭೆ: ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ತುಂಬಬೇಕೆಂಬ ಕಡ್ಡಾಯ ನಿಯಮದಲ್ಲಿ 2026–27ನೇ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಸರ್ಕಾರ ವಿನಾಯಿತಿ ನೀಡಿದೆ. ಈ ಕುರಿತು ವಿಧಾನಸಭೆಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ ಮಾಡಿದ್ದಾರೆ. ಒಂದನೇ ತರಗತಿ ದಾಖಲಾತಿಗೆ 6 ವರ್ಷ ತುಂಬಿರಲೇಬೇಕೆಂಬ ನಿಯಮದಲ್ಲಿ ಈ ವರ್ಷವೂ ವಿನಾಯಿತಿ ನೀಡಲಾಗಿದೆ. 60 ದಿನಗಳ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದೆ. 2 ತಿಂಗಳ ರಿಯಾಯಿತಿ ತರುತ್ತೇವೆ. ಅದರಂತೆ 2026–27ನೇ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿ ದಾಖಲಾತಿ ಸಂಬಂಧ 60 ದಿನಗಳ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದರು. ಈ ಸಂಬಂಧ ದಾಖಲಾತಿ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗುತ್ತದೆ. ಒಂದನೇ ತರಗತಿ ದಾಖಲಾತಿಗೆ 6 ವರ್ಷದ ಕಡ್ಡಾಯ ನಿಯಮಕ್ಕೆ ಹೊಂದಿಕೊಳ್ಳುವಂತೆ ಇತ್ತ ಎಲ್‌ಕೆಜಿ, ಯುಕೆಜಿ ಮಟ್ಟದಲ್ಲೇ ದಾಖಲಾತಿ ವಯೋಮಿತಿ ನಿಗದಿ ಮಾಡುವ ಸಂಬಂಧ ಕಾಯ್ದೆ ತರಲಾಗುವುದು. ಎಲ್‌ಕೆಜಿ, ಯುಕೆಜಿಗೆ ಮಕ್ಕಳ ದಾಖಲಾತಿಗೆ ಈಗ ವಯೋಮಿತಿ ನಿಗದಿ ಮಾಡುವ ಕಾನೂನು ಇಲ್ಲ. ಹೀಗಾಗಿ ದಾಖಲಾತಿಗೆ ಸಮಸ್ಯೆಯಾಗುತ್ತಿದೆ. ಒಂದನೇ ತರಗತಿಗೆ 6 ವರ್ಷ ತುಂಬಿರಬೇಕು ಎಂಬ ಕಡ್ಡಾಯ ನಿಯಮಕ್ಕೆ ಎಲ್‌ಕೆಜಿ, ಯುಕೆಜಿಗೆ ಮಕ್ಕಳ ದಾಖಲಾತಿ ವಯೋಮಿತಿ ನಿಗದಿ ಸಂಬಂಧ ಕಾಯ್ದೆಯನ್ನು ರೂಪಿಸಿ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇಂಗಿತ


ವಿಚಾರಧಾರೆ ನಿರಂತರ

ಮೈಸೂರು: ಭಾರತೀಯ ವಿಚಾರಧಾರೆಯು ನಿರಂತರವಾದ ಜ್ಞಾನಪ್ರವಾಹ. ಭಾರತೀಯ ವಿಶ್ವ ದರ್ಶನವನ್ನು ಲೋಕಭಾಷೆಯಲ್ಲಿ ನೀಡಬೇಕು. ಸಾಮಾನ್ಯ ಜನರೂ ಅದನ್ನು ಅಳವಡಿಸಿಕೊಳ್ಳುವಂತಾಗ ಬೇಕು ಎಂದು ಕೇಂದ್ರ ಉನ್ನತ ಶಿಕ್ಷಣ ಸಚಿವ ಧರ್ಮೇಂದ್ರಪ್ರಧಾನ್ ಹೇಳಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾದ ಏಕಾತ್ಮ ಮಾನವ ದರ್ಶನ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ದೀನ ದಯಾಳ ಉಪಾಧ್ಯಾಯರು ಏಕಾತ್ಮ ಮಾನವ ದರ್ಶನದಲ್ಲಿ ಮಾನವನ ಸಮಗ್ರತೆಯನ್ನು ಗುರುತಿಸಿದ್ದರು. ಅದರ ಆಧಾರವಾಗಿಯೇ ಹಲವು ಯೋಜನೆಗಳನ್ನೂ ಕೇಂದ್ರ ಸರ್ಕಾರದ ವತಿಯಿಂದ ರೂಪಿಸಲಾಗಿದೆ. ಪ್ರಧಾನ ನರೇಂದ್ರ ಮೋದಿ ಅವರು ಭಾರತವನ್ನು 2047ರ ಹೊತ್ತಿಗೆ ವಿಕಸಿತ ಭಾರತವನ್ನಾಗಿಸಬೇಕು ಎಂದು ಕರೆಕೊಟ್ಟಿದ್ದಾರೆ ಎಂದರು.

ಸಂಶೋಧಕರಾದ ಡಾ. ಎಂ ಎಸ್ ಚೈತ್ರ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯ ವಿಷಯಗಳ ಕುರಿತು ತಿಳಿಸುವುದು ಶಿಕ್ಷಣ ಕ್ಷೇತ್ರದ ನಿರ್ವಸಾಹತೀಕರಣ ಸುಲಭದ ಕೆಲಸವಲ್ಲ. ವಿಕಿರಣದ ಅವುಗಳನ್ನು ಮಕ್ಕಳಿಗೆ ತಲುಪಿಸುವಲ್ಲಿಕರ ಮತ್ತು ತರಗತಿ ಶಿಕ್ಷಣದ ಕುರಿತು ಇಲ್ಲಿಯವರೆಗೂ ನಾವು ಗಂಭೀರವಾಗಿ ಯೋಚಿಸಿಲ್ಲ. ಶಿಕ್ಷಕರನ್ನುಮತ್ತು ತರಗತಿ ಶಿಕ್ಷಣದಲ್ಲಾಗಬೇಕಾದ ಬದಲಾವಣೆಯ ಕುರಿತು ಯೋಚಿಸಬೇಕಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗೆತನ್ನಂತೆ ತಾನಿದ್ದು ಕಲಿಯುವ ವಾತಾವರಣವನ್ನು ಕಲ್ಪಿಸುವುದಕ್ಕೆ ಸಾಧ್ಯಗುತ್ತದೆಯೇ ಎನ್ನುವುದನ್ನುಚಿಂತಿಸಬೇಕು. ನಮ್ಮ ಶೈಕ್ಷಣಿಕ ಸಾಂಸ್ಥಿಕ ಸೋಲಿನ ಕುರಿತು ಮರುಚಿಂತನೆ ಅಗತ್ಯ. ನಮ್ಮ ರಾಷ್ಟ್ರದ ಶಿಕ್ಷಣಪದ್ಧತಿಯ ತಳಹದಿ ಗುರುಶಿಷ್ಯ ಪರಂಪರೆ. ಅದರ ಆಧಾರದ ಮೇಲೆಯೇ ನಮ್ಮ ಸಂಸ್ಥೆಗಳನ್ನು ಭಾರತೀಯಕರಣಗೊಳಿಸಬೇಕುಎಂದು ಅಭಿಪ್ರಾಯವಟ್ಟರು. ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಪ್ರೊ. ಶರಣಪ್ಪ ಹಲಸೆ, ಡಾ. ಶ್ಯಾಮಪ್ರಸಾದ್ ಮುಖರ್ಜಿ ಸಂಶೋಧನಾ ಫೌಂಡೇಶನ್ನ ಟ್ರಸ್ಟಿ ಎಂ ಮದನ್ ಗೋಪಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಭಾರತದ ಶ್ರೇಷ್ಠ ಕೊಡುಗೆ ಪುರುಷಾರ್ಥಗಳು

ಪುರುಷಾರ್ಥಗಳನ್ನು ವೈಜ್ಞಾನಿಕವಾಗಿದ್ದರೊಂದಿಗೆ ನಿರೂಪಿಸಲಾಗಿದೆ ಮತ್ತು ಸಂಯಾಗಿಸತ್ಪತಿಪಾದಿಸಲಾಗಿಲ್ಲ. ಮೈಸೂರಿನವರಾತ ವಿದ್ವಾಂಸರಾದ ಹಿರಿಯಣ್ಣ ಅವರು ಎಲ್ಲಾ ಮೌಲ್ಯಗಳ ನಿಜವಾದ ಸಾರ ಪುರುಷಾರ್ಥಗಳು.ಭಾರತೀಯ ತತ್ವ ಶಾಸ್ತ್ರವನ್ನು ಮೌಲ್ಯಗಳ ಅಧ್ಯಯನ ಎಂದು ಹೇಳಿದ್ದಾರೆ. ಪುರುಷಾರ್ಥಗಳು ಜಗತ್ತಿನಪರಂಪರೆಗೆ ಭಾರತದ ಶ್ರೇಷ್ಠ ಕೊಡುಗೆ ಎಂದು ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ ಹೇಳಿದರು. ಧರ್ಮದ ವಿರುದ್ಧವಾದ ಅರ್ಥವು ಅಪಮೌಲ್ಯವಾಗುತ್ತದೆ, ಧರ್ಮದ ವಿರುದ್ಧವಾದ ಆಸೆ ಕೋಪಗಳು ಶತ್ರುವಾಗುತ್ತದೆ.ಗಳಿಸಿದ ತೃಪ್ತಿಯ ವ್ಯವಸ್ಥೆಯನ್ನು ಅರ್ಥವೆನ್ನುತ್ತೇವೆ. ಅರ್ಥ ಮತ್ತು ಕಾಮದಎಲ್ಲಾ ಆಯಾಮವನ್ನು ಬೆಳಗುವ ಕೈದೀಪವಾಗಿಯೂ ಧರ್ಮ ಕಾರ್ಯನಿರ್ವಹಿಸುತ್ತದೆ. ಸಾಕ್ಷಾತ್ಕಾರದ ಸ್ಥಿತಿಯೇ ಮೋಕ್ಷ. ಪ್ರಜ್ಞಾಪ್ರವಾಹದ ಯುವ ಆಯಾಮದ ಕರ್ನಾಟಕ ಉತ್ತರ ಪ್ರಾಂತ ಸಂಯೋಜಕ ಪುನೀತ್‌ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಳಸುವ ಪ್ರತಿಪದದ ಸ್ಪಷ್ಟತೆ ಇರಲಿ: ನಂದಕುಮಾರ್

ಭಾರತೀಯ ಇತಿಹಾಸವನ್ನು ಗಮನಿಸಿದಾಗನಾವು ಬಳಸುವ ಪದಗಳ ಕುರಿತಾದ ಸ್ಪಷ್ಟತೆ ನಮ್ಮಲ್ಲಿಲ್ಲ. ವೈಚಾರಿಕ ವಲಯದಲ್ಲಿ ನಾವು ಬಳಸುವ ಪ್ರತಿಪದದ ಕುರಿತೂ ಸ್ಪಷ್ಟತೆ ನಮಗಿರಬೇಕು. ಇಲ್ಲವಿದ್ದರೆ ಮಾರ್ಕಾಶಾಹಿಗಳು ಮಾಡಿದಂತೆಯೇ ಆ ಪದಗಳ ಕುರಿತುತಪ್ಪು ವ್ಯಾಖ್ಯಾನವನ್ನು ಅವರು ಮಾಡುತ್ತಾರೆ. ಎಂದು ಪ್ರಜ್ಞಾಪ್ರವಾಹದ ಅಖಿಲ ಭಾರತೀಯ ಸಂಯೋಜಕ ಜೆ. ನಂದಕುಮಾರ್ ಹೇಳಿದರು. ರಾಷ್ಟ್ರವನ್ನುಅರ್ಥೈಸಿಕೊಳ್ಳಲು ಯಾವ ದೃಷ್ಟಿಕೋನದಲ್ಲಿ ನಾವು ನೋಡುತ್ತೇವೆ ಎನ್ನುವುದನ್ನು ಮೊದಲು ನೋಡಬೇಕು ಎನ್ನುವುದನ್ನುದೀನ ದಯಾಳ ಉಪಾಧ್ಯಾಯರು ತಿಳಿಸಿದ್ದಾರೆ. ರಾಷ್ಟ್ರವನ್ನು ಏಕಾತ್ಮತೆಯ ದೃಷ್ಟಿಕೋನದಲ್ಲಿ ನೋಡಬೇಕು ಎಂದು ತಿಳಿಸಿದ್ದಾರೆ.

ಸುದೀರ್ಘವಾದ ಉತ್ತರ ನೀಡಿದ ಮುಖ್ಯಮಂತ್ರಿ

ಸಾಮಾಜಿಕ ನ್ಯಾಯದ ಬಜೆಟ್: ಸಿದ್ದರಾಮಯ್ಯ

ವಿಧಾನಪರಿಷತ್: ಮಹಾತ್ಮಗಾಂಧಿ ಅವರ ಸರ್ವೋದಯ, ಅಂತ್ಯೋದಯ ಸದಾಶಯ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ನಿಷ್ಠೆ ಹಾಗೂ ಬಸವಣ್ಣನವರ ಸಮಾನತೆಯ ತತ್ವದ ಅಡಿ ಕಾಂಗ್ರೆಸ್ ಸರ್ಕಾರ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರದ್ದು ಟ್ರಿಕಲ್ ಡೌನ್ ಆರ್ಥಿಕ ನೀತಿಯಾಗಿದ್ದರೆ, ಯುನಿವರ್ಸಲ್ ಬೇಸಿಕ್ ಇಕಾನಮಿಕ್ ನಮ್ಮ ಧ್ಯೇಯ. 2026–27ನೇ ಸಾಲಿಗೆ ಮಂಡಿಸಿರುವ ಮುಂಗಡ ಪತ್ರ ಸಾಮಾಜಿಕ ನ್ಯಾಯದ ಬಜೆಟ್ ಎಂದು ಸಿಎಂ ಸಿದ್ದರಾಮಯ್ಯ ಬಣ್ಣಿಸಿದರು.



ಬಜೆಟ್ ಮೇಲೆ ನಡೆದ ಚರ್ಚೆಗೆ ಸುದೀರ್ಘವಾದ ಉತ್ತರ ನೀಡಿದ ಮುಖ್ಯಮಂತ್ರಿ, ಟ್ರಿಕಲ್ ಡೌನ್ ಆರ್ಥಿಕತೆ ಎಂದರೆ ಕಾರ್ಪೊರೇಟ್ ಪರ, ಉಳ್ಳವರ ಹಿತ ಕಾಯುವ ನೀತಿ. ನಮ್ಮದು ಟ್ರಿಕಲ್ ಡೌನ್ ಅಲ್ಲ. ಬಡವರ ಉದ್ಧಾರವೇ ಯುನಿವರ್ಸಲ್ ಬೇಸಿಕ್ ಇಕಾನಮಿಕ್ ಥೇರಿ. ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಸಮಾನತೆ ನಿವಾರಣೆಯಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹತ್ವದ ಪಾತ್ರ ವಹಿಸುತ್ತಿವೆ.

ಧರ್ಮ, ಭಾಷೆಗಳನ್ನು ಮೀರಿ ಎಲ್ಲ ವರ್ಗದ 1.26 ಕೋಟಿ ಮಹಿಳೆಯರಿಗೆ ಗೃಹ ಲಕ್ಷ್ಮಿ ಹಣ ತಲುಪಿದೆ. ಬಡವರಲ್ಲಿ ಖರೀದಿಸುವ ಶಕ್ತಿ ತುಂಬಿದೆ. ಜನರನ್ನು ಆರ್ಥಿಕವಾಗಿ ಸಶಕ್ತರನ್ನಾಗಿಸಬೇಕು ಎಂಬುದೇ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬರ ವಾದವಾಗಿತ್ತು ಎಂದರು.

ಎಂಎಲ್‌ಸಿ ಅನುದಾನ ಹೆಚ್ಚಳಕ್ಕೆ ಆಗ್ರಹ

ವಿಧಾನಸಭೆ ಶಾಸಕರಿಗೆ 25 ರಿಂದ 30 ಕೋಟಿ ರೂ. ಕ್ಷೇತ್ರಾಭಿವೃದ್ಧಿ ನಿಧಿ ನೀಡುವಂತೆ ಮೇಲ್ಮನೆ ಶಾಸಕರಿಗೂ ಕನಿಷ್ಠ 5 ಕೋಟಿ ರೂ. ಅನುದಾನ ಒದಗಿಸಬೇಕು. ಮೂರ್ನಾಲ್ಕು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುವ ಎಂಎಲ್‌ಸಿಗಳು ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಬಹುತೇಕ ಶಾಸಕರು ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಒದಗಿಸುವುದರಿಂದ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ಮೇಲ್ಮನೆ ಸದಸ್ಯರಾದ ಭೋಜೇಗೌಡ, ಶರವಣ ಒತ್ತಾಯಕ್ಕೆ ಸಭಾಪತಿ ಬಸವರಾಜ್ ಹೊರಟ್ಟಿಯೂ ಧ್ವನಿಗೂಡಿಸಿದರು. ಅದಕ್ಕೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ, ಈಗಾಗಲೇ ಬಜೆಟ್ ಮಂಡನೆಯಾಗಿರುವುದರಿಂದ ಪೂರಕ ಬಜೆಟ್‌ನಲ್ಲಿ ಈ ಪ್ರಸ್ತಾವನೆಯನ್ನು ಪರಿಗಣಿಸುವುದಾಗಿ ಭರವಸೆ ನೀಡಿದರು.

₹16 ಸಾವಿರ ಕೋಟಿ ಸಾಲ: ಛಲವಾದಿ

ವಿಧಾನಪರಿಷತ್: ಬಜೆಟ್ ಗಾತ್ರ ಹಿಗ್ಗಿಸಿ ಸಾಲ ಹೆಚ್ಚು ಮಾಡಿಕೊಳ್ಳುವ ಬದಲು ಹಣ ಉಳಿಸುವ ನಿಟ್ಟಿನಲ್ಲಿ ಬಜೆಟ್ ಮಂಡಿಸದ ಪರಿಣಾಮ, ರಾಜ್ಯದ ಸಾಲ 16 ಸಾವಿರ ಕೋಟಿ ರೂ. ದಾಟಿದೆ. 17 ಬಾರಿ ಬಜೆಟ್ ಮಾಡಿ ಸಾಧನೆ ಮಾಡಿದರೂ, ಸಾಲದ ಗಾತ್ರ ಹಿಗ್ಗಿಸಿದ್ದೇ ಸರ್ಕಾರದ ಸಾಧನೆಯಾಗಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಗುರುವಾರ ಮೇಲ್ಮನೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ದಾಖಲೆಯ ಮುಂಗಡಪತ್ರದ ಬಗ್ಗೆ ಕಿಡಿಕಾರಿದರು. 17ನೇ ಬಾರಿ ಬಜೆಟ್ ಮಂಡಿಸುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಮುಖ್ಯಮಂತ್ರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜತೆಗೆ ಅವರ ಅನುಭವದ ಪ್ರಕಾರ, ಕೊರತೆ ಬಜೆಟ್ ಮಂಡಿಸದೇ ಮಾಡಬೇಕಾಗಿತ್ತು. ಅವರ ದೃಷ್ಟಿಕೋನ ಬದಲಾಗಿಲ್ಲ. ಸಿದ್ದರಾಮಯ್ಯ ಅವರ ಬಹುತೇಕ ಬಜೆಟ್‌ಗಳು ಡೆಫಿಸಿಟ್ ಬಜೆಟ್ ಆಗಿಯೇ ಇದೆ ಎಂದರು.

ದಾಖಲೆ ಬಜೆಟ್ ಮಂಡಿಸಿದ್ದರೂ, ಸಾಲದ ದಾಖಲೆ ಮಾಡಿದ್ದಾರೆ. ಈ ಬಜೆಟ್‌ನಲ್ಲಿ ಎಷ್ಟು ಉಳಿತಾಯ ಮಾಡಿದ್ದೀರಿ, ಜನರಿಗೆ ಏನೆಲ್ಲ ಅನುಕೂಲವಾಗಿದೆ ಎಂಬ ಬಗ್ಗೆ ಹೇಳಬೇಕಿತ್ತು. ವಿತ್ತೀಯ ಶಿಸ್ತು ಅಂತೀರಿ, ಸುಸ್ತು ಎಂಬಂತಾಗಿದೆ. ತೆರಿಗೆ ಸಂಗ್ರಹದಲ್ಲಿ ಕಡಿತವಾಗಿದ್ದರಿಂದ ಆದಾಯ ಕುಸಿದಿದೆ. ಯಾವಾಗಲೂ ಕೇಂದ್ರದ ಮೇಲೆ ಬೊಟ್ಟು ಮಾಡಿ ಮಾತನಾಡುತ್ತಾರೆ. ನಿರ್ಮಲಾ ಸೀತಾರಾಮನ್, ಮೋದಿ ಬಗ್ಗೆ ಮಾತಾಡುವ ಮುನ್ನ ಉತ್ತಮ ಬಜೆಟ್ ಮಂಡಿಸಿ ಬಳಿಕ ಕೇಂದ್ರದ ಬಗ್ಗೆ ಮಾತನಾಡಿ ಎಂದು ಟೀಕಿಸಿದರು.

ಡಿಫೆಸಿಟ್ ಬಜೆಟ್ ಮಂಡಿಸಿದ್ದ ಅಭಿವೃದ್ಧಿ ಯೋಜನೆ ನೆನೆಗುದಿಗೆ, ಮೂಲಸೌಕರ್ಯ ಮೂಲೆಗೆ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ಇಲಾಖೆಗೆ ಚಿಪ್ಪು ಎನ್ನುವ ರೀತಿ ಜನ ಹೊರಗೆ ಟೀಕೆ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಅನುದಾನ ದುರ್ಬಳಕೆಯಾಗಿದೆ ಎಂದರು.

ಮೋದಿ ಧುರಂಧರ್

ಅಧಿಕಾರ ನಡೆಸುವವರಿಗೆ ಸಂಯಮ ಬಹಳ ಮುಖ್ಯ. ಯಾವ ಸಂದರ್ಭದಲ್ಲಿ ನಮಗೆ ಕಷ್ಟ ಬರುತ್ತದೆಯೋ ಆಗ ಸಂಯಮವಾಗಿರಬೇಕು. ಗೆಲುವಿನ ಸಂದರ್ಭದಲ್ಲಿ ಹೇಗಿರಬೇಕು ಎಂಬುದನ್ನು ಕೂಡ ನಾಯಕರು ಅರ್ಥ ಮಾಡಿಕೊಳ್ಳಬೇಕು. ಆಪರೇಷನ್ ಸಿಂಧೂರದ ಮೂಲಕ ಮೋದಿ ಅವರು ಗೆಲುವು ಪಡೆದರು. ಇದಕ್ಕೆ ಹೇಳುವುದು ನರೇಂದ್ರ ಮೋದಿ ಸರೆಂಡರ್ ಅಲ್ಲ, ಅವರು ಧುರಂಧರ್ ಎಂದು ಛಲವಾದಿ ಹೇಳಿದರು.



ಕರಾವಳಿ ಮಂಡಳಿ ತಿದ್ದುಪಡಿಗೆ ಖಾಸಗಿ ನಿರ್ಣಯ

ವಿಧಾನಸಭೆ: ಕರಾವಳಿಯ ಅಭಿವೃದ್ಧಿ ಹಿತದೃಷ್ಟಿಯಿಂದ ವಿಶಿಷ್ಟ ಅಧಿಕಾರವುಳ್ಳ ನೂತನ ಮಂಡಳಿಯನ್ನು ರಚಿಸುವ ಬಗ್ಗೆ ಅಥವಾ ಈಗಿರುವ ಕರಾವಳಿ ಅಭಿವೃದ್ಧಿ ಮಂಡಳಿ ಅಧಿನಿಯಮ, 2023ರ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಖಾಸಗಿ ನಿರ್ಣಯ ಮಂಡಿಸಲಾಯಿತು.

ಖಾಸಗಿ ಸದಸ್ಯರ ಕಾರ್ಯಕಲಾಪದಲ್ಲಿ ಬಿಜೆಪಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಈ ನಿರ್ಣಯ ಮಂಡಿಸಿದರು. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ಕರಾವಳಿ ಪ್ರದೇಶದಲ್ಲಿ ರಾಜ್ಯದಲ್ಲಿ ಬೇರೆಲ್ಲೂ ಇಲ್ಲದ ಸಮಸ್ಯೆಗಳಿವೆ. ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್), ಕಡಲುಕೊರೆತ, ಸಮುದ್ರತೀರ, ಅತಿವೃಷ್ಟಿ, ಮೀನುಗಾರಿಕೆ ಸಮಸ್ಯೆ ಮುಂತಾದವು ಆ ಪ್ರದೇಶಕ್ಕೆ ಮಾತ್ರ ಸೀಮಿತವಾಗಿವೆ. ಅಲ್ಲಿನ ಭೌಗೋಳಿಕ ರಚನೆ, ಜೀವನ ಶೈಲಿಯಲ್ಲಿಯೂ ವ್ಯತ್ಯಾಸವಿದ್ದು, ಅಲ್ಲಿನ ಸಮಸ್ಯೆಗಳ ನಿವಾರಣೆಗಾಗಿ ಪ್ರತ್ಯೇಕ ನೀತಿ, ನಿಯಮಗಳನ್ನು ರೂಪಿಸಬೇಕು ಎಂದು ಆಗ್ರಹಿಸಿದರು.

ಕರಾವಳಿ ಅಭಿವೃದ್ಧಿಗಾಗಿ ಸ್ಥಾಪಿತವಾದ ಕರಾವಳಿ ಅಭಿವೃದ್ಧಿ ಮಂಡಳಿಯು ಸೀಮಿತ ಅಧಿಕಾರವನ್ನು ಹೊಂದಿದೆ. ಕರಾವಳಿ ಭಾಗಕ್ಕೆ ಬಾಧಿತವಾಗುವಂತಹ ಕಾನೂನುಗಳು ಜಾರಿಯಾದಲ್ಲಿ ಅಂತಹ ಕಾಯ್ದೆಗಳನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವ ಅಧಿಕಾರ ಅದಕ್ಕಿಲ್ಲ. ಆದ್ದರಿಂದ ಕರಾವಳಿಯ ಅಭಿವೃದ್ಧಿಯ ಹಿತದೃಷ್ಟಿಯಿಂದ, ಸರ್ವಾಂಗೀಣ ಪ್ರಗತಿಗಾಗಿ ಹಾಗೂ ರಾಜ್ಯದಲ್ಲಿ ಕಾಲಕಾಲಕ್ಕೆ ರೂಪಿತವಾದ ಕಾಯ್ದೆ ಅಥವಾ ನಿಯಮಗಳಿಂದ ಕರಾವಳಿ ಭಾಗವು ಬಾಧಿತವಾಗುವುದನ್ನು ನಿರ್ಬಂಧಿಸಲು ಸರ್ಕಾರಕ್ಕೆ ಸೂಕ್ತ ಸಲಹೆ-ಶಿಫಾರಸ್ಸುಗಳನ್ನು ಮಾಡುವಂತಹ ವಿಶಿಷ್ಟ ಅಧಿಕಾರವುಳ್ಳ ನೂತನ ಮಂಡಳಿ ರಚಿಸಬೇಕು. ಇಲ್ಲವೇ ಈಗಿರುವ ಕರಾವಳಿ ಅಭಿವೃದ್ಧಿ ಮಂಡಳಿ ಅಧಿನಿಯಮ, 2023ರ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವುದಕ್ಕೆ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಕರಾವಳಿಯವರು ನಮಗಿಂತ ಅಭಿವೃದ್ಧಿಯಲ್ಲಿ ಯಾಕೆ ಮುಂದೆ ಇದ್ದಾರೆ ಎಂದರೆ ಅವರು ಯಾವತ್ತೂ ನಮಗೆ ದುಡ್ಡು ಕೊಡಿ ಎಂದು ಕೇಳುವುದಿಲ್ಲ. ಬದಲಾಗಿ ನೀತಿ, ನಿಯಮಗಳನ್ನು ಕೇಳುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಕರ್ನಾಟಕ ಕರಾವಳಿಯಲ್ಲಿ ಉದ್ಯಮಿಗಳು ಹೂಡಿಕೆಗೆ ಉತ್ಸಾಹಿತರಾಗಿದ್ದರೂ ಇಲ್ಲಿನ ಸಿಆರ್‌ಝಡ್ ನೀತಿಯಿಂದ ಸಮಸ್ಯೆಯಾಗುತ್ತಿದೆ. ನೆರೆಯ ಕೇರಳ, ಗೋವಾ, ಮಹಾರಾಷ್ಟ್ರದಲ್ಲಿ ಸಿಆರ್‌ಝಡ್ ನಿಯಮ ಸರಳೀಕರಿಸಲಾಗಿದೆ. ರಾಜ್ಯದಲ್ಲಿ ಸಮುದ್ರ ಕಿನಾರೆ, ನದಿ ಕಿನಾರೆ, ದ್ವೀಪಗಳು ಪ್ರವಾಸೋದ್ಯಮಕ್ಕೆ ಅನುಕೂಲಕರವಾಗಿವೆ. ಜಿಲ್ಲಾಡಳಿತವು ಪ್ರಸ್ತಾವಿತ ಮಂಗಲಾ ಕಾರ್ನಿಶ್ ರಸ್ತೆ ಅಭಿವೃದ್ಧಿಪಡಿಸಬೇಕು.

■ ಅಶೋಕ ರೈ, ಕಾಂಗ್ರೆಸ್ ಶಾಸಕ

ಅರಣ್ಯ ಪ್ರದೇಶದ ಮಂಜೂರಾದ ಭೂಮಿ ರದ್ದು: ಸಚಿವ

ವಿಧಾನಸಭೆ: ಬೆಂಗಳೂರು ಉತ್ತರ ತಾಲೂಕು ಜಾರಕಬಂಡೆ ಕಾವಲ್‌ನಲ್ಲಿ ಭಾರತೀಯ ವಾಯುಪಡೆಗೆ 1987ರಲ್ಲಿ ಮಂಜೂರು ಮಾಡಿದ್ದ ಭೂಮಿಯ ಪೈಕಿ 452 ಎಕರೆ 4 ಗುಂಟೆ ಅರಣ್ಯ ಪ್ರದೇಶವಾಗಿದ್ದು, ಈ ಮಂಜೂರಾತಿಯನ್ನು 2017ರಲ್ಲಿ ರದ್ದುಪಡಿಸಲಾಗಿದೆ ಎಂದು ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಗುರುವಾರ ಸದನದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು ನಿಯಮ 69ರಡಿ ಸಾರ್ವಜನಿಕ ಮಹತ್ವದ ವಿಷಯ ಪ್ರಸ್ತಾಪಿಸಿ, ಜಾರಕಬಂಡೆ ಶ್ರೀಗಂಧ ಕಾವಲ್ ಮತ್ತು ಪೀಣ್ಯ ನೆಡುತೋಪು ಪ್ರದೇಶವು ಅರಣ್ಯ ಇಲಾಖೆ ಭೂಮಿಯಾಗಿದ್ದರೂ ಅದನ್ನು ಭಾರತೀಯ ವಾಯುಪಡೆಯು ಅತಿಕ್ರಮಣ ಮಾಡಿಕೊಂಡಿದೆ. ಅದನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಬಾರದು. ಅರಣ್ಯ ಭೂಮಿಯನ್ನು ಅರಣ್ಯ ಭೂಮಿಯಾಗಿಯೇ ಉಳಿಸಿಕೊಳ್ಳಬೇಕು. ನಮ್ಮ ಮೆಟ್ರೋಗೆ ನೀಡಿದ ಅರಣ್ಯ ಭೂಮಿಯ ಪರಿಹಾರವನ್ನೂ ವಾಯುಪಡೆ ಪಡೆದುಕೊಂಡಿದ್ದು, ಅದನ್ನೂ ವಾಪಸ್ ಪಡೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಅಲ್ಲದೇ ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಹೇಳುತ್ತೇವೆ. ಆದರೆ, ತಮಿಳುನಾಡಿನಲ್ಲಿ ಶ್ರೀಗಂಧ ಹರಾಜು ದರ 22,000 ರೂ. ಇದ್ದರೆ ಕರ್ನಾಟಕದಲ್ಲಿ ಅದು 7,000 ರೂ. ಇದೆ. ಕರ್ನಾಟಕದಲ್ಲಿ ಶ್ರೀಗಂಧ ಬೆಳೆಯುವುದಕ್ಕೆ ರೈತರಿಗೆ ಪ್ರೋತ್ಸಾಹಿಸಬೇಕು ಎನ್ನುವ ಮಧ್ಯೆ ಈ ರೀತಿಯ ತಾರತಮ್ಯ ಸರಿಯಲ್ಲ ಎಂದು ಹೇಳಿದರು.



ಇದಕ್ಕೆ ಉತ್ತರಿಸಿದ ಸಚಿವರು, ಪ್ರಸ್ತುತ ಈ 452 ಎಕರೆ ಜೊತೆಗೆ ಜಾರಕಬಂಡೆ ಮತ್ತು ಪೀಣ್ಯ ನೆಡುತೋಪಿನಲ್ಲಿ 83 ಎಕರೆ ಅರಣ್ಯ ಭೂಮಿ ವಾಯುಪಡೆ ವಶದಲ್ಲಿದೆ. ಇದನ್ನು ತೆರವು ಮಾಡಿಸಲು ಕ್ರಮ ವಹಿಸಲಾಗುವುದು. ಈ ಹೆಚ್ಚುವರಿ ಜಮೀನಿನ ಪೈಕಿ 58.08 ಎಕರೆಯನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ನೀಡಿ ಹಣ ಪಡೆದು ಕಾನೂನು ಉಲ್ಲಂಘಿಸಲಾಗಿದೆ. ಈ ಹಣವೂ ಅರಣ್ಯ ಇಲಾಖೆಗೆ ಬರಬೇಕು, ಇದನ್ನು ಪಡೆದುಕೊಳ್ಳಲು ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಈ ಸಂಬಂಧ ರಾಜ್ಯದ ಮುಖ್ಯ ಕಾರ್ಯದರ್ಶಿಯವರು, 2018ರ ಸೆಪ್ಟೆಂಬರ್ 15 ರಂದು ರಕ್ಷಣಾ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದು ಭಾರತೀಯ ವಾಯುಪಡೆಯ ಜಾಲಹಳ್ಳಿ ವಾಯುನೆಲೆಯು ಈ ಭೂಮಿಯನ್ನು ತನಗಾಗಿ ಬಳಸುವುದನ್ನು ಮುಂದುವರಿಸಲು ಬಯಸಿದರೆ, ಅರಣ್ಯ (ಸಂರಕ್ಷಣಾ) ಕಾಯ್ದೆ–1980 ರಡಿಯಲ್ಲಿ ಈ ಅರಣ್ಯ ಭೂಮಿಗಳ ಬಳಕೆಯನ್ನು ಕ್ರಮಬದ್ಧಗೊಳಿಸುವುದು ಕಡ್ಡಾಯವಾಗಿದೆ. ಅದಕ್ಕೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ಹಿತಾಸಕ್ತಿಯ ಸಂಸ್ಥೆಯಾಗಿರುವುದರಿಂದ ಅರಣ್ಯ ತೀರುವಳಿ ಮಾಡುವಂತೆ ತಿಳಿಸಿದ್ದರೂ ಅವರು ಈವರೆಗೆ ಯಾವುದೇ ಅರ್ಜಿ ಹಾಕಿಲ್ಲ. ತಾವು ಸಚಿವರಾದ ತರುವಾಯ ಈ ಭೂಮಿಯ ಜಂಟಿ ಸರ್ವೆ ಮಾಡಲು ತಿಳಿಸಿದ್ದು, ಆ ಕಾರ್ಯವೂ ಪೂರ್ಣವಾಗಿದೆ. ತಮ್ಮನ್ನು 2–3 ಬಾರಿ ಈ ಸಂಬಂಧ ಭೇಟಿ ಮಾಡಿದ್ದ ವಾಯುಪಡೆ ಅಧಿಕಾರಿಗಳಿಗೆ ನಿಯಮಾನುಸಾರ ಪರ್ಯಾಯ ಭೂಮಿ ನೀಡಿ, ಎನ್.ಪಿ.ವಿ. ಮೌಲ್ಯ ಪಾವತಿಸಿ ಆ ಜಮೀನನ್ನು ಬಳಸುವಂತೆ ತಿಳಿಸಲಾಗಿದೆ. ಆದಾಗ್ಯೂ ಅವರು ನಿಯಮಾನುಸಾರ ನಡೆದುಕೊಂಡಿಲ್ಲ ಎಂದು ಸದನಕ್ಕೆ ವಿವರಿಸಿದರು.

ಪ್ರತಿವರ್ಷ ವೈಮಾನಿಕ ಪ್ರದರ್ಶನ ನಡೆಯುವ ಬೆಂಗಳೂರು ಉತ್ತರ ತಾಲೂಕು ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಸರ್ವೆ ನಂ.47ರಲ್ಲಿ 132ಎಕರೆ 3 ಗುಂಟೆ ಮತ್ತು 48ರಲ್ಲಿ 27 ಎಕರೆ 26 ಗುಂಟೆ ಒಟ್ಟು 159 ಎಕರೆ 29 ಗುಂಟೆ ಪ್ರದೇಶ ಸಹ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದೆ. ಇದನ್ನೂ ಅರಣ್ಯ ಇಲಾಖೆಯ ವಶಕ್ಕೆ ಪಡೆಯಲು ಅಥವಾ ನಿಯಮಾನುಸಾರ ಪರ್ಯಾಯ ಭೂಮಿ ಒದಗಿಸಿ ಬಳಸುವಂತೆ ಮಾಡಲು ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಶ್ರೀಗಂಧ ನಿಯಮ ಸರಳೀಕರಣ

ಶ್ರೀಗಂಧದ ನೀತಿಯಲ್ಲಿ ಸರಳೀಕರಿಸಲಾಗುತ್ತಿದ್ದು, ವೃಕ್ಷರಾಜ ಎಂದೇ ಖ್ಯಾತವಾದ ಶ್ರೀಗಂಧವನ್ನು ತೋಟದ ಬೆಳೆ ಎಂದು ಪರಿಗಣಿಸಲು ಬರುವುದಿಲ್ಲ. ಆದರೆ, ಶ್ರೀಗಂಧ ಬೆಳೆಗಾರರಿಗೆ ಅನಾನುಕೂಲ ಆಗದಂತೆ ಶ್ರೀಗಂಧ ಬೆಳೆಯಲು, ಕಟಾವು ಮಾಡಲು, ದಾಸ್ತಾನು ಮತ್ತು ಸಾಗಾಟ ಮಾಡಲು ನಿಯಮಗಳನ್ನು ಸರಳೀಕರಿಸಲಾಗುವುದು ಎಂದು ತಿಳಿಸಿದರು.

ವನ್ಯಜೀವಿಗಳ ದಾಳಿಗೆ ಮೃತಪಟ್ಟರೆ ಸರ್ಕಾರಿ ನೌಕರಿ ಇಲ್ಲ: ಸಚಿವ

ವಿಧಾನಸಭೆ: ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ನೀಡಲು ಸರ್ಕಾರಿ ಆದೇಶದನ್ವಯ ಅವಕಾಶ ಇರುವುದಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ದಾಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾನವ–ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮತ್ತು ಮಾಸಾಶನ ನೀಡಲಾಗುತ್ತಿದೆ. ಈ ಹಿಂದೆ ಇದ್ದ 15 ಲಕ್ಷ ರೂ. ಪರಿಹಾರದ ಮೊತ್ತವನ್ನು 2025ರ ಏಪ್ರಿಲ್‌ನಿಂದ 20 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಪರಿಹಾರದ ಜೊತೆಗೆ 5 ವರ್ಷಗಳ ಕಾಲ ಮಾಸಿಕ 4 ಸಾವಿರ ರೂ. ಮಾಸಾಶನವನ್ನು ಮೃತರ ಕುಟುಂಬದ ಸದಸ್ಯರಿಗೆ ನೀಡಲಾಗುತ್ತಿದೆ. ಅಲ್ಲದೇ ದಾಳಿಗೊಳಗಾದ ಸಂತ್ರಸ್ತರ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಅರಣ್ಯ ಇಲಾಖೆ ಭರಿಸುತ್ತಿದೆ ಎಂದು ವಿವರಿಸಿದರು. ಅರಣ್ಯ ಇಲಾಖೆಯಲ್ಲಿ ಕಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರು ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿ ಹಗಲಿರುಳೆನ್ನದೆ ಕ್ಲಿಷ್ಟಕರ ಸನ್ನಿವೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ತವ್ಯನಿರತ ಸಿಬ್ಬಂದಿ ಮೃತಪಟ್ಟಾಗ ಈ ಹಿಂದೆ 30 ಲಕ್ಷ ರೂ. ಅನುಗ್ರಹ ಧನ ನೀಡಲಾಗುತ್ತಿತ್ತು. ಈಗ ಆ ಮೊತ್ತವನ್ನು 50 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಆನೆ ಸೇರಿದಂತೆ ವನ್ಯಜೀವಿ– ಮಾನವ ಸಂಘರ್ಷ ನಿಯಂತ್ರಿಸಲು ಸರ್ಕಾರ ಶಕ್ತಿಮೀರಿ ಶ್ರಮಿಸುತ್ತಿದೆ ಎಂದೂ ಈಶ್ವರ ಖಂಡ್ರೆ ಹೇಳಿದರು.

ಸಂಪಾದಕೀಯ

ಸಂಕಷ್ಟದ ಬೆನ್ನೇರಿ ಬರುವ ಸಮಾಜಘಾತುಕರು

ಯುದ್ಧ ಎಂಬುದು ಎಲ್ಲೋ ಒಂದು ಕಡೆ ನಡೆದರೂ ಅದು ನಮಗೆ ಯಾವುದೇ ಅಡ್ಡಿ ಮಾಡಲ್ಲ ಎಂಬುದು ಸತ್ಯವಲ್ಲ. ಅದು ಜಗತ್ತಿನ ಎಲ್ಲ ದೇಶಗಳಿಗೂ ಒಂದಿಲ್ಲೊಂದು ರೀತಿಯಲ್ಲಿ ಅಡ್ಡಿ ಮಾಡುತ್ತದೆ. ಇಂಥ ಹೊತ್ತಿನಲ್ಲಿ ತಾವು ಲಾಭ ಮಾಡಿಕೊಳ್ಳುವುದು ಹೇಗೆ ಎಂಬುದು ಸಮಾಜಘಾತುಕರ ಆಲೋಚನೆ. ಇದಕ್ಕಾಗಿ, ದೇಶದ ಮತ್ತು ಜನರ ಸ್ಥೈರ್ಯವನ್ನೇ ಅಲ್ಲಾಡಿಸಲು ಹೊಂಚು ಹಾಕುತ್ತಿರುತ್ತಾರೆ. ಕರೋನಾ ಸಂಕಟದ ದಿನಗಳಲ್ಲಿ ಔಷಧ, ಆಕ್ಸಿಜನ್ ಕೊರತೆಯ ಮಧ್ಯೆಯೂ ಇಲ್ಲದ–ಸಲ್ಲದ ಸುದ್ದಿ ಹಬ್ಬಿಸಿ, ಕಾಳಸಂತೆ ನಡೆಸಿದವರು ನಮ್ಮ ನಡುವೆಯೇ ಇದ್ದರು. ಆ ಸ್ವಾರ್ಥದ ಕಳಂಕ ಇನ್ನೂ ಒಣಗಿಲ್ಲ.



ಈಗ ಜಗತ್ತುಯುದ್ಧದ ನೆರಳಿನಲ್ಲಿ ನಿಂತಿರುವ ಸಮಯದಲ್ಲಿ ಮತ್ತದೇ ಜಾಯಮಾನದ ಮಂದಿ ಸಕ್ರಿಯರಾಗಿದ್ದಾರೆ. ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸರಬರಾಜಿನಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ಪಷ್ಟಪಡಿಸಿದ್ದರೂ, ಸಾಮಾಜಿಕ ಮಾಧ್ಯಮಗಳ ಮೂಲಕ ಹಬ್ಬಿಸಿದ ವದಂತಿಗಳನ್ನೇ ನಿಜ ಎಂದು ಭ್ರಮಿಸಿ ಜನ ಬಂಕ್‌ಗಳ ಮುಂದೆ ಕ್ಯೂ ನಿಲ್ಲುತ್ತಿದ್ದಾರೆ. ಈ ಅವ್ಯವಸ್ಥೆ ಆಕಸ್ಮಿಕವಲ್ಲ; ಯಾರದ್ದೋ ದುರುದ್ದೇಶದ ಸ್ಕ್ರಿಪ್ಟ್ ಇದು. ಈಗಾಗಲೇ ತೈಲ ಕಂಪನಿಗಳು ಎರಡು ತಿಂಗಳಿಗೆ ಆಗುವಷ್ಟು ದಾಸ್ತಾನು ನಮ್ಮಲ್ಲಿದೆ ಎಂದು ಹೇಳುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅವರು, ಶುಕ್ರವಾರ ಎಲ್ಲ ಮುಖ್ಯಮಂತ್ರಿಗಳ ಸಭೆ ಕರೆದು ಪರಿಸ್ಥಿತಿ ಅವಲೋಕಿಸುತ್ತಾರೆ. ಈ ಯುದ್ಧದ ಗಾಂಭೀರ್ಯತೆ ಎಲ್ಲರಿಗೂ ಅರ್ಥವಾಗಿದೆ. ಆದರೆ, ಇಲ್ಲಿ ಕೆಲವು ರಾಜಕೀಯ ಪಕ್ಷಗಳ ಪಾತ್ರವನ್ನೂ ಪ್ರಶ್ನಿಸಲೇಬೇಕು. ಆಡಳಿತ ಪಕ್ಷಗಳ ವೈಫಲ್ಯ ಎತ್ತಿ ತೋರಿಸಲು ವಿರೋಧ ಪಕ್ಷಗಳು ಅವಕಾಶ ಹುಡುಕುವುದು ಸಹಜ. ಆದರೆ ಆ ಅವಕಾಶಕ್ಕಾಗಿ ದೇಶದ ಸ್ಥಿರತೆಯನ್ನೇ ಒತ್ತೆ ಇಡುವುದು ರಾಜಕೀಯ ನೈತಿಕತೆಯ ಅಧಃಪತನ. ಸಂಕಷ್ಟ ಕಾಲದಲ್ಲಿ ರಾಜಕೀಯ ವ್ಯತ್ಯಾಸಗಳನ್ನು ಬದಿಗಿಟ್ಟು ರಾಷ್ಟ್ರ ಹಿತದ ನೆಲೆಯಲ್ಲಿ ನಿಲ್ಲುವ ಪ್ರಬುದ್ಧತೆ ಇಲ್ಲದಿದ್ದರೆ, ಅದು ಆ ಪಕ್ಷದ ಮಾತ್ರವಲ್ಲ, ನಮ್ಮ ಪ್ರಜಾಪ್ರಭುತ್ವದ ದೌರ್ಬಲ್ಯ.

ವದಂತಿ ಹಬ್ಬಿಸುವವರ ವಿರುದ್ಧ ಕಾನೂನು ಕ್ರಮ ಕಠಿಣವಾಗಿರಲೇಬೇಕು. ಆದರೆ ಇಷ್ಟೇ ಸಾಲದು. ಸರ್ಕಾರ ಸಹ ಕೇವಲ ಅಧಿಕೃತ ಹೇಳಿಕೆ ಕೊಟ್ಟು ಕೈ ತೊಳೆದುಕೊಳ್ಳಬಾರದು. ಪ್ರತಿ ಮೂಲೆಮೂಲೆಗೂ ಸತ್ಯ ತಲುಪುವಂತಹ ಪ್ರಭಾವಶಾಲಿ ಮಾಹಿತಿ ಪ್ರಚಾರ ಅಗತ್ಯ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರತಿ ನಾಗರಿಕನೂ ತಾನೊಬ್ಬ ಜವಾಬ್ದಾರಿಯುತ ದೇಶದ ಸದಸ್ಯ ಎಂಬ ಪ್ರಜ್ಞೆಯಿಂದ ವರ್ತಿಸಬೇಕು. ಮಾಧ್ಯಮಗಳ ಜವಾಬ್ದಾರಿಯೂ ಈ ಸಂದರ್ಭದಲ್ಲಿ ನಿರ್ಣಾಯಕ. ಅಪದ್ದ ಸುದ್ದಿಗಳನ್ನು ವೇಗವಾಗಿ ಹರಡುವ ಸಾಮಾಜಿಕ ಮಾಧ್ಯಮಕ್ಕೆ ಪ್ರತಿತಂತ್ರವಾಗಿ, ಮುಖ್ಯವಾಹಿನಿ ಮಾಧ್ಯಮಗಳು ತ್ವರಿತವಾಗಿ, ಸಾಕ್ಷ್ಯಾಧಾರಿತವಾಗಿ ಸತ್ಯ ಹೇಳಬೇಕು. ಸುಳ್ಳು ಸುದ್ದಿ ಮತ್ತು ಸತ್ಯ ಸುದ್ದಿ ನಡುವಿನ ಓಟದಲ್ಲಿ ಮಾಧ್ಯಮ ಹಿಂದೆ ಬಿದ್ದರೆ, ಸೋಲು ಇಡೀ ಸಮಾಜದ್ದು.

ಸಂಕಷ್ಟ ಕಾಲದಲ್ಲಿ ತಾಳ್ಮೆ ಮತ್ತು ವಿವೇಕ ಇವೇ ನಿಜವಾದ ದೇಶಭಕ್ತಿ. ಗಾಬರಿ ಹುಟ್ಟಿಸುವ ಸಂದೇಶಗಳಿಗೆ ಬಲಿಯಾಗದಿರುವುದು ದೇಶಕ್ಕೆ ಮಾಡುವ ಸೇವೆ.

ಆಯುರ್ವೃದ್ಧಿ- ಕ್ಷೀಣ ಹೇಗೆ?

ವೃದ್ಧಾರ್ಕೋ ಹೋಮಧೂಮಶ್ಚ ಬಾಲಸ್ತ್ರೀ ನಿರ್ಜರೋದಕಮ್।
ರಾತ್ರೌ ಕ್ಷೀರಾನ್ನ, ಭುಕ್ತಿಶ್ಚ ಆಯುರ್ವೃದ್ಧಿರ್ದಿನೇ ದಿನೇ॥
ಬಾಲಾರ್ಕಃ ಪ್ರೇತಧೂಮಶ್ಚ ವೃದ್ಧಸ್ತ್ರೀ ಪಲ್ವಲೋದಕಮ್।
ರಾತ್ರೌ ದಧ್ಯನ್ನಭುಕ್ತಿಶಚ ಆಯುಃ ಕ್ಷೀಣಂ ದಿನೇ ದಿನೇ ॥

ಸಂಜೆಯ ಸೂರ್ಯದರ್ಶನ, ಹೋಮಧೂಮ, ಕಿರಿಯವಳೊಂದಿಗೆ ಮದುವೆ, ಝರಿಯ ಜಲಸೇವನೆ, ರಾತ್ರಿ ಹಾಲನ್ನದ ಊಟ ಇವು ಆಯುಸ್ಸನ್ನು ವೃದ್ಧಿಸುತ್ತವೆ.

ಶ್ಲೋಕ ಸಾಗರ



• ಡಾ.ಸೋಂದಾ ಭಾಸ್ಕರ ಭಟ್

ಅಂತೆಯೇ ಬೆಳಗಿನ ಸೂರ್ಯದರ್ಶನ, ಹೆಣದ ಹೊಗೆ, ಹಿರಿಯಳೊಂದಿಗೆ ಮದುವೆ, ಕೆರೆಯ ನೀರು ಸೇವನೆ, ರಾತ್ರಿ ಮೊಸರನ್ನದ ಊಟ – ಇವು ಆಯುಷ್ಯವನ್ನು ಕಡಿಮೆ ಮಾಡುತ್ತದೆ – ಎಂಬುದು ಶ್ಲೋಕಾರ್ಥ.

ಪ್ರತಿಯೊಬ್ಬರಿಗೂ ಇಷ್ಟು ವರ್ಷ ಆಯುಷ್ಯವೆಂಬುದು ವಿಧಿಲಿಖಿತ. ಇದನ್ನು ಬದಲಾಯಿಸಲು ಸಾಧ್ಯವೆ ಎಂಬ ಜಿಜ್ಞಾಸೆ ಸಹಜ. ಸಹಜವಾಗಿ, ನಮ್ಮ ಆಚಾರ–ವಿಚಾರ ವ್ಯವಹಾರಗಳ ಮೂಲಕ ಆಯುಷ್ಯಾವಧಿಯನ್ನು ವಿಸ್ತರಿಸಿಕೊಳ್ಳಲೂಬಹುದು. ಕ್ಷೀಣ ಮಾಡಿಕೊಳ್ಳಲೂಬಹುದು. ಎಲ್ಲವೂ ನಮ್ಮ ಪ್ರಾಮಾಣಿಕ ಪ್ರಯತ್ನ, ಸಾಧನೆಗಳನ್ನು ಅವಲಂಬಿಸಿದೆ. ಪ್ರಕೃತ ಯುಗಳ ಶ್ಲೋಕದಲ್ಲಿ ಆಯುಷ್ಯವನ್ನು ಹೇಗೆ ವೃದ್ಧಿಸಿಕೊಳ್ಳಬಹುದು ಹಾಗೂ ಹೇಗೆ ನಡೆದುಕೊಂಡರೆ ಆಯುಷ್ಯ ಕ್ಷೀಣವಾಗುತ್ತದೆ ಎಂಬುದನ್ನು ತಿಳಿಸಲಾಗಿದೆ. ಯಾವೆಲ್ಲ ಕಾರಣಗಳಿಂದಾಗಿ ಆಯುಸ್ಸು ಕ್ಷೀಣಿಸುತ್ತದೆ ಎಂಬುದನ್ನು ಎರಡನೆಯ ಶ್ಲೋಕ ತಿಳಿಸಿಕೊಡುತ್ತದೆ. ಮುಳುಗುವ ಸೂರ್ಯ ಕೆಂಬಣ್ಣದಿಂದ ದಿಗಂತವನ್ನು ಬೆಳಗುತ್ತಾ ನಮ್ಮಲ್ಲೂ ಉತ್ಸಾಹವನ್ನು ಹೆಚ್ಚಿಸುತ್ತಾನೆ. ಮುಳುಗುವ ಸೂರ್ಯ ನಾಳೆ ಉದಯಿಸುವ ಸೂರ್ಯನಿಗೆ ಮುನ್ನುಡಿ. ಇಂಥಹ ಸೂರ್ಯನ ದರ್ಶನ ಉತ್ಸಾಹ ತುಂಬುವುದರ ಮೂಲಕ ಆಯುಷ್ಯ ವೃದ್ಧಿಗೆ ಕಾರಣನಾಗುತ್ತಾನೆ.

ಹೋಮದ ಹೊಗೆ ಅಪೂರ್ವ ದ್ರವ್ಯಗಳನ್ನು ಸ್ವೀಕರಿಸಿ ಹೊರಹೊಮ್ಮುವಂಥದ್ದು. ಅಗ್ನಿಗೆ ಅರ್ಪಿಸುವ ತುಪ್ಪ ಹಾಗೂ ವಿಶೇಷ ಸಮಿತ್ತುಗಳಿಂದಾಗಿ ಹೋಮ ಧೂಮಕ್ಕೆ ರೋಗಾಣುಗಳನ್ನು ನಾಶಪಡಿಸುವ ಸಾಮರ್ಥ್ಯ ಬಂದಿರುತ್ತದೆ. ಜತೆಗೆ ಮಂತ್ರದ ಮೂಲಕ ಅಭಿಮಂತ್ರಿತ ಹೋಮ ದ್ರವ್ಯಗಳಾದ್ದರಿಂದ ಹೊರಸೂಸುವ ಧೂಮ ಆರೋಗ್ಯಕಾರಕ. ತನಗಿಂತಲೂ ಚಿಕ್ಕವಳನ್ನು ಮದುವೆಯಾಗುವುದರಿಂದ ಅವಳ ಉತ್ಸಾಹದ ಓಡಾಟ ನಮ್ಮ ಆರೋಗ್ಯವನ್ನು ಹೆಚ್ಚಿಸಿ ದೀರ್ಘಾಯುಷ್ಯಕ್ಕೆ ಕಾರಣವೆನಿಸುತ್ತದೆ. ಝರಿಯ ನೀರು ಪರಿಶುದ್ಧ ಆಯುಕಾರಕ. ರಾತ್ರಿಯ ಹೊತ್ತು ಹಾಲನ್ನವನ್ನು ಊಟ ಮಾಡಬೇಕು. ಈ ಲಘುವಾದ ಆಹಾರ ಜೀರ್ಣಕ್ರಿಯೆಗೆ ಪೂರಕವಾಗಿ ಆಯುಷ್ಯ ವೃದ್ಧಿಸುತ್ತದೆ. ಇವುಗಳ ಸರಿಯಾದ ಪಾಲನೆಯೇ ಆಯುಷ್ಯ ವೃದ್ಧಿಗೆ ಕಾರಣ ಎಂಬುದು ಜ್ಞಾನಿಗಳ ಅಭಿಮತ.

ಎಳೆಬಿಸಿಲು ಅಂದರೆ ಮುಂಜಾನೆಯ ಬಿಸಿಲು ಆರೋಗ್ಯಕ್ಕೆ ಒಳ್ಳೆಯದು. ವಿಟಮಿನ್ನುಗಳಿರುತ್ತವೆ ಇತ್ಯಾದಿ ಹೇಳುತ್ತಾರೆ. ಆದರೆ ಪ್ರಕೃತ ಶ್ಲೋಕದಲ್ಲಿ ಬೆಳಗಿನ ಬಿಸಿಲು ದೀರ್ಘಾಯುಷ್ಯಕ್ಕೆ ಮಾರಕ ಎನ್ನಲಾಗಿದೆ.ಈ ಹೇಳಿಕೆಯ ಬಗ್ಗೆ ನನಗೇ ಗೊಂದಲವಿದೆ. ಮೂಲಗ್ರಂಥದಲ್ಲಿ ಬಲವಾದ ಕಾರಣವಿರಬಹುದು. ಹೆಣ ಸುಟ್ಟ ಹೊಗೆ, ಕಸಕಡ್ಡಿ, ಪ್ಲಾಸ್ಟಿಕ್ ಸುಟ್ಟ ಹೊಗೆ ಇವೆಲ್ಲವೂ ವಿಷಯುಕ್ತ. ಇವುಗಳನ್ನು ಸೇವಿಸಿದರೆ ಆಯುಷ್ಯಕ್ಕೆ ಕ್ರಮೇಣ ಸಂಚಕಾರ. ವೃದ್ಧ ಸ್ತ್ರೀ ಅಂದರೆ ನಮಗಿಂತಲೂ ಹಿರಿಯವಳು ಮಡದಿಯಾದರೆ ಚಟುವಟಿಕೆ ನಮಗಿಂತಲೂ ಕಡಿಮೆ. ಪರಿಣಾಮವಾಗಿ ಜೀವನೋತ್ಸಾಹವಿರದು. ಸರೋವರದ ನೀರು ಆರೋಗ್ಯಕ್ಕೆ ಒಳ್ಳೆಯದಲ್ಲ. ಎಲ್ಲ ರೀತಿಯ ಹೊಲಸು ಅಲ್ಲಿರಬಹುದು. ರಾತ್ರಿಯ ಹೊತ್ತು ಮೊಸರನ್ನ ನಿಷಿದ್ಧ. ಇದು ಆರೋಗ್ಯದ ಏರುಪೇರಿಗೆ ಕಾರಣ. ಶ್ವಾಸಕೋಶಕ್ಕೂ ಒಳ್ಳೆಯದಲ್ಲ. ಆದ್ದರಿಂದ ರಾತ್ರಿ ಮೊಸರನ್ನ ಊಟ, ಮಜ್ಜಿಗೆ ಕುಡಿಯುವುದು... ಆಯುಷ್ಯ ಕ್ಷೀಣತೆಗೆ ಕಾರಣವೆನಿಸುತ್ತದೆ.

ಧುರಂಧರ: ಸಂಭಾಷಣೆ ಮತ್ತು ಬಲೂಚ್ ಪ್ರಶ್ನೆ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com



ಧುರಂಧರ ಸಿನೆಮಾ ನೋಡಿದ ಬಹುತೇಕರಿಗೆ ಇದು ಮಹತ್ತ್ವದ ದೃಶ್ಯಗಳೇನಲ್ಲ!

ಎಸ್. ಪಿ ಚೌಧರಿ ಅಸ್ಲಾಂ ಸಂದರ್ಭ ಸಿಕ್ಕಾಗಲೆಲ್ಲಾ ಬಲೂಚರನ್ನು ''ಏ ಬಲೂಚ್'' ಎಂದು ಕರೆಯುತ್ತಾನೆ. ಪಠಾಣ್ ಅಹಂಕಾರ ಹೊದ್ದ ಎಸ್.ಪಿ ಚೌಧರಿಗೆ ಬಲೂಚರೆಂದರೆ ಪಠಾಣರಷ್ಟು ಶ್ರೇಷ್ಠರಲ್ಲದ, ಅವರಷ್ಟು ಹಕ್ಕಿಲ್ಲದ, ತೆಪ್ಪಗಿರಲೆಂದೇ ಹುಟ್ಟಿದ ಜನ. ಎಸ್.ಪಿ ಚೌಧರಿಯ ಈ ಮಾನಸಿಕತೆಯೇ ಪಾಕಿಸ್ಥಾನದ್ದೂ ಕೂಡ. ಶೇರ್–ಇ–ಬಲೂಚ್ ಬಿರುದು ಹೊತ್ತವನನ್ನು ಕೂಡ ಈ ಚೌಧರಿ ಹಾಗೆಯೇ ಕರೆಯುತ್ತಾನೆ. ಒಂದು ಹಂತದಲ್ಲಂತೂ ಆತ ಐವರು ಬಲೂಚ್ ವಿದ್ಯಾರ್ಥಿಗಳ ನಕಲಿ ಎನ್‌ಕೌಂಟರ್ ನಡೆಸುತ್ತಾನೆ. ಅದಕ್ಕೆ ಆತ ''ಮಗರಮಚ್ ಪೆ ಭರೋಸಾ ಕರ್ ಸಕ್ತೆ ಹೈ, ಪರ್ ಬಲೂಚ್ ಪೆ ನಹೀ''(ಮೊಸಳೆಯನ್ನಾದರೂ ನಂಬಬಹುದು, ಬಲೂಚರನ್ನಲ್ಲ) ಎಂಬ ಕಾರಣ ಕೊಡುತ್ತಾನೆ.

ಇವೆಲ್ಲವೂ ಸಿನೆಮಾ ವಿಮರ್ಶಕರು ಚರ್ಚೆ ಮಾಡಲೇಬೇಕಾದ ಸಂಗತಿಗಳೇನಲ್ಲ. ಸಿನೆಮಾ ಹೇಳಹೊರಟ ಸಂಗತಿಯೇ ಬೇರೆ. ಆದರೆ ಸಿನೆಮಾದಲ್ಲಿ ಬಲೂಚ್ ದಟ್ಟವಾಗಿ ಕಾಣುವುದರಿಂದ ಅದೂ ಕೂಡ ಮುಖ್ಯ. ಬಲೂಚ್ ಇತಿಹಾಸವನ್ನು ಅವಲೋಕಿಸಿದರೆ ಈ ಸಂಭಾಷಣೆಗಳು ಕಳೆದ ಏಳು ದಶಕಗಳಲ್ಲಿ ಬಲೂಚಿಗಳೊಂದಿಗೆ ಏನು ನಡೆದಿದೆಯೋ ಅದರ ನಾಲ್ಕು ಹನಿಗಳ ಪಾಕ ಎನಿಸದಿರದು. ಜೊತೆಗೆ ಪಾಕ್ ಇತಿಹಾಸ ಕೂಡ ಎನ್‌ಕೌಂಟರ್ ಸ್ಪೆಶಲಿಸ್ಟ್ ದಿವಂಗತ ಚೌಧರಿ ಅಸ್ಲಾಮನನ್ನು ಆತನ ಬಲೂಚ್ ದ್ವೇಷದ ಒಂದೇ ಕಾರಣಕ್ಕೆ ಮಹಾಪುರುಷನ ರೀತಿಯಲ್ಲಿ ನೋಡುತ್ತದೆ! ಅಲ್ಲದೆ ಇಂದಿಗೂ ಪಾಕಿಸ್ಥಾನದಲ್ಲಿ ಒರಟಾಗಿ ವರ್ತಿಸುವವರನ್ನು, ಉರ್ದು ಬಾರದವನನ್ನು ಮತ್ತು ಅನಕ್ಷರಸ್ಥನನ್ನು ಬಲೂಚ್ ಎಂದು ಹಂಗಿಸಲಾಗುತ್ತದೆ! (Searchlights on Baloches and Balochistan-Justice Mir Khuda Bakhsh Marri). ಹಾಗಾಗಿ ಸಿನೆಮಾದಲ್ಲೂ ಅದನ್ನೇ ಬಳಸಿರುವುದರಲ್ಲಿ ನಿರ್ದೇಶಕನ ಸಂಚೇನಿಲ್ಲ.

ಆದರೆ ನಿರ್ದೇಶಕ ಸಾಂಕೇತಿಕವಾಗಿ ಬಳಸಿದ ಕೆಲವು ಸಂಭಾಷಣೆಗಳಿಂದ ಕೆಲ 'ಇಂಗ್ಲಿಷ್ ಬಲೂಚರಿಗೆ' ಬೇಸರವಾಗಿದೆಯಂತೆ. ಎಷ್ಟೆಂದರೆ ಅವರು ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿ, ಚಿತ್ರಪ್ರದರ್ಶನವನ್ನು ರದ್ದು ಮಾಡಬೇಕೆಂದು ಕೋರಿದ್ದಾರೆ. ವಿಚಿತ್ರವೆಂದರೆ ಸಿನೆಮಾದಿಂದ ಬಲೂಚಿಸ್ಥಾನದ ಸಾಮಾನ್ಯ ಬಲೂಚ್‌ಗಳಿಗೇನೂ ಬೇಸರವಾಗಿಲ್ಲ! ಅವರು ಸಿನೆಮಾ ಮತ್ತು ನಿರ್ದೇಶಕನನ್ನು ಹೊಗಳಿದ್ದಾರೆ. ಹಾಗಾದರೆ ಕಷ್ಟಕಾಣದ ಬಲೂಚರು ಸಹವಾಸದೋಷದಿಂದ ಕೆಟ್ಟರೇ? ಹಾಗೆ ಹೇಳಬಹುದು. ಏಕೆಂದರೆ ವಿದೇಶದ ಬಲೂಚ್ ಸಂಘಟನೆಗಳು ವರ್ಷಕ್ಕೊಮ್ಮೆಯೋ ಎರಡು ಬಾರಿಯೋ ಕ್ಯಾಂಡಲ್ ಉರಿಸಿ ಬಲೂಚಿತನ ಪ್ರದರ್ಶಿಸಿದರೆ ಕರ್ತವ್ಯ ಮುಗಿಯಿತೆಂದು ತೆಪ್ಪಗಿರುವವರು. ಅದಕ್ಕೆ ಯಾವುದೋ ಗೊಂದಲ, ಜನಾಂಗೀಯ ದೌರ್ಜನ್ಯವನ್ನು ಕಾಫೀರರ ಮುಂದೆ ತೋರಿಸಿಕೊಳ್ಳಬಾರದೆಂಬ ಸ್ವಭಾವವೂ ಇರಬಹುದು. ಇಲ್ಲದಿದ್ದರೆ ಇವರಿಗೆ ಸಿನೆಮಾದಲ್ಲಿ ಪಾಕಿಸ್ಥಾನದ ಬಲೂಚ್ ವಿರೋಧಿ ನೀತಿ ಕಾಣಿಸಬೇಕಿತ್ತು. ಆದರೆ ಇವರು ಕೋಪಿಸಿಕೊಂಡಿದ್ದು ನಿರ್ದೇಶಕನ ಮೇಲೆ!

ಧುರಂಧರ್ ಭಾರತದ ಆಂತರಿಕ ಭದ್ರತೆ, ಗೂಢಚರ್ಯೆ ವ್ಯವಸ್ಥೆ, ರಾಜತಾಂತ್ರಿಕ ಕಥನದಂತೆ ಕಂಡರೂ ಸಿನೆಮಾದುದ್ದಕ್ಕೂ ಬಲೂಚ್ ಬೆಸೆದುಕೊಂಡಿದೆ. ಕರಾಚಿಯ ಸುತ್ತಮುತ್ತ ನಡೆಯುವ ಗ್ಯಾಂಗ್‌ವಾರ್‌ಗಳಿಂದ ಹಿಡಿದು ಸಂಸತ್ ಚುನಾವಣೆಯವರೆಗೆ ಬಲೂಚ್‌ಗಳು ಪ್ರಮುಖ ಪಾತ್ರ ವಹಿಸಬಲ್ಲರು ಎಂಬುದನ್ನು ಸಿನೆಮಾದ ಎರಡೂ ಭಾಗಗಳು ಹೇಳುತ್ತವೆ. ಇದೇ ಕತೆಯನ್ನು ಆದಿತ್ಯ ಧರ್ ಕೊಂಚವೇ ತಿದ್ದಿದರೂ ಅದು ಪಕ್ಕಾ ಬಲೂಚ್ ಸಿನೆಮಾದಂತೆಯೂ ಕಾಣಿಸಬಹುದೆಂಬಷ್ಟು ಅದು ಬಲೂಚ್‌ಮಯವಾಗಿದೆ. ಅಸಲಿಗೆ ಬಲೂಚ್ ನೋವನ್ನು ಹೊತ್ತು ಅಸ್ತಿತ್ವದಲ್ಲಿರುವುದು ಹಾಗೆಯೇ. ಏಳು ದಶಕಗಳಿಂದಲೂ ಅದು ಗಾಯಗೊಂಡಿದೆ. ಗಾಯಗೊಂಡ ಕಾರಣಕ್ಕೆ ಘಾತಕತನವನ್ನು ಮೈಗೂಡಿಸಿಕೊಂಡಿದೆ. ಸಿನೆಮಾದಲ್ಲಿ ಕಾಣುವಂತೆಯೇ ಬಲೂಚರಲ್ಲಿ ಒರಟುತನವಿದೆ. ತನ್ನ ಮಣ್ಣಿಗಾಗಿ ತನ್ನನ್ನೇ ಕೊಂದುಕೊಳ್ಳುವಷ್ಟು ಆಕ್ರೋಶವಿದೆ. ಪಾಕಿಸ್ಥಾನದ ಒಟ್ಟು ಭೂಭಾಗದ ಶೇ.44ರಷ್ಟನ್ನು ಹೊಂದಿದ್ದರೂ ಅಲ್ಲಿನ ಶೇ. 84ರಷ್ಟು ಜನರಿನ್ನೂ ಬಡವರು. ಇಸ್ಲಾಮಾಬಾದ್, ಲಾಹೋರ್‌ಗಳು ಹೇಳುವಂತೆ ಬಲೂಚಿನ ಹೆಚ್ಚಿನವರು ಅನಕ್ಷರಸ್ಥರು. ಆದರೆ ಪಠಾಣರಷ್ಟು ಶತಮೂರ್ಖರಲ್ಲ. ಪಠಾಣರಿಗೆ ತಮಗಿಂತಲೂ ಬಲೂಚರು ಪರಾಕ್ರಮಿಗಳೆಂಬ ಹೊಟ್ಟೆಕಿಚ್ಚಿದೆ. ಆದರೆ ಬಲೂಚಿಗಳಿಗೆ ತಾವು ಪಠಾಣರಂತೆ ಪ್ರಾಣಭಯದಿಂದ ಪಲಾಯನ ಮಾಡುವವರಲ್ಲ ಎಂಬ ಸ್ವಾಭಿಮಾನವಿದೆ. ಪಠಾಣ–ಪಂಜಾಬಿಗಳಂತೆ ಬಲೂಚಿಗಳು ಖವ್ವಾಲಿ, ಕವಿಗೋಷ್ಠಿಗಳ ಶೋಕಿ ಇರುವವರಲ್ಲ. ಆದರೆ ಶತಮಾನಗಳಿಂದ ಭಾಷೆ ಮತ್ತು ಜಾನಪದವನ್ನು ಉಳಿಸಿಕೊಂಡು ಬಂದವರು.

ಒಂದು ಕಾಲದ ಶ್ರೀಮಂತ ಬಲೂಚಿಗಳಿಂದು ಪಾಕಿಸ್ಥಾನದ ಗುಲಾಮಗಿರಿಗೆ ಬಿದ್ದಿದೆ. ಒಂದೊಮ್ಮೆ ಬಲೂಚ್‌ಗಳೇ ಇದ್ದ ಕ್ವೆಟ್ಟಾದಲ್ಲೇ ಇಂದು ಅವರು ಅಲ್ಪಸಂಖ್ಯಾತರಾಗುವ ಹಾದಿಯಲ್ಲಿದ್ದಾರೆ. ಅವರ ಸಂಪನ್ಮೂಲಗಳಿಂದ ಇಸ್ಲಾಮಾಬಾದ್ ಕೊಬ್ಬಿದೆ. ಇನ್ನೇನು ಬಲೂಚಿ ಧ್ವನಿ ಉಡುಗಿತು ಎನ್ನುವಷ್ಟರಲ್ಲಿ ಬಲೂಚರ ವಂಶವಾಹಿನಿಯಲ್ಲಿ ಪರಾಕ್ರಮದ ಘರ್ಜನೆ ಮೊಳಗುತ್ತದೆ. ಬಲೂಚರನ್ನು ಬೇಟೆಯಾಡಲು ಪಾಕಿಸ್ಥಾನ ಸೇನೆ ಪಠಾಣ್ ಸೈನಿಕರ ವಿಶೇಷ ತುಕಡಿಯನ್ನು ರಚನೆ ಮಾಡಿದೆ. ಬಲೂಚಿಗಳ ಮಾರಣಹೋಮ ನಡೆಯುತ್ತದೆ. ಪಠಾಣ್ ಪಡೆ ಗೆದ್ದು ಬೀಗುತ್ತಿದ್ದಾಗಲೇ ಇಸ್ಲಾಮಾಬಾದಿನಲ್ಲೆಲ್ಲೋ ಬಲೂಚಿಗಳ ಸ್ಫೋಟದ ಸದ್ದು ಕೇಳಿಸುತ್ತದೆ. ಪಾಕಿಸ್ಥಾನ ರಚನೆಯಾದಂದಿನಿಂದ ಬಲೂಚಿಗಳಿಗೆ ಅವರ ಮೇಲೆ ಸಂಪೂರ್ಣ ಗೆಲುವು ಸಾಧ್ಯವಾಗಲಿಲ್ಲ ಎಂಬುದು ಎಷ್ಟು ಸತ್ಯವೋ, ಪಾಕಿಸ್ಥಾನಕ್ಕೂ ಬಲೂಚಿಗಳನ್ನು ಪೂರ್ಣ ಗೆಲ್ಲಲಾಗಲಿಲ್ಲ ಎಂಬುದು ಕೂಡ ಅಷ್ಟೇ ಸತ್ಯ. ಬಲೂಚಿಗಳು ಅಲೆಕ್ಸಾಂಡರನ ಕಾಲದಿಂದಲೂ ರಣಭೂಮಿಯಲ್ಲಿ ಪಳಗಿದವರು. ಭಾಷೆ ಮತ್ತು ಪರಂಪರೆಯನ್ನು ಸವಾಲುಗಳ ಹೊರತಾಗಿಯೂ ಕಾಪಿಟ್ಟುಕೊಂಡವರು. ಬುಡಕಟ್ಟು ಗುಣದ ಬಲೂಚಿಗಳನ್ನು ಆಯಾ ಕಾಲಘಟ್ಟದಲ್ಲಿ ಎಲ್ಲರೂ ಬಳಸಿಕೊಳ್ಳುತ್ತಾ ಬಂದರೂ ಅವರ ಸ್ವಂತಿಕೆ ನಾಶವಾಗಿಲ್ಲ. ಬ್ರಿಟಿಷರಿಗೆ ಪರಿಸ್ಥಿತಿಗಳು ಕುತ್ತಿಗೆಗೆ ಬರುತ್ತಿದ್ದಾಗಲೆಲ್ಲಾ ಸಹಾಯಕ್ಕೆ ಬಂದವರು ಈ ಬಲೂಚಿಗಳು. ಬಲೂಚಿಗಳನ್ನು ಬಳಸಿಯೇ ಬ್ರಿಟಿಷರು ಅಫ್ಘನ್ ಯುದ್ಧಗಳನ್ನು ಗೆದ್ದರು. ಜೊತೆಗೆ ಬಲೂಚಿನ ಸಂಪನ್ಮೂಲಗಳನ್ನೂ ದೋಚಿದರು. ಇಷ್ಟೆಲ್ಲಾ ನಡೆಯುತ್ತಿದ್ದಾಗಲೂ ಬಲೂಚಿಗಳಿಗೆ ತಮ್ಮ 'ಕಲಾತ್' ಎಂಬ ಸಂಸ್ಥಾನವಿತ್ತು. ಆದರ ಖಾನ್‌ಗಳು ಬ್ರಿಟಿಷರೊಂದಿಗಿದ್ದರೂ ಸ್ವತಂತ್ರ ಬಲೂಚಿನ ಆಕಾಂಕ್ಷೆ ಆವರಲ್ಲಿ ಇಂಗಿರಲಿಲ್ಲ. 1920ರಲ್ಲಿ ಯೂಸುಫ್ ಅಲಿ ಮಾಗ್ಸಿ ಎಂಬಾತನ ನೇತೃತ್ವದಲ್ಲಿ ಬಲೂಚ್ ರಾಷ್ಟ್ರವಾದಿಗಳ ಗುಂಪು 'ಯಂಗ್ ಬಲೂಚ್' ಎಂಬ ರಹಸ್ಯ ಸಂಘಟನೆಯನ್ನು ಸ್ಥಾಪಿಸಿದರು. ಕೆಲ ವರ್ಷಗಳ ನಂತರ ಅದು ಹೆಸರು ಮತ್ತು ಸ್ವರೂಪಗಳೆರಡನ್ನೂ ಬದಲಿಸಿಕೊಂಡು 'ಅಂಜುಮನ್–ಎ ಇತ್ತೆಹಾದ್–ಎ ಬಲೂಚಾನ್' ಆಯಿತು. ಮುಂದೆ ಅದು ರಾಜಕೀಯ ಪಕ್ಷವಾಗಿ ಬದಲಾಯಿತು. ಅದರ ಪ್ರೇರಣೆಯಿಂದ ಇನ್ನೂ ಹಲವು ರಾಜಕೀಯ ಪಕ್ಷಗಳು ಉಗಮವಾದವು. ಜನರ ಸ್ವಾತಂತ್ರ್ಯಾಭಿಲಾಷೆ ಬಲಗೊಳ್ಳತೊಡಗಿದಂತೆ ಎದುರಾದ ಮಹಾಯುದ್ಧ ಸೃಷ್ಟಿಸಿದ ಒತ್ತಡಗಳಿಂದ ಬಲೂಚಿಸ್ಥಾನ್ 1948ರ ಆಗಸ್ಟ್ 11ರಂದು ಸ್ವತಂತ್ರವಾಯಿತು. 108 ವರ್ಷಗಳ ಆಡಳಿತದಿಂದ ಬಿಡುಗಡೆಗೊಂಡರೂ ಕಲಾತ್ ಮುಖಂಡ ಖಾನ್ ಮೀರ್ ಸರ್ ಅಹಮದ್ ಯಾರ್ ಖಾನ್ ಅಹಮದ್‌ಜಾಯ್ ಇನ್ನೂ ಗೊಂದಲದಲ್ಲಿದ್ದ. ಬಲೂಚನ್ನು ಬ್ರಿಟೀಷರು ಪ್ರಿನ್ಸ್ಲೀ ಸ್ಟೇಟ್ ಆಗಿಯೇ ಇಟ್ಟಿದ್ದರು. ಖಾನ್ ಸಾಹೇಬನಿಗೆ ಬಲೂಚಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ತನಗಿದೆ ಎಂಬ ಭಾವನೆ ಅಹಂಕಾರವಾಗಿ ಬದಲಾಯಿತು. ಒಂದು ಹಂತದಲ್ಲಿ ಖಾನ್ ಎಲ್ಲರಿಂದಲೂ ಅಂತರ ಕಾಯ್ದುಕೊಂಡ. ಆದರೆ ಸ್ವತಂತ್ರವಾಗುಳಿಯುವ ಮತ್ತು ಯಾರೊಂದಿಗೂ ವಿಲೀನದ ನಿರ್ಧಾರವನ್ನು ತೆಗೆದುಕೊಳ್ಳದೆಹೋದ. ಆದರೆ ಖಾನ್ ಸಾಹೇಬನಿಗೆ ಬ್ರಿಟಿಷ್ ಕಾಲದಲ್ಲಿ ಕಾನೂನು ಸಲಹೆಗಾರನಾಗಿದ್ದವನು ಮಹಮದಾಲಿ ಜಿನ್ನಾ. ತಡಮಾಡದ ಜಿನ್ನಾ ನೇರವಾಗಿ ಖಾನ್ ಸಾಹೇಬನಿಗೆ ಪಾಕಿಸ್ಥಾನದೊಂದಿಗೆ ವಿಲೀನವಾಗಬೇಕೆಂದು ಬೆದರಿಕೆಯ ಪತ್ರ ರವಾನಿಸಿದ. ಖಾನ್ ಅದಕ್ಕೂ ಉತ್ತರಿಸಲಿಲ್ಲ. ಕೊನೆಗೆ 1948ರ ಮಾರ್ಚ್ 27ರಂದು ಲಾಹೋರಿನಿಂದ ಹೊರಟ ಪಠಾಣ್ ತುಕಡಿ ಖಾನನ ಆಸ್ಥಾನಕ್ಕೆ ನುಗ್ಗಿ ಬಲವಂತದಿಂದ ಪಾಕಿಸ್ಥಾನದೊಂದಿಗೆ ವಿಲೀನದ ಪತ್ರಕ್ಕೆ ಸಹಿ ಹಾಕಿಸಿಕೊಂಡಿತು. ಕೇವಲ 137 ದಿನಗಳಲ್ಲೇ ಬಲೂಚರು ಸ್ವಾತಂತ್ರ್ಯ ಕಳೆದುಕೊಂಡಿದ್ದರು. ಅದೆಷ್ಟು ಹೀನಾಯವಾಗಿ ಕಳೆದುಕೊಂಡರೆಂದರೆ ಬ್ರಿಟಿಷ್ ಕಾಲದಲ್ಲಿದ್ದ ಸ್ವಾತಂತ್ರ್ಯ ಕೂಡ ಈಗಿರಲಿಲ್ಲ. ಬೆಂಕಿಯಿಂದ ಹೊರಬಂದೆವು ಎಂದುಕೊಳ್ಳುತ್ತಿದ್ದಂತೆಯೇ ಬಲೂಚರು ಬಾಣಲೆಗೆ ಬಿದ್ದರು.

ಪಾಕಿಸ್ಥಾನಕ್ಕೆ ಸೇರಿದ ಬಲೂಚಿನ ಸಂಪನ್ಮೂಲ ಮತ್ತೊಮ್ಮೆ ಲೂಟಿಯಾಗತೊಡಗಿತು. ಬಲೂಚರ ಸ್ವಾಭಿಮಾನ ಬಡವನ ಕೋಪದಂತಾಗುತ್ತಿತ್ತು. 1948ರ ಕ್ರಾಂತಿಯನ್ನು ಪಾಕಿಸ್ಥಾನ ಅದೆಷ್ಟು ಭೀಕರವಾಗಿ ಅಡಗಿಸಿತೆಂದರೆ ಕ್ರಾಂತಿಕಾರಿಗಳನ್ನು ಸಾಮೂಹಿಕವಾಗಿ ಗಲ್ಲಿಗೇರಿಸಿತು. 1958ರಲ್ಲಿ ಆಯೂಬ್ ಖಾನ್ ಬಲೂಚಿನ ರಾಜ್ಯ ಸ್ಥಾನಮಾನವನ್ನು ಕೊನೆಗೊಳಿಸಿ ಅಲ್ಪಸ್ವಲ್ಪ ಸ್ವಾಯತ್ತತೆಯನ್ನೂ ರದ್ದುಗೊಳಿಸಿದ. ವಿರೋಧಿಸಿದವರನ್ನು ಗಲ್ಲಿಗೇರಿಸಿದ. 1960ರ ಗೆರಿಲ್ಲಾ ಯುದ್ಧ ಪಾಕಿಸ್ಥಾನದ ನಿದ್ರೆ ಕೆಡಿಸಿತ್ತಾದರೂ ಕ್ರೂರವಾಗಿ ಕ್ರಾಂತಿಯನ್ನು ಅಡಗಿಸಲಾಯಿತು. 1970ರಲ್ಲಿ ಇರಾನ್ ಜೊತೆಗೂಡಿ ಪಾಕಿಸ್ಥಾನ ಬಲೂಚ್ ಸ್ವಾತಂತ್ರ್ಯಹೋರಾಟಗಾರರ ನರಮೇಧ ನಡೆಸಿತು. ದಾಖಲೆಗಳ ಪ್ರಕಾರ ಅಂದು 30 ಸಾವಿರಕ್ಕೂ ಹೆಚ್ಚಿನ ಬಲೂಚ್‌ಗಳ ಮಾರಣಹೋಮ ನಡೆಯಿತು. ಇಂದು ಅದೇ ಇರಾನ್ ನಮ್ಮ ಮೇಲೆ ಅನ್ಯಾಯವಾಗಿ ಆಕ್ರಮಣ ನಡೆಸಲಾಗಿದೆ ಎಂದು ಅವಲತ್ತುಕೊಳ್ಳುತ್ತಿದೆ. ಪಾಲುದಾರ ಪಾಕಿಸ್ಥಾನ ತಾನು ಯುದ್ಧವನ್ನು ನಿಲ್ಲಿಸುತ್ತೇನೆ ಎಂದು ಒದ್ದಾಡುತ್ತಿದೆ! ಈ ಎಲ್ಲಾ ಕ್ರಾಂತಿಗಳು ಬೇಗನೆ ಅಡಗಿತ್ತಾದರೂ 2003ರಲ್ಲಿ ಪ್ರಾರಂಭವಾದ ಬಲೂಚ್ ರಾಷ್ಟ್ರೀಯತೆಯ ಅಲೆ ಸ್ವತಂತ್ರ ಬಲೂಚಿನ ಭರವಸೆಯನ್ನು ಜೀವಂತವಾಗಿಟ್ಟಿದೆ. ಪಾಕಿಸ್ಥಾನದ ನಿರ್ಲಕ್ಷ್ಯ ಮತ್ತು ಬಲೂಚಿಗಳ ಮೇಲಿನ ದೌರ್ಜನ್ಯವನ್ನು ವಿಶ್ವಮಟ್ಟಕ್ಕೆ ಮುಟ್ಟಿಸುವ ಪ್ರಯತ್ನದಲ್ಲಿ ಬಲೂಚಿಗಳು ಅಷ್ಟಿಷ್ಟು ಯಶಸ್ಸು ಕಂಡಿದ್ದಾರೆ. ಅದರಲ್ಲೂ ಬಲೂಚಿನ ಗ್ವಾದರ್ ಬಂದರು ಮತ್ತು ಚೀನಾ ಗುತ್ತಿಗೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಸಶಸ್ತ್ರ ಕ್ರಾಂತಿ ಹಿಂದೆಂದಿಗಿಂತಲೂ ಪಾಕಿಸ್ಥಾನಕ್ಕೆ ತಲೆನೋವಾಗಿದೆ. ಬಲೂಚ್ ನ್ಯಾಶನಲ್ ಮೂವ್ಮೆಂಟ್ (BNM), ಬಲೂಚ್ ರಿಪಬ್ಲಿಕನ್ ಪಾರ್ಟಿ (BRP), ಬಲೂಚಿಸ್ತಾನ್ ಲಿಬರೇಷನ್ ಫ್ರಂಟ್ (BLF), ಬಲೂಚ್ ಲಿಬರೇಷನ್ ಆರ್ಮಿ (BLA), ಬಲೂಚ್ ಸ್ಟೂಡೆಂಟ್ಸ್ ಆರ್ಗನೈಜೆಷನ್‌ಗಳು ಹೋರಾಟಕ್ಕಿಳಿದಿವೆ. ಕೆಲವು ವರದಿಗಳ ಪ್ರಕಾರ 2003ರಿಂದ 2007ರವರೆಗೆ ಬಲೂಚಿಸ್ಥಾನದಲ್ಲಿ ಕಾಣೆಯಾದವರ ಸಂಖ್ಯೆ 18,000ಕ್ಕೂ ಹೆಚ್ಚು. ಈ ಅವಧಿಯಲ್ಲಿ 7,000ಕ್ಕೂ ಹೆಚ್ಚು ಮಂದಿ ಪಾಕಿಸ್ಥಾನದ ಬಂಧನದಲ್ಲಿಯೇ ಸಾವನ್ನಪ್ಪಿದ್ದಾರೆ. ಆದರೆ 1948ರಿಂದ ಇಲ್ಲಿಯವರೆಗೆ ಎಷ್ಟು ಜನ ಬಲೂಚ್‌ಗಳು ಸಾವನ್ನಪ್ಪಿದ್ದಾರೆ, ಕಾಣೆಯಾಗಿದ್ದಾರೆಂಬುದರ ಸಂಖ್ಯೆ ಲೆಕ್ಕದಲ್ಲಿಲ್ಲ. ಮಾನವಹಕ್ಕುಗಳೇ ಇಲ್ಲದ ದೇಶದಲ್ಲಿ ಸತ್ತವರ ಲೆಕ್ಕಹಾಕುವವರಾರು? ವಿಚಿತ್ರವೆಂದರೆ ಮಾನವಹಕ್ಕುಗಳ ದೊಡ್ಡದೊಡ್ಡ ಮಾತಾಡುವ ಜಾಗತಿಕ ಸಂಘಟನೆಗಳು ಮತ್ತು ತಾನೇ ಜಗತ್ತಿನ ಪಟೇಲ ಎಂದಾಡುವವರಾರೂ ಬಲೂಚರನ್ನು ಬೆಂಬಲಿಸಿಲ್ಲ. ಭದ್ರತಾಮಂಡಳಿ ಅಲ್ ಜಜೀರಾದ ರದ್ದಿ ಪೇಪರಿನ ಸುದ್ದಿಗಳನ್ನು ಆರಿಸಿ ವರದಿಯೊಂದನ್ನು ಮಂಡಿಸಿ ಕೈತೊಳೆದುಕೊಂಡಿದೆ. ಭೂಪಟದಲ್ಲಿ ಗಾಜಾ ಗುರುತಿಸಲಾಗದಿದ್ದರೂ ಸೇವ್ ಪ್ಯಾಲೆಸ್ಟೀನ್ ಎನ್ನುವ ಭಾರತೀಯ ಮುಸ್ಲಿಮರು ಬಲೂಚರನ್ನು ಅನುಕಂಪದಿಂದ ನೋಡಿದ್ದಕ್ಕೆ ಉದಾಹರಣೆಗಳಿಲ್ಲ. ಗಾಜಾದ ಭಯೋತ್ಪಾದಕರಿಗೆ ಸಲ್ಲುವ ಗೌರವ ಬಲೂಚಿಗಳಿಲ್ಲವೆಂದರೆ ಅವರೆಷ್ಟು ನತದೃಷ್ಟರಾಗಿರಬಹುದು?

ಬಲೂಚರ ದುರಂತ ಕಥನವನ್ನು ಅರ್ಥ ಮಾಡಿಕೊಳ್ಳದಿದ್ದರೆ ಧುರಂಧರ ಕೂಡ ಪ್ರಭಾವಿಯಾಗಿ ಮೂಡುತ್ತಿರಲಿಲ್ಲ. ಲಿಯಾರಿಯಲ್ಲಿ ನಡೆಯುತ್ತಿದ್ದ ಗ್ಯಾಂಗ್‌ವಾರುಗಳಲ್ಲಿ ಬಲೂಚಿ ಗೂಂಡಾಗಳದ್ದೇ ಕೈಮೇಲೇಕೆ? ಅಲ್ಲೂ ಬಲೂಚಿಯರನ್ನು ಪಾಕಿಸ್ಥಾನ ಹೇಗೆ ಬಳಸಿಕೊಂಡಿತು? ರೆಹಮಾನ್ ಬಲೂಚ್, ಉಜೈರ್ ಬಲೂಚ್ ಮೊದಲಾದವರನ್ನು ಬಲೂಚರ ವಿರುದ್ಧ ಹೇಗೆ ಬಳಸಿಕೊಳ್ಳಲಾಯಿತು? ಎಂಬುದನ್ನು ಸಿನೆಮಾ ಸೂಚ್ಯವಾಗಿ ಹೇಳಿದರೂ ಅಸಲಿ ಕತೆ ಅಷ್ಟೇ ಅಲ್ಲ. ಆದರೆ ಅಷ್ಟನ್ನಾದರೂ ಸಿನೆಮಾ ಮೂಲಕ ತೋರಿಸಿದ್ದಕ್ಕಾಗಿ ಬಲೂಚರು ನಿರ್ದೇಶಕರಿಗೆ ಋಣಿಯಾಗಿರಬೇಕಿತ್ತು. ಆದರೆ ಸಹವಾಸದಿಂದ ಬಲೂಚನೂ ಕೆಟ್ಟ. ಕೋರ್ಟ್ ಮೆಟ್ಟಿಲೇರಿದ.

ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮು...!

▸ ಶಶಿರ ಹೆಚ್.ಪಿ.



ರಾಮರಾವಣರ ನಡುವೆ ಯುದ್ಧ ಆರಂಭವಾಗಿದೆ, ಕುಂಭಕರ್ಣನನ್ನು ರಾವಣನು ಯುದ್ಧಕ್ಕಾಗಿ ಎಬ್ಬಿಸಿ ಯುದ್ಧಕ್ಕೆ ಹೋಗಬೇಕು ಎಂದಾಗ, ಕುಂಭಕರ್ಣನು 'ಶ್ರೀರಾಮನು ಏಕೆ ನಮ್ಮ ಮೇಲೆ ಯುದ್ಧಕ್ಕೆ ಬಂದಿರುವನು' ಎಂದು ಪ್ರಶ್ನಿಸಿದನು. ಆಗ ರಾವಣನು ಸೀತೆಯ ಅಪಹರಣದ ಘಟನೆಯನ್ನು ವಿವರಿಸಿದ. ಕುಂಭಕರ್ಣನು 'ನಿನಗೆ ಸೀತೆಯು ಒಲಿದಳೆ' ಎಂದು ಕೇಳಿದ. ಆಗ ರಾವಣನು 'ನಾನು ಸಾಕಷ್ಟು ರೀತಿಯಲ್ಲಿ ಪ್ರಯತ್ನಿಸಿದ್ದೇನೆ, ಆದರೂ ಆಕೆ ನನಗೆ ಒಲಿಯಲಿಲ್ಲ' ಎಂದನು. ಆಗ ಕುಂಭಕರ್ಣನು 'ನೀನು ಶ್ರೀರಾಮನ ಶರೀರವನ್ನು ತಾಳಿ ಆಕೆಯ ಬಳಿ ಸಾಗಿದೆಯಾ' ಎಂದು ಪ್ರಶ್ನಿಸಿದನು. ಆಗ ರಾವಣ ಹೇಳುತ್ತಾನೆ, 'ಅಯ್ಯಾ ಕುಂಭಕರ್ಣ, ನಾನು ಶ್ರೀರಾಮನನ್ನು ನನ್ನಲ್ಲಿ ಆಹ್ವಾನಿಸಿಕೊಂಡರೆ, ನನ್ನಲ್ಲಿರುವ ರಾವಣನೇ ಇಲ್ಲವಾಗುತ್ತಾನೆ. ರಾವಣನಿಗೆ ಪರಸ್ತ್ರೀ ಮೇಲೆ ವ್ಯಾಮೋಹವೇ ಹೊರತು ಶ್ರೀರಾಮನಿಗಲ್ಲ, ಹೀಗಾಗಿ ನಾನು ರಾಮನಂತೆ ದೇಹವನ್ನು ಹೊಂದಿದರೆ ಸೀತೆಯ ಮೇಲಿನ ಕಾಮನೆಯೇ ಹೊರಟು ಹೋಗುತ್ತದೆ'

ಇಂದು ಶ್ರೀರಾಮನವಮಿ

ಇದು ಶ್ರೀರಾಮನ ಆದರ್ಶಗಳಿಗೆ ಉದಾಹರಣೆ.

ಕುಂಭಕರ್ಣನು ಸತ್ತ ನಂತರ ರಾವಣನು ಇಂದ್ರಜಿತುನನ್ನು ಯುದ್ಧಕ್ಕೆ ಕಳುಹಿಸಿದ. ಲಕ್ಷ್ಮಣನು ರಾವಣನ ಮಗನಾದ ಇಂದ್ರಜಿತುವನ್ನು ಕೊಂದನು. ಇಂದ್ರಜಿತುವಿನ ಬಲಗೈ ಆತನ ಪತ್ನಿಯಾದ ಸುಲೋಚನೆಯ ಬಳಿ ಬಿದ್ದಿತು. ಆ ಕೈ ಅಲ್ಲಿಯವರೆಗೆ ನಡೆದ ವೃತ್ತಾಂತವನ್ನು ನೆಲದ ಮೇಲೆ ಬರೆದು, ತನ್ನ ಮೃತ್ಯುವು ಲಕ್ಷ್ಮಣನಿಂದ ಆಯಿತು ಎಂದು ಬರೆದು ಸುಮ್ಮನಾಯಿತು. ಆಗ ಸುಲೋಚನೆ ತಾನು ತನ್ನ ಪತಿಯೊಡನೆ ಚಿತೆಯನ್ನು ಏರಲು ನಿರ್ಧರಿಸಿದಳು. ತನ್ನ ಮಾವನಾದ ರಾವಣನ ಬಳಿ ಹೋಗಿ, ನನ್ನ ಪತಿಯ ಮರಣವಾಗಿದೆ, ಅವರ ಶರೀರ ಈಗ ರಾಮನ ಬಳಿಯಿದೆ, ತಾವು ಅದನ್ನು ತರಿಸಿಕೊಟ್ಟರೆ, ನಾನು ಪತಿಯೊಡನೆ ಸಹಗಮನ ಮಾಡುವೆ ಎಂದಳು. ಆಗ ರಾವಣನು, 'ನೀನೇ ಹೋಗಿ ನಿನ್ನ ಪತಿಯ ಶರೀರವನ್ನು ರಾಮನಿಂದ ಪಡೆದುಕೋ' ಎಂದ. ರಾವಣನ ಸಭೆಯಲ್ಲಿದ್ದವರೆಲ್ಲರೂ, 'ಹೇ ಪ್ರಭು ನೀವೇನು ಮಾಡುತ್ತಿರುವಿರಿ? ನಿಮ್ಮ ಸೊಸೆಯನ್ನು ರಾಮನ ಬಿಡಾರಕ್ಕೆ ಕಳುಹಿಸುತ್ತಿದ್ದೀರಲ್ಲ. ಆತನು ನಿಮ್ಮ ಶತ್ರು, ನೀವು ಆತನ ಪತ್ನಿಯನ್ನು ನಿಮ್ಮ ಬಳಿ ಇಟ್ಟುಕೊಂಡಿರುವಿರಿ, ನಿಮ್ಮ ಸೊಸೆಯನ್ನು ಆತನ ಬಳಿ ಮಗನ ಶವಕ್ಕಾಗಿ ಕಳುಹಿಸುವುದು ಎಷ್ಟು ಸರಿ? ರಾಮ ನಿಮ್ಮ ಸೊಸೆಗೆ ಏನಾದರೂ ಮಾಡಿಬಿಟ್ಟರೆ' ಎಂದರು. ಆಗ ರಾವಣನು 'ನಾನು ಶ್ರೀರಾಮನನ್ನು ನಂಬುತ್ತೇನೆ. ಇತರರ ಮನೆಯ ಹೆಣ್ಣನ್ನು ಬಂಧಿಯಾಗಿ ಇಡಲು ಆತನು ರಾವಣನಲ್ಲ, ಆತ ಶ್ರೀರಾಮಚಂದ್ರ, ನೀವು ಬಹುಶಃ ನನ್ನ ನೆಚ್ಚಿಸುವ ಸಲುವಾಗಿ ನಿಮ್ಮ ಆಲೋಚನಾ ಸಾಮರ್ಥ್ಯವನ್ನು ಕಳೆದುಕೊಂಡಿರಬೇಕು. ರಾವಣನು ಪರಸ್ತ್ರೀಯನ್ನು ಅಪಹರಿಸುವ ಬುದ್ಧಿಯುಳ್ಳವನೇ ಹೊರತು ರಾಮನಲ್ಲ' ಎಂದನು.



ಹೀಗೆ ಪ್ರತಿಯೊಬ್ಬರಲ್ಲೂ ರಾಮ–ರಾವಣರಿರುತ್ತಾರೆ. ಇದೇ ವಿಷಯವನ್ನು ಡಿ.ವಿ.ಜಿ.ಯವರು ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ಹೇಳುತ್ತಾರೆ.

ದೇವ ದಾನವರ ರಣರಂಗ ಮಾನವಹೃದಯ
ಭಾವರಾಗಹತಂಗಳವರ ಸೇನೆಗಳು ।
ಭೂವಿಭವಜಯಗಳ ಭ್ರಾಂತಿಯಲಿ ಮರೆಯುವರು
ಜೀವಾಮೃತವನವರು – ಮಂಕುತಿಮ್ಮ ॥

ನಮ್ಮ ಹೃದಯದಲ್ಲಿ ಶ್ರೀರಾಮನಿಗೆ ಅವತಾರವನ್ನು ತಾಳಲು ನಾವು ಅವಕಾಶ ನೀಡಬೇಕು. ಆಗ ನಮ್ಮಲ್ಲಿರುವ ರಾವಣನ ಅಂತ್ಯವಾಗುತ್ತದೆ. ರಾಮನಿರುವಲ್ಲಿ ರಾಮಣನಿರಲು ಸಾಧ್ಯವಿಲ್ಲ. ಇತರರು ನಮ್ಮನ್ನು ಎಷ್ಟು ಬದಲಾಯಿಸಲು ಪ್ರಯತ್ನಿಸಿದರೂ ನಾವುಗಳು ಬದಲಾಗುವುದಿಲ್ಲ. ಹೀಗಾಗಿ ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು. ಧರ್ಮ ಎಂಬ ಶಬ್ದಕ್ಕೆ ಹಲವಾರು ಅರ್ಥಗಳಿವೆ. ಶ್ರೀವಿಷ್ಣು ಸಹಸ್ರನಾಮದಲ್ಲಿ ವಿಷ್ಣುವಿನ ಒಂದು ಹೆಸರು ಧರ್ಮ, ಎಲ್ಲೆಡೆ ವ್ಯಾಪಿಸುವುದರಿಂದ ಆತನನ್ನು ವಿಷ್ಣು ಎಂದು ಕರೆಯುತ್ತೇವೆ. ದೇವರು ಪ್ರತಿಯೊಬ್ಬರ ಹೃದಯದಲ್ಲಿ ವಾಸಿಸುತ್ತಿದ್ದಾನೆ ಎಂದು ತಿಳಿದವರು ಹೇಳುತ್ತಿದ್ದರು. ಹೀಗಾಗಿ ಧರ್ಮವೆಂದರೆ ನಮ್ಮ ಚೈತನ್ಯವೆಂದಾಗುತ್ತದೆ. ನಾವುಗಳು 'ನಾನು, ನಾನು' ಎಂದು ಸಂಭೋಧಿಸುವುದನ್ನೇ 'ಆತ್ಮಾ' ಎಂದು ಸಂಸ್ಕೃತದಲ್ಲಿ ಕರೆಯಲಾಗಿದೆ. ಆತ್ಮನನ್ನು ಅರಿತವನು ಸರ್ವವನ್ನು ಅರಿಯುತ್ತಾನೆ ಎಂಬುದು ಉಪನಿಷತ್ತಿನ ಉಪದೇಶವಾಗಿದೆ. ಧರ್ಮವೆಂಬುದು ಶುದ್ಧ ಚೈತನ್ಯದ ಹೆಸರಾಗಿದೆ. ಹೀಗೆ ಹಿಂದೂಗಳು ಕೋಟ್ಯಂತರ ನಾಮಗಳಿಂದ, ಹೆಸರುಗಳಿಂದ ಆ ಚೈತನ್ಯವನ್ನು ಕಾಣುತ್ತಾರೆ ಹಾಗೂ ಕರೆಯುತ್ತಾರೆ.

ನಾವುಗಳೆಲ್ಲ ಚೈತನ್ಯ ಸ್ವರೂಪದವರಾಗಿದ್ದೇವೆ. ಪರಮಾತ್ಮ ನಮ್ಮೆಲ್ಲರ ಹೃದಯವಾಸಿಯಾಗಿದ್ದಾನೆ. ಈ ನೈಜ ತಿಳುವಳಿಕೆಯನ್ನು ಧರ್ಮ ಎನ್ನಬಹುದು. ಈ ಸತ್ಯವನ್ನು ತಿಳಿಯದವನು ಅಧರ್ಮಿಯಾಗುತ್ತಾನೆ. ಯಾವಾಗ ಧರ್ಮವು ಎಂದರೆ ವ್ಯಕ್ತಿಯು ತಾನು ಚೈತನ್ಯ ಸ್ವರೂಪ ಎಂಬುದನ್ನು ಮರೆಯುತ್ತಾನೋ, ಆಗ ಆತನು ಅಧರ್ಮಿಯಾಗುತ್ತಾನೆ. ಅದನ್ನೇ ಧರ್ಮದ ಹಾನಿ ಎನ್ನಬಹುದು. ವ್ಯಕ್ತಿ ಅಧರ್ಮಿಯಾಗುವುದು ಎಂದರೆ ಕಣ್ಣಿಗೆ ಕಾಣುವ ಶರೀರ, ನಾಮ, ರೂಪ, ಅನುಷ್ಠಾನವಿಲ್ಲದ ಕೇವಲ ಬಾಹ್ಯ ಆಚರಣೆ ನಿಜವೆಂದು ನಂಬುವುದಾಗಿದೆ. ಯಾವಾಗ ನಮ್ಮ ಹೃದಯಲ್ಲಿ ಜ್ಞಾನದ ಅವತಾರ ಹುಟ್ಟುವುದೋ, ಅಂದರೆ ನಾನು ಅಧರ್ಮಿಯಲ್ಲ, ನಾನು ವಾಸ್ತವದಲ್ಲಿ ಧರ್ಮರೂಪವಾದ ಚೈತನ್ಯವೆಂದು ಅರಿಯಲ್ಪಡುವುದೋ, ಆಗ ಆತನಿಗೆ ಎಲ್ಲೆಲ್ಲೂ ಚೈತನ್ಯ ವರ್ತನೆಯೇ ಕಾಣುತ್ತದೆ. ವೇದಾಂತದಲ್ಲಿ ಈ ಚೈತನ್ಯವನ್ನು 'ಬ್ರಹ್ಮ'ಎಂದು ಕರೆದಿದ್ದಾರೆ. ಈ ವಾಸ್ತವ ಅರಿವಾದಾಗ ದುಷ್ಟರು ಹೊರಗಿಲ್ಲ ಎಂಬುದು ಅರಿವಾಗುತ್ತಾದೆ. ಆ ಕ್ಷಣದಲ್ಲಿ ಆತನಲ್ಲಿದ್ದ ರಾಕ್ಷಸನೂ ನಾಶವಾಗಿ, ಒಳಗೆ ಅವಿತಿದ್ದ ಸಾಧುವು ಪ್ರಕಟವಾಗುತ್ತಾನೆ. ಇದು ನಿಜವಾಗಿಯೂ ಅವತಾರದ ರಹಸ್ಯವೆನ್ನಬಹುದು. ನಾವು ಈ ಪ್ರಪಂಚದಲ್ಲಿ ಜೀವಿಸುವಾಗ, ಪ್ರತಿಯೊಬ್ಬನೂ ನಮ್ಮ ಆತ್ಮಸ್ವರೂಪವೆ ಎಂದು ಅರಿತರೆ ಈ ಭೂಮಿಯು ಸ್ವರ್ಗವಾಗುತ್ತದೆ. ಒಬ್ಬ ಜ್ಞಾನಿ ಈ ಜಗತ್ತಿನಲ್ಲಿ ಹೇಗೆ ಜೀವಿಸುತ್ತಾನೆ ಎಂಬುದನ್ನು ಡಿ.ವಿ.ಜಿ. ಹೀಗೆ ವಿವರಿಸಿದ್ದಾರೆ.

ಬ್ರಹ್ಮಾನುಸಂಧಾನ ಲೋಕಸಂಧಾನದಲಿ
ಬ್ರಹ್ಮದರ್ಶನವೆಲ್ಲ ಜೀವರೂಪದಲಿ ।
ಬ್ರಹ್ಮಾನುಭವ ದೇಹ ಕರುಣಾನುಭವಗಳಲಿ
ಮರ್ಮವಿದು ಮುಕ್ತಿಗೆಲೊ – ಮಂಕುತಿಮ್ಮ ॥

ನಾವು ಆ ಚೈತನ್ಯವನ್ನು ಪ್ರತಿಯೊಬ್ಬರಲ್ಲಿ ಕಾಣಬೇಕು. ನಮ್ಮ ದೇಹ ಇಂದ್ರಿಯಗಳ ಮುಖಾಂತರ ಅನುಭವಿಸುವ ಎಲ್ಲ ಅನುಭವಗಳನ್ನು ಆ ಚೈತನ್ಯದನುಭವವೆಂದು ಅರಿತರೆ ಅದೇ ಮುಕ್ತಿ.

ಪತ್ರ ಮಿತ್ರ

ಮೋದಿಯವರು ಶಾಂತಿದೂತರಾಗಲಿ

ಅಮೆರಿಕಾ– ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವನ್ನು ನಿಲ್ಲಿಸಲು ಭಾರತದ ಪ್ರಧಾನಿ ಮೋದಿ ಮಧ್ಯಸ್ಥಿಕೆಯನ್ನು ವಹಿಸಬೇಕು ಎಂಬ ಮಾತುಗಳು ಇತ್ತೀಚೆಗೆ ಬಹಳವಾಗಿ ಕೇಳಿಬಂದವು. ಮೋದಿಯವರು ಶಾಂತಿದೂತರಾಗಲು ಸರಿಯಾದ ವ್ಯಕ್ತಿ ಎಂಬ ಅಭಿಪ್ರಾಯ ಎಲ್ಲರದು. ಈ ವಿಷಯದ ಕುರಿತು ಫಿನ್‌ಲೆಂಡ್ ಅಧ್ಯಕ್ಷ ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿ, ಮೋದಿಯವರು ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸಬೇಕು ಎಂದರು. ಯುಎಇ ರಾಯಭಾರಿ ಕೂಡಾ ''ಮೋದಿಯವರ ಒಂದು ಮಾತು ಯುದ್ಧ ನಿಲ್ಲಿಸಬಲ್ಲುದು'' ಎಂದು ಹೇಳಿದರು. ಇನ್ನೂ ಕೆಲವು ಮುಖಂಡರು ಇದೇ ರೀತಿಯ ಅಭಿಪ್ರಾಯ ಸೂಚಿಸಿದ್ದಾರೆ.

ಇಂದು, ಮೋದಿಯವರು ವಿಶ್ವದಲ್ಲೇ ಅತಿ ಹೆಚ್ಚು ಜನಪ್ರಿಯ ನಾಯಕ. ಭಾರತವು ವಿಶ್ವದ ಹೆಚ್ಚಿನ ದೇಶಗಳೊಡನೆ ಉತ್ತಮ ಸ್ನೇಹ ಸಂಬಂಧ ಹೊಂದಿದೆ. ಪ್ರಸ್ತುತ ಯುದ್ಧನಿರತರಾಗಿರುವ ಅಮೆರಿಕಾ, ಇರಾನ್, ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳೊಡನೆ ಭಾರತದ ಸಂಬಂಧ ಉತ್ತಮವಾಗಿದೆ. ಮೋದಿಯವರು ಈ ಎಲ್ಲಾ ದೇಶಗಳ ಮುಖಂಡರೊಡನೆ ಸೌಹಾರ್ದ ಸ್ನೇಹ ಹೊಂದಿದ್ದಾರೆ. ಎಲ್ಲರೊಡನೆ ಸಂಬಂಧ ಸುಧಾರಿಸುವಲ್ಲಿ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಇರಾನ್‌ಗೆ ಬಹಿರಂಗ ಬೆಂಬಲ ಸೂಚಿಸದಿದ್ದರೂ, ಭಾರತ ಮತ್ತು ಇರಾನ್ ಸಂಬಂಧ ಹಾಳಾಗದಂತೆ ನೋಡಿಕೊಳ್ಳುತ್ತಿದ್ದಾರೆ.ಇರಾನ್ ಜತೆ ನಡೆದ ಮಾತುಕತೆಯ ಪರಿಣಾಮವಾಗಿ ಅಲ್ಲಿಂದಲೂ ತೈಲ ತರಿಸುವಲ್ಲಿ ಯಶಸ್ಸು ಹೊಂದಿದ್ದಾರೆ.

ಅಮೆರಿಕಾ ಅಧ್ಯಕ್ಷ ಟ್ರಂಪ್ ಅವರ ವಿಚಿತ್ರ ವರ್ತನೆಯ ನಡುವೆಯೂ, ಮೋದಿ ಚಾಣಾಕ್ಷತೆಯಿಂದ ಎಲ್ಲವನ್ನೂ ನಿಭಾಯಿಸುವಲ್ಲಿ ಯಶಸ್ಸು ಪಡೆಯುತ್ತಿದ್ದಾರೆ. ವಿಭಿನ್ನ ದೇಶಗಳ ನಡುವಿನ ಸಂಬಂಧದಲ್ಲಿ ಸ್ಥಿರತೆ ತರುವಲ್ಲೂ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ತನ್ನ ದೂರದೃಷ್ಟಿಯಿಂದ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ ಕ್ಷಮತೆ, ಬದ್ಧತೆ, ಪ್ರಾಮಾಣಿಕತೆ ಮೋದಿಯವರಲ್ಲಿದೆ ಎಂಬುದು ಮನದಟ್ಟಾಗಿರುವುದರಿಂದ ಅವರ ಉದ್ದೇಶವನ್ನು ಯಾರೂ ಅನುಮಾನಿಸುತ್ತಿಲ್ಲ.

ಕೊಲ್ಲಿ ಸಮರ ನಿಲ್ಲಿಸುವಲ್ಲಿ, ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡುವಲ್ಲಿ ಮೋದಿಯವರು ಪ್ರಧಾನ ಪಾತ್ರ ವಹಿಸುವುದು ಒಳ್ಳೆಯದು ಎಂಬುದು ಭಾರತೀಯರ ಆಶಯ.

–ಶಂಕರನಾರಾಯಣ ಭಟ್, ಮಾಡಗೇರಿ

ಕಣ್ಗಾವಲು ಅಗತ್ಯ

ಪಡಿತರ ವ್ಯವಸ್ಥೆಯಲ್ಲಿನ ಅಕ್ರಮಗಳು ಬಡವರ ಹಸಿವಿನೊಂದಿಗೆ ನಡೆಯುತ್ತಿರುವ ಕ್ರೂರತನಕ್ಕೆ ಸಾಕ್ಷಿ. ಇದನ್ನು ತಡೆಯಲು ಅಕ್ಕಿ ಗೋದಾಮುಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಕೆ ಮತ್ತು ಸಾಗಾಣಿಕೆ ವಾಹನಗಳಿಗೆ ಜಿಪಿಎಸ್. ಅಳವಡಿಕೆ ಅತ್ಯಗತ್ಯ. ಇವು ವ್ಯವಸ್ಥಿತವಾಗಿ ಪಡಿತರ ಗೋದಾಮುಗಳಲ್ಲಿ ನಡೆಯುತ್ತಿರುವ ಮಹಾ ಲೂಟಿ ತಡೆಯಲು ಇದು ಅನಿವಾರ್ಯ.

ಸಾರ್ವಜನಿಕರ ತೆರಿಗೆ ಹಣದಲ್ಲಿ ಖರೀದಿಸಿದ ಅಕ್ಕಿ ಕಾಳಸಂತೆಗೆ ಮಾರಾಟವಾಗುತ್ತಿರುವುದು ವ್ಯವಸ್ಥೆಯ ನೈತಿಕ ಪತನಕ್ಕೆ ಸಾಕ್ಷಿ. ಕೇವಲ ಕ್ಯಾಮೆರಾ ಇಟ್ಟರೆ ಸಾಲದು, ಪ್ರತಿಯೊಂದು ಪಡಿತರ ಚೀಲಕ್ಕೂ ಆರ್‌ಎಫ್‌ಐಡಿ ಟ್ಯಾಗ್ ಅಳವಡಿಸಿ ಗೋದಾಮಿನಿಂದ ಹೊರಬಂದ ಪ್ರತಿ ಕ್ಷಣವನ್ನೂ ಟ್ರ್ಯಾಕ್ ಮಾಡಬೇಕು. ಈ ದತ್ತಾಂಶವನ್ನು ಸಾರ್ವಜನಿಕ ಡ್ಯಾಶ್‌ಬೋರ್ಡ್‌ನಲ್ಲಿ ಲಭ್ಯವಾಗುವಂತೆ ಮಾಡಿ ಡಿಜಿಟಲ್ ಆಡಿಟ್ ನಡೆಸಬೇಕು. ತಂತ್ರಜ್ಞಾನದ ಈ ಕಠಿಣ ಬೇಲಿ ಇಲ್ಲದಿದ್ದರೆ ಭ್ರಷ್ಟರ ಕೈಯಲ್ಲಿ ಸರ್ಕಾರದ ಯೋಜನೆಗಳು ಕೇವಲ ಕಾಗದದ ಮೇಲಿನ ಅಂಕಿಅಂಶಗಳಾಗಿ ಉಳಿಯುತ್ತವೆ. ಬಡವರ ಹಕ್ಕು ರಕ್ಷಿಸಲು ತಂತ್ರಜ್ಞಾನದ ಹರಿತ ಆಯುಧಗಳನ್ನು ಅಳವಡಿಸುವುದು ಅಗತ್ಯ.

–ಡಾ.ವಿಜಯಕುಮಾರ ಎಚ್.ಕೆ, ರಾಯಚೂರು

ಕುತೂಹಲವಿದೆ

''ಶಿಯಾ ಮುಸ್ಲಿಮರು ಇರಾನನ್ನು ಅಷ್ಟು ಪ್ರೀತಿಸುವವರಾದರೆ ಇರಾನಿಗೇ ಹೋಗಲಿ'' ಎಂಬುದಾಗಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಮುನೀರ್ ಇತ್ತೀಚೆಗೆ ಹೇಳಿದ್ದಾರೆ. ಇದು ಸಹಜವಾಗಿಯೇ ಅಲ್ಲಿನ ಶಿಯಾ ಮುಸ್ಲಿಮ್ ಮುಖಂಡರಿಗೆ ರೋಷ ಬರಿಸಿದೆ. ಸೌದಿ ಅರೇಬಿಯಾದೊಂದಿಗೆ ಮಾಡಿಕೊಂಡ ಮಿಲಿಟರಿ ಒಪ್ಪಂದದ ಅನ್ವಯ ಇರಾನಿನ ವಿರುದ್ಧ ದಾಳಿ ನಡೆಸಬೇಕಾದ ಅನಿವಾರ್ಯತೆಯಲ್ಲಿ ಪಾಕಿಸ್ತಾನ ಸಿಲುಕಿಕೊಂಡಿದೆ. ಅಮೆರಿಕಕ್ಕೂ ಸಹಕಾರ ನೀಡಬೇಕಾದ ಒತ್ತಡದ ಸ್ಥಿತಿ ಅದರದು. ಆದರೆ ಸ್ವದೇಶದಲ್ಲಿರುವ ಶಿಯಾ ಮುಸ್ಲಿಮರು ಇರಾನನ್ನು ಬೆಂಬಲಿಸುತ್ತಿದ್ದಾರೆ. ಪಾಕಿಸ್ತಾನವು ಅಮೆರಿಕಕ್ಕೆ ಬೆಂಬಲ ನೀಡುವುದನ್ನು ಅವರು ಒಪ್ಪುತ್ತಿಲ್ಲ. ಆದರೂ ಸೇನಾ ಮುಖ್ಯಸ್ಥರು ತಮ್ಮ ದೇಶದ ಶಿಯಾ ಮುಸ್ಲಿಮರನ್ನೇ ಎದುರು ಹಾಕಿಕೊಳ್ಳಲು ತಯಾರಾಗಿದ್ದಾರೆ.

ಇಂತಿರುವಾಗ, ಮುಸ್ಲಿಮ್ ರಾಷ್ಟ್ರಗಳೆಂಬ ಕಾರಣಕ್ಕೆ ಇರಾನ್ ಮತ್ತು ಪಾಕಿಸ್ತಾನಗಳೆರಡನ್ನೂ ಪ್ರೀತಿಸುವ ಇಲ್ಲಿನ ಕೆಲವು ಮಂದಿ ಈ ಬೆಳವಣಿಗೆಗೆ ಯಾವ ರೀತಿ ಪ್ರತಿಕ್ರಿಯಿಸುತ್ತಾರೆಂಬ ಕುತೂಹಲ ನಮಗಿದೆ. ಪ್ಯಾಲೆಸ್ತೀನ್ ಮೇಲೆ ನಡೆಯುವ ದಾಳಿಯನ್ನು ಖಂಡಿಸುವ ಇವರು, ಅಫಘಾನಿಸ್ತಾನದ ಆಸ್ಪತ್ರೆ ಮೇಲೆ ಪಾಕಿಸ್ತಾನವು ದಾಳಿ ಮಾಡಿ ನೂರಾರು ಮಂದಿ ಅಮಾಯಕರ ಸಾವಿಗೆ ಕಾರಣವಾಗಿರುವುದರ ಬಗ್ಗೆ ಸೊಲ್ಲೆತ್ತುವುದಿಲ್ಲ!

–ನವೀನ ಚಂದ್ರ , ಮೈಸೂರು

ವಿಪಕ್ಷಗಳ ವರಸೆ

ಭಾರತವು ಕೊಲ್ಲಿ ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸಬೇಕಾಗಿತ್ತು ಎಂದು ವಿರೋಧ ಪಕ್ಷಗಳು ಸರ್ವಪಕ್ಷ ಸಭೆಯಲ್ಲಿ ಆಗ್ರಹಿಸಿದ ಪ್ರಸಂಗ ನಡೆದಿದೆ. ಪಾಕಿಸ್ತಾನವನ್ನು ನೋಡಿ ಕಲಿಯಿರಿ ಎಂಬಂತಹ ಉಪದೇಶವೂ ಸಿಕ್ಕಿದೆ. ಅದಕ್ಕೆ ವಿದೇಶಾಂಗ ಸಚಿವ ಜೈಶಂಕರ್‌ರವರು ''ಮಧ್ಯಸ್ಥಿಕೆ ವಹಿಸಲು ಭಾರತವು ದಲ್ಲಾಳಿ ರಾಷ್ಟ್ರವಲ್ಲ'' ಎಂದು ಸೂಕ್ತ ಉತ್ತರವನ್ನೆ ನೀಡಿದ್ದಾರೆ.

ಒಂದು ವೇಳೆ ನಿಜವಾಗಿಯೂ ಭಾರತವು ಮಧ್ಯಸ್ಥಿಕೆ ವಹಿಸಲು ಮುಂದಾಗಿದ್ದರೆ ಇದೇ ವಿರೋಧ ಪಕ್ಷಗಳ ಪ್ರತಿಕ್ರಿಯೆ ಹೇಗಿರುತ್ತಿತ್ತು? ಆಗ ಅವುಗಳ ವರಸೆಯೇ ಬದಲಾಗುತ್ತಿತ್ತು. ಭಾರತಕ್ಕೆ ಇಂತಹ ಉಸಾಬರಿ ಏಕೆ ಬೇಕು, ಭಾರತದ ವಿದೇಶಾಂಗ ನೀತಿಯೇ ಸರಿಯಿಲ್ಲ ಎಂದು ಟೀಕಿಸುತ್ತಿದ್ದವೇನೋ. ಮಧ್ಯಸ್ಥಿಕೆ ವಹಿಸಲು ಮುಂದಾಗಿ ಅದು ಸಫಲವಾಗದಿದ್ದರಂತೂ 'ಮೋದಿಯವರು ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ವಹಿಸಲು ಅಸಮರ್ಥರು, ಆದ್ದರಿಂದ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸುತ್ತಿದ್ದುದು ಖಂಡಿತ.

–ಶೈಲೇಶ್ ಆಚಾರ್ಯ , ಉಡುಪಿ

ಭಾರತ ಸೇರಿ 5 ದೇಶಕ್ಕೆ ಹಾರ್ಮುಜ್ ಮುಕ್ತ

ಮಿತ್ರರಿಗೆ ಮಾತ್ರ ಜಲಸಂಧಿ ಮೂಲಕ ಸಂಚಾರಕ್ಕೆ ಇರಾನ್ ಅನುಮತಿ

ಶತ್ರುರಾಷ್ಟ್ರಗಳಿಗೆ ನಿರ್ಬಂಧ



• ಟೆಹ್ರಾನ್: ಆಯಕಟ್ಟಿನ ಹಾರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಹಡಗುಗಳ ಸಂಚಾರ ನಡೆಸಲು ಭಾರತ ಸೇರಿದಂತೆ ಐದು ರಾಷ್ಟ್ರಗಳಿಗೆ ಇರಾನ್ ಸರ್ಕಾರ ಅನುಮತಿ ನೀಡಿದೆ.

ಚೀನಾ, ರಷ್ಯಾ, ಭಾರತ, ಇರಾಕ್ ಮತ್ತು ಪಾಕಿಸ್ತಾನ ದೇಶಗಳಿಗೆ ಈ ಜಲಸಂಧಿಯ ಮೂಲಕ ಸಂಚರಿಸಲು ಅವಕಾಶ ನೀಡಲಾಗಿದೆ ಎಂದು ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಘೋಷಿಸಿದ್ದಾರೆ. ಇರಾನ್ ಸರ್ಕಾರ ಈ ರಾಷ್ಟ್ರಗಳನ್ನು 'ಸ್ನೇಹಿ ರಾಷ್ಟ್ರಗಳು' ಎಂದು ವರ್ಗೀಕರಿಸಿದೆ. ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಗಲ್ಫ್ ನಡುವಿನ ಈ ಕಿರಿದಾದ ಸಮುದ್ರ ಮಾರ್ಗವನ್ನು ಇರಾನ್ ನಿರ್ಬಂಧಿಸಿದ ಬೆನ್ನಲ್ಲೇ ಜಾಗತಿಕ ತೈಲ ಮತ್ತು ಅನಿಲ ಬೆಲೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ಜಾಗತಿಕ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ (ಎಲ್ಎನ್‌ಜಿ) ಶೇ.20 ರಷ್ಟು ವಹಿವಾಟು ಈ ಮಾರ್ಗದ ಮೂಲಕವೇ ನಡೆಯುತ್ತದೆ.

ಸಂಚಾರ ನಿರ್ಬಂಧಗಳು: ಇರಾನ್‌ನ ವಿರೋಧಿ ರಾಷ್ಟ್ರಗಳು ಅಥವಾ ಅವುಗಳ ಮಿತ್ರರಾಷ್ಟ್ರಗಳಿಗೆ ಸೇರಿದ ಹಡಗುಗಳ ಸಂಚಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಪ್ರಸ್ತುತ ಈ ಪ್ರದೇಶವನ್ನು ಯುದ್ಧ ವಲಯವೆಂದು ಘೋಷಿಸಲಾಗಿದ್ದು, ಯುದ್ಧದ ಸಂದರ್ಭದಲ್ಲಿ ಶತ್ರು ಹಡಗುಗಳಿಗೆ ಸಂಚಾರಕ್ಕೆ ಅವಕಾಶ ನೀಡಲು ಯಾವುದೇ ಕಾರಣವಿಲ್ಲ ,ಎಂದು ಸ್ಪಷ್ಟಪಡಿಸಲಾಗಿದೆ.

ರಾಜತಾಂತ್ರಿಕ ಹಿನ್ನೆಲೆ: ವಾಣಿಜ್ಯ ಹಡಗುಗಳ ಸಂಚಾರಕ್ಕೆ ಅಡ್ಡಿಯುಂಟಾಗಿರುವುದು ಜಾಗತಿಕ ಕಳವಳಕ್ಕೆ ಕಾರಣವಾಗಿದೆ. ಈ ಜಲಸಂಧಿಯನ್ನು ಪೂರ್ಣವಾಗಿ ಮುಕ್ತಗೊಳಿಸದಿದ್ದರೆ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಪಶ್ಚಿಮ ಏಷ್ಯಾದ ಸಂಘರ್ಷವನ್ನು ಶೀಘ್ರವಾಗಿ ಅಂತ್ಯಗೊಳಿಸಲು ಮತ್ತು ಇಂಧನ ಪೂರೈಕೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಲು ಭಾರತ ರಾಜತಾಂತ್ರಿಕ ಪ್ರಯತ್ನಗಳನ್ನು ನಡೆಸುತ್ತಿದೆ.

ಆರ್ಥಿಕ ಪರಿಣಾಮ: ದಕ್ಷಿಣ ಏಷ್ಯಾದ ಮಾರುಕಟ್ಟೆಗಳ ಮೇಲೆ ಈ ಬೆಳವಣಿಗೆ ಮಿಶ್ರ ಪರಿಣಾಮ ಬೀರಲಿದೆ. ಭಾರತ ಮತ್ತು ಪಾಕಿಸ್ತಾನಕ್ಕೆ ಇಂಧನ ಪೂರೈಕೆ ಸುಗಮವಾಗುವುದರಿಂದ ಮಾರುಕಟ್ಟೆಯಲ್ಲಿ ಸ್ಥಿರತೆ ನಿರೀಕ್ಷಿಸಬಹುದು. ಆದರೆ, ಇತರ ರಾಷ್ಟ್ರಗಳಿಗೆ ನಿರ್ಬಂಧ ಮುಂದುವರಿದಿರುವುದರಿಂದ ಜಾಗತಿಕ ತೈಲ ಬೆಲೆ ಏರಿಕೆ ಮತ್ತು ಪೂರೈಕೆ ಸರಪಳಿಯ ವ್ಯತ್ಯಯ ಈ ವಲಯದ ಆಮದು ವೆಚ್ಚವನ್ನು ಹೆಚ್ಚಿಸಿ, ಹಣದುಬ್ಬರಕ್ಕೆ ಕಾರಣವಾಗುವ ಭೀತಿ ಇದೆ.

ಯುದ್ಧ ತೀವ್ರಗೊಳಿಸಿದರೆ ಬಾಬ್ ಜಲಸಂಧಿ ಬಂದ್!

ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಇರಾನ್‌ನ ಖರ್ಗ್ ಸೇರಿದಂತೆ ವಿವಿಧ ದ್ವೀಪಗಳ ಮೇಲೆ ದಾಳಿ ನಡೆಸಿ ಯುದ್ಧವನ್ನು ತೀವ್ರಗೊಳಿಸಿದರೆ ಸೂಯೆಜ್ ಕಾಲುವೆಗೆ ಸಂಪರ್ಕ ಕಲ್ಪಿಸುವ ಬಾಬ್ ಅಲ್-ಮಾಂಡೆಬ್ ಜಲಸಂಧಿಯನ್ನು ಬಂದ್ ಮಾಡುವುದಾಗಿ ಇರಾನ್ ಎಚ್ಚರಿಸಿದೆ.

ವಿಶ್ವದ ನಾಲ್ಕನೇ ಅತಿದೊಡ್ಡ ಹಡಗು ಮಾರ್ಗವೆಂದು ಗುರುತಿಸಲ್ಪಟ್ಟಿರುವ ಬಾಬ್ ಅಲ್-ಮಾಂಡೆಬ್ ಮೂಲಕ ಜಾಗತಿಕ ಸಮುದ್ರಯಾನದ ಶೇ.12 ರಷ್ಟು ತೈಲ ಸರಬರಾಜು ನಡೆಯುತ್ತದೆ. ಕೆಂಪು ಸಮುದ್ರ ಮತ್ತು ಏಡನ್ ಕೊಲ್ಲಿಯನ್ನು ಸಂಪರ್ಕಿಸುವ ಈ ಮಾರ್ಗದಲ್ಲಿ ಅಡಚಣೆಯುಂಟಾದರೆ ಜಾಗತಿಕ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ, ಎಂದು ಅಂದಾಜಿಸಲಾಗಿದೆ.

ಹೌತಿ ಬಂಡುಕೋರರ ಬೆಂಬಲ :
ಅರೇಬಿಯನ್ ಪರ್ಯಾಯ ದ್ವೀಪದ ದಕ್ಷಿಣ ತುದಿಯಲ್ಲಿರುವ ಬಾಬ್ ಅಲ್-ಮಾಂಡೆಬ್ ಜಲಸಂಧಿಯನ್ನು ನಿಯಂತ್ರಿಸಲು ಯೆಮನ್ ಮೂಲದ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಸಂಪೂರ್ಣ ಸಿದ್ಧತೆ ನಡೆಸಿದ್ದಾರೆ. 2023 ರ ಅಕ್ಟೋಬರ್‌ನಲ್ಲಿ ಇಸ್ರೇಲ್ ಮತ್ತು ಗಾಜಾ ಸಂಘರ್ಷದ ಸಮಯದಲ್ಲಿ ಹೌತಿ ಪಡೆಗಳು ಹಡಗುಗಳ ಮೇಲೆ ದಾಳಿ ನಡೆಸುವ ಮೂಲಕ ಕೆಂಪು ಸಮುದ್ರದ ಸಂಚಾರ ನಿಯಂತ್ರಿಸಿದ್ದವು. ಇರಾನ್‌ನ ಖರ್ಗ್ ದ್ವೀಪವನ್ನು ವಶಪಡಿಸಿಕೊಳ್ಳಲು ಶತ್ರು ರಾಷ್ಟ್ರಗಳು ಪ್ರಯತ್ನಿಸಿದರೆ ಆ ದೇಶದ ಪ್ರಮುಖ ಮೂಲಸೌಕರ್ಯಗಳ ಮೇಲೆ ನಿರಂತರ ದಾಳಿ ನಡೆಸಲಾಗುವುದು, ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ತಿಳಿಸಿದ್ದಾರೆ.

ಅಮೆರಿಕ ಇಸ್ರೇಲ್‌ಗೆ ಇರಾನ್ ಎಚ್ಚರಿಕೆ



2 ತಿಂಗಳಿಗಾಗುವಷ್ಟು ಇಂಧನ ಇದೆ

• ಹೊಸದಿಲ್ಲಿ : 60 ದಿನಗಳಿಗೆ ಬೇಕಾಗುವಷ್ಟು ಇಂಧನ ದಾಸ್ತಾನು ಭಾರತದ ಬಳಿ ಇದೆ. ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆಯೇ ಇಲ್ಲ ಎಂದು ಘೋಷಿಸಿರುವ ಕೇಂದ್ರ ಸರ್ಕಾರ, ಜನರು ಆತಂಕದಿಂದ ಖರೀದಿಗೆ ಮುಗಿಬೀಳುವಂತೆ ಮಾಡಲು, ಉದ್ದೇಶಪೂರ್ವಕವಾಗಿ ಕೊರತೆಯ ತಪ್ಪು ಮಾಹಿತಿಯನ್ನು ಹರಡಲಾಗುತ್ತಿದೆ ಎಂದು ವಿಶದಪಡಿಸಿದೆ. ಅಂತೆಯೇ 8 ಲಕ್ಷ ಟನ್ ಎಲ್‌ಪಿಜಿ ಸಂಗ್ರಹವಿದೆ ಎಂದು ಕೇಂದ್ರ ಹೇಳಿದೆ.

ದೇಶದ ಎಲ್ಲಾ ಪೆಟ್ರೋಲ್ ಪಂಪ್‌ಗಳಲ್ಲೂ ಪೆಟ್ರೋಲ್ ,ಡೀಸೆಲ್ ದಾಸ್ತಾನು ಸಾಕಷ್ಟಿದ್ದು, ಇವು ಎಂದಿನಂತೆ ಸಹಜವಾಗಿ ಕಾರ್ಯತತ್ಪರವಾಗಿವೆ. ಪೆಟ್ರೋಲ್‌ಗಾಗಿ ಕ್ಯೂ ನಿಲ್ಲೋ ಅಗತ್ಯವೇ ಇಲ್ಲ. ಜಗತ್ತಿನ ಚತುರ್ಥ ಬೃಹತ್ ರಿಫೈನರಿಯಾಗಿರುವ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಪಂಚಮ ಬೃಹತ್ ರಫ್ತುದಾರ ರಾಷ್ಟ್ರವಾಗಿರುವ ಭಾರತ , ದೇಶೀಯವಾಗಿ ಇಂಧನಗಳ ಸಾಕಷ್ಟು ಲಭ್ಯತೆ ಬಗ್ಗೆ ಕ್ರಮಬದ್ಧ ಆಶ್ವಾಸನೆ ನೀಡಿದೆ. ಸಂಸ್ಕರಿತ ಇಂಧನಗಳನ್ನು ಮುಂದೆಯೂ 150ಕ್ಕೂ ಅಧಿಕ ರಾಷ್ಟ್ರಗಳಿಗೆ ಪೂರೈಸಲಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ಕಚ್ಚಾತೈಲವನ್ನು ಪೆಟ್ರೋಲ್, ಡೀಸೆಲ್‌ಗಳಾಗಿ ಪರಿವರ್ತಿಸುವ ಪ್ರತಿಯೊಂದು ಭಾರತೀಯ ರಿಫೈನರಿಗಳು ಶೇ.100 ಮೀರಿ ಬಳಕೆ ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಮುಂದಿನ 60ದಿನಗಳವರೆಗೂ ಕಚ್ಚಾತೈಲ ಪೂರೈಕೆಗೆ ಭಾರತೀಯ ತೈಲ ಕಂಪನಿಗಳು ಸಮ್ಮತಿಸಿವೆ. ಹಾಗಾಗಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿಲ್ಲ . ಭಾರತವು 74ದಿನಗಳಿಗೆ ಸಾಕಾಗುವಷ್ಟು ಒಟ್ಟು ಕಚ್ಚಾತೈಲ ಮತ್ತು ಇಂಧನ ದಾಸ್ತಾನು ಸಾಮರ್ಥ್ಯ ಹೊಂದಿದೆ.

ಕಚ್ಚಾತೈಲ ಪೂರೈಕೆಗೆ ಯಾವುದೇ ಸಮಸ್ಯೆಯಿಲ್ಲ ;ಮಧ್ಯಪ್ರಾಚ್ಯ ಬಿಕ್ಕಟ್ಟಿಗೀಗ 27ನೇ ದಿನ ತುಂಬಿದರೂ, ಭಾರತದಲ್ಲಿ ಕಚ್ಚಾತೈಲ ದಾಸ್ತಾನು, ಉತ್ಪನ್ನಗಳ ದಾಸ್ತಾನು ಸಹಿತ 60ದಿನಗಳಿಗೆ ಬೇಕಾಗುವಷ್ಟು ದಾಸ್ತಾನಿದೆ. ಜಾಗತಿಕವಾಗಿ ಏನೇ ಸಂಭವಿಸಿದರೂ ದೇಶದ ಪ್ರತಿಯೋರ್ವ ನಾಗರಿಕನಿಗೂ ಸತತ ಎರಡು ತಿಂಗಳ ಕಾಲ ನಿರಂತರ ಇಂಧನ ಪೂರೈಸಲು ದೇಶ ಶಕ್ತವಿದೆ. ಎರಡು ತಿಂಗಳಿಗೆ ಅಗತ್ಯ ಕಚ್ಚಾತೈಲ ದಾಸ್ತಾನು ಬಗ್ಗೆ ತುಂಬು ಖಾತರಿಯಿರುವಂತೆ, ಮುಂದಿನ ಹಲವು ತಿಂಗಳ ಕಾಲವೂ ಕಚ್ಚಾತೈಲ ಪೂರೈಕೆ ವಿಚಾರದಲ್ಲಿ ದೇಶವು ಸಂಪೂರ್ಣ ಸುಸ್ಥಿರ ಸ್ಥಿತಿಯಲ್ಲಿದೆ.



ಎಲ್‌ಪಿಜಿ ಪೂರೈಕೆ ಕೂಡ ಬಾಧಿತ: ಹೋರ್ಮುಜ್ ಜಲಸಂಧಿಯಲ್ಲಿನ ಉದ್ವಿಗ್ನತೆಗಳ ಹೊರತೂ, ಕಚ್ಚಾತೈಲ ಪೂರೈಕೆ ಸ್ಥಿರವಾಗಿದೆ. ಬದಲಿ ಮೂಲಗಳಿಂದ ಅತ್ಯಧಿಕ ಪ್ರಮಾಣದಲ್ಲಿ ಸರಬರಾಜಾಗುತ್ತಿರುವ ಕಚ್ಚಾತೈಲಗಳಿಂದಾಗಿ ಸಮಸ್ಯೆಯಾಗಿಲ್ಲ. ಭಾರತದ ರಿಫೈನರಿಗಳು ತಮ್ಮ ಸಂಪೂರ್ಣ ಸಾಮರ್ಥ್ಯ ಮೀರಿ ಕಾರ್ಯತತ್ಪರವಾಗಿವೆ. ಮುಂದಿನ 60ದಿನಗಳಿಗೆ ಅಗತ್ಯ ಕಚ್ಚಾತೈಲ ಪೂರೈಕೆಗೆ ಯಾವುದೇ ತೊಂದರೆಯಿಲ್ಲ. ದೇಶದಲ್ಲಿ ಎಲ್‌ಪಿಜಿ ಪೂರೈಕೆ ಕೂಡ ಧಾರಾಳ ಸ್ಥಿತಿಯಲ್ಲಿದೆ. ದೇಶೀಯವಾಗಿ ಅನಿಲೋತ್ಪಾದನೆ ಹೆಚ್ಚಿರುವ ಕಾರಣ ಆಮದು ಅನಿವಾರ್ಯತೆ ಕುಗ್ಗಿದೆ. ಬೇರೆ ಬೇರೆ ದೇಶಗಳಿಂದ ಹೆಚ್ಚುವರಿ ಅನಿಲ ಸರಕುಗಳನ್ನು ಸರಕಾರ ತರಿಸಿಕೊಂಡಿದ್ದು, ಜನರಿಗೆ ನಿರಂತರವಾಗಿ ಎಲ್‌ಪಿಜಿ ಲಭಿಸಲಿದೆ.

ಜನರನ್ನು ಅನಗತ್ಯವಾಗಿ ಆತಂಕಕ್ಕೊಡ್ಡಲು ಕಚ್ಚಾತೈಲ, ಇಂಧನ ,ಅನಿಲ ಕೊರತೆಯ ತಪ್ಪು ಮಾಹಿತಿ ಮತ್ತು ತಿರುಚಿದ ಮಾಹಿತಿಗಳನ್ನು ಜಾಲತಾಣಗಳಲ್ಲಿ ಹರಿಯಬಿಡಲಾಗುತ್ತಿದೆ. ಇದರ ಹಿಂದಿರುವವರನ್ನು ಬಿಡದೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸರಕಾರ ಎಚ್ಚರಿಸಿದೆ.

ಇರಾನ್ ನೌಕಾಪಡೆ ಮುಖ್ಯಸ್ಥನ ಹತ್ಯೆ

ಹಾರ್ಮುಜ್ ಜಲಸಂಧಿ ಮುಚ್ಚಿಸಿದ್ದ ಪ್ರಮುಖ ಅಧಿಕಾರಿಯಾಗಿದ್ದ ಇರಾನಿನ ರೆವಲ್ಯೂಷನರಿ ಗಾರ್ಡ್‌ನ ನೌಕಾಪಡೆ ಮುಖ್ಯಸ್ಥ ಕಮೋಡರ್ ಅಲಿರೇಜಾ ಟ್ಯಾಂಗ್ಸಿರಿಯನ್ನು ಕೊಂದಿರುವುದಾಗಿ ಇಸ್ರೇಲ್ ಗುರುವಾರ ಹೇಳಿದೆ. ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಅವರು ಇತರ ಹಿರಿಯ ನೌಕಾ ಕಮಾಂಡರ್‌ಗಳೊಂದಿಗೆ ರಾತ್ರೋರಾತ್ರಿ ದಾಳಿಯಲ್ಲಿ ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಟ್ಯಾಂಗ್ಸಿರಿಯ ಹತ್ಯೆ ಬಗ್ಗೆ ಇನ್ನೂ ಇರಾನ್ ಕಡೆಯಿಂದ ಯಾವುದೇ ಸ್ಪಷ್ಟನೆ ಇಲ್ಲ.

ಅಬುಧಾಬಿಯಲ್ಲಿ ಭಾರತೀಯ ಸಾವು

ಕ್ಷಿಪಣಿಯ ಅವಶೇಷಗಳು ಬಿದ್ದ ಪರಿಣಾಮ ಇರಾನ್ ದಾಳಿ ನಡುವೆ ಯುಎಇ ರಾಜಧಾನಿ ಅಬುಧಾಬಿಯ ರಸ್ತೆಯೊಂದರಲ್ಲಿ ಭಾರತೀಯ ಪ್ರಜೆ ಸೇರಿದಂತೆ ಇಬ್ಬರು ಮೃತಪಟ್ಟಿದ್ದು, ಘಟನೆಯಲ್ಲಿ ಮೂವರು ಗಾಯಗೊಂಡಿದ್ದಾರೆ. ಯುನೈಟೆಡ್ ಅರಬ್ ಎಮಿರೇಟ್ಸ್ ರಕ್ಷಣಾ ಸಚಿವಾಲಯವು ಇರಾನ್‌ನಿಂದ ನಿರಂತರ ವೈಮಾನಿಕ ಬೆದರಿಕೆಗಳಿಗೆ ಪ್ರತಿಕ್ರಿಯಿಸುವುದನ್ನು ಮುಂದುವರೆಸಿದೆ. ಹೀಗಾಗಿ ಕ್ಷಿಪಣಿ ಅವಶೇಷಗಳು ಬಿದ್ದು ಈ ದುರಂತ ಸಂಭವಿಸಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಲ್ಲಿ ಭಾರತೀಯ ಪ್ರಜೆಗಳ ಸಾವಿನ ಸಂಖ್ಯೆ ಈಗ ಏಳಕ್ಕೆ ಏರಿದೆ.

ಕಿರು ಸುದ್ದಿ

ಜಿ7 ಶೃಂಗಸಭೆ: ಮೋದಿ ಭಾಗಿ

• ಹೊಸದಿಲ್ಲಿ: ಜೂ.15ರಿಂದ 17ರವರೆಗೆ ಫ್ರಾನ್ಸ್ ಆತಿಥ್ಯ ವಹಿಸಲಿರುವ ಮುಂಬರುವ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಯುರೋಪ್ ಮತ್ತು ವಿದೇಶಾಂಗ ವ್ಯವಹಾರಗಳ ಫ್ರೆಂಚ್ ಸಚಿವ ಜೀನ್-ನೊಯೆಲ್ ಬ್ಯಾರೋಟ್ ಅವರು ಅಬ್ಬಾಯೆ ಡೆಸ್ ವಾಕ್ಸ್-ಡಿ-ಸೆರ್ನೆಯಲ್ಲಿ ನಡೆದ ಜಿ7 ವಿದೇಶಾಂಗ ಸಚಿವರ ಸಭೆಯ ಸಂದರ್ಭದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದ ಬೆನ್ನಲ್ಲೇ ಈ ಮಾಹಿತಿ ಬಹಿರಂಗಗೊಂಡಿದೆ.

6 ನಕ್ಸಲರ ಶರಣಾಗತಿ

• ಕಾಂಕೇರ್: ಛತ್ತೀಸ್‌ಗಢದ ಕಾಂಕೇರ್ ಜಿಲ್ಲೆಯಲ್ಲಿ ಆರು ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ. ಇತ್ತೀಚೆಗೆ ಈ ನಕ್ಸಲರು ಮುಖ್ಯವಾಹಿನಿಗೆ ಸೇರುವುದಾಗಿ ಶರಣಾಗುವುದಾಗಿ ಹೇಳಿಕೊಂಡಿದ್ದರು ಎಂದು ಕಾಂಕೇರ್ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ರಾಖೇಚಾ ತಿಳಿಸಿದ್ದಾರೆ. ಸೆಲ್ಫ್ ಲೋಡೆಡ್ ರೈಫಲ್ ಮತ್ತು ಎರಡು 3.3 ರೈಫಲ್‌ಗಳನ್ನು ಶರಣಾದ ನಕ್ಸಲರು ಪೊಲೀಸರ ಮುಂದೆ ಒಪ್ಪಿಸಿದ್ದಾರೆ. ಈ ಪ್ರದೇಶದ ಇತರ ಸಕ್ರಿಯ ಕಾರ್ಯಕರ್ತರೊಂದಿಗೆ ಸಂಪರ್ಕವನ್ನು ಸ್ಥಾಪಿಸಲು ಮತ್ತು ಹಿಂಸಾಚಾರವನ್ನು ತ್ಯಜಿಸಲು ಮತ್ತು ಮುಖ್ಯವಾಹಿನಿಗೆ ಸೇರಲು ಅವರನ್ನು ಪ್ರೋತ್ಸಾಹಿಸಲು ಪ್ರಯತ್ನಗಳು ನಡೆಯುತ್ತಿವೆ.

ಗಣತಿ: ಕರ್ತವ್ಯ ಲೋಪಕ್ಕೆ ಮೂರು ವರ್ಷ ಜೈಲು ಶಿಕ್ಷೆ

• ಹೊಸದಿಲ್ಲಿ: ದೇಶದ ಬಹು ಮಹತ್ವದ ಜನಗಣತಿ 2027 ಶೀಘ್ರ ಆರಂಭವಾಗಲಿದ್ದು, ಇದಕ್ಕೂ ಮುನ್ನ ಗಣತಿದಾರರು ಪಾಲಿಸಬೇಕಾದ ಕಟ್ಟುನಿಟ್ಟಿನ ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಕರ್ತವ್ಯ ಲೋಪ, ಅಸಭ್ಯ ವರ್ತನೆ ಅಥವಾ ದಾಖಲೆಗಳ ದುರುಪಯೋಗ ಕಂಡುಬಂದರೆ ಗರಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ಹಾಗೂ 1,000 ರೂ. ದಂಡ ವಿಧಿಸಲಾಗುವುದಾಗಿ ಎಚ್ಚರಿಕೆ ನೀಡಲಾಗಿದೆ. ಭಾರತದ ರಿಜಿಸ್ಟ್ರಾರ್ ಜನರಲ್ ಮೃತ್ಯುಂಜಯ ಕುಮಾರ್ ನಾರಾಯಣ್ ಅವರು ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನೀಡಿರುವ ನಿರ್ದೇಶನದಲ್ಲಿ ಗಣತಿಗಾರರ ಕರ್ತವ್ಯಗಳನ್ನು ವಿವರವಾಗಿ ಸೂಚಿಸಲಾಗಿದೆ. ಮನೆಗಳು ಬೀಗ ಹಾಕಿದ್ದರೂ ಒಂದೇ ಸಲ ಭೇಟಿ ನೀಡಿ ಹಿಂತಿರುಗದೆ, ಅಗತ್ಯವಿದ್ದರೆ ಹಲವು ಬಾರಿ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಜತೆಗೆ, ಮನೆಮನೆಗೆ ಭೇಟಿ ನೀಡುವ ವೇಳೆ ಸೌಜನ್ಯಪೂರ್ಣ ವರ್ತನೆ ಕಡ್ಡಾಯ ಎಂದು ಒತ್ತಿ ಹೇಳಲಾಗಿದೆ. ನಿರ್ದೇಶನದ ಪ್ರಕಾರ, ಪ್ರತಿಯೊಂದು ಕಟ್ಟಡಕ್ಕೂ ಸಂಖ್ಯೆ ನೀಡುವುದು, ಪ್ರತಿಯೊಂದು ಮನೆಗೂ ಗಣತಿ ಸಂಖ್ಯೆ ಗುರುತಿಸುವುದು, ಲೇಔಟ್ ನಕ್ಷೆಯಲ್ಲಿ ಪ್ರಮುಖ ಗುರುತುಗಳನ್ನು ದಾಖಲಿಸುವುದು, ಹಾಗೂ ಗುರುತಿನ ಚೀಟಿ ಮತ್ತು ನೇಮಕಾತಿ ಪತ್ರವನ್ನು ಹೊತ್ತಿರಬೇಕು ಎಂಬ ನಿಯಮಗಳಿವೆ. ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವಾಗ ಮೊಬೈಲ್ ಆ್ಯಪ್‌ನಲ್ಲಿ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ದಾಖಲಿಸುವುದು ಕಡ್ಡಾಯವಾಗಿದೆ. ಜನಗಣತಿ ಕಾಯ್ದೆ, 1948ರ ಸೆಕ್ಷನ್ 11 ಅನ್ವಯದಲ್ಲಿ, ಕರ್ತವ್ಯ ನಿರಾಕರಣೆ, ಅಸಭ್ಯ ಪ್ರಶ್ನೆಗಳು, ಅಥವಾ ಗಣತಿ ದಾಖಲೆಗಳನ್ನು ಹಾನಿಗೊಳಿಸುವುದು, ಅಡಗಿಸುವುದು ಅಥವಾ ತಿದ್ದುಪಡಿ ಮಾಡುವಂತಹ ಕೃತ್ಯಗಳಿಗೆ ಶಿಕ್ಷೆ ವಿಧಿಸಲಾಗುತ್ತದೆ.

ಐಸಿಸ್, ಅಲ್-ಖೈದಾ ನಂಟು: 12 ಮಂದಿ ಸೆರೆ

• ವಿಜಯವಾಡ: ಆಂಧ್ರಪ್ರದೇಶ ಪೊಲೀಸರು ನಡೆಸಿದ ಸಂಘಟಿತ ಕಾರ್ಯಾಚರಣೆಯಲ್ಲಿ ಐಸಿಸ್ ಮತ್ತು ಅಲ್-ಖೈದಾ ಸೇರಿದಂತೆ ನಿಷೇಧಿತ ಉಗ್ರಗಾಮಿ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ಶಂಕೆಯ ಮೇಲೆ 12 ಮಂದಿಯನ್ನು ಬಂಧಿಸಲಾಗಿದೆ. ಬಿಹಾರ, ದಿಲ್ಲಿ, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ಥಾನಗಳಲ್ಲಿ ವಿಶೇಷ ತಂಡಗಳನ್ನು ನಿಯೋಜಿಸಿ ಈ ಬಂಧನ ಪ್ರಕ್ರಿಯೆ ನಡೆಸಲಾಗಿದೆ. ಆಂಧ್ರಪ್ರದೇಶದ ವಿಜಯವಾಡದ ನಿವಾಸಿಗಳಾದ ಮೊಹಮ್ಮದ್ ರಹಮತುಲ್ಲಾ ಷರೀಫ್, ಮಿರ್ಜಾ ಸೊಹೈಲ್ ಬೇಗ್ ಮತ್ತು ಮೊಹಮ್ಮದ್ ಡ್ಯಾನಿಶ್ ಎಂಬುವವರನ್ನು ಬಂಧಿಸಲಾಗಿದೆ. ಬಂಧಿತರು ಉಗ್ರಗಾಮಿ ಸಿದ್ಧಾಂತಗಳನ್ನು ಪ್ರಚಾರ ಮಾಡುವ ಮತ್ತು ನಿಷೇಧಿತ ಸಂಘಟನೆಗಳ ಚಟುವಟಿಕೆಗಳನ್ನು ಸಂಯೋಜಿಸುವ ಆರೋಪ ಎದುರಿಸುತ್ತಿದ್ದಾರೆ. ಆರೋಪಿಗಳು 'ಅಲ್ ಮಲಿಕ್ ಇಸ್ಲಾಮಿಕ್ ಯೂತ್" ಎಂಬ ಗುಂಪನ್ನು ರಚಿಸಿಕೊಂಡು ಯುವಕರನ್ನು ಉಗ್ರಗಾಮಿ ಸಿದ್ಧಾಂತಕ್ಕೆ ಪ್ರೇರೇಪಿಸುತ್ತಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ. ಬಂಧಿತರು ಅಲ್-ಖೈದಾ (ಎಕ್ಯುಐಎಸ್) ಮತ್ತು ಐಸಿಸ್ ಸಂಘಟನೆಗಳ ವಿದೇಶಿ ಹ್ಯಾಂಡ್ಲರ್‌ಗಳ ಸೂಚನೆಯಂತೆ ಕಾರ್ಯನಿರ್ವಹಿಸುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ರಾಷ್ಟ್ರಧ್ವಜವನ್ನು ಅವಮಾನಿಸುವುದು ಮತ್ತು ಉಗ್ರಗಾಮಿ ಪರ ವೀಡಿಯೊಗಳನ್ನು ಹಂಚಿಕೊಳ್ಳುವ ಮೂಲಕ ಯುವಕರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದರು. ಶಂಕಿತರು ಮುಂದಿನ ಒಂದು ತಿಂಗಳೊಳಗೆ ತರಬೇತಿಗಾಗಿ ಪಾಕಿಸ್ತಾನಕ್ಕೆ ಪ್ರಯಾಣಿಸಲು ಸಿದ್ಧತೆ ನಡೆಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಾರ ಮೌಲ್ಯದ ಅಕ್ರಮ ವಸ್ತು ವಶ

• ಹೊಸದಿಲ್ಲಿ: ಕಳೆದ ಒಂದು ತಿಂಗಳ ಅವಧಿಯಲ್ಲಿ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಮತದಾರರ ಮೇಲೆ ಪ್ರಭಾವ ಬೀರಲು ಸಂಗ್ರಹಿಸಲಾಗಿದ್ದ 408 ಕೋಟಿ ರೂ.ಗೂ ಅಧಿಕ ಮೌಲ್ಯದ ಅಕ್ರಮ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ಗುರುವಾರ ತಿಳಿಸಿದೆ. ವಶಪಡಿಸಿಕೊಂಡ ವಸ್ತುಗಳಲ್ಲಿ 17.44 ಕೋಟಿ ರೂ. ನಗದು, 37.68 ಕೋಟಿ ರೂ. ಮೌಲ್ಯದ ಮದ್ಯ ಮತ್ತು 167.38 ಕೋಟಿ ರೂ. ಮೌಲ್ಯದ ಡ್ರಗ್ಸ್ ಸೇರಿವೆ. ಫೆ.26ರಂದು ಎಲೆಕ್ಟ್ರಾನಿಕ್ ಸೀಜರ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಸಕ್ರಿಯಗೊಳಿಸಿದ ನಂತರ ಜಾರಿ ಸಂಸ್ಥೆಗಳು 23 ಕೋಟಿ ರೂ. ಮೌಲ್ಯದ ಬೆಲೆಬಾಳುವ ಲೋಹಗಳು ಮತ್ತು 163.30 ಕೋಟಿ ರೂ. ಮೌಲ್ಯದ ಉಚಿತ ಉಡುಗೊರೆಗಳನ್ನು ಜಪ್ತಿ ಮಾಡಿವೆ. ಸಿವಿಜಿಲ್ ಅಪ್ಲಿಕೇಶನ್ ಮೂಲಕ ಮಾರ್ಚ್ 15 ರಿಂದ 25 ರ ನಡುವೆ 70,944 ದೂರುಗಳು ದಾಖಲಾಗಿವೆ. ಈ ಪೈಕಿ ಶೇ.95.8ರಷ್ಟು ದೂರುಗಳನ್ನು ಅಧಿಕಾರಿಗಳು 100 ನಿಮಿಷಗಳ ಒಳಗಾಗಿ ಪರಿಹರಿಸಿದ್ದಾರೆ. ಸಾರ್ವಜನಿಕರು 1950 ಸಹಾಯವಾಣಿ ಸಂಖ್ಯೆಯ ಮೂಲಕವೂ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ಆಯೋಗ ತಿಳಿಸಿದೆ.

ತಪಾಸಣೆಯ ವೇಳೆ ಸಾಮಾನ್ಯ ನಾಗರಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಜಿಲ್ಲಾ ಕುಂದುಕೊರತೆ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಪುದುಚೇರಿ ಮತ್ತು ಕೇರಳದಲ್ಲಿ ಮುಂದಿನ ತಿಂಗಳು ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಮಾರ್ಚ್ 15 ರಂದು ಅಧಿಕೃತವಾಗಿ ಘೋಷಣೆಯಾಗಿದೆ.

ಸೂರ್ಯ ಮಂದಿರದ ಮೇಲೆ ಧ್ವಜಾರೋಹಣ



• ಅಯೋಧ್ಯೆ: ಚೈತ್ರ ನವರಾತ್ರಿಯ ಅಷ್ಟಮಿಯ ದಿನದಂದು ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿರುವ ಸೂರ್ಯ ಮಂದಿರದ ಮೇಲೆ ವೈದಿಕ ವಿಧಿ ವಿಧಾನಗಳ ಮೂಲಕ ಧ್ವಜಾರೋಹಣ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಖಜಾಂಚಿಗಳಾದ ಗೋವಿಂದ ದೇವ ಗಿರಿ ಮಹಾರಾಜ, ವಿಶ್ವ ಹಿಂದು ಪರಿಷತ್ತಿನ ಕೇಂದ್ರೀಯ ಕಾರ್ಯದರ್ಶಿಗಳಾದ ಗೋಪಾಲ ಜಿ, ಪೊಲೀಸ್ ವರಿಷ್ಠಾಧಿಕಾರಿ ಬಲರಾಮಚಾರಿ ದೂಬೆ ಭಾಗವಹಿಸಿದ್ದರು. ಶ್ರೀ ರಾಮ ನವಮಿಯ ನಿಮಿತ್ತವಾಗಿ ಶುಕ್ರವಾರ ಬೆಳಗ್ಗೆ 5:30 ರಿಂದ ರಾತ್ರಿ 11:00 ಗಂಟೆಯವರೆಗೆ ಸಾಮಾನ್ಯ ದರ್ಶನಕ್ಕೆ ಅವಕಾಶವಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಟ್ರಸ್ಟಿಗಳಾದ ಅನಿಲ ಮಿಶ್ರಾ ತಿಳಿಸಿದ್ದಾರೆ.

ಆಂಧ್ರದಲ್ಲಿ ಅಪಘಾತ: ಹೊತ್ತಿ ಉರಿದ ಬಸ್, ಟಿಪ್ಪರ್ ಲಾರಿ

14 ಪ್ರಯಾಣಿಕರ ಸಜೀವ ದಹನ

• ಮಾರ್ಕಪುರಂ: ಆಂಧ್ರಪ್ರದೇಶದ ಮಾರ್ಕಪುರಂ ಜಿಲ್ಲೆಯಲ್ಲಿ ಗುರುವಾರ ಮುಂಜಾನೆ ಖಾಸಗಿ ಪ್ರಯಾಣ ಬಸ್ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದು ಬೆಂಕಿಗೆ ಆಹುತಿಯಾಗಿ 14 ಮಂದಿ ಮೃತಪಟ್ಟಿದ್ದು, 25 ಮಂದಿ ಗಾಯಗೊಂಡಿದ್ದಾರೆ. ಬಸ್ ಮತ್ತು ಟಿಪ್ಪರ್ ಎರಡೂ ಸಂಪೂರ್ಣ ಸುಟ್ಟು ಕರಕಲಾಗಿವೆ. ಗಾಯಾಳುಗಳನ್ನು ಮಾರ್ಕಪುರಂನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ. ಹೈದರಾಬಾದ್‌ನಿಂದ ಪಾಮುರು ಕಡೆಗೆ ಸಂಚರಿಸುತ್ತಿದ್ದ ಬಸ್ ಪಲಕಲಾಕ್ವಾರಿಗಳ ಬಳಿ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದಿದೆ.

ಅಪಘಾತದ ವೇಳೆ ಬಸ್‌ನಲ್ಲಿ 41 ಜನರಿದ್ದರು. ಘಟನೆ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಘಟನೆಗೆ ಸಂತಾಪ ಸೂಚಿಸಿದ್ದಾರೆ.

ಮೃತರ ಕುಟುಂಬಸ್ಥರಿಗೆ ಪಿಎಂಎನ್‌ಆರ್‌ಎಫ್‌ನಿಂದ 2 ಲಕ್ಷ ರೂ. ಪರಿಹಾರ ಗಾಯಾಳುಗಳಿಗೆ 50,000 ರೂ.ಗಳನ್ನು ಪ್ರಧಾನಿ ಮೋದಿ ಘೋಷಿಸಿದರು.

ಪುತ್ರನ ಜೀವ ಉಳಿಸಿದ ತಾಯಿ: ಹೃದಯ ವಿದ್ರಾವಕ ಘಟನೆಯಲ್ಲಿ ತಾಯಿಯೊಬ್ಬಳು ತನ್ನ ಪುತ್ರನನ್ನು ರಕ್ಷಿಸಿ ತಾನು ಜೀವ ಬಿಟ್ಟ ಘಟನೆ ಸಂಭವಿಸಿದೆ. ಬಸ್‌ಗೆ ಬೆಂಕಿ ತಗುಲುತ್ತಿದೆ ಎಂಬ ಸೂಚನೆ ದೊರಕಿದ ಕೂಡಲೇ ತಾಯಿ ತನ್ನ ಪುತ್ರನನ್ನು ಬಸ್ ಕಿಟಕಿಯಿಂದ ಹೊರ ಹಾಕಿ ಪುತ್ರನ ಜೀವ ಉಳಿಸಿ ಮರುಜನ್ಮ ನೀಡಿದ್ದಾಳೆ. ಆದರೇ ತಾಯಿ ರಮಾದೇವಿ ಬೆಂಕಿಗೆ ಆಹುತಿಯಾಗಿದ್ದಾರೆ.



ನದಿಗೆ ಉರುಳಿದ ಬಸ್ 24 ಮಂದಿ ಸಾವು

• ಢಾಕಾ: ಪ್ರಯಾಣಿಕರನ್ನು ಹೊತ್ತೊಯ್ಯುವ ಸಾರಿಗೆ ದೋಣಿಗೆ ಏರುವ ವೇಳೆ ಬಾಂಗ್ಲಾದೇಶದಲ್ಲಿ ಸಾರಿಗೆ ಬಸ್ ನದಿಗೆ ಉರುಳಿ ಕನಿಷ್ಠ 24 ಮಂದಿ ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ. ನೈಋತ್ಯ ಜಿಲ್ಲೆ ರಾಜ್ಬರಿ ದೌಲಾಡಿಯಾ ಟರ್ಮಿನಲ್‌ನಲ್ಲಿ ಬುಧವಾರ ಸಂಜೆ 5.15ರ ಸುಮಾರಿಗೆ ಬಸ್ ಪದ್ಮಾ ನದಿಗೆ ಉರುಳಿದೆ. ಢಾಕಾಕ್ಕೆ ತೆರಳುತ್ತಿದ್ದ ಬಸ್‌ನಲ್ಲಿ ಹಲವಾರು ಮಕ್ಕಳು ಸೇರಿದಂತೆ ಸುಮಾರು 40 ಪ್ರಯಾಣಿಕರಿದ್ದರು, ಅವರಲ್ಲಿ ಹೆಚ್ಚಿನವರು ತಮ್ಮ ಈದ್ ರಜಾದಿನಗಳ ನಂತರ ರಾಜಧಾನಿಗೆ ಮರಳುತ್ತಿದ್ದರು. 11 ಪ್ರಯಾಣಿಕರು ಈಜಿ ಕೊಂಡು ಹಾಗೂ ಸ್ಥಳೀಯರ ನೆರವಿನಿಂದ ದಡಕ್ಕೆ ಬಂದು ಜೀವ ಉಳಿಸಿಕೊಂಡಿದ್ದಾರೆ. ಬಸ್ ಇದ್ದಂತಹ ಲಾಂಚ್‌ಗೆ ಬೇರೊಂದು ಸಣ್ಣ ಲಾಂಚ್ ಡಿಕ್ಕಿಯಾಗಿದ್ದು, ಈ ವೇಳೆ ಬಸ್ ಚಾಲಕ ನಿಯಂತ್ರಣ ಕಳೆದುಕೊಂಡಿದ್ದರಿಂದ ಈ ಘಟನೆ ಸಂಭವಿಸಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರತೀ ವರ್ಷದಂತೆ ಸಂಭ್ರಮಾಚರಣೆ

ಮತಕ್ಕಾಗಿ ಟಿಎಂಸಿ ರಾಮನವಮಿ ಆಚರಣೆ!

• ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರತೀ ವರ್ಷದಂತೆ ಈ ಬಾರಿಯೂ ರಾಮ ನವಮಿ ಆಚರಿಸಿತು. ವಿಚಿತ್ರವೆಂದರೆ ಹಿಂದುತ್ವ ವಿರೋಧಿ ಟಿಎಂಸಿ, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾನೂ ರಾಮನವಮಿ ಆಚರಿಸುವ ಮುಖೇನ ಅಚ್ಚರಿ ಮೂಡಿಸಿದೆ.

ಕೋಲ್ಕತ್ತಾದಾದ್ಯಂತ ಮತ್ತು ಹಲವಾರು ಜಿಲ್ಲೆಗಳಲ್ಲೂ ಗುರುವಾರ ಎಲ್ಲಾ ಬೀದಿ ಬೀದಿಗಳು, ಓಣಿಕೇರಿಗಳು ಸಾವಿರಾರು ಕೇಸರಿ ಧ್ವಜಗಳ ರಂಗಿನಿಂದ ಶೋಭಾಯಮಾನವಾಗಿತ್ತು. ನೆರೆ ಜಿಲ್ಲೆಗಳಿಂದಲೂ ಸಾಗಿಬಂದ ನೂರಾರು ಶೋಭಾಯಾತ್ರೆಗಳಲ್ಲಿ ಪಾಲ್ಗೊಂಡಿದ್ದ ಪ್ರವಾಹೋಪಾದಿ ಜನರ ಜೈಶ್ರೀರಾಮ್ ಘೋಷಣೆ ಪರಿಸರವಿಡೀ ಅನುರಣಿಸಿತ್ತು. ಬಂಗಾಳದಲ್ಲಿ ಹಿಂದೆಂದೂ ಇಷ್ಟೊಂದು ಗೌಜಿಗದ್ದಲದೊಂದಿಗೆ ಶ್ರೀರಾಮ ನವಮಿ ಆಚರಣೆಯಾದ್ದಿಲ್ಲ ಅಥವಾ ತೀರಾ ಸರಳವಾಗಿ ಆಚರಣೆಯಾಗುತ್ತಿತ್ತು. ಈ ಬಾರಿ ಟಿಎಂಸಿ ಕೂಡ ಶ್ರೀರಾಮ ಭಕ್ತಿ ಮೆರೆದದ್ದು ವಿಪರ್ಯಾಸವೆಂದು ವಿಶ್ಲೇಷಿಸಲಾಗಿದೆ.

ಬಿಜೆಪಿ ಆಯೋಜಿಸಿರುವ ಎರಡು ದಿನಗಳ ಶ್ರೀರಾಮ ನವಮಿ ಕಾರ್ಯಕ್ರಮಗಳಲ್ಲಿ ಬರೋಬ್ಬರಿ 2ಕೋಟಿ ಜನರು ಸೇರುವ ನಿರೀಕ್ಷೆಯಿದೆ. ಇದು ಭಕ್ತಿ-ಶ್ರದ್ಧೆಯ ವಿಚಾರವಾದರೂ ರಾಜಕೀಯ ವಿಶ್ಲೇಷಕರು ಇದನ್ನು ಬೇರೇ ರೀತಿ ವಿಶ್ಲೇಷಿಸಿದ್ದಾರೆ. 2016ರಿಂದೀಚೆಗೆ ರಾಜ್ಯ ರಾಜಕೀಯ ರಂಗದಲ್ಲಿ ಬಿಜೆಪಿ ಬಲ ನಿರಂತರವಾಗಿ ವರ್ಧಿಸುತ್ತಿದೆ. ಈ ನಿಟ್ಟಿನಲ್ಲಿ ಹಿಂದು ಅಸ್ಮಿತೆಯನ್ನು ಬಿಂಬಿಸಲು ಮತ್ತು ಜನಬೆಂಬಲವನ್ನು ಮತ್ತಷ್ಟು ಗಟ್ಟಿಗೊಳಿಸಲು ಉತ್ಸವವನ್ನು ಗೌಜಿಯಿಂದ ಆಯೋಜಿಸಲಾಗಿದೆ ಎಂಬುದು ವಿಶ್ಲೇಷಕರ ಟೀಕಾಸ್ತ್ರ.

ಇನ್ನು, ಕಳೆದ ಕೆಲವು ವರ್ಷಗಳಿಂದ ಟಿಎಂಸಿಯ ಹಲವು ನಾಯಕರು ರಾಮನವಮಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಶುರುವಿಟ್ಟಿದ್ದಾರೆ ಅಥವಾ ಸ್ಥಳೀಯವಾಗಿ ಮೆರವಣಿಗೆಗಳನ್ನು ಆಯೋಜಿಸಲು ತೊಡಗಿದ್ದಾರೆ. ಬಿಜೆಪಿಯ ಹಿಂದುತ್ವ ಸಿದ್ಧಾಂತವನ್ನು ಮಟ್ಟಹಾಕುವುದು ಟಿಎಂಸಿಯ ಹೊಸ ರಾಮಭಕ್ತಿ ಹಿಂದಿನ ಉದ್ದೇಶವೆಂಬುದು ರಾಜಕೀಯ ವಿಶ್ಲೇಷಕರ ವ್ಯಾಖ್ಯಾನ. ಶ್ರೀರಾಮ ಯಾವುದೇ ರಾಜಕೀಯ ಪಕ್ಷಕ್ಕೆ ಸೀಮಿತನಲ್ಲ, ಪ್ರತಿಯೋರ್ವರಿಗೂ ಸೇರಿದವನು ಎಂದು ಮುಖ್ಯಮಂತ್ರಿ ಮಮತಾಬ್ಯಾನರ್ಜಿ ಈಚೆಗೆ ವ್ಯಂಗ್ಯ ನುಡಿಯಾಡಿದ್ದು ಉಲ್ಲೇಖಾರ್ಹ. ಶ್ರೀರಾಮ ನವಮಿ ಉತ್ಸವಕ್ಕೆ ಬಿಜೆಪಿ ಭರದ ಸಿದ್ಧತೆ ನಡೆಸುತ್ತಿದ್ದಾಗ ಮಮತಾ ಈ ತೆರ ಹೇಳಿದ್ದರು.



ಬಿಜೆಪಿ ಉತ್ತರ ಭಾರತದ ಹಿಂದುತ್ವ ರಾಜನೀತಿಯನ್ನು ಬಂಗಾಳಕ್ಕೆ ಆಮದು ಮಾಡಿಕೊಳ್ಳಲು ಶ್ರಮಿಸುತ್ತಿದೆ ಎಂದು ವಾಮಪಂಥೀಯರು ಮತ್ತು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.

ಜಾಮೀನುರದ್ದು; ನ್ಯಾ. ಬಂಧನ

ಉಡುಪಿ: ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಆರೋಪಿ ಜಾಮೀನು ಷರತ್ತುಗಳನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ, ಆತನ ಜಾಮೀನು ರದ್ದುಗೊಳಿಸಿ ನ್ಯಾಯಾಲಯವು ಏಪ್ರಿಲ್ 7ರವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ. ಗುಲ್ವಾಡಿ ಗ್ರಾಮದ ತೋಟದ ಮನೆ ನಿವಾಸಿ, ಮೃತ ಅಬ್ದುಲ್ಲಾ ಅವರ ಪುತ್ರ ಅಬುಬಕ್ಕರ್ (48) ಬಂಧಿತ ಆರೋಪಿ. ಈತನ ಮೇಲೆ ಕುಂದಾಪುರ ಗ್ರಾಮಾಂತರ ಠಾಣೆಯಲ್ಲಿ ರೌಡಿ ಶೀಟ್ ತೆರೆಯಲಾಗಿದ್ದು, ಈ ಹಿಂದೆ ಹಲವಾರು ಅಪರಾಧ ಪ್ರಕರಣಗಳು ದಾಖಲಾಗಿದ್ದವು. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಬುಬಕ್ಕರ್ ಮೇಲೆ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಹಾಗೂ ಪ್ರಾಣಿ ಹಿಂಸೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಜಾಮೀನು ಪಡೆದಿದ್ದ ಈತ, ನ್ಯಾಯಾಲಯ ವಿಧಿಸಿದ್ದ ಜಾಮೀನು ಶರತ್ತುಗಳನ್ನು ಉಲ್ಲಂಘಿಸಿದ್ದ. ಈ ಬಗ್ಗೆ ಪೊಲೀಸರು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ, ಜಾಮೀನು ರದ್ದುಗೊಳಿಸುವಂತೆ ಕೋರಿದ್ದರು. ನ್ಯಾಯಾಲಯವು ಆರೋಪಿಯ ಜಾಮೀನು ರದ್ದುಪಡಿಸಿ, ರಿಮಾಂಡ್ ವಾರೆಂಟ್ ಹೊರಡಿಸಿತ್ತು.

ಮಾನ್ಯ ಪ್ರಧಾನ ಸೀನಿಯರ್ ಸಿವಿಲ್ ಜಡ್ಜ್ ಮತ್ತು ವ್ಯವಹಾರಿಕ ನ್ಯಾಯಾಲಯ ಪುತ್ತೂರು ದ.ಕ.

ಕ್ರಿಮಿನಲ್ ಮಿಸ್. ಕೇಸ್ ನಂ.74/2026

ಇವರೊಳಗೆ,
ಜಯಂತ ಕೆ.
ಬಿನ್. ದಿ. ಗಂಗಯ್ಯ ಗೌಡ
ಕಟ್ಟೆ ಮನೆ, ಕೊಂಬಾರು ಗ್ರಾಮ ಮತ್ತು ಅಂಚೆ, ಕಡಬ ತಾಲೂಕು, ದ.ಕ
ಶಕ್ತಿ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಬೇರೆ ಬೇರೆ ಚಟುವಟಿಕೆಯಲ್ಲಿ ಭಾಗವಹಿಸಿ ವಿಜೇತರಾಗಿರುವ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ಡಾ. ಕೆ.ಸಿ. ನ್ಯಾಕ್ ಮಾತನಾಡಿ, ಸಂಸ್ಥೆಯ ಬಗ್ಗೆ ಅಭಿಮಾನವಿಟ್ಟು ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳನ್ನು ಓದಿಸುತ್ತಿರುವ ಪೋಷಕರಿಗೆ ಅಭಿನಂದನೆ ಸಲ್ಲಿಸಿದರು. ವಿದ್ಯಾರ್ಥಿಗಳನ್ನು ಮುಂದಿನ ದಿನಗಳಲ್ಲಿಯು ಹೆಚ್ಚಿನ ಸಂಸ್ಕಾರ ಮೌಲ್ಯಗಳನ್ನು ಕೊಟ್ಟು ಓದಿಸಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ ಕೆ. ಮತ್ತು ವಿದ್ಯಾರ್ಥಿ ಕ್ಷೇಮಾಧಿಕಾರಿ ಕ್ಯಾ. ಎಲ್.ಬಿ. ಕಾಮತ್ ಉಪಸ್ಥಿತರಿದ್ದರು. ಶಕ್ತಿ ಪೂರ್ವ ಪ್ರಾಥಮಿಕ ಶಾಲೆಯ ಸಂಯೋಜಕಿ ಸುಷ್ಮ ಸತೀಶ್ ಸ್ವಾಗತಿಸಿದರು, ಅರ್ಚನ ವಂದಿಸಿದರು ಹಾಗೂ ಅರುಣಿತ ಕಾರ್ಯಕ್ರಮ ನಿರೂಪಿಸಿದರು.

ಬಂಟ್ವಾಳ ಬೈಪಾಸ್ | ಶ್ರೀರಾಮ ನವಮಿ ಉತ್ಸವ ನೂರು ವರ್ಷದ ಸಂಭ್ರಮ

ದೇವರ ನಾಮವೇ ಮುಕ್ತಿಗೆ ರಹದಾರಿ

• **ಬಂಟ್ವಾಳ:** ಭಕ್ತಿಯ ಪರಾಕಾಷ್ಠೆಗೆ ಹಿರಿಯರು ಭಜನಾ ಮಂದಿರ ನಿರ್ಮಿಸಿದ್ದಾರೆ. ಸಮಾಜದಲ್ಲಿ ರೇಡಿಯೋ ಬರುವುದಕ್ಕಿಂತ ಮೊದಲು ಪ್ರತೀ ಮನೆಯಲ್ಲಿ ಭಜನೆಯ ನಿನಾದ ಕೇಳುತ್ತಿದ್ದು, ಇದೀಗ ಕಡಿಮೆಯಾಗಿದ್ದರೂ ಅಂತಿಮವಾಗಿ ನಮಗೆ ದೇವರ ನಾಮವೇ ಮುಕ್ತಿಯ ಕಡೆಗೆ ಕೊಂಡೊಯ್ಯುತ್ತದೆ ಎಂದು ಉಡುಪಿ ಪೇಜಾವರ ಅಧೋಕ್ಷಜ ಮಠಾಧೀಶ ರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರು ನುಡಿದರು.



ಬಂಟ್ವಾಳ ಬೈಪಾಸ್‌ನ ರಾಮನಗರದಲ್ಲಿರುವ ಶ್ರೀರಾಮ ಭಜನಾ ಮಂದಿರದಲ್ಲಿ ಶ್ರೀರಾಮ ನವಮಿ ಉತ್ಸವದ ನೂರು ವರುಷದ ಸಂಭ್ರಮದ ಪ್ರಯುಕ್ತ ಗುರುವಾರ ಮಂದಿರಕ್ಕೆ ಭೇಟಿ ನೀಡಿದ ಶ್ರೀಗಳು ಬಳಿಕ ಆಶೀರ್ವಚನಗೈದರು.

ಈ ಸಂದರ್ಭದಲ್ಲಿ ಹಿಮಾಚಲ ಪ್ರದೇಶದ ವಿಜಯಾನಂದ ಸರಸ್ವತಿ ಸ್ವಾಮೀಜಿ, ಉದ್ಯಮಿ ಉಮೇಶ್ ಶೆಟ್ಟಿ ಮುಂಬೈ, ಮಂದಿರದ ಆಡಳಿತ ಸಮಿತಿ ಅಧ್ಯಕ್ಷ ನಾಗೇಶ ಶೆಟ್ಟಿ, ಸ್ಥಳೀಯ ಪ್ರಮುಖರಾದ ಉದಯ ಕುಮಾರ್ ರಾವ್, ಹರೀಶ್ ಶೆಟ್ಟಿ ಬೈಪಾಸ್, ಭುವನೇಶ್ ಶೆಟ್ಟಿ, ಸುರೇಶ್ ಶೆಟ್ಟಿ, ಗಣೇಶ್ ಪ್ರಕಾಶ್ ಶೆಟ್ಟಿ, ಜಗನ್ನಾಥ ಬಂಟ್ವಾಳ್, ಸುಶೀಲ ಜನಾರ್ದನ ಶೆಟ್ಟಿ ಕಿಯೋನಿಕ್ಸ್ ನಿಗಮದ ಮಾಜಿ ಅಧ್ಯಕ್ಷ ಕೆ.ಹರಿಕೃಷ್ಣ ಬಂಟ್ವಾಳ್, ರೋಟರಿ ಕ್ಲಬ್ ಮಾಜಿ ಗವರ್ನರ್ ಪ್ರಕಾಶ್ ಕಾರಂತ್, ಉದ್ಯಮಿ, ಸಂದೇಶ್ ಶೆಟ್ಟಿ ಅರೆಬೆಟ್ಟು, ಸಿದ್ದಕಟ್ಟೆ ಸಿ.ಎ.ಬ್ಯಾಂಕ್ ಅಧ್ಯಕ್ಷ ಪ್ರಭಾಕರ ಪ್ರಭು ಸಹಿತ ಹಲವಾರು ಗಣ್ಯರು ಉಪಸ್ಥಿತರಿದ್ದರು. ಬೂಡಾ ಮಾಜಿ ಅಧ್ಯಕ್ಷ ಬಿ. ದೇವದಾಸ್ ಶೆಟ್ಟಿ ಸ್ವಾಗತಿಸಿ, ವಂದಿಸಿದರು. ಇದಕ್ಕು ಮೊದಲು ಪೇಜಾವರ ಮಠಾಧೀಶರನ್ನು ಬೈಪಾಸ್ ಜಂಕ್ಷನ್‌ನಿಂದ ಮಂದಿರದ ಹೊರಗೆ ಪೂರ್ಣಕುಂಭದೊಂದಿಗೆ ಮೆರವಣಿಗೆಯಲ್ಲಿ ಕರೆತರಲಾಯಿತು. ಮಧ್ಯಾಹ್ನದ ಮಹಾಪೂಜೆಯ ಬಳಿಕ ಸಾರ್ವಜನಿಕ ಅನ್ನಸಂತರ್ಪಣೆಯು ನಡೆಯಿತು. ರಾಮನವಮಿಯ ನೂರುವರ್ಷದ ಸಂಭ್ರಮದ ಹಿನ್ನಲೆಯಲ್ಲಿ ಶ್ರೀ ಕಟೀಲು ಮೇಳದವರಿಂದ ಯಕ್ಷಗಾನ ಬಯಲಾಟ ಶ್ರೀದೇವಿ ಮಹಾತ್ಮೆ ಸಂಭ್ರಮದಿಂದ ನಡೆಯಿತು. ರಾಮನವಮಿ ಪ್ರಯುಕ್ತ ಗುರುವಾರ ಸೂರ್ಯೋದಯಕ್ಕೆ ಏಕಹಾ ಭಜನಾ ಸಂಕೀರ್ತನೆಗೆ ಚಾಲನೆ ನೀಡಲಾಯಿತು. ಶುಕ್ರವಾರ ಸೂರ್ಯೋದಯದವರೆಗೆ ಸಂಕೀರ್ತನೆ ನಡೆಯಿತು.

ಕಿರುಸುದ್ದಿ

ಕಂದಕಕ್ಕೆ ಮಗುಚಿಬಿದ್ದ ವ್ಯಾನ್: ಚಾಲಕನನ್ನು ರಕ್ಷಿಸಿದ ಊರವರು

ಬದಿಯಡ್ಕ: ನಿಯಂತ್ರಣ ತಪ್ಪಿದ ಓಮ್ನಿ ವ್ಯಾನ್ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಬಳಿಕ 12 ಅಡಿ ಆಳದ ಕಂದಕಕ್ಕೆ ಮುಗುಚಿಬಿದ್ದಿದೆ. ಸುಮಾರು ಹೊತ್ತು ವ್ಯಾನ್‌ನಲ್ಲಿ ಸಿಲುಕಿಕೊಂಡಿದ್ದ ಚಾಲಕನನ್ನು ನಾಗರಿಕರು ರಕ್ಷಿಸಿದ ಘಟನೆ ಗುರುವಾರ ಬೆಳಗ್ಗೆ ನಡೆದಿದೆ. ಬದಿಯಡ್ಕ ಏದ್ಯಾಗಿರಿ ಬಜದ ಸತ್ಯನಾರಾಯಣ ಭಟ್ (70) ಎಂಬವರನ್ನು ನಾಗರಿಕರು ರಕ್ಷಿಸಿದ್ದಾರೆ. ಬಳಿಕ ಅವರನ್ನು ಕಾಸರಗೋಡಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಏದ್ಯಾಗಿರಿ ನವಕಾನ ಎಂಬಲ್ಲಿ ಬೆಳಗ್ಗೆ 7 ಗಂಟೆಯ ವೇಳೆ ಅಪಘಾತ ಉಂಟಾಗಿದೆ. ಸತ್ಯನಾರಾಯಣ ಭಟ್ ಶುಗರ್ ತಪಾಸಣೆಗಾಗಿ ಬದಿಯಡ್ಕಕ್ಕೆ ತೆರಳುತ್ತಿದ್ದ ವೇಳೆ ನವಕಾನಕ್ಕೆ ತಲುಪುತ್ತಿದ್ದಾಗ ವ್ಯಾನ್ ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದು ಹೊಂಡಕ್ಕೆ ಮಗುಚಿಬಿದ್ದಿದೆ. ಧೀರ್ಘ ಹೊತ್ತಿನ ಬಳಿಕ ಆ ರಸ್ತೆಯಲ್ಲಿ ತೆರಳಿದ ಪ್ರಸಾದ್ ಮುನಿಯೂರು ಎಂಬವರಿಗೆ ವ್ಯಾನ್ ಅಪಘಾತಕ್ಕೀಡಾಗಿರುವುದು ಕಂಡುಬಂದಿದ್ದು, ಕೂಡಲೇ ಅವರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳೀಯರು ಸ್ಥಳಕ್ಕೆ ಆಗಮಿಸಿ ಜೆಸಿಬಿಯ ಸಹಾಯದಿಂದ ವ್ಯಾನ್‌ನೊಳಗೆ ಸಿಲುಕಿಕೊಂಡಿದ್ದ ಸತ್ಯನಾರಾಯಣ ಭಟ್‌ರನ್ನು ಹೊರಗೆ ತೆಗೆದರು. ಬಳಿಕ ಜೆಸಿಬಿ ಮೂಲಕ ವ್ಯಾನ್ ಮೇಲಕ್ಕೆತ್ತಲಾಯಿತು. ವ್ಯಾನ್ ಬಹುತೇಕ ಹಾನಿಗೀಡಾಗಿದೆ. ಮಾಹಿತಿ ತಿಳಿದು ಅಗ್ನಿಶಾಮಕ ದಳ ಮತ್ತು ಪೊಲೀಸರು ಸ್ಥಳಕ್ಕಾಗಮಿಸಿದರು.

ಮಡಿಕೇರಿ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಕೋಚನ ಚೇತನ್

ಮಡಿಕೇರಿ : ಮಡಿಕೇರಿ ನಗರ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ ಕೋಚನ ಚೇತನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಮಡಿಕೇರಿ ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ ಅವರು ಕೋಚನ ಚೇತನ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಳಿಸಿ ಆದೇಶ ಹೊರಡಿಸಿದ್ದಾರೆ. ಚೇತನ್ ನಗರದ ದೇಚೂರು ನಿವಾಸಿಯಾಗಿದ್ದು, ಕಳೆದ ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದಾರೆ.

ಜುಗಾರಿ: ನಾಲ್ವರ ಬಂಧನ

ಕುಂದಾಪುರ : ಸಿದ್ದಾಪುರ ಗ್ರಾಮದ ಮೇಜ್ಜೆಡ್ಡು ಎಂಬಲ್ಲಿನ ಸುಧಾಕರ ಶೆಟ್ಟಿ ಎಂಬವರ ಮನೆಯಲ್ಲಿ ಅಕ್ರಮವಾಗಿ ಅಂದರ್-ಬಾಹರ್ ಇಸ್ಪೀಟ್ ಜುಗಾರಿ ಆಟ ಆಡುತ್ತಿದ್ದ ನಾಲ್ವರನ್ನು ಶಂಕರನಾರಾಯಣ ಪೊಲೀಸರು ಬಂಧಿಸಿದ್ದು, ಇಬ್ಬರು ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ. ಸಿದ್ಧಾಪುರ ಗ್ರಾಮದ ಮೇಲ್ಜೆಡ್ಡು ನಿವಾಸಿ ಸುಧಾಕರ ಶೆಟ್ಟಿ (52), ಸಿದ್ಧಾಪುರ ಗ್ರಾಮದ ವರಾಹಿ ರಸ್ತೆ ನಿವಾಸಿ ರಮೇಶ್ (46), ಜನ್ಸಾಲೆ ಗ್ರಾಮದ ಮನೋಹರ (46) ಮತ್ತು ಕುಂದಾಪುರ ಚಿನ್ಮಯಿ ಆಸ್ಪತ್ರೆ ಸಮೀಪದ ನಿವಾಸಿ ಮಹೇಶ್ (43) ಬಂಧಿತ ಆರೋಪಿಗಳು. ಹರ್ಷ ಮತ್ತು ಕೃಷ್ಣ ಪೂಜಾರಿ ಮನೆಯ ಕಂಪೌಂಡ್ ಹಾರಿ ಪರಾರಿಯಾಗಿದ್ದಾರೆ. ಸುಧಾಕರ ಶೆಟ್ಟಿ ಬಳಿಯಲ್ಲಿ 2300 ರೂ. ಮನೋಹರ ಅವರಲ್ಲಿ 1400 ರೂ. ಮಹೇಶ ಬಳಿಯಲ್ಲಿ 2100 ರೂ. ಸಿಕ್ಕಿದ್ದು ಒಟ್ಟು 6,700 ರೂಪಾಯಿ ಮತ್ತು ಆಟಕ್ಕೆ ಬಳಸಿದ್ದ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕುಂದಾಪುರ ಗ್ರಾಮಾಂತರ ವೃತ್ತದ ಪೊಲೀಸ್ ನಿರೀಕ್ಷಕ ಸಂತೋಷ್ ಎ. ಕಾಯ್ಕಿಣಿ ಅವರಿಗೆ ಬಂದ ಮಾಹಿತಿ ಮೇರೆಗೆ ಶಂಕರನಾರಾಯಣ ಪೊಲೀಸ್ ಠಾಣಾ ಪಿ.ಎಸ್.ಐ ಅಕ್ಷಯ ಕುಮಾರಿ ಎಸ್.ಎನ್. ನೇತೃತ್ವದಲ್ಲಿ ಹೆಡ್ ಕಾನ್ಸಟೇಬಲ್‌ಗಳಾದ ಮಂಜುನಾಥ ಕೆ., ರಾಘವೇಂದ್ರ ಕೆ., ವಿಕ್ರಮ್ ಹಾಗೂ ಸಿಬ್ಬಂದಿಗಳಾದ ಹರೀಶ್ ಜಿ., ಜಯರಾಮ, ಪರಶುರಾಮ ದಾಳಿ ನಡೆಸಿದ್ದರು.

ರಾಸಾಯನಿಕ ಸೇವಿಸಿ ಸಾವು

ಬಂಟ್ವಾಳ: ಅಮಲು ಪದಾರ್ಥ ಸೇವನೆಯ ಚಟ ಹೊಂದಿದ್ದ ವ್ಯಕ್ತಿಯೋರ್ವರು ರಾಸಾಯನಿಕ ಸೇವಿಸಿ ಚಿಕಿತ್ಸೆ ಫಲಕಾರಿಯಾದೆ ಮೃತಪಟ್ಟ ಘಟನೆ ಸಂಗಬೆಟ್ಟು ಗ್ರಾಮದಲ್ಲಿ ಸಂಭವಿಸಿದೆ. ಮೃತರನ್ನು ಸಂಗಬೆಟ್ಟು ಗ್ರಾಮದ ನಿವಾಸಿ ದೂಜ (55) ಎಂದು ಹೆಸರಿಸಲಾಗಿದೆ. ಅಮಲು ಪದಾರ್ಥ ಸೇವನೆಯ ಚಟ ಹೊಂದಿರುವ ಇವರು ಕಳೆದ ಒಂದು ತಿಂಗಳಿನಿಂದ ಕೆಲಸಕ್ಕೆ ಹೋಗದೆ ಮನೆಯಲ್ಲಿದ್ದರು. ಮಾರ್ಚ್ 20 ರಂದು ಮನೆಯಲ್ಲಿ ತಂದಿಟ್ಟಿದ್ದ ಗೆದ್ದಲಿಗೆ ಸಿಂಪಡಿಸುವ ರಾಸಾಯನಿಕ ಸೇವಿಸಿ ಅಸ್ವಸ್ಥಗೊಂಡಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಅಳಕೆ ದಿ। ಸೇಸು ಪೂಜಾರಿ ಸ್ಮರಣಾರ್ಥ ಮಕ್ಕಳು, ಮೇಗಿನ ಅಳಕೆ, ಸಂಗಬೆಟ್ಟು, ಸಿದ್ಧಕಟ್ಟೆ, ಬಂಟ್ವಾಳ (ತಾ).
2. ಶಂಕರ ಶೆಟ್ಟಿ, ಕುಕ್ಕುಂದೇಲು, ಕಟೀಲು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
3. ಬಾಲಕೃಷ್ಣ ಶೆಟ್ಟಿ, ಬಜ್ಜೋಡಿ, ಕುಲಶೇಖರ – ಚಿಗುರುಪಾದೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ, ಮೀಯಪದವು, ಮಂಜೇಶ್ವರ.
4. ಶ್ರೀ ರಾಮ ಸೇವಾ ಸಮಿತಿ, ಚಣೆಯೂರು, ಬೆಳ್ತಂಗಡಿ (ತಾ).
5. ಪ್ರಭಾ ಸುಬ್ರಾಯ ಬಲ್ಯಾಯ ಮತ್ತು ಮಕ್ಕಳು, 'ಸಂಸ್ಕೃತಿ', ಕಾವು, ಪುತ್ತೂರು (ತಾ).
6. ಶ್ರೀ ಮಹಿಷ ಮರ್ದಿನಿ ಬಯಲಾಟ ಸೇವಾ ಸಮಿತಿ, ಶ್ರೀ ಕ್ಷೇತ್ರ ಪಾರೆಂಕಿ ವಯಾ ಮಡಂತ್ಯಾರು.
7. ಸಂಜೀವ ಗೌಡ, ನಿನ್ನಿಕಲ್ಲು, ವಯಾ ವಗ್ಗ ಬಂಟ್ವಾಳ (ತಾ).


ಶ್ರೀ ಧರ್ಮಸ್ಥಳ ಮೇಳ
ಅಂಡಿಂಜೆ ಕಿಲಾರದಲ್ಲಿ
ಶ್ರೀ ರಮೇಶ್ ಭಟ್ ಗೋರೆ,
ಶ್ರೀ ಮಾರಿಕಾಂಬಾ ದೇವಸ್ಥಾನ, ಕಿಲಾರ

ಶ್ರೀ ಸಾಲಿಗ್ರಾಮ ಮೇಳ
ಹೇರಂಜಾಲು ಶ್ರೀ ಗುಡೇ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪ್ರಪ್ರಥಮ ಪ್ರದರ್ಶನ
ಶ್ರೀ ಗುಡೇ ಮಹಾಲಿಂಗೇಶ್ವರ ಮಹಾತ್ಮೆ

ಶ್ರೀ ಪೆರ್ಡೂರು ಮೇಳ
ಬಡನಡಿ ಕ್ಯೂಲದಲ್ಲಿ- ಚದುರಂಗ

ಶ್ರೀ ಹನುಮಗಿರಿ ಮೇಳ
ಶ್ರೀ ಕ್ಷೇತ್ರ ಬಾರಾಳಿಯಲ್ಲಿ

ಶ್ರೀ ಪಾವಂಜೆ ಮೇಳ
ಕೂರ್ಗಿ ಹಂದೆಗದ್ದೆ ಮನೆಯಲ್ಲಿ
ಸಂಪೂರ್ಣ ಶ್ರೀ ದೇವಿ ಮಹಾತ್ಮೆ



ಬೈಂದೂರು – ಕುಂದಾಪುರ ರಾಷ್ಟ್ರೀಯ ಹೆದ್ದಾರಿ 66ರ ತಲ್ಲೂರು ಸೇತುವೆಯ ತಡೆಗೋಡೆಗೆ ಮಹಾರಾಷ್ಟ್ರ ಮೂಲದ ಗೂಡ್ಸ್ ವಾಹನ ಡಿಕ್ಕಿಯಾಗಿ, ಅದರ ಹಿಂದೆ ಬರುತ್ತಿದ್ದ ಕಾರು ಆ ಗೂಡ್ಸ್ ವಾಹನಕ್ಕೆ ಡಿಕ್ಕಿಯಾದ ಘಟನೆ ಮಂಗಳವಾರ ಸಂಜೆ ಸಂಭವಿಸಿದೆ. ಅಪಘಾತದ ತೀವ್ರತೆಗೆ ಕಾರು ಹಾಗೂ ಗೂಡ್ಸ್ ವಾಹನಗಳೆರಡು ಸಂಪೂರ್ಣ ನಜ್ಜು ಗುಜ್ಜಾಗಿವೆ.

ಮಾ.29ರಂದು ಬಾಳಂಭಟ್ ಹಾಲ್‌ನಲ್ಲಿ ಕಾರ್ಯಕ್ರಮ

ಮರಾಟಿ ಮಹಿಳಾ ಸಂಭ್ರಮ 2026

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಮರಾಟಿ ಸಮಾಜ ಸೇವಾ ಸಂಘ ಮಂಗಳೂರು ಹಾಗೂ ಇದರ ಮರಾಟಿ ಮಹಿಳಾ ವೇದಿಕೆ ಸಹಯೋಗದಲ್ಲಿ ಮರಾಟಿ ಮಹಿಳಾ ಸಂಭ್ರಮ 2026 ಮಾ.29ರಂದು ನಗರದ ಶರವು ದೇವಸ್ಥಾನದ ಬಳಿ ಇರುವ ಬಾಳಂಭಟ್ ಹಾಲ್‌ನಲ್ಲಿ ಬೆಳಗ್ಗೆ 9.30ರಿಂದ ಜರುಗಲಿದೆ.



ಚಂಡಿಗಢ ಸರ್ಕಾರದ ಮುಖ್ಯ ಕಾರ್ಯದರ್ಶಿ ಎಚ್.ರಾಜೇಶ್ ಪ್ರಸಾದ್ ಉದ್ಘಾಟಿಸುವರು. ಜಿಲ್ಲಾ ಮರಾಟಿ ಸಮಾಜ ಸೇವಾ ಸಂಘದ ಅಧ್ಯಕ್ಷ ಸುಂದರ ನಾಯ್ಕ್ ವಿಟ್ಲ ಅಧ್ಯಕ್ಷತೆ ವಹಿಸುವರು. ರಾಜ್ಯ ಮರಾಟಿ ಒಕ್ಕೂಟದ ಅಧ್ಯಕ್ಷ ಡಾ.ಕೆ.ಸುಂದರ ನಾಯ್ಕ್, ಕೆನರಾ ಬ್ಯಾಂಕ್ ಬೆಂಗಳೂರು ಕೇಂದ್ರ ಕಚೇರಿಯ ಜನರಲ್ ಮ್ಯಾನೇಜರ್ ಕೆ.ರಾಮ ನಾಯ್ಕ, ಕೆನರಾ ಬ್ಯಾಂಕ್ ಮಂಗಳೂರು ವಲಯ ಕಚೇರಿ ಜನರಲ್ ಮ್ಯಾನೇಜರ್ ಮಂಜುನಾಥ ಬಿ. ಸಿಂಗೈ, ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಹಾಯಕ ಪ್ರಾಧ್ಯಾಪಕಿ ಡಾ.ರಶ್ಮೀ ಎಂ., ಉದ್ಯಮಿ ಶೋಭಾ ಗೋಪಾಲನ್, ಮರಾಟಿ ಮಹಿಳಾ ವೇದಿಕೆಯ ಅಧ್ಯಕ್ಷೆ ಶಾರದಾ ದಾಮೋದರ ನಾಯ್ಕ ಅವರು ಗೌರವ ಅತಿಥಿಗಳಾಗಿ ಪಾಲ್ಗೊಳ್ಳುವರು.

ಬೆಳಗ್ಗೆ 11.30ರಿಂದ 12.30ರ ತನಕ ಮಹಿಳಾ ನಾಯಕತ್ವ-ಮಾನಸಿಕ ಒತ್ತಡದ ನಿಭಾವಣೆ ವಿಷಯದಲ್ಲಿ ಡಾ.ಜೋತ್ಸ್ನಾ, ಮಧ್ಯಾಹ್ನ 12.30ರಿಂದ 1.30ರ ತನಕ ಸ್ವ ಉದ್ಯೋಗ, ಸ್ವಸಹಾಯ ಸಂಘ-ಸುರಕ್ಷಾ ಯೋಜನೆಗಳು, ಕಾನೂನುಗಳ ಬಗ್ಗೆ ಪುತ್ತೂರಿನ ವಕೀಲ ಹಾಗೂ ನೋಟರಿ ಮಂಜುನಾಥ ನಾಯ್ಕ, ಮಧ್ಯಾಹ್ನ 2.15ರಿಂದ 3.15ರ ತನಕ ಮಹಿಳೆ-ಕುಟುಂಬ-ವೃತ್ತಿ-ಆರೋಗ್ಯ ವಿಷಯದಲ್ಲಿ ಬೆಳ್ತಂಗಡಿ ತಾಲೂಕು ಆಸ್ಪತ್ರೆಯ ಒ.ಬಿ.ಜಿ. ತಜ್ಞೆ ಡಾ.ರಶ್ಮಿ ಎನ್. ಅವರು ಮಾಹಿತಿ ನೀಡುವರು. ಸಂಜೆ 3.15ರಿಂದ ಮಹಿಳಾ ವೇದಿಕೆ ಸದಸ್ಯೆಯರಿಂದ ಸಾಂಸ್ಕೃತಿಕ ವೈವಿಧ್ಯ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೃಷಿಕ ಜಯರಾಮ ಶೆಟ್ಟಿ ಕೃಷಿ ಭೂಮಿಯಲ್ಲಿ ಶೇಂಗಾ ಬೆಳೆಯ ಕ್ಷೇತ್ರೋತ್ಸವ, ರೈತರೊಂದಿಗೆ ವಿಜ್ಞಾನಿಗಳ ಸಂವಾದ

ಶೇಂಗಾ ಕೃಷಿ ಉಳಿಸಲು ಯೋಜನೆ ಅಗತ್ಯ

ಕೋಟ: ಇಲ್ಲಿನ ಕೋಟದ ಮಣೂರು ಪಡುಕರೆ ಕೃಷಿಕ ಜಯರಾಮ ಶೆಟ್ಟಿ ಕೃಷಿ ಭೂಮಿಯಲ್ಲಿ ಶೇಂಗಾ ಬೆಳೆಯ ಕ್ಷೇತ್ರೋತ್ಸವ, ರೈತರೊಂದಿಗೆ ವಿಜ್ಞಾನಿಗಳ ಸಂವಾದ ಕಾರ್ಯಕ್ರಮ ಮಂಗಳವಾರ ಜರಗಿತು.

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯ ಇರುವಕ್ಕಿ ಶಿವಮೊಗ್ಗ, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಅಖಿಲ ಭಾರತೀಯ ಸುಸಂಘಟಿತ ಭತ್ತ ಅಭಿವೃದ್ಧಿ ಯೋಜನೆ ಬ್ರಹ್ಮಾವರ, ಕೃಷಿ ಇಲಾಖೆ ಉಡುಪಿ ಹಾಗೂ ರೈತಧ್ವನಿ ಸಂಘ ಕೋಟ ಇವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಯಿತು.

ಹಲವಾರು ಮಂದಿ ರೈತ ಸಮುದಾಯದ ನಡುವೆ ಮಣೂರು ಕೃಷಿ ಭೂಮಿಯಲ್ಲಿ ಸುಮಾರು 33 ವಿವಿಧ ತಳಿಗಳ ಶೇಂಗಾ ಗಮನ ಸೆಳೆಯಿತ್ತಲ್ಲದೆ ಇಲ್ಲಿನ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಡಾ. ಶ್ರೀದೇವಿ ಎ ಜಕ್ಕೇರಾಳ್ ಶೇಂಗಾ ಗದ್ದೆಯಲ್ಲಿ ವಿವಿಧ ತಳಿಗಳ ಪ್ರಾರಂಭಿಕ ಬಿತ್ತನೆ ಆದರ ಕ್ರಮಗಳ ಬಗ್ಗೆ ಸವಿವರವಾಗಿ ಮಾಹಿತಿ ನೀಡಿದರು.

ನಂತರ ನಡೆದ ಕ್ಷೇತ್ರೋತ್ಸವ ಸಭಾಕಾರ್ಯಕ್ರಮವನ್ನು ಬಾಬಾ ಆಟೋಮಿಕ್ ಸಂಶೋಧನಾ ಕೇಂದ್ರ ಮುಂಬೈ ಇದರ ಶೇಂಗಾ ಸುಧಾರಿತ ವಿಭಾಗದ ಮುಖ್ಯಸ್ಥ ಡಾ.ಆನಂದ್ ಬಡಿಗಣ್ಣನವರ್ ಉದ್ಘಾಟಿಸಿ ಶೇಂಗಾ ಬೆಳೆ ಕರಾವಳಿ ಭಾಗದ ಬಹು ಮುಖ್ಯ ಬೆಳೆಯಾಗಿ ವಿಶ್ವಮಟ್ಟದಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಇಲ್ಲಿನ ಈ ಬೆಳೆಗೆ ಬಾರಿ ಬೇಡಿಕೆಯಿದ್ದು ಕಾಲಕ್ರಮೇಣ ಇದರ ಉತ್ಪಾದನೆಯಲ್ಲಿ ಕುಸಿತ ಕಂಡಿದೆ. ಈ ದಿಸೆಯಲ್ಲಿ ಶೇಂಗಾ ಬೆಳೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಹೊಸ ಹೊಸ ಆವಿಷ್ಕಾರಕ್ಕೆ ಮುನ್ನುಗ್ಗ ಬೇಕಾದ ಅಗತ್ಯವನ್ನು ಹಾಗೂ ಇಲ್ಲಿ ಕೈಗೊಂಡ ಸಂಶೋಧನೆಯ ವಿವಿಧ ತಳಿಗಳ ಆಯ್ಕೆ ಪ್ರಕ್ರಿಯೆಯನ್ನು ವಿವರವಾಗಿ ತಿಳಿಸಿದರು.

ಕರಾವಳಿ ಭಾಗಕ್ಕೆ ಸೂಕ್ತ ಶೇಂಗಾ ಬೆಳೆ ತಾಂತ್ರಿಕ ಕೈಪಿಡಿಯನ್ನು ಇಲಾಖಾಧಿಕಾರಿಗಳು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮ ಆಯೋಜಕ ರೈತಧ್ವನಿ ಸಂಘದ ಅಧ್ಯಕ್ಷ ಎಂ ಜಯರಾಮ ಶೆಟ್ಟಿ ಇವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕೋಟ ಸಹಕಾರಿ ವ್ಯವಸಾಯಕ ಸಂಘದ ಅಧ್ಯಕ್ಷ ಡಾ.ಕೃಷ್ಣಕಾಂಚನ್, ನಿರ್ದೇಶಕ ಜಿ.ತಿಮ್ಮ ಪೂಜಾರಿ, ಕೃಷಿಕರಾದ ಶಿವಮೂರ್ತಿ ಕೆ,ಭಾಸ್ಕರ ಶೆಟ್ಟಿ ಮಣೂರು ಇದ್ದರು. ಡಾ.ಕೆವಿ ಸುಧೀರ್ ಕಾಮತ್ ಸ್ವಾಗತಿಸಿದರು.

ಕಾರ್ಯಕ್ರಮವನ್ನು ಬ್ರಹ್ಮಾವರದ ಜಿ. ಕೆ. ಎಂ.ಎಸ್ ತಾಂತ್ರಿಕ ಅಧಿಕಾರಿ, ಪ್ರವೀಣ್ ಕೆ ಎಂ ನಿರೂಪಿಸಿ ವಂದಿಸಿದರು. ಕೋಟ ರೈತ ಸಂಪರ್ಕ ಕೇಂದ್ರದ ಅಧಿಕಾರಿ ಸುಪ್ರಭ ಸಹಕರಿಸಿದರು.



ರೈತ ಪರ ನೆರೆದಿದ್ದ ಅಧಿಕಾರಿಗಳ ಗಮನ ಸೆಳೆದ ಗಣೇಶ್ ಗಾಣಿಗ

ರೈತಪರವಾಗಿ ಉಪ್ಪುಂದ ಶೇಂಗಾ ಖರೀದಿ ಕೇಂದ್ರದ ಮಾಲಿಕ ಗಣೇಶ ಗಾಣಿಗ ಕರಾವಳಿ ರೈತರ ಸಮಸ್ಯೆ ಶೇಂಗಾ ಬೆಳೆಯಿಂದ ವಿಮುಖರಾಗುವ ವಿಚಾರ ಹಾಗೂ ಶೇಂಗಾ ಬೆಳೆಗೆ ಇಲಾಖೆ ಯಾವ ರೀತಿಯಲ್ಲಿ ಪೂರಕ ವಾತಾವರಣ ಕಲ್ಪಿಸುವ ಬಗೆಗಿನ ವಿಚಾರವನ್ನು ಕೃಷಿ ಇಲಾಖೆ ಮತ್ತು ವಿಜ್ಞಾನಿಗಳಿಗೆ ಮನವರಿಕೆ ಮಾಡಿದರಲ್ಲದೆ ಈ ಬಾರಿ ರೈತ ಸಮುದಾಯಕ್ಕೆ ಶೇಂಗಾ ಬಿತ್ತನೆ ಬೀಜ ಸಮರೋಪಾದಿಯಲ್ಲಿ ವಿತರಿಸಿ ರೈತ ಸ್ನೇಹಿ ಕ್ರಮಗಳು ಹಾಗೂ ಮುಂದಿನ ವರ್ಷ ತಮ್ಮ ಸಂಸ್ಥೆಗೆ ಸಮಗ್ರ ಬೀಜೋತ್ಪನ್ನ ವಿತರಿಸಲು ಇಲಾಖೆ ಅವಕಾಶ ಕಲ್ಪಿಸಿದರೆ ತಾವು ಸಹಕಾರ ನೀಡುವುದಾಗಿ ಹೇಳಿದರು.

ಗಮನ ಸೆಳೆಯ ವಿವಿಧ ತಳಿಗಳು

ಶೇಂಗಾ ಬೆಳೆ ಕ್ಷೇತ್ರೋತ್ಸವದಲ್ಲಿ ವಿಶೇಷವಾಗಿ ರಾಜ್ಯದ ಹಾಗೂ ಹೊರ ರಾಜ್ಯಗಳ ವಿವಿಧ ಶೇಂಗಾ ಬೀಜವನ್ನು ಮಣೂರು ಪಡುಕರೆ ಜಯರಾಮ ಶೆಟ್ಟಿ ಕೃಷಿ ಭೂಮಿಯಲ್ಲಿ ಪ್ರಾಯೋಗಿಕವಾಗಿ ಉಳುಮೆಗೊಳಿಸಿ ಆದರ ದಿನ ನಿಗದಿಯಂತೆ ಭೂಮಿಯಿಂದ ಹೊರ ತೆಗೆದು ಮಂಗಳವಾರದ ಕ್ಷೇತ್ರೋತ್ಸವದಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಸಾಕಷ್ಟು ರೈತ ಸಮುದಾಯ ಇದರ ಪ್ರಯೋಜನ ಪಡೆದರಲ್ಲದೆ ಅಲ್ಲಿ ಇರಿಸಲಾದ ಟಿಎಂವಿ 2, ಡಿಎಚ್ 4-3, ಟಿ-1, ಟಿ-2, ಟಿ-4, ಟಿ 5 ಸಿರೀಸ್, ಟಿಜಿ ಸಿರೀಸ್, ಡಿಜಿ 91 ವಿಶೇಷವಾಗಿ ಗಮನ ಸೆಳೆದವು.



ಸಮಗ್ರ ಮಾಹಿತಿ

ಶೇಂಗಾ ಬೆಳೆಯ ವಿವಿಧ ಪ್ರಾಧಿಕಾರಗಳ ಬಗ್ಗೆ ನೆರೆದ್ದ ವಿಜ್ಞಾನಿಗಳು ಇಲಾಖಾಧಿಕಾರಿಗಳಾದ ಧಾರವಾಡ ತಳಿ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರದ ಮುಖ್ಯಸ್ಥ ಡಾ.ವಿಜೇಂದ್ರ ಎಸ್ ಸಂಗಮ್, ಎಣ್ಣೆಕಾಳು ಮತ್ತು ತಳಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಬಿ.ಎನ್ ಮೊಟಗಿ, ಅಖಿಲ ಭಾರತೀಯ ಸುಸಂಘಟಿತ ಬೀಜ ಅಭಿವೃದ್ಧಿ ಕೃಷಿ ವಿಶ್ವವಿದ್ಯಾಲಯ ಜಿ.ಕೆ.ವಿ.ಕೆ ಬೆಂಗಳೂರು ಇದರ ಸಹ ಪ್ರಾಧ್ಯಾಪಕಿ ಡಾ.ನೇತ್ರಾ ಎನ್, ಹೈದರಾಬಾದ್ ಎಣ್ಣೆಕಾಳು ಸಸ್ಯ ತಳಿ ಅಭಿವೃದ್ಧಿ ವಿಭಾಗದ ಡಾ.ಜ್ಞಾನೇಶ್ವರ ದೇಶ್ ಮುಖ್, ಬ್ರಹ್ಮಾವರ ಕೆ.ವಿ.ಕೆ. ಹಿರಿಯ ವಿಜ್ಞಾನಿ ಡಾ.ಧನಂಜಯ ಬಿ, ವಲಯ ಕೃಷಿ ಮತ್ತು ತೋಟಗಾರಿಕೆ ಕೇಂದ್ರ ಬ್ರಹ್ಮಾವರ ಸಹ ಸಂಶೋಧನಾ ನಿರ್ದೇಶಕ ಡಾ.ರೇವಣ್ಣ ರೇವಣ್ಣವರ್, ಉಡುಪಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಪೂರ್ಣಿಮಾ, ಕೃಷಿ ಇಲಾಖೆಯ ಉಪ ನಿರ್ದೇಶಕ ಚಂದ್ರಶೇಖರ ನಾಯ್ಕ್ ಶೇಂಗಾ ಬೆಳೆ ಹಾಗೂ ಅದರ ವಿವಿಧ ಆಯಾಮಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಹೊಸ ಅಂಗಣ ತಿಂಗಳ ಬೆಳಕು, ಸಾಧಕರಿಗೆ ಗೌರವಾರ್ಪಣೆ

ಧಾರ್ಮಿಕ ಕ್ಷೇತ್ರಕ್ಕೆ ಪ್ರಾಧಾನ್ಯತೆ ಅಭಿನಂದನೀಯ



ಮುಲ್ಕಿ: ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರದ ಮಹತ್ವವನ್ನು ಯುವ ಜನಾಂಗ ಅರಿತುಕೊಂಡರೆ ಮಾತ್ರ ಧರ್ಮ ಜಾಗೃತಿ ಸಾಧ್ಯ ಎಂದು ಧರ್ಮದರ್ಶಿ ಡಾ.ಹರಿಕೃಷ್ಣ ಪುನರೂರು ಹೇಳಿದರು.

ಅವರು ಮುಲ್ಕಿ ಪುನರೂರು ಟೂರಿಸ್ಟ್ ಹೋಮ್‌ನ ಸಭಾಂಗಣದಲ್ಲಿ ಮಂಗಳವಾರ ನಡೆದ ಹೊಸ ಅಂಗಣ ತಿಂಗಳ ಬೆಳಕು ಹಾಗೂ ಸಾಧಕರಿಗೆ ಗೌರವಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ದೈವಾರಾಧನೆಯ ಸಾಧಕರನ್ನು ಗೌರವಿಸುವ ಮೂಲಕ ಧಾರ್ಮಿಕ ಕ್ಷೇತ್ರಕ್ಕೆ ಪ್ರಾಧಾನ್ಯತೆ ನೀಡುವ ಕಾರ್ಯ ಅಭಿನಂದನೀಯ ಎಂದರು.

ಮುಖ್ಯ ಅತಿಥಿಗಳಾಗಿ ಕಿನ್ನಿಗೋಳಿ ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ, ಮುಲ್ಕಿ ಲಯನ್ಸ್ ಕ್ಲಬ್ ಅಧ್ಯಕ್ಷ ಹರ್ಷರಾಜ ಶೆಟ್ಟಿ, ಗುತ್ತಿನಾರ್ ವಿಶುಕುಮಾರ್ ಕಲ್ಲಟ್ಟೆ, ವಾಸು ಪೂಜಾರಿ ಕೊಲಕಾಡಿ, ಕೇಶವಾನಂದ ಸ್ವಾಮೀಜಿ ಚಿತ್ರಾಪು, ಅತಿಕಾರಿಬೆಟ್ಟು ಗ್ರಾಪಂ ಮಾಜೀ ಉಪಾಧ್ಯಕ್ಷ ಮನೋಹರ ಕೋಟ್ಯಾನ್, ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಆಶೋಕ್ ಕುಮಾರ್ ಶೆಟ್ಟಿ ರಮೇಶ್ ಅಮೀನ್ ಕೊಕ್ಕರಕಲ್, ಗೋಪಿನಾಥ ಪಡಂಗ, ಸರೋಜಿನಿ ಸುವರ್ಣ, ಜನಾರ್ದನ್ ಬಂಗೇರ ಕೆ.ಎಸ್. ರಾವ್ ನಗರ, ಹೊಸ ಅಂಗಣದ ಹರೀಶ್ಚಂದ್ರ ಪಿ. ಸಾಲ್ಯಾನ್, ವಾಸು ಪೂಜಾರಿ ಚಿತ್ರಾಪು,, ಜಯಪಾಲ ಶೆಟ್ಟಿ ಐಕಳ, ಉದ್ಯಮಿ ಜೋನ್ ಕ್ವಾಡ್ರಸ್, ನಂದಾ ಪಾಯಸ್, ವಕೀಲ ರವೀಶ್ ಕಾಮತ್, ಜಯರಾಮ್ ಬಿ. ಎಸ್. ಮತ್ತಿತರರು ಉಪಸ್ಥಿತರಿದ್ದರು ಹರೀಶ್ಚಂದ್ರ ಪಿ. ಸಾಲ್ಯಾನ್ ಸ್ವಾಗತಿಸಿದರು, ವಾಸು ಪೂಜಾರಿ ಧನ್ಯವಾದ ಅರ್ಪಿಸಿದರು, ದಿನೇಶ್ ಕೋಲ್ನಾಡು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ದೈವರಾದಕ ನವೀನ್ ಅವರನ್ನು ಪತ್ನಿ ಜಯಂತಿ ಜೊತೆ ಗೌರವಿಸಲಾಯಿತು.

ಕೃಷಿಕರ ಜೀವನಾಡಿ ಕ್ಯಾಂಪ್ಕೊದ ವಿಟ್ಲ ಶಾಖೆಯ

ನೂತನ ಕಟ್ಟಡ ನಿರ್ಮಾಣಕ್ಕೆ ಇಂದು ಶಂಕುಸ್ಥಾಪನೆ

ಮಂಗಳೂರು: ರೈತರ ಆರ್ಥಿಕಾಭಿವೃದ್ಧಿಯ ಬೆನ್ನೆಲುಬಾಗಿರುವ ಪ್ರತಿಷ್ಠಿತ ಕ್ಯಾಂಪ್ಕೊ ಸಂಸ್ಥೆಯು, ವಿಟ್ಲದಲ್ಲಿ ತನ್ನ ನೂತನ ಶಾಖಾ ಕಟ್ಟಡ ನಿರ್ಮಾಣಕ್ಕೆ ಸಜ್ಜಾಗಿದ್ದು, ಮಾ. 27ರಂದು ಬೆಳಗ್ಗೆ 9.30 ಗಂಟೆಗೆ ವಿಟ್ಲದ ಶ್ರೀ ಪಂಚಲಿಂಗೇಶ್ವರ ಸ್ವಾಧಿಯ ಬಳಿ ಖರೀದಿ ಮಾಡಿದ ಜಾಗದಲ್ಲಿ ಶಂಕುಸ್ಥಾಪನಾ ಸಮಾರಂಭವನ್ನು ಹಮ್ಮಿಕೊಂಡಿದೆ.

ಕ್ಯಾಂಪ್ಕೊದ ವಿಟ್ಲ ಶಾಖೆಯು 1986 ರಲ್ಲಿ ಕೇವಲ 76 ಸೆಂಟ್ಸ್ ಜಾಗದಲ್ಲಿ (19,188 ಚದರ ಅಡಿ ಕಟ್ಟಡ ವಿಸ್ತೀರ್ಣ) ನಿರ್ಮಾಣಗೊಂಡು, ಕಳೆದ ಹಲವು ದಶಕಗಳಿಂದ ಅಸಂಖ್ಯಾತ ಬೆಳೆಗಾರ ಸದಸ್ಯರಿಗೆ ನಿರಂತರವಾಗಿ ಅತ್ಯುತ್ತಮ ಸೇವೆ ಸಲ್ಲಿಸುತ್ತಾ ಬಂದಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ವಾಹನ ದಟ್ಟಣೆ ಹಾಗೂ ಶಾಖೆಯನ್ನು ತಲುಪುವ ಇಕ್ಕಟ್ಟಾದ ರಸ್ತೆಯಿಂದಾಗಿ ಸಂಸ್ಥೆಯ ದೈನಂದಿನ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿರುವುದಲ್ಲದೆ, ವಹಿವಾಟಿಗೆ ಆಗಮಿಸುವ ರೈತ ಬಾಂಧವರಿಗೂ ಸಾಕಷ್ಟು ಅನಾನುಕೂಲಗಳು ಎದುರಾಗುತ್ತಿದ್ದವು.

ರೂ. 12 ಕೋಟಿ ವೆಚ್ಚದ ಯೋಜನೆ

ಈ ಎಲ್ಲಾ ಅಡೆತಡೆಗಳನ್ನು ನಿವಾರಿಸಿ, ರೈತ ಸದಸ್ಯರಿಂದ ಅಡಿಕೆ, ಕೊಕ್ಕೊ, ಕಾಳುಮೆಣಸು ಸೇರಿದಂತೆ ಇತರ ಕೃಷಿ ಉತ್ಪನ್ನಗಳ ಖರೀದಿ ಮತ್ತು ನಿರ್ವಹಣೆಯನ್ನು ಸುಗಮಗೊಳಿಸುವ ಸದುದ್ದೇಶದಿಂದ ಕ್ಯಾಂಪ್ಕೊ ಮುಂದಡಿ ಇಟ್ಟಿದೆ. 2024ರಲ್ಲಿ ಬಂಟ್ವಾಳ ತಾಲೂಕಿನ ವಿಟ್ಲ ಕಸಬಾ ಗ್ರಾಮದ ವ್ಯಾಪ್ತಿಯಲ್ಲಿಯೇ 91 ಸೆಂಟ್ಸ್ ಜಾಗವನ್ನು ಸಂಸ್ಥೆ ಖರೀದಿಸಿದೆ. ಈ ವಿಶಾಲವಾದ ನಿವೇಶನದಲ್ಲಿ ಅಂದಾಜು ರೂ. 12 ಕೋಟಿ ವೆಚ್ಚದಲ್ಲಿ ಸುಮಾರು 30,000 ಚದರ ಅಡಿ ವಿಸ್ತೀರ್ಣದ ಅತ್ಯಾಧುನಿಕ ಕಚೇರಿ ಹಾಗೂ ಗೋದಾಮು ಸಮುಚ್ಚಯವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ನಿರ್ಮಾಣವಾಗಲಿರುವ ಈ ನೂತನ ಕಟ್ಟಡವು ಸುಲಭ ಸಂಪರ್ಕ ರಸ್ತೆ ಹಾಗೂ ವಿಶಾಲವಾದ ವಾಹನ ನಿಲುಗಡೆ ಸೌಲಭ್ಯವನ್ನು ಹೊಂದಿರಲಿದ್ದು, ಇದು ರೈತ ಬಾಂಧವರಿಗೆ ಅತ್ಯಂತ ಅನುಕೂಲಕರವಾಗುವುದರ ಜೊತೆಗೆ, ಸಂಸ್ಥೆಯ ದೈನಂದಿನ ವಹಿವಾಟುಗಳನ್ನು ಇನ್ನಷ್ಟು ವೇಗವಾಗಿ ಮತ್ತು ಸುಗಮವಾಗಿ ನಡೆಸಲು ಸಹಕಾರಿಯಾಗಲಿದೆ.

ಈ ಬೃಹತ್ ಕಟ್ಟಡದ ಸಿವಿಲ್ ಕಾಮಗಾರಿಯ ಗುತ್ತಿಗೆಯನ್ನು ವಿಟ್ಲದ ಮೆಸರ್ಸ್ ಗಾನ್ವಿ ಇನ್ಫ್ರಾ ಪ್ರಾಜೆಕ್ಟ್ ಸಂಸ್ಥೆಗೆ ವಹಿಸಲಾಗಿದ್ದು, ಕಾಮಗಾರಿ ಆರಂಭಗೊಂಡ ಕೇವಲ 18 ತಿಂಗಳೊಳಗೆ ಈ ನೂತನ ಕಟ್ಟಡವು ಪೂರ್ಣಗೊಂಡು ರೈತರ ಸೇವೆಗೆ ಮುಕ್ತವಾಗುವ ನಿರೀಕ್ಷೆಯಿದೆ.

ಪುತ್ತೂರಿನ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಅವರು ಈ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸಂಸದ ಕ್ಯಾ. ಬ್ರಿಜೇಶ್ ಚೌಟ ಹಾಗೂ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ಉಪಸ್ಥಿತರಿರುವರು. ಕ್ಯಾಂಪ್ಕೊ ಸಂಸ್ಥೆಯ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕ್ಯಾಂಪ್ಕೊದ ಮಾಜಿ ಅಧ್ಯಕ್ಷರುಗಳಾದ ಕೊಂಕೋಡಿ ಪದ್ಮನಾಭ ಮತ್ತು ಎ. ಕಿಶೋರ್ ಕುಮಾರ್ ಕೊಡ್ಗಿ, ಕ್ಯಾಂಪ್ಕೊ ಉಪಾಧ್ಯಕ್ಷರಾದ ಪದ್ಮರಾಜ ಪಟ್ಟಾಜೆ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಬಿ.ವಿ. ಸತ್ಯನಾರಾಯಣ ಹಾಗೂ ವಿಟ್ಲ ಜಿಲ್ಲಾ ಪಂಚಾಯತ್ ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರಲಿದ್ದಾರೆ.

ಕ್ಯಾಂಪ್ಕೊ ರೈತರಿಗೆ ಸುಲಭ ಸಂಪರ್ಕ, ಅತ್ಯಾಧುನಿಕ ಸೌಲಭ್ಯಗಳು ಹಾಗೂ ಸಂಪೂರ್ಣ ಸದಸ್ಯ-ಸ್ನೇಹಿ ವಾತಾವರಣವನ್ನು ನಿರ್ಮಿಸಿಕೊಡುವ ಪ್ರಬಲ ಗುರಿಯನ್ನು ಹೊಂದಿದೆ.

ಕಟ್ಟಡ ಇಂಜಿನಿಯರಿಂಗ್ ಕ್ಷೇತ್ರಕ್ಕೆ ಮಳೆನೀರು ಸಂಗ್ರಹಣೆ, ಅಂತರ್ಜಲ ಮರುಪೂರಣ ಕುರಿತು ಕಾರ್ಯಾಗಾರ ಆಯೋಜನೆ

ಎಲ್ಲೆಡೆ ಜಲ ಸಂರಕ್ಷಣೆ ಇಂದಿನ ಅಗತ್ಯ: ಥೋಮಸ್

ಮೂಡುಬಿದಿರೆ: ವಿಶ್ವ ಜಲ ದಿನದ ಅಂಗವಾಗಿ ಮೂಡುಬಿದಿರೆ ಪುರಸಭೆ ಹಾಗೂ ಸಿಡಿಡಿ ಇಂಡಿಯಾ ಸರ್ಕಾರೇತರ ಸಂಸ್ಥೆಯ ಸಹಭಾಗಿತ್ವದಲ್ಲಿ ಕಟ್ಟಡ ಇಂಜಿನಿಯರಿಂಗ್ ಕ್ಷೇತ್ರದವರಿಗೆ ಮಳೆನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣ ಕುರಿತು ಅರ್ಧ ದಿನದ ಕಾರ್ಯಾಗಾರವನ್ನು ನಗರದ ಕನ್ನಡಭವನದಲ್ಲಿ ಆಯೋಜಿಸಲಾಯಿತು.

ಪುರಸಭೆಯ ಮುಖ್ಯಾಧಿಕಾರಿ ಇಂದು ಎಂ. ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಾಗಾರವನ್ನು ರೋಟರಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ, ನಿರ್ಗಮನ ಪುರಸಭಾ ಸದಸ್ಯ ಪಿ.ಕೆ. ಥೋಮಸ್ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ತಮ್ಮ ಮನೆಯಲ್ಲಿ ಹಾಗೂ ಚರ್ಚ್‌ನಲ್ಲಿ ಕೈಗೊಂಡಿರುವ ಮಳೆನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣ ವ್ಯವಸ್ಥೆಗಳ ತಮ್ಮ ದೀರ್ಘ ಅನುಭವವನ್ನು ಹಂಚಿಕೊಂಡು, ಜಲ ಸಂರಕ್ಷಣೆ ಇಂದಿನ ಅವಶ್ಯಕತೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರದ ಕಾರ್ಯಪಾಲಕ ನಿರ್ದೇಶಕ ಡಾ. ರಾಜೇಂದ್ರ ಕಲ್ಬಾವಿ, ಮಳೆನೀರು ಸಂಗ್ರಹಣೆ ವಿಧಾನಗಳು ಹಾಗೂ ಪರಿಸರ ಸ್ನೇಹಿ ಕಟ್ಟಡ ನಿರ್ಮಾಣ ಪದ್ಧತಿಗಳ ಕುರಿತು ವಿಡಿಯೋ ಮತ್ತು ಚಿತ್ರಗಳೊಂದಿಗೆ ಸವಿಸ್ತಾರ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಸಂಘದ ಅಧ್ಯಕ್ಷ ಸತೀಶ್ ಕೆ. ಭಂಡಾರಿ, ಕಾರ್ಯದರ್ಶಿ ಮೊಹಮ್ಮದ್ ಇಕ್ಬಾಲ್, ಸಿಡಿಡಿ ಇಂಡಿಯಾ ಸಂಸ್ಥೆಯ ಪ್ರೋಗ್ರಾಂ ಅಸೋಸಿಯೇಟ್ ಅಂಕಿತಾ, ಪುರಸಭೆಯ ಪರಿಸರ ಇಂಜಿನಿಯರ್ ಶಿಲ್ಪಾ ಎಸ್., ಇಂಜಿನಿಯರ್ ನಳಿನ್ ಕುಮಾರ್, ಹಿರಿಯ ಆರೋಗ್ಯ ನಿರೀಕ್ಷಕಿ ಶಶಿರೇಖಾ ಸೇರಿದಂತೆ ಕಮ್ಯೂನಿಟಿ ಮೊಬಿಲೈಸರ್ ಆದ ಆಶಾ, ರಾಜೇಶ್ವರಿ, ಚಂದ್ರಿಕಾ, ಅಮಿತಾ ಮತ್ತು ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಿಡಿಡಿ ಇಂಡಿಯಾ ಸಂಸ್ಥೆಯ ಹಿರಿಯ ಕಾರ್ಯಕ್ರಮ ಇಂಜಿನಿಯರ್ ಕಣ್ಣನ್ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ಶಿಲ್ಪಾ ಎಸ್. ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿದರು. ಅಂಕಿತಾ ವಂದಿಸಿದರು. ಕಾರ್ಯಕ್ರಮದಲ್ಲಿ ಶೂನ್ಯ ತ್ಯಾಜ್ಯ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು. ವೇದಿಕೆಯಲ್ಲಿ ಸ್ಟೀಲ್ ಜಗ್ ಲೋಟಗಳ ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು, ಸಭಾಂಗಣದಲ್ಲಿ 20 ಲೀಟರ್ ನೀರಿನ ಕ್ಯಾನ್ ಮತ್ತು ಸ್ಟೀಲ್ ಲೋಟಗಳನ್ನು ಇರಿಸಲಾಗಿತ್ತು. ಸ್ವಾಗತವನ್ನು ಗುಲಾಬಿ ಹೂ ನೀಡುವ ಮುಖಾಂತರ ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ಸಸಿಯನ್ನು ಬಟ್ಟೆ ಚೀಲದಲ್ಲಿ ನೀಡುವ ಮುಖಾಂತರ ಗೌರವ ಸ್ಮರಣಿಕೆ ನೀಡಲಾಯಿತು. ಊಟದ ವ್ಯವಸ್ಥೆಯನ್ನು ಫೈಬರ್ ಪ್ಲೇಟ್‌ನಲ್ಲಿ ಮಾಡಲಾಗಿತ್ತು. ತನ್ಮೂಲಕ ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಪೇಪರ್ ತ್ಯಾಜ್ಯಕ್ಕೆ ಕಡಿವಾಣ ಹಾಕಲಾಗಿತ್ತು.



ಜಲ ಮರುಪೂರಣ ವ್ಯವಸ್ಥೆಯ ಮಹತ್ವ ತಿಳಿಸಿ

ನಗರ ಸ್ಥಳೀಯ ಸಂಸ್ಥೆಗಳು ಕಟ್ಟಡ ಅನುಮತಿ ನೀಡುವ ಸಂದರ್ಭದಲ್ಲಿ ಕಾನೂನುಬದ್ಧ ನಿಯಮಗಳನ್ನು ಪಾಲಿಸಿ ಮಳೆನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣ ವ್ಯವಸ್ಥೆಗಳ ಅಳವಡಿಕೆಗೆ ಆದ್ಯತೆ ನೀಡಬೇಕು ಹಾಗೂ ಕಟ್ಟಡದ ಲೈಸೆನ್ಸ್‌ಗೆ ಅರ್ಜಿ ಸಲ್ಲಿಸುವ ಇಂಜಿನಿಯರ್‌ನವರು ಡ್ರಾಯಿಂಗ್ ನಂತೆ ಮಳೆನೀರು ಸಂಗ್ರಹಣಾ ಅಥವಾ ಜಲ ಮರುಪೂರಣ ವ್ಯವಸ್ಥೆಯ ಮಹತ್ವ ತಿಳಿಸಿ ಅಳವಡಿಕೆಯನ್ನು ಬಿಲ್ಡರ್ ಹಾಗೂ ಗುತ್ತಿಗೆದಾರರ ಮುಖಾಂತರ ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಮಂಗಳೂರು ಮಹಾನಗರ ಪಾಲಿಕೆಯ ಸಹಾಯಕ ನಿರ್ದೇಶಕ ಹಾಗೂ ಸಹಾಯಕ ನಗರ ಯೋಜನಾಧಿಕಾರಿ ಗುರುಪ್ರಸಾದ್ ಎ.ಬಿ. ಅವರು ಆಗ್ರಹಿಸಿದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಧ್ವನಿ
ಶುಕ್ರವಾರ, 27 ಮಾರ್ಚ್ 2026
ಮಂಗಳೂರು



ಮಹಾತ್ಮಾಗಾಂಧಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅಂದರೆ ರಾಮನ ಆದರ್ಶ ಗುಣಗಳನ್ನು ಅವರು ಗುರುತಿಸಿದ್ದರು. ಆದರೆ ನಮ್ಮ ದುರ್ದೈವಕ್ಕೆ, ನಮ್ಮ ರಾಜಕಾರಣಿಗಳಿಗೆ ಇವು ಯಾವುವೂ ಬೇಡ.

ಶ್ರೀರಾಮನೆಂದರೆ ಅಮಿತಾನಂದಸ್ವರೂಪೀ

▸ ಗ.ನಾ.ಭಟ್ಟ



ಶ್ರೀರಾಮನವಮಿಯೆಂದರೆ ಭಾರತೀಯರಿಗೆ ಸಂತಸದ ಹೊನಲು ಹರಿಯುವ ಬಹು ದೊಡ್ಡ ಹಬ್ಬ. ಅದಕ್ಕೆ ಶ್ರೀರಾಮನ ಘನವಾದ ವ್ಯಕ್ತಿತ್ವವೇ ಕಾರಣ. ಆ ದಿನದಂದು ಭಾರತಾದ್ಯಂತ ರಘುನಾಥತಿಲಕ ರಾಮನಿಗೆ ಪೂಜೆ-ಪುನಸ್ಕಾರ ಅತ್ಯಂತ ವೈಭವದಿಂದ ನಡೆಯುತ್ತದೆ. ಅದರ ಅಂಗವಾಗಿ ಎಷ್ಟೋ ಮನೆಗಳಲ್ಲಿ ಶ್ರೀರಾಮಾಯಣ ಪಾರಾಯಣ, ಪ್ರವಚನ ಜರುಗುತ್ತದೆ. ಸಂಗೀತೋತ್ಸವ, ನಾಟ್ಯ-ನಾಟಕಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಪನ್ನಗೊಳ್ಳುತ್ತವೆ. ಯುವಕರು ರಸ್ತೆಗಳಲ್ಲಿ ಪಾನಕ, ಪನಿವಾರ, ಕೋಸಂಬರಿ ಹಂಚುತ್ತಾರೆ. ಇವೆಲ್ಲವೂ ಶ್ರೀರಾಮನ ಮಹಿಮೆಯ ಫಲಶ್ರುತಿಗಳು.

ರಾಮನೆಂದರೆ ಆನಂದಸ್ವರೂಪೀ; ಅವನು ಮೋಕ್ಷದಾಯಕ. ರಾಮ ಎಂಬ ಒಂದೇ ನಾಮ ಮಹಾವಿಷ್ಣುವಿನ ಸಾವಿರ ನಾಮಗಳಿಗೆ ಸಮಾನ ಎಂದು ಹೇಳುತ್ತಾರೆ. ಅವನು ಚೆಲುವಿಗೂ ಚೆಲುವು; ನೀಲಮೇಘಶ್ಯಾಮ; ಮುದ್ದು ಮುದ್ದಾದ ರೂಪ; ಕಣ್ಣು ತಣಿಯದ ಚೆಲುವು. ಅವನು ನಿಂತರೂ ಚೆಂದ; ಕೂತರೂ ಚೆಂದ; ಮಲಗಿದರೂ ಚೆಂದ; ನಡೆದರೂ ಚೆಂದ; ನಿಂತರೂ ಚೆಂದ. ಮಾತಂತೂ ಸುಮನೋಹರ. 'ವಕ್ತಾ ವಾಚಸ್ಪತಿರ್ಯಥಾ'-ಮಾತಿನಲ್ಲಿ ಬೃಹಸ್ಪತಿಯಿದ್ದಂತೆ. ಹೀಗೆ ಕೊಂಡಾಡಿದವನು ವಾಲ್ಮೀಕಿಮಹರ್ಷಿ. ರಾಮನೆಂದರೆ ಅವನು ಕೇವಲ ದಾಶರಥಿ ರಾಮನಲ್ಲ. ಅವನು ಪರಬ್ರಹ್ಮನೂ ಹೌದು. ಅದನ್ನು ಸಾರುವ ಉಕ್ತಿಯೊಂದು ಹೇಳುತ್ತದೆ-

ರಮಂತೇ ಯೋಗಿನೋನಂತೇ ನಿತ್ಯಾನಂದೇ ಚಿದಾತ್ಮನಿ ।
ಇತಿ ರಾಮಪದೇನಾಸೌ ಪರಂ ಬ್ರಹ್ಮಾಭಿಧೀಯತೇ ॥

"ಪರಬ್ರಹ್ಮವಾಚಕವಾದ ಈ ರಾಮ ಪದದಿಂದ ಯೋಗಿಗಳು ಅನಂತವಾದ, ನಿತ್ಯಾನಂದವಾದ ಚಿದಾತ್ಮದಲ್ಲಿ ಸದಾ ರಮಿಸುತ್ತಾರೆ" ಎಂಬ ಈ ಮಾತು ರಾಮನ ವ್ಯಕ್ತಿಸೌಂದರ್ಯವನ್ನು ಹೇಳುವುದರೊಂದಿಗೆ ಅವನ ಪರಬ್ರಹ್ಮತ್ವವನ್ನೂ ಸಾಬೀತುಪಡಿಸುತ್ತದೆ. ರಾಮ ಭಕ್ತರ ಅಂತರಂಗಪ್ರವೃತ್ತಿಯಂತೆ ದೇವರಾಗಬಲ್ಲ; ಧರ್ಮಸಂಕಟದ ವೇಳೆಯಲ್ಲಿ ಗುರುವಾಗಬಲ್ಲ; ಏಕಾಂತಧ್ಯಾನದಲ್ಲಿ ಪರಬ್ರಹ್ಮವಾಚಕನಾಗಬಲ್ಲ. 'ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ'. ಹೀಗೆ ಶ್ರೀರಾಮನ ಭವ್ಯ ವ್ಯಕ್ತಿತ್ವವನ್ನು ಕೊಂಡಾಡುವ ಸಾವಿರಾರು ಶ್ಲೋಕಗಳು ಇವೆ. ಅಂತಹವುಗಳಲ್ಲಿ ಹೃದಯಾನಂದಕರವಾದ ಇನ್ನೊಂದು ಶ್ಲೋಕ ಹೀಗೆ ವರ್ಣಿಸುತ್ತದೆ.

ಕೌಸಲ್ಯಾ ನಯನೋತ್ಸವೋ ದಶರಥಸ್ಯೋದ್ಯತ್ತಪಸ್ಯಾಫಲಂ ।
ವಿಶ್ವಾಮಿತ್ರಮನೋರಥೋ ಜನಕಭೂಪಾಲಸ್ಯ ಭಾಗ್ಯೋದಯಃ ॥
ವೈದೇಹೀವದನಾರವಿಂದಮಧುಪಃ ಕೋದಂಡಝುಂಕಾರಭೂಃ ।
ಧರ್ಮಸ್ಯೈಕಪರಾಯಣಂ ವಿಜಯತೇ ಶ್ರೀರಾಮಚಂದ್ರಪ್ರಭುಃ ॥

"ಕೌಸಲ್ಯೆಯ ಕಣ್ಣಿಗೆ ಹಬ್ಬವನ್ನುಂಟುಮಾಡಿದವನೂ, ದಶರಥನ ತಪಸ್ಸಿನ ಫಲವಾಗಿ ಉದಿಸದವನೂ, ವಿಶ್ವಾಮಿತ್ರರ ಮನೋರಥವನ್ನು ನೆರವೇರಿಸಿದವನೂ, ಜನಕಮಹಾರಾಜನ ಭಾಗ್ಯಸಂಪತ್ತೂ ಆದ, ವೈದೇಹಿಯ ವದನಾರವಿಂದಕ್ಕೆ ಭ್ರಮರಪ್ರಾಯನೂ ಆದ ಮತ್ತು ಆ ಭ್ರಮರಕ್ಕೆ ಕೋದಂಡದ ಝುಂಕಾರವೇ ಭ್ರಮರದ ಗುಂಜಾರವವಾಗಿ ಪರಿಣಮಿಸಿದ, ಧರ್ಮವನ್ನೇ ತನ್ನ ಉಸುರಾಗಿಸಿಕೊಂಡ, ಧರ್ಮಪರಾಯಣನಾದ ಆ ಶ್ರೀರಾಮಚಂದ್ರನು ವಿಜಯಿಯಾಗಲಿ" ಎಂದು ಅರಿಕೆ ಮಾಡಿಕೊಳ್ಳುವ ಈ ಶ್ಲೋಕ ದಿಟಕ್ಕೂ ಹೃದಯಾನಂದಕರ. "ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್"-" ಸದ್ಯಕ್ಕೆ ಈ ವರ್ತಮಾನ ಕಾಲದಲ್ಲಿ ಗುಣವಂತರಲ್ಲಿ, ವೀರರಲ್ಲಿ ಮೊದಲಿಗನಾಗಿ ಪರಿಗಣಿಸಬೇಕಾದ ವ್ಯಕ್ತಿ ಯಾವನಿದ್ದಾನೆ?" ಎಂದು ಹದಿನಾರು ಗುಣಗಳ ಪಟ್ಟಿಯನ್ನೇ ನಾರದರ ಮುಂದಿಟ್ಟ ವಾಲ್ಮೀಕಿಮಹರ್ಷಿಗೆ ನಾರದರು ನೀಡಿದ ಉತ್ತರದಲ್ಲಿ ಒಂದು ಹೀಗಿದೆ-

ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ ।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥
ಬಾಲಕಾಂಡಃ : 1-8, 15

"ಅಂಥವನೊಬ್ಬ ನಮ್ಮ ಕಾಲದಲ್ಲೇ ಇದ್ದಾನೆ. ಅವನನ್ನು ಎಲ್ಲೂ ಹುಡುಕಬೇಕಿಲ್ಲ. ಈ ಭೂಮಿಯಲ್ಲೇ ಇದ್ದಾನೆ. ಅವನೇ ಇಕ್ಷ್ವಾಕುವಂಶದ ರಾಜ ರಾಮಚಂದ್ರ. ನೀನು ಕೇಳಿದ ಎಲ್ಲಾ ಸದ್ಗುಣಗಳೂ ಅವನಲ್ಲಿ ಇವೆ. ಅದಕ್ಕಾಗಿಯೇ ಆತ 'ಸರ್ವಲೋಕಪ್ರಿಯಃ' ಬರಿಯ ಭೂಮಿಯ ಜನರಷ್ಟೇ ಅಲ್ಲ. ಸ್ವರ್ಗದ ದೇವತೆಗಳೂ ಅವನನ್ನು ಗೌರವಿಸುತ್ತಾರೆ. ಇಂತಹ ಗುಣವುಳ್ಳವನಾದರೂ ಅವನು ಸಾಧು ಅನ್ನಿಸಿಕೊಂಡಿದ್ದಾನೆ. ಸೌಜನ್ಯದ ಮೂರ್ತಿ; ಸಜ್ಜನಿಕೆಯ ಪ್ರತೀಕ; ಸದ್ಗುಣಗಳ ಗಣಿಯಾಗಿದ್ದಾನೆ. ರಾಮನಲ್ಲಿ ಅಹಂಕಾರದ ಸುಳಿವಿಲ್ಲ. ಸಾಧು ಎಂದಮಾತ್ರಕ್ಕೆ ಎಲ್ಲರ ಮುಂದೆಯೂ ತಲೆಬಾಗಿ, ಹಲ್ಲುಕಿರಿಯುವ ಸ್ವಭಾವ ಅವನದಲ್ಲ. ಅವನು ಅದೀನಾತ್ಮಾ-ಯಾರ ಮುಂದೆಯೂ ಡೊಗ್ಗು ಸಲಾಮು ಹೊಡೆಯುವವನಲ್ಲ. ದೀನನಾಗಿ ನಡೆದುಕೊಳ್ಳುವವನೂ ಅಲ್ಲ. ಸಂದರ್ಭ ಬಂದರೆ ಅವನು ಕಠಿಣನೂ ಆಗಬಲ್ಲ; ಮೃದುವೂ ಆಗಬಲ್ಲ. 'ವಜ್ರಾದಪಿ ಕಠೋರಣಿ ಮೃದೂನಿ ಕುಸುಮಾದಪಿ'. ಸಾಮಾನ್ಯವಾಗಿ ಜನರಲ್ಲಿ ದೈನ್ಯ ಅಥವಾ ಅಹಂಕಾರ-ಈ ಎರಡರಲ್ಲಿ ಒಂದು ಇದ್ದೇ ಇರುತ್ತದೆ. ಒಂದೋ ದೈನ್ಯ, ಇಲ್ಲ ಅಹಂಕಾರ. ಎರಡನ್ನೂ ಮೀರಿ ನಡೆದುಕೊಳ್ಳುವುದು ಅನೇಕರಿಗೆ ಗೊತ್ತೇ ಇರುವುಲ್ಲ. ರಾಮ ಇದಕ್ಕೆ ಅಪವಾದ. ಏಕೆಂದರೆ ಅವನು ವಿಚಕ್ಷಣಃ. ಎಲ್ಲರದ ಬಗ್ಗೆ ಎಲ್ಲವನ್ನೂ ತಿಳಿದ ಮೇಧಾವಿ. ಎಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿದ ಪ್ರಾಜ್ಞ. ಇಂತಹ ರಾಮನ ಆಡಳಿತವೂ ಆದರ್ಶಪ್ರಾಯವಾಗಿತ್ತು. ರಾಜಕೀಯ ವ್ಯವಸ್ಥೆ, ಅರ್ಥನೀತಿ ಎಲ್ಲವೂ ಸುದೃಢವಾಗಿತ್ತು. ಮಂತ್ರಿಗಳು, ಅಮಾತ್ಯರು ಎಲ್ಲರೂ ರಾಜನಷ್ಟೇ ಶೂರರೂ, ವಿದ್ಯಾವಂತರೂ, ಇಂದ್ರಿಯಗಳ ಮೇಲೆ ಹಿಡಿತವಿದ್ದವರೂ, ಪ್ರಜೆಗಳ ಮನಸ್ಸನ್ನು ಅರಿಯಬಲ್ಲವರೂ ಆಗಿದ್ದರು. ಸಾವಿರ ಮೂರ್ಖರಿಗಿಂತ ಜ್ಞಾನವಂತನಾದ ಒಬ್ಬನೇ ಮಂತ್ರಿ ಸಾಕು ಅನ್ನುವುದು ರಾಮನ ರಾಜನೀತಿಯಾಗಿತ್ತು. 'ಕಚ್ಚಿತ್ ಸಹಸ್ರಮೂರ್ಖಾಣಾಂ ಏಕಮಿಚ್ಛಸಿ ಪಂಡಿತಮ್'-(ಅಯೋಧ್ಯಾ:100-22)

ಇಂದಿನ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಆದರ್ಶವನ್ನು ಕಾಣುವುದು ದುರ್ಲಭವೇ ಆಗಿದೆ. ಮಂತ್ರಿಸಂಪುಟದಲ್ಲಿ ಎಲ್ಲೆಲ್ಲೂ ಮೂರ್ಖರೇ ತುಂಬಿಕೊಂಡಿರುವುದನ್ನು ನಾವು ಪ್ರತಿದಿನ ಕಾಣುತ್ತಿರುತ್ತೇವೆ. ಬೆಳಗಾಗೆದ್ದರೆ ದ್ವೇಷ ರಾಜಕಾರಣ ಮಾಡುವುದು, ಪರಸ್ಪರ ನಿಂದಿಸುವುದು, ರಾಷ್ಟ್ರದ್ರೋಹ ಕೆಲಸ ಮಾಡುವುದು, ತನ್ನ ಖಾತೆಯ ಬಗ್ಗೆ ಯೋಚಿಸದೆ, ಅಧ್ಯಯನ ಮಾಡದೆ, ದೇಶದ ಪ್ರಗತಿಗೆ ಶ್ರಮಿಸದೆ ಇರುವ ಸಾವಿರ ಸಾವಿರ ಮಂತ್ರಿಗಳನ್ನು ನಾವು ಇಂದು ಕಾಣಬಹುದು. ಅರ್ಹತೆಗೆ, ತಿಳಿವಳಿಕೆಗೆ ಯಾವ ಮನ್ನಣೆಯೂ ಇಲ್ಲದೆ ಜಾತಿಪ್ರಾತಿನಿಧ್ಯ, ಪ್ರಾದೇಶಿಕ ಪ್ರಾತಿನಿಧ್ಯ ಅನ್ನುತ್ತಾ ಅನರ್ಹರನ್ನೇ ಮಂತ್ರಿಗಳನ್ನಾಗಿ ಮಾಡುವುದು ಇಂದಿನ ರಾಜಕಾರಣದಲ್ಲಿ ಬಗೆಹರಿಸಲಾಗದ ಅನಿಷ್ಟ. ಸುದೈವಕ್ಕೆ ಕೇಂದ್ರ ಸರಕಾರದಲ್ಲಿ ಇಂತಹ ಮಂತ್ರಿಗಳು ಇಲ್ಲ ಅನ್ನುವುದೇ ಸಮಾಧಾನಕರ ಸಂಗತಿ.



ನಾಲ್ಪಸನ್ನಿಚಯಃ ಕಶ್ಚಿದಾಸೀತ್ತಸ್ಮಿನ್ ಪುರೋತ್ತಮೇ ।
ಕುಟುಂಬೀ ಯೋ ಹ್ಯಸಿದ್ಧಾರ್ಥೋಗಶ್ವಧನಧಾನ್ಯವಾನ್ ॥
ಕಾಮೀ ವಾ ನ ಕದರ್ಯೋ ವಾ ನೃಶಂಸಃ ಪುರುಷಃ ಕ್ವಚಿತ್ ।
ದ್ರಷ್ಟುಂ ಶಕ್ಯಮಯೋಧ್ಯಾಯಾಂ ನಾವಿದ್ವಾನ್ನ ಚ ನಾಸ್ತಿಕಃ ॥
ಬಾಲಕಾಂಡ: 6-7, 8

"ರಾಮರಾಜ್ಯದಲ್ಲಿ ಸ್ವಲ್ಪಮಾತ್ರವೇ ಹಣಕಾಸುಳ್ಳ ಯಾವ ಗೃಹಸ್ಥನೂ ಇರಲಿಲ್ಲ. ಇಷ್ಟಾರ್ಥ ಸಿದ್ಧಿಸದೆ ಆಶಾಭಂಗ ಹೊಂದಿದವನಾಗಲೀ, ಕುದುರೆ, ಹಸು, ಧನಧಾನ್ಯಗಳಿಲ್ಲದವನಾಗಲೀ ಒಬ್ಬನೂ ಇರಲಿಲ್ಲ. ಕಾಮುಕರು, ಜಿಪುಣರು, ಕ್ರೂರಿಗಳು, ವಿದ್ಯಾವಿಹೀನರು, ನಾಸ್ತಿಕರು ಯಾರೂ ಇರಲಿಲ್ಲ" ಎಂದು ಕವಿ ದಾಖಲಿಸುತ್ತಾನೆ. ಎಂತಹ ಅಪರೂಪದ ಮಾತಿದು. ರಾಮರಾಜ್ಯದಲ್ಲಿ "ಧನಧಾನ್ಯವಿಲ್ಲದ, ಅಶ್ವಸಂಪತ್ತು-ಗೋಸಂಪತ್ತು ಇಲ್ಲದವನು ಒಬ್ಬನೂ ಇರಲಿಲ್ಲ" ಅನ್ನುತ್ತಾನೆ. ನಮ್ಮನ್ನು ಆಳುವವರಿಗೆ ಇಂತಹ ಒಂದು ಸುಂದರ ಪರಿಕಲ್ಪನೆ ಇದೆಯೇ? ಅವರು ಎಂದಾದರೂ ಇಂತಹ ಮಹಾಕಾವ್ಯವನ್ನು ಓದಿದ್ದಾರೆಯೇ.

ಕವಿ ವಾಲ್ಮೀಕಿ ನಮ್ಮ ಕಣ್ಣನ್ನು ತೆರೆಸುವ ಇನ್ನೊಂದು ಅದ್ಭುತ ಮಾತನ್ನು ಹೇಳುತ್ತಾನೆ. ರಾಮರಾಜ್ಯದಲ್ಲಿ ನಾಸ್ತಿಕರೇ ಇರಲಿಲ್ಲವಂತೆ. 'ನ ಚ ನಾಸ್ತಿಕಃ'. ನಮ್ಮ ದುರ್ದೈವ ನೋಡಿ. ಭಾರತದ ಎಷ್ಟೋ ರಾಜ್ಯಗಳಲ್ಲಿ ನಾಸ್ತಿಕ ಸರ್ಕಾರವೇ ಇದೆ. ದೀಪಾವಳೀ, ಯುಗಾದಿಯಂತಹ ಹಿಂದು ಹಬ್ಬಗಳಂದು ಹಿಂದೂಗಳಿಗೆ ಯಾವ ಶುಭಾಶಯಗಳನ್ನೂ ಕೋರದೆ ಇತರ ಮತೀಯರ ಹಬ್ಬದಂದು ಅವರನ್ನು ಓಲೈಸುತ್ತಾ, ಅವರ ವೇಷಭೂಷಣ ಧರಿಸಿಕೊಂಡು, ಅವರ ಜೊತೆಗೇ ಊಟ ಮಾಡುತ್ತಾ ಸಂಭ್ರಮದಿಂದ ಬೀಗುವುದನ್ನು ಕಾಂಡಾಗ ಅವರು ಆಸ್ತಿಕರು ಎಂದು ಅನ್ನಿಸುತ್ತದೆಯೇ? ಖಂಡಿತ ಇಲ್ಲ. ಆಹಾರದ ವಿಷಯದಲ್ಲಿ ಸಸ್ಯಾಹಾರ ಅಥವಾ ಮಾಂಸಾಹಾರ ಅನ್ನುವುದು ಅವರವರಿಗೆ ಸಂಬಂಧಪಟ್ಟಿದ್ದು. ಸ್ವತಃ ಶ್ರೀರಾಮಚಂದ್ರನೇ ಮಾಂಸಾಹಾರಿಯಾಗಿದ್ದ. ಡಾ॥ ರಾಜಕುಮಾರ್ ರಾಘವೇಂದ್ರ ಸ್ವಾಮಿಗಳ ಪಾತ್ರ ಮಾಡುವಾಗ ಮಾಂಸವನ್ನು ಸೇವಿಸುತ್ತಿರಲಿಲ್ಲವಂತೆ. ಹಾಗೆಯೇ ಎನ್.ಟಿ.ಆರ್ ಕೂಡಾ ಶ್ರೀರಾಮನ ಪಾತ್ರ ಮಾಡುವಾಗ ಮಾಂಸಾಹಾರವನ್ನು ಮುಟ್ಟುತ್ತಿರಲಿಲ್ಲವಂತೆ. ಇದು ಶಿಷ್ಟಾಚಾರ. ಅಷ್ಟರಮಟ್ಟಿಗೆ ಅವರಲ್ಲಿ ದೇವರ ಬಗ್ಗೆ ಗೌರವವಿತ್ತು.

ಮಹಾತ್ಮಾಗಾಂಧಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅಂದರೆ ಇಂತಹ ಗುಣಗಳನ್ನು ಅವರು ಗುರುತಿಸಿದ್ದರು. ಆದರೆ ನಮ್ಮ ದುರ್ದೈವಕ್ಕೆ, ನಮ್ಮ ದುಷ್ಟರಾಜಕಾರಣಿಗಳಿಗೆ ಇವು ಯಾವವೂ ಬೇಡ. 'ತ್ಯಾಗೇನೈಕೇ ಅಮೃತತ್ವ ಮಾನಶುಃ'-"ತ್ಯಾಗದಿಂದ ಬರುವ ಸುಖವೇ ನಿಜವಾದ ಸುಖ" ಎಂಬುದು ಶ್ರೀರಾಮನ ಆದರ್ಶವಾಗಿತ್ತು. ಅರಸು ಪದವಿ, ಆಡಳಿತ ಪೀಠ, ಧರ್ಮಸಂರಕ್ಷಣೆಯ ಹೊಣೆ ಹೊತ್ತ ಧರ್ಮಪ್ರಭುವಿನ ತ್ಯಾಗಕ್ಷೇತ್ರ ಮಾತ್ರ. ಅದು ಸ್ವ-ವೈಭವೀಕರಣದ ಭೋಗದ ಸ್ಥಾನವಲ್ಲ ಎಂದು ತೋರಿಸಿಕೊಟ್ಟ ಮಹಾನುಭಾವ ಶ್ರೀರಾಮಚಂದ್ರ. ಭೋಗೈಕತತ್ಪರರಾದ ಇಂದಿನ ಬಹುಪಾಲು ರಾಜಕಾರಣಿಗಳಿಗೆ ಇದು ಅರ್ಥವಾಗುವುದಿಲ್ಲ.

ಶ್ರೀರಾಮನು ಮಾನವ ಕುಲಕ್ಕೆ ಆದರ್ಶ ಏಕೆ?

▸ ವಿದ್ವಾನ್ ನರಸಿಂಹ ಭಟ್ಟ



ಎಲ್ಲರಿಗೂ ಬಂದ ಜಿಜ್ಞಾಸೆ ಇದು. ಏಕೆಂದರೆ ರಾಮನವಮಿ ಒಂದು ಶ್ರೇಷ್ಠವಾದ ಪರ್ವ. ಈ ಪರ್ವವು ನಮ್ಮನ್ನು ಶ್ರೀರಾಮನ ಆದರ್ಶದ ಕಡೆ ಕೊಂಡೊಯ್ಯುತ್ತದೆ. ಹಾಗಾಗಿ ಇಂದು ರಾಮನನ್ನು ಪರಿಪರಿಯಾಗಿ ನೆನಪಿಸಿಕೊಳ್ಳುವ ಶ್ರೇಷ್ಠವಾದ ಪವಿತ್ರವಾದ ಪರ್ವ. ಅದಾವ ಕಾಲದ ಇತಿಹಾಸದಲ್ಲಿ ಬರುವ ಒಬ್ಬ ವ್ಯಕ್ತಿಯನ್ನು ನಾವು ಏಕೆ ಸ್ಮರಿಸಿಕೊಳ್ಳಬೇಕು? ಅವನ ನಡೆ, ಅವನ ನುಡಿಯನ್ನು ಅದೇಕೆ ಅನುಸರಿಸಬೇಕು? ಅನುಕರಿಸಬೇಕು? ಎಂಬುದು ನಮಗೆ ಬರುವ ಸಾಮಾನ್ಯ ಪ್ರಶ್ನೆಯಾಗಿದೆ. ಹೀಗೊಂದು ಮಾತು - "ನ ದೇವಚರಿತಂ ಚರಿತಂ ಚರೇತ್" ಎಂಬುದಾಗಿ. ಅಂದರೆ ದೇವರು ಮಾಡಿದಂತೆ ಮಾಡಬಾರದು ಎಂಬುದಾಗಿ. ಇನ್ನೊಂದು ಮಾತು - "ರಾಮಾದಿವತ್ ವರ್ತಿತವ್ಯಂ ನ ತು ರಾವಣಾದಿವತ್" ರಾಮನಂತೆ ಇರಬೇಕು; ರಾವಣನಂತೆ ಅಲ್ಲ ಎಂಬುದಾಗಿ. ಎರಡು ಮಾತುಗಳು ಪರಸ್ಪರ ವಿರೋಧದಂತೆ ಕಾಣುತ್ತವೆ. ವಾಸ್ತವವಾಗಿ ಇವೆರಡೂ ವಿರೋಧದಂತೆ ಭಾಸವಾಗುತ್ತದೆ; ಆದರೆ ವಿರೋಧವಿಲ್ಲ. ಹಾಗಾದರೆ ನಾವು ರಾಮನಂತೆ ನಡೆಯಬಾರದೇ? ರಾಮನಂತೆ ನುಡಿಯಬಾರದೇ? ಎಂಬ ಪ್ರಶ್ನೆಯೂ ಇದರ ಜೊತೆಯಲ್ಲಿ ಸಹಜವಾಗಿ ಬರುತ್ತದೆ. ಹಾಗಾಗಿ ಈ ಎಲ್ಲಾ ವಿಷಯಗಳನ್ನು ಇಟ್ಟುಕೊಂಡು ರಾಮನನ್ನು ಸ್ವಲ್ಪ ನೆನಪಿಸಿಕೊಳ್ಳೋಣ.

ಶ್ರೀಮದ್ ರಾಮಾಯಣದಲ್ಲಿ ವಾಲ್ಮೀಕಿಗಳು ನಾರದರಿಗೆ ಕೇಳುವ ಪ್ರಶ್ನೆ. ಅನೇಕ ಗುಣಗಳನ್ನು ಪಟ್ಟಿ ಮಾಡಿ ಇಂತಹ ಗುಣವಿಶಿಷ್ಟನಾದ ಯಾವನಾದರೂ ಒಬ್ಬ ವ್ಯಕ್ತಿ ಇದ್ದಾನೆಯೇ? ಎಂದು. ಅದಕ್ಕೆ ದಶರಥನಂದನ, ರಘುಕುಲತಿಲಕ, ಸರ್ವಜನಪ್ರಿಯ ವೇದ-ವೇದಾಂಗ-ತತ್ವಜ್ಞ, ಸ್ಮಿತಪೂರ್ವಭಾಷೀ, ಏಕಪತ್ನೀವ್ರತಸ್ಥ ಇತ್ಯಾದಿ ಅನೇಕ ಗುಣಗಳನ್ನು ಪಟ್ಟಿ ಮಾಡಿ ಶ್ರೀರಾಮನ ಆದರ್ಶದ ವ್ಯಕ್ತಿತ್ವವನ್ನು ಎಲ್ಲರೂ ಮನಗಾಣುವಂತೆ ವಿವರಿಸುವುದನ್ನು ನಾವು ಕಾಣಬಹುದು. ಅಂದರೆ ಶ್ರೀರಾಮನು ಒಬ್ಬ ಅವತಾರಿ. ಅವನ ಸಂಕಲ್ಪವು ಮಾನವನ ಅವತಾರರೂಪವಾದದ್ದು. ರಾವಣನ ಸಂಹಾರಕ್ಕೆಂದೇ ಅವತರಿಸಿದ ಯುಗಪುರುಷ, ರಾವಣನ ವರ ಫಲಿಸಬೇಕಾದರೆ ಮಾನವನರೂಪದಲ್ಲಿ ಅವತರಿಸಬೇಕಾದದ್ದು ಅತ್ಯಂತ ಅನಿವಾರ್ಯವಾಗಿತ್ತು. ಹಾಗಾಗಿ ಶ್ರೀರಾಮನು ತನ್ನ ದೇವತ್ವವನ್ನು ಎಲ್ಲೂ ಪ್ರಕಟಪಡಿಸದೇ ಮಾನವನಾಗಿಯೇ ತನ್ನ ಬದುಕಿನ ಕೊನೆಯವರೆಗೂ ವ್ಯವಹರಿಸಿದ. ಅತಿಮಾನುಷವಾದ ಯಾವ ಪವಾಡವನ್ನೂ ಮಾಡಿಲ್ಲ. ಮಾನವನ ಪರಿಮಿತಿಗೆ ಮೀರಿದ ಅದಾವ ಕಾರ್ಯವೂ ಅವನಿಂದಾಗಿಲ್ಲ. ಒಬ್ಬ ಸಾಮಾನ್ಯ ಮಾನವನಾಗಿ ಹೇಗೆ ಬದುಕಿ, ಬಲಿಷ್ಠನಾದ ರಾವಣನಂತಹ ಶತ್ರುವನ್ನು ಸಂಹರಿಸಬಹುದು? ಎಂಬುದಾಗಿ ಬದುಕಿ ತೋರಿಸಿದ. ಹಾಗಾಗಿ ಶ್ರೀರಾಮನ ಚರಿತೆ ನಮಗೆ ಅನುಕರಣೀಯ. ಇನ್ನೊಂದು ಮಾತು ನ ದೇವಚರಿತಂ ಚರೇತ್ ಎಂಬ ಮಾತಿಗೆ ಇದು ವಿರುದ್ಧವಲ್ಲವೇ? ಎಂದರೆ ಶ್ರೀರಾಮನು ಎಲ್ಲೂ ತನ್ನ ದೇವತ್ವವನ್ನು ಪ್ರದರ್ಶಿಸಿಲ್ಲ. ತನ್ನ ಅವತಾರ ಸ್ವರೂಪವಾದ ಮಾನುಷರೂಪವನ್ನೇ ಎಲ್ಲೆಡೆ ನಿರೂಪಿಸಿದ. ಹಾಗಾಗಿ ಶ್ರೀರಾಮನದ್ದು ಮಾನವಜೀವನವೇ ಹೊರತು, ದೇವಜೀವನ ಅಲ್ಲ. ಆದ್ದರಿಂದ ಶ್ರೀರಾಮನ ಚರಿತೆ ಅನುಕರಣೀಯ ಮತ್ತು ಅನುಸರಣೀಯ. ಇಂತಹ ವಿಶಿಷ್ಟ ಗುಣಸಂಪನ್ನನಾದ ರಾಮನು ನಮಗೆಲ್ಲರಿಗೂ ಆದರ್ಶ.

ಈ ಹಿಂದೆ ಹೇಳಿದಂತೆ ಅವನು ಬಾಲ್ಯದಿಂದ ಹಿಡಿದು ನಿರ್ಯಾಣದವರೆಗೆ ಅನೇಕ ಆದರ್ಶಗುಣಗಳನ್ನು ಪ್ರಕಟಪಡಿಸಿದ. ತಂದೆಗೆ ಮಗನಾಗಿ ಯಾವ ರೀತಿ ಇರಬೇಕು? ಎಂಬುದನ್ನು ತೋರಿಸಿದ. ತಂದೆಗೆ ಅನೇಕ ಪತ್ನಿಯರಿದ್ದರೂ ಅವರೆಲ್ಲರನ್ನು ತನ್ನ ಸ್ವಂತ ತಾಯಿಯಂತೆ ಹೇಗೆ ಪರಿಗಣಿಸಬಹುದು ಎಂಬ ಉದಾತ್ತಭಾವವನ್ನು ಬಿತ್ತರಿಸಿದ. ಒಬ್ಬನೇ ತಂದೆಗೆ ಮೂವರು ಪತ್ನಿಯರಲ್ಲಿ ಹುಟ್ಟಿದ ನಾಲ್ಕು ಜನ ಅಣ್ಣತಮ್ಮಂದಿರು ಹೇಗೆ ಅನ್ಯೋನ್ಯವಾಗಿ ಬದುಕಬಹುದು ಎಂಬುದನ್ನು ತೋರಿಸಿಕೊಟ್ಟ. ಹೇಗೆ ಗುರುವಿಗೆ ತಕ್ಕ ಶಿಷ್ಯ ಎಂಬುದನ್ನು ವಿಶ್ವಾಮಿತ್ರನ ಯಜ್ಞಸಂರಕ್ಷಣೆಯ ನೆಪದಲ್ಲಿ ನೆನಪಿಸಿದ. ತಾನು ಆಡಿದಂತೆ ಮಾಡುವೆನು ಎಂಬ ಸತ್ಯಸಂಧತೆಯನ್ನು ರಾಮಾಯಣದ ಬುಡದಿಂದ ತುದಿಯತನಕ ಅರುಹಿದ. ಸುಗ್ರೀವನ ಜೊತೆ ಸಖ್ಯವನ್ನು ಬೆಳೆಸಿ ಹೇಗೆ ಮೈತ್ರಿಯನ್ನು ಮಾಡಬೇಕು? ಎಂಬುದನ್ನು ಜಾಹಿರಪಡಿಸಿದ. ಶತ್ರುವಿನ ಪಾಳೆಯದಲ್ಲಿ ಇದ್ದು ಶರಣಾಗತನಾಗಿ ಬಂದರೆ ಅವರನ್ನು ಹೇಗೆ ಸ್ವೀಕರಿಸಬೇಕು? ಎಂಬುದನ್ನು ತೋರಿಸಿ ಶರಣಾಗತ-ವತ್ಸಲನಾದ ಎಂಬುದನ್ನು ವಿಭೀಷಣ ಶರಣಾಗತಿಯ ಪ್ರಕರಣದಲ್ಲಿ ಜಗತ್ತಿಗೆ ತಿಳಿಸಿದ. ವೈರವು ವ್ಯಕ್ತಿಗತವಾದದ್ದಲ್ಲ; ವ್ಯಕ್ತಿಯಲ್ಲಿರುವ ದೋಷಗತವಾದದ್ದು ಎಂಬುದನ್ನು ತಿಳಿಸಲು ಮರಣಾಂತಾನಿ



ವೈರಾಣಿ ಎಂಬಂತೆ ರಾವಣನ ಮತ್ತು ವಾಲಿಯ ಮರಣದ ಅನಂತರ ಸ್ವತಃ ತಾನೇ ಇದ್ದು ಅವರಿಬ್ಬರಿಗೂ ಅಂತ್ಯಕ್ರಿಯೆಯನ್ನು ಮಾಡಿಸಿದ್ದು ಅವನೆಂತಹ ಸಮತ್ವ ಉಳ್ಳವನು!? ಎಂಬುದನ್ನು ತಿಳಿಸಿದ. ಹೀಗೆ ಅವನ ಪ್ರತಿ ಹೆಜ್ಜೆಯೂ ಆದರ್ಶ. ಅವನ ಪ್ರತಿ ನುಡಿಯೂ ಆದರ್ಶ. ರಾಮನೆಂದೂ ತಪ್ಪನ್ನು ಮಾಡಲಿಲ್ಲ; ತಪ್ಪನ್ನು ಆಡಿಲ್ಲ. ಏಕೆಂದರೆ ಅವನೊಬ್ಬ ಧರ್ಮಪುರುಷ. ಧರ್ಮವೇ ಅವತರಿಸಿದರೆ ಅದು ರಾಮನಾಗುವುದು ತಾನೆ! ಧರ್ಮವಾದಲ್ಲಿ ಎಂದಾದರೂ ತಪ್ಪು ನಡೆಯಲು ಸಾಧ್ಯವೇ? ಹಾಗಾಗಿ ನಮ್ಮ ಬುದ್ಧಿಗೆ ಶ್ರೀರಾಮನು ತಪ್ಪಾಗಿ ಕಂಡರೆ, ಅದು ನಮ್ಮ ಬುದ್ಧಿಯ ದೋಷದಿಂದ ಅಷ್ಟೇ, ಹೊರತು ಶ್ರೀರಾಮನ ತಪ್ಪಲ್ಲ. ಅಲ್ಲಿ ತಪ್ಪು ಅಸಾಧ್ಯ. ಏಕೆಂದರೆ ಅವನು ಧರ್ಮಮೂರ್ತಿ. ಹೀಗೆ ಧರ್ಮಸ್ವರೂಪನಾಗಿ, ಗುಣಪರಿಪೂರ್ಣನಾಗಿ, ಆದರ್ಶ ಮಾನವನಾಗಿ ಬೆಳಗಿದ.

ಅಷ್ಟೇ ಅಲ್ಲ, ಇಂದ್ರಿಯಗಳಿಗೂ ಆತ ವಿಷಯನಾದ, ತನ್ನ ನಡೆಯಿಂದ ಸಾಮಾನ್ಯರಿಗೂ ಅನುಕರಣೀಯನಾದ. ಯಾರು ಅಂತರಂಗದಲ್ಲಿ ಕಾಣಲು ಸಮರ್ಥರೋ ಅವರಿಗೂ ಶ್ರೀರಾಮನು ದೇವನಾಗಿ ಕಂಡ. ಯಾರು ಇನ್ನೂ ಒಳಗೆ ಕಾಣಬಲ್ಲರೋ ಅವರಿಗೆ ಆತ್ಮಾರಾಮನಾಗಿ ಗೋಚರಿಸಿದ. ಇದಕ್ಕೆ ಶ್ರೀರಂಗ ಮಹಾಗುರುಗಳ ಒಂದು ಮಾತು ಸಾಕು ಶ್ರೀರಾಮನ ಅಸಾಧಾರಣತ್ವವನ್ನು ಅರ್ಥಮಾಡಿಕೊಳ್ಳಲು. "ನಾರಾಯಣನು ನರನಾಗಿ ಅವತರಿಸಿ ನರರೊಡನೆ ಕರೆದುಕೊಂಡು ಹೋಗಲು ಇಳಿದು ಬಂದವನೇ ಶ್ರೀರಾಮ" ಎಂಬ ಮಾತು ಶ್ರೀರಾಮನ ಪರಿಪೂರ್ಣ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ. ಕೇವಲ ಪರ್ವಕಾಲದಲ್ಲಿ ಮಾತ್ರವಲ್ಲ, ಯಾವಾಗಲೂ ಶ್ರೀರಾಮನ ಆದರ್ಶ ವ್ಯಕ್ತಿತ್ವವನ್ನು ನಾವು ಸ್ಮರಿಸಬೇಕು ಎಂಬುದಾಗಿ ಭಾವಿಸುತ್ತೇನೆ.

ಶ್ರೀಮಂತ ಲೀಗ್ ಸಂಪೂರ್ಣ ವೇಳಾಪಟ್ಟಿ | 12 ಮೈದಾನದಲ್ಲಿ ಮಿಂಚಲು ಆಟಗಾರರು ಸಜ್ಜು

ಇನ್ಮುಂದೆ ಐಪಿಎಲ್ ಹವಾ

• ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಿಗೆ ಕೇವಲ ಒಂದು ದಿನ ಮಾತ್ರ ಬಾಕಿ ಇರುವಾಗಲೇ ಎರಡನೇ ಹಂತದ ವೇಳಾಪಟ್ಟಿ ಗುರುವಾರದಂದು ಪ್ರಕಟಗೊಂಡಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದ ರಾಬಾದ್ ನಡುವಿನ ಪಂದ್ಯದೊಂದಿಗೆ ಮಹಾಕೂಟ ಶುರುವಾಗಲಿದೆ. ಪಂಚರಾಜ್ಯ ಚುನಾವಣೆ ಬೆನ್ನಲ್ಲೇ ಈ ಹಿಂದೆ ಕೇವಲ 20 ಪಂದ್ಯಗಳ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ಚುನಾವಣೆ ದಿನಾಂಕ ಘೋಷಿಸಲಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಪಂದ್ಯಾವಳಿಯ ಎರಡನೇ ಭಾಗದ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಹಳೆಯ ವೇಳಾಪಟ್ಟಿಯಲ್ಲಿ 20 ಪಂದ್ಯಗಳಿದ್ದವು. ಈಗಿನ ವೇಳಾಪಟ್ಟಿಯಲ್ಲಿ 50 ಪಂದ್ಯಗಳಿವೆ. ಅಂದರೆ ಒಟ್ಟು ಕೂಟದ ಪಂದ್ಯಗಳು ಇದರಲ್ಲಿ ಸೇರಿಸಲಾಗಿದೆ. 4 ನಾಕೌಟ್ ಪಂದ್ಯಗಳ ವೇಳಾಪಟ್ಟಿ ಮುಂದಿನ ದಿನಗಳಲ್ಲಿ ಬಿಡಲಾಗುವುದು ಎಂದು ಬಿಸಿಸಿಐ ತಿಳಿಸಿದೆ.

74 ಪಂದ್ಯಗಳು: ಲೀಗ್ ಹಂತದಲ್ಲಿ ಎಲ್ಲಾ 10 ತಂಡಗಳು ತಲಾ 14 ಪಂದ್ಯಗಳನ್ನಾಡಲಿವೆ. 7 ತವರು, 7 ತವರಲ್ಲದ ಪಂದ್ಯಗಳನ್ನಾಡುತ್ತವೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 5 ಪಂದ್ಯಗಳನ್ನು ಮಾತ್ರ ತವರಲ್ಲಿ ಆಡಲಿದೆ. ಮುಂದಿನ 2 ಪಂದ್ಯಗಳನ್ನು ರಾಯ್ಪುರದಲ್ಲಿ ಆಡುವುದಾಗಿ ಘೋಷಣೆ ಮಾಡಿದೆ. ಕಳೆದ ವರ್ಷ ಬಿಸಿಸಿಐ 19ನೇ ಆವೃತ್ತಿಯಲ್ಲಿ 84 ಪಂದ್ಯಗಳನ್ನು ಆಡಿಸಬಹುದು ಎಂದು ಹೇಳಲಾಗಿತ್ತು. ಆದರೆ ಈ ಬಾರಿ 70 ಲೀಗ್, 4 ನಾಕೌಟ್ ಪಂದ್ಯಗಳನ್ನು ಆಡಿಸುವುದಾಗಿ ತಿಳಿಸಲಾಗಿದೆ.

ಏಪ್ರಿಲ್ 13ಕ್ಕೆ ಶುರು: ಎರಡನೇ ಹಂತದ ವೇಳಾಪಟ್ಟಿ ಪ್ರಕಾರ ಪಂದ್ಯಗಳು ಏಪ್ರಿಲ್ 13ಕ್ಕೆ ಶುರುವಾಗಲಿವೆ. ಮೊದಲ ಹಂತದ ವೇಳಾಪಟ್ಟಿ ಪ್ರಕಾರ ಏಪ್ರಿಲ್ 12ಕ್ಕೆ ಕೊನೆಯ ಪಂದ್ಯ ನಡೆಯಬೇಕಿತ್ತು. ಎರಡನೇ ಹಂತದ ಪಂದ್ಯಗಳು ಏಪ್ರಿಲ್ 13ಕ್ಕೆ ಶುರುವಾಗಲಿವೆ. ಹೈದರಾಬಾದ್ ಹಾಗೂ ರಾಜಸ್ಥಾನ ತಂಡಗಳು 21ನೇ ಪಂದ್ಯದಲ್ಲಿ ಆಡಲಿವೆ. ಮೇ 24ರಂದು ಫೈನಲ್ ಪಂದ್ಯ ನಡೆಯಲಿದೆ.

12 ಕ್ರೀಡಾಂಗಣದಲ್ಲಿ ಪಂದ್ಯ: ಈ ಬಾರಿಯ ಐಪಿಎಲ್ ಪಂದ್ಯಗಳು 12 ಕ್ರೀಡಾಂಗಣಗಳಲ್ಲಿ ನಡೆಯಲಿವೆ. ರಾಯ್ಪುರ, ಧರ್ಮಶಾಲಾ, ಜೈಪುರದಲ್ಲೂ ಪಂದ್ಯಗಳು ನಡೆಯುತ್ತಿರುವುದು ವಿಶೇಷ.



- ಈ ಬಾರಿ ನಡೆಯಲ್ಲ ಐಪಿಎಲ್ ಉದ್ಘಾಟನಾ ಸಮಾರಂಭ
- ಕಾಲ್ತುಳಿತದಲ್ಲಿ ಮೃತಪಟ್ಟವರ ಸ್ಮರಣಾರ್ಥ ರದ್ದು

ಐಪಿಎಲ್ ಸಂಪೂರ್ಣ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಮಾ.28	ಆರ್‌ಸಿಬಿ v/s ಹೈದರಾಬಾದ್	ಬೆಂಗಳೂರು	ಸಂಜೆ 7:30
ಮಾ. 29	ಮುಂಬೈ v/s ಕೋಲ್ಕತ್ತಾ	ಮುಂಬೈ	ಸಂಜೆ 7:30
ಮಾ. 30	ರಾಜಸ್ಥಾನ v/s ಚೆನ್ನೈ	ಗುವಾಹಟಿ	ಸಂಜೆ 7:30
ಮಾ. 31	ಪಂಜಾಬ್ v/s ಗುಜರಾತ್	ಚಂಡೀಗಢ	ಸಂಜೆ 7:30
ಏ. 1	ಲಖನೌ v/s ಡೆಲ್ಲಿ	ಲಖನೌ	ಸಂಜೆ 7:30
ಏ. 2	ಕೋಲ್ಕತ್ತಾ v/s ಹೈದರಾಬಾದ್	ಕೋಲ್ಕತ್ತಾ	ಸಂಜೆ 7:30
ಏ. 3	ಚೆನ್ನೈ v/s ಪಂಜಾಬ್	ಚೆನ್ನೈ	ಸಂಜೆ 7:30
ಏ. 4	ಡೆಲ್ಲಿ v/s ಮುಂಬೈ	ಡೆಲ್ಲಿ	ಮಧ್ಯಾಹ್ನ 3:30
ಏ. 4	ಗುಜರಾತ್ v/s ರಾಜಸ್ಥಾನ	ಅಹಮದಾಬಾದ್	ಸಂಜೆ 7:30
ಏ. 5	ಹೈದರಾಬಾದ್ v/s ಲಖನೌ	ಹೈದರಾಬಾದ್	ಮಧ್ಯಾಹ್ನ 3:30
ಏ. 5	ಆರ್‌ಸಿಬಿ v/s ಚೆನ್ನೈ	ಬೆಂಗಳೂರು	ಸಂಜೆ 7:30
ಏ. 6	ಕೋಲ್ಕತ್ತಾ v/s ಪಂಜಾಬ್	ಕೋಲ್ಕತ್ತಾ	ಸಂಜೆ 7:30
ಏ. 7	ರಾಜಸ್ಥಾನ v/sಮುಂಬೈ	ಗುವಾಹಟಿ	ಸಂಜೆ 7:30
ಏ. 8	ಡೆಲ್ಲಿ v/s ಗುಜರಾತ್	ಡೆಲ್ಲಿ	ಸಂಜೆ 7:30
ಏ. 9	ಕೋಲ್ಕತ್ತಾ v/s ಲಖನೌ	ಕೋಲ್ಕತ್ತಾ	ಸಂಜೆ 7:30
ಏ. 10	ರಾಜಸ್ಥಾನ v/s ಆರ್‌ಸಿಬಿ	ಗುವಾಹಟಿ	ಸಂಜೆ 7:30
ಏ. 11	ಪಂಜಾಬ್ v/s ಹೈದರಾಬಾದ್	ಚಂಡೀಗಢ	ಮಧ್ಯಾಹ್ನ 3:30
ಏ. 11	ಚೆನ್ನೈ v/s ಡೆಲ್ಲಿ	ಚೆನ್ನೈ	ಸಂಜೆ 7:30
ಏ. 12	ಲಖನೌ v/s ಗುಜರಾತ್	ಲಖನೌ	ಮಧ್ಯಾಹ್ನ 3:30
ಏ. 12	ಮುಂಬೈ v/s ಆರ್‌ಸಿಬಿ	ಮುಂಬೈ	ಸಂಜೆ 7:30
ಏ. 13	ಹೈದರಾಬಾದ್ v/s ರಾಜಸ್ಥಾನ	ಹೈದರಾಬಾದ್	ಸಂಜೆ 7:30
ಏ. 14	ಚೆನ್ನೈ v/s ಕೋಲ್ಕತ್ತಾ	ಚೆನ್ನೈ	ಸಂಜೆ 7:30
ಏ. 15	ಆರ್‌ಸಿಬಿ v/s ಲಖನೌ	ಬೆಂಗಳೂರು	ಸಂಜೆ 7:30
ಏ. 16	ಮುಂಬೈ v/s ಪಂಜಾಬ್	ಮುಂಬೈ	ಸಂಜೆ 7:30
ಏ. 17	ಗುಜರಾತ್ v/s ಕೋಲ್ಕತ್ತಾ	ಅಹಮದಾಬಾದ್	ಸಂಜೆ 7:30
ಏ. 18	ಆರ್‌ಸಿಬಿ v/s ಡೆಲ್ಲಿ	ಬೆಂಗಳೂರು	ಮಧ್ಯಾಹ್ನ 3:30
ಏ. 18	ಹೈದರಾಬಾದ್ v/s ಚೆನ್ನೈ	ಹೈದರಾಬಾದ್	ಸಂಜೆ 7:30
ಏ. 19	ಕೋಲ್ಕತ್ತಾ v/s ರಾಜಸ್ಥಾನ	ಕೋಲ್ಕತ್ತಾ	ಮಧ್ಯಾಹ್ನ 3:30
ಏ. 19	ಪಂಜಾಬ್ v/s ಲಖನೌ	ನ್ಯೂ ಚಂಡೀಗಢ	ಸಂಜೆ 7:30
ಏ. 20	ಗುಜರಾತ್ v/s ಮುಂಬೈ	ಅಹಮದಾಬಾದ್	ಸಂಜೆ 7:30
ಏ. 21	ಹೈದರಾಬಾದ್ v/s ಡೆಲ್ಲಿ	ಹೈದರಾಬಾದ್	ಸಂಜೆ 7:30
ಏ. 22	ಲಖನೌ v/s ರಾಜಸ್ಥಾನ	ಲಖನೌ	ಸಂಜೆ 7:30
ಏ. 23	ಮುಂಬೈ v/sಚೆನ್ನೈ	ಮುಂಬೈ	ಸಂಜೆ 7:300
ಏ. 24	ಆರ್‌ಸಿಬಿ v/s ಗುಜರಾತ್	ಬೆಂಗಳೂರು	ಸಂಜೆ 7:30
ಏ. 25	ಡೆಲ್ಲಿ v/s ಪಂಜಾಬ್	ಡೆಲ್ಲಿ	ಮಧ್ಯಾಹ್ನ 3:30
ಏ. 25	ರಾಜಸ್ಥಾನ v/s ಹೈದರಾಬಾದ್	ಜೈಪುರ	ಸಂಜೆ 7:30
ಏ. 26	ಗುಜರಾತ್ v/s ಚೆನ್ನೈ	ಅಹಮದಾಬಾದ್	ಮಧ್ಯಾಹ್ನ 3:30
ಏ. 26	ಲಖನೌ v/s ಕೋಲ್ಕತ್ತಾ	ಲಖನೌ ಸಂಜೆ	7:30
ಏ. 27	ಡೆಲ್ಲಿ v/s ಆರ್‌ಸಿಬಿ	ಡೆಲ್ಲಿ	ಸಂಜೆ 7:30
ಏ. 28	ಪಂಜಾಬ್ v/s ರಾಜಸ್ಥಾನ	ಚಂಡೀಗಢ	ಸಂಜೆ 7:30
ಏ. 29	ಮುಂಬೈ v/s ಹೈದರಾಬಾದ್	ಮುಂಬೈ	ಸಂಜೆ 7:30
ಏ. 30	ಗುಜರಾತ್ v/s ಆರ್‌ಸಿಬಿ	ಅಹಮದಾಬಾದ್	ಸಂಜೆ 7:30
ಮೇ 1	ರಾಜಸ್ಥಾನ v/s ಡೆಲ್ಲಿ	ಜೈಪುರ	ಸಂಜೆ 7:30
ಮೇ 2	ಚೆನ್ನೈ v/s ಮುಂಬೈ	ಚೆನ್ನೈ	ಸಂಜೆ 7:30
ಮೇ 3	ಹೈದರಾಬಾದ್ v/s ಕೋಲ್ಕತ್ತಾ	ಹೈದರಾಬಾದ್	ಮಧ್ಯಾಹ್ನ3:30
ಮೇ 3	ಗುಜರಾತ್ v/s ಪಂಜಾಬ್	ಅಹಮದಾಬಾದ್	ಸಂಜೆ 7:30
ಮೇ 4	ಮುಂಬೈ v/s ಲಖನೌ	ಮುಂಬೈ	ಸಂಜೆ 7:30
ಮೇ 5	ಡೆಲ್ಲಿ v/s ಚೆನ್ನೈ	ಡೆಲ್ಲಿ	ಸಂಜೆ 7:30
ಮೇ 6	ಹೈದರಾಬಾದ್ v/s ಪಂಜಾಬ್	ಹೈದರಾಬಾದ್	ಸಂಜೆ 7:30
ಮೇ 7	ಲಖನೌ v/s ಆರ್‌ಸಿಬಿ	ಲಖನೌ	ಸಂಜೆ 7:30
ಮೇ 8	ಡೆಲ್ಲಿ v/s ಕೋಲ್ಕತ್ತಾ	ಡೆಲ್ಲಿ	ಸಂಜೆ 7:30
ಮೇ 9	ರಾಜಸ್ಥಾನ v/s ಗುಜರಾತ್	ಜೈಪುರ	ಸಂಜೆ 7:30
ಮೇ 10	ಚೆನ್ನೈ v/s ಲಖನೌ	ಚೆನ್ನೈ	ಮಧ್ಯಾಹ್ನ 3:30
ಮೇ 10	ಆರ್‌ಸಿಬಿ v/s ಮುಂಬೈ	ರಾಯ್ಪುರ	ಸಂಜೆ 7:30
ಮೇ 11	ಪಂಜಾಬ್ v/s ಡೆಲ್ಲಿ	ಧರ್ಮಶಾಲಾ	ಸಂಜೆ 7:30
ಮೇ 12	ಗುಜರಾತ್ v/s ಹೈದರಾಬಾದ್	ಅಹಮದಾಬಾದ್	ಸಂಜೆ 7:30
ಮೇ 13	ಆರ್‌ಸಿಬಿ v/s ಕೋಲ್ಕತ್ತಾ	ರಾಯ್ಪುರ	ಸಂಜೆ 7:30
ಮೇ 14	ಪಂಜಾಬ್ v/s ಮುಂಬೈ	ಧರ್ಮಶಾಲಾ	ಸಂಜೆ 7:30
ಮೇ 15	ಲಖನೌ v/s ಚೆನ್ನೈ	ಲಖನೌ	ಸಂಜೆ 7:30
ಮೇ 16	ಕೋಲ್ಕತ್ತಾ v/s ಗುಜರಾತ್	ಕೋಲ್ಕತ್ತಾ	ಸಂಜೆ 7:30
ಮೇ 17	ಪಂಜಾಬ್ v/s ಆರ್‌ಸಿಬಿ	ಧರ್ಮಶಾಲಾ	ಮಧ್ಯಾಹ್ನ 3:30
ಮೇ 17	ಡೆಲ್ಲಿ v/s ರಾಜಸ್ಥಾನ	ಡೆಲ್ಲಿ	ಸಂಜೆ 7:30
ಮೇ 18	ಚೆನ್ನೈ v/s ಹೈದರಾಬಾದ್	ಚೆನ್ನೈ	ಸಂಜೆ 7:30
ಮೇ 19	ರಾಜಸ್ಥಾನ v/s ಲಖನೌ	ಜೈಪುರ	ಸಂಜೆ 7:30
ಮೇ 20	ಕೋಲ್ಕತ್ತಾ v/s ಮುಂಬೈ	ಕೋಲ್ಕತ್ತಾ	ಸಂಜೆ 7:30
ಮೇ 21	ಚೆನ್ನೈ v/s ಗುಜರಾತ್	ಚೆನ್ನೈ	ಸಂಜೆ 7:30
ಮೇ 22	ಹೈದರಾಬಾದ್ v/s ಆರ್‌ಸಿಬಿ	ಹೈದರಾಬಾದ್	ಸಂಜೆ 7:30
ಮೇ 23	ಲಖನೌ v/s ಪಂಜಾಬ್	ಲಖನೌ	ಸಂಜೆ 7:30
ಮೇ 24	ಮುಂಬೈ v/s ರಾಜಸ್ಥಾನ	ಮುಂಬೈ	ಮಧ್ಯಾಹ್ನ 3:30
ಮೇ 24	ಕೋಲ್ಕತ್ತಾ v/s ಡೆಲ್ಲಿ	ಕೋಲ್ಕತ್ತಾ	ಸಂಜೆ 7:30

ಆರ್‌ಸಿಬಿ ಹೆಸರು ಬದಲಿಲ್ಲ



• ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಟೈಮ್ಸ್ ಆಫ್ ಇಂಡಿಯಾ ಅಂತಹ ಕಂಪೆನಿಗಳಿರುವ ಬಿರ್ಲಾ ಒಕ್ಕೂಟ ಖರೀದಿ ಮಾಡಿದೆ. 16,700 ಕೋಟಿ ರೂ.ಗೆ ತಂಡವನ್ನು ಖರೀದಿಸಿರುವ ಬಿರ್ಲಾ ಹೆಚ್ಚಿನ ಬದಲಾವಣೆಗಳನ್ನು ಮಾಡದೆ ಮುನ್ನಡೆಸುವ ತೀರ್ಮಾನಕ್ಕೆ ಬಂದಂತಿದೆ.

ಆರ್‌ಸಿಬಿ ತಂಡವನ್ನು ಮಾರಾಟಕ್ಕಿಟ್ಟ ನಂತರ ಹಳೆಯ ರಾಯಲ್ ಚಾಲೆಂಜರ್ಸ್ ಹೆಸರು ಬದಲಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿತ್ತು. ಆದರೆ ಬಿರ್ಲಾ ಕಂಪೆನಿಯ ಮಾಲೀಕರಲ್ಲಿ ಒಬ್ಬರಾದ ಆನನ್ಯ ಬಿರ್ಲಾ ತಂಡದ ಹೆಸರಲ್ಲಿ ಯಾವುದೇ ಬದಲಾವಣೆ ಮಾಡಲಾಗಲ್ಲ ಎಂದು ಸುಳಿವು ನೀಡಿದ್ದಾರೆ. ತಂಡ ಖರೀದಿಸಿರುವ ಬಗ್ಗೆ ತಮಗೆ ಬಂದ ಅಭಿನಂದನೆಗಳಿಗೆ ಧನ್ಯವಾದ ತಿಳಿಸುತ್ತಾ ಅವರು, ಆರ್‌ಸಿಬಿ ಹೆಸರು ಬದಲಾಗಲ್ಲ ಎಂಬ ಪೋಸ್ಟ್ ಅನ್ನೂ ಸಾಮಾಜಿಕ ಜಾಲತಾಣದ ಸ್ಟೋರಿಯಲ್ಲಿ ಹಾಕಿಕೊಂಡಿದ್ದಾರೆ.

ಬೆಂಗಳೂರಲ್ಲಿ 2 ಅಂತಾರಾಷ್ಟ್ರೀಯ ಪಂದ್ಯ

• ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮರಳಿದ ಖುಷಿಯಲ್ಲಿರುವ ಕರ್ನಾಟಕದ ಸಮಸ್ತ ಕ್ರಿಕೆಟ್ ಅಭಿಮಾನಿಗಳಿಗೆ ಖುಷಿ ಪಡುವುದಕ್ಕೆ ಮತ್ತೊಂದು ಕಾರಣ ಸಿಕ್ಕಿದೆ. ಸರ್ಕಾರದಿಂದ ನಿರ್ಬಂಧ ಎದುರಿಸಿದ್ದ ಚಿನ್ನಸ್ವಾಮಿ ಕ್ರೀಡಾಂಗಣ ಐಪಿಎಲ್ ಜೊತೆಗೆ ಅಂತಾರಾಷ್ಟ್ರೀಯ ಪಂದ್ಯಗಳನ್ನೂ ಆಯೋಜಿಸಲು ಅನುಮತಿ ಪಡೆದಿದ್ದು, 2026–27ರ ಭಾರತ ಸೀನಿಯರ್ ತಂಡದ ಕ್ಯಾಲೆಂಡರ್‌ನಲ್ಲಿ ಒಂದು ಏಕದಿನ ಮತ್ತು ಒಂದು ಟಿ20 ಪಂದ್ಯ ಆಯೋಜಿಸುವ ಅವಕಾಶ ಪಡೆದಿದೆ.

ಮುಂಬರಲಿರುವ ವರ್ಷದಲ್ಲಿ ಭಾರತ ಆಡಲಿರುವ ತವರು ದ್ವಿಪಕ್ಷೀಯ ಸರಣಿಯ ವೇಳಾಪಟ್ಟಿಯನ್ನು ಬಿಸಿಸಿಐ ಗುರುವಾರದಂದು ಪ್ರಕಟಿಸಿದೆ. ವಿಂಡೀಸ್ ಅಂತಹ ತಂಡಗಳು ಪಂದ್ಯಗಳನ್ನಾಡುವುದಕ್ಕೆ ಭಾರತಕ್ಕೆ ಪ್ರಯಾಣಿಸಲಿವೆ. ಟೆಸ್ಟ್, ಏಕದಿನ ಹಾಗೂ ಟಿ20 ಮಾದರಿಯಲ್ಲಿ ಒಟ್ಟು 22 ಪಂದ್ಯಗಳನ್ನು ಆಡಲಿದೆ. 17 ನಗರಗಳು ಅಂತಾರಾಷ್ಟ್ರೀಯ ಪಂದ್ಯಗಳಿಗೆ ಆತಿಥ್ಯ ನೀಡಲಿವೆ. 2 ವರ್ಷಕ್ಕೊಮ್ಮೆ ನಡೆಯುವ ಬಾರ್ಡರ್ ಗವಾಸ್ಕರ್ ಟ್ರೋಫಿ ಸರಣಿಗೆ ವೇಳಾಪಟ್ಟಿ ಬಿಡುಗಡೆಯಾಗಿದೆ.

4 ತಂಡಗಳ ಪ್ರವಾಸ: ಸೆಪ್ಟೆಂಬರ್‌ನಲ್ಲಿ ವಿಂಡೀಸ್ ಪ್ರವಾಸದೊಂದಿಗೆ ತವರು ಸರಣಿಗಳು ಶುರುವಾಗಲಿವೆ. ಏಕದಿನ ಹಾಗೂ ಟಿ20 ಮಾದರಿಯ ದೊಡ್ಡ ಸರಣಿ ಆಡುವುದಕ್ಕೆ ವೆಸ್ಟ್ ಇಂಡೀಸ್ ಬರಲಿದೆ. ಸರಣಿಯಲ್ಲಿ 3 ಏಕದಿನ ಪಂದ್ಯಗಳು ನಡೆಯಲಿವೆ. 5 ಟಿ20 ಪಂದ್ಯಗಳೂ ನಡೆಯಲಿವೆ. ಡಿಸೆಂಬರ್‌ನಲ್ಲಿ ಶ್ರೀಲಂಕಾದೊಂದಿಗೆ ಭಾರತ ತವರು ಸರಣಿ ಆಡಲಿದ್ದು, 3 ಏಕದಿನ ಹಾಗೂ 3 ಟಿ20 ಇರಲಿವೆ. ಜಿಂಬಾಬ್ವೆ ವಿರುದ್ಧ 3 ಪಂದ್ಯಗಳ ಏಕದಿನ ಸರಣಿ ನಡೆಯಲಿದೆ.

ಬೆಂಗಳೂರಲ್ಲಿ 2 ಪಂದ್ಯ: ಕಾಲ್ತುಳಿತ ನಂತರ ಸರ್ಕಾರದ ನಿರ್ಬಂಧನೆಯ ನಂತರ ಬೆಂಗಳೂರು ಮಹಿಳೆಯರ ಏಕದಿನ ವಿಶ್ವಕಪ್ ಸೇರಿದಂತೆ ಪ್ರಮುಖ ಪಂದ್ಯಗಳನ್ನು ಕಳೆದುಕೊಂಡಿತ್ತು. ಬದಲಿಯಾಗಿ ಭಾರತ ಈ ಬಾರಿ ಎರಡು ಪಂದ್ಯಗಳನ್ನು ಬೆಂಗಳೂರಿನಲ್ಲಿ ಆಡಲಿದೆ ಎಂದು ಬಿಸಿಸಿಐ ಘೋಷಿಸಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಂಡೀಸ್ ವಿರುದ್ಧದ ಕೊನೆಯ ಟಿ20 ಪಂದ್ಯಕ್ಕೆ ಬೆಂಗಳೂರು ಆತಿಥ್ಯ ನೀಡಲಿದೆ. ಡಿಸೆಂಬರ್‌ನಲ್ಲಿ ಶ್ರೀಲಂಕಾ ಸರಣಿಯಲ್ಲಿ ಬೆಂಗಳೂರು ಏಕದಿನ ಪಂದ್ಯಕ್ಕೆ ಆತಿಥ್ಯ ನೀಡಲಿದೆ.

ವೇಳಾಪಟ್ಟಿ

ದಿನಾಂಕ	ಮಾದರಿ	ಸ್ಥಳ
ವೆಸ್ಟ್ ಇಂಡೀಸ್		
ಸೆ.27	ಏಕದಿನ	ತ್ರಿವಂಡ್ರಮ್
ಸೆ.30	ಏಕದಿನ	ಗುವಾಹಟಿ
ಅ.3	ಏಕದಿನ	ಚಂಡೀಗಢ
ಅ.6	ಟಿ20	ಲಖನೌ
ಅ.9	ಟಿ20	ರಾಂಚಿ
ಅ.11	ಟಿ20	ಇಂದೋರ್
ಅ.14	ಟಿ20	ಹೈದರಾಬಾದ್
ಅ.17	ಟಿ20	ಬೆಂಗಳೂರು
ಶ್ರೀಲಂಕಾ ಸರಣಿ		
ಡಿ.13	ಏಕದಿನ	ದಿಲ್ಲಿ
ಡಿ.16	ಏಕದಿನ	ಬೆಂಗಳೂರು
ಡಿ.19	ಏಕದಿನ	ಅಹಮದಾಬಾದ್
ಡಿ.22	ಟಿ20	ರಾಜ್ಕೋಟ್
ಡಿ.24	ಟಿ20	ಕಟಕ್
ಡಿ.27	ಟಿ20	ಪುಣೆ
ಜಿಂಬಾಬ್ವೆ (ಏಕದಿನ) (2027)		
ಜ.3	ಏಕದಿನ	ಕೋಲ್ಕತ್ತಾ
ಜ.6	ಏಕದಿನ	ಹೈದರಾಬಾದ್
ಜ.9	ಏಕದಿನ	ಮುಂಬೈ
ಬಾರ್ಡರ್ ಗವಾಸ್ಕರ್ ಟ್ರೋಫಿ		
ಮೊದಲ ಟೆಸ್ಟ್	ಜ.21	ನಾಗ್ಪುರ
ಎರಡನೇ ಟೆಸ್ಟ್	ಜ.29	ಚೆನ್ನೈ
ಮೂರನೇ ಟೆಸ್ಟ್	ಫೆ.11	ಗುವಾಹಟಿ
ನಾಲ್ಕನೇ ಟೆಸ್ಟ್	ಫೆ.23	ರಾಂಚಿ
ಐದನೇ ಟೆಸ್ಟ್	ಮಾ.3	ಅಹಮದಾಬಾದ್

ಭದ್ರತೆಗಾಗಿ 2 ಸಾವಿರ ಪೊಲೀಸರ ನಿಯೋಜನೆ



• ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯಕ್ಕಾಗಿ 2 ಸಾವಿರ ಪೊಲೀಸರ ನಿಯೋಜನೆ ಮಾಡಲಾಗಿದೆ. ಶನಿವಾರದ ಪಂದ್ಯಕ್ಕೂ ಮುನ್ನ ಪೊಲೀಸ್ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು ಸಿವಿಲ್ ಡಿಫೆನ್ಸ್, ಎನ್‌ಎಸ್‌ಜಿ ಮತ್ತು ಜಿಬಿಎ ಅಧಿಕಾರಿಗಳೊಂದಿಗೆ ಜಂಟಿಯಾಗಿ ಯಶಸ್ವಿ ಮಾಕ್ ಡ್ರಿಲ್ ನಡೆಸಲಾಗಿದೆ. ಈ ಹಿಂದೆ ಮಾ.23 ರಂದು ಕೂಡ ಒಮ್ಮೆ ತಾಲೀಮು ನಡೆಸಲಾಗಿತ್ತು.

ಮೈದಾನದ ಗೇಟ್ ಮತ್ತು ಪಾರ್ಕಿಂಗ್ ವ್ಯವಸ್ಥೆಯನ್ನು ಬದಲಾಯಿಸಲಾಗಿದೆ. ಭದ್ರತೆ ದೃಷ್ಟಿಯಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ತಿಳಿಸಿದರು. ತೆಗೆದುಕೊಂಡ ಕ್ರಮಗಳ ಬಗ್ಗೆ ಮಾತನಾಡುತ್ತಾ ಅವರು, ಭದ್ರತೆಗಾಗಿ 6 ಮಂದಿ ಡಿಸಿಪಿಗಳು, 15 ಕ್ಕೂ ಹೆಚ್ಚು ಎಸಿಪಿಗಳು, ಪಿಐ, ಎಚ್‌ಸಿ, ಪಿಸಿ ಮತ್ತು ಹೋಮ್ ಗಾರ್ಡ್ ಸೇರಿದಂತೆ 2 ಸಾವಿರ ಜನ ಪೊಲೀಸರನ್ನು ನಿಯೋಜಿಸಲಾಗಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಟಿಕೆಟ್ ಇಲ್ಲದವರಿಗೆ ಪ್ರವೇಶ ನಿಷೇಧ: ಕ್ರೀಡಾಂಗಣದ ಸುತ್ತಮುತ್ತ ಜನದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಟಿಕೆಟ್ ಇಲ್ಲದವರು ಕ್ರೀಡಾಂಗಣದ ಹತ್ತಿರ ಬರದಂತೆ ಮನವಿ ಮಾಡಲಾಗಿದ್ದು, ಅಂತಹವರನ್ನು ನಿಯಂತ್ರಿಸಲು 7 ವಿಶೇಷ ತಂಡಗಳನ್ನು ರಚಿಸಲಾಗಿದೆ. ಪ್ರತಿ ತಂಡದಲ್ಲಿ 20 ಸಿಬ್ಬಂದಿ ಇರಲಿದ್ದು, ಟಿಕೆಟ್ ಇಲ್ಲದೆ ಅನಗತ್ಯವಾಗಿ ಓಡಾಡುವವರನ್ನು ನಿರ್ಬಂಧಿಸಲಾಗುತ್ತದೆ. ಮುಖ್ಯವಾಗಿ ಕಬ್ಬನ್ ರೋಡ್, ಕ್ವೀನ್ಸ್ ರೋಡ್, ಲಿಂಕ್ ರೋಡ್ ಹಾಗೂ ಎಂ.ಜಿ. ರಸ್ತೆಗಳಲ್ಲಿ ಟಿಕೆಟ್ ಇದ್ದವರಿಗೆ ಮಾತ್ರ ಪ್ರವೇಶ ನೀಡಲಾಗುತ್ತದೆ. ಸಾರ್ವಜನಿಕರು ಸಂಚಾರ ದಟ್ಟಣೆ ತಪ್ಪಿಸಲು ಮೆಟ್ರೋ ಮತ್ತು ಬಿಎಂಟಿಸಿ ಬಸ್‌ಗಳನ್ನು ಬಳಸುವಂತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸುವಂತೆ ಆಯುಕ್ತರು ವಿನಂತಿಸಿದ್ದಾರೆ.

ಮೈದಾನದಲ್ಲೂ ಹಲವಾರು ಬದಲಾವಣೆ: ಕ್ರೀಡಾಂಗಣದಲ್ಲಿ ಹಲವಾರು ಬದಲಾವಣೆಗಳನ್ನು ತರಲಾಗಿದೆ. ಮೊದಲಿನಗಿಂತಲೂ ವಿಭಿನ್ನವಾದ ಪ್ರವೇಶದ್ವಾರಗಳನ್ನು ಸ್ಥಾಪಿಸಲಾಗಿದೆ. ಪ್ರವೇಶದ ರೀತಿಗಳು ಬದಲಾಗಿವೆ. ಈ ಮೊದಲು ಅಭ್ಯಾಸ ನಡೆಸಲಾಗುತ್ತಿದ್ದ 13ನೇ ಗೇಟ್ ಹತ್ತಿರದ ಹೊರವಲಯವನ್ನು ಈಗ ಒಳಗೇಟ್ ಆಗಿ ಕಾರ್ಯ ನಿರ್ವಹಿಸಲಿದೆ. ಮೈದಾನದ ಹೊರಗೆಲ್ಲಾ ಕ್ರೀಡಾಂಗಣದ ಬ್ಲ್ಯೂ ಪ್ರಿಂಟ್ ಬಗ್ಗೆ ಅಚ್ಚುಕಟ್ಟಾದ ಮಾಹಿತಿ ನೀಡಲಾಗಿದೆ.

ಐಪಿಎಲ್ ಪಂದ್ಯಕ್ಕೆ ಭದ್ರತೆ ನೀಡಲು ಪೊಲೀಸ್ ಪಡೆ ಸನ್ನದ್ಧ

ಭಾರತ ತಂಡಕ್ಕೆ ಗುಲ್ವೀರ್ ನಾಯಕ

• ಬೆಂಗಳೂರು: ಭಾರತದ 10,000 ಮೀ ಮತ್ತು 5,000 ಮೀ ರಾಷ್ಟ್ರೀಯ ದಾಖಲೆದಾರ ಗುಲ್ವೀರ್ ಸಿಂಗ್, ಏಪ್ರಿಲ್ 26ರಂದು ನಡೆಯಲಿರುವ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನ 18ನೇ ಆವೃತ್ತಿಯಲ್ಲಿ ಭಾರತೀಯ ಎಲೈಟ್ ತಂಡವನ್ನು ಮುನ್ನಡೆಸಲಿದ್ದಾರೆ. ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ಮಾನ್ಯತೆ ಪಡೆದ ಈ ರೇಸ್, ಪ್ರತಿ ವರ್ಷ ವಿಶ್ವದ ಶ್ರೇಷ್ಠ ದೂರ ಓಟಗಾರರನ್ನು ಆಕರ್ಷಿಸುವುದರ ಜೊತೆಗೆ, ಭಾರತೀಯ ಆಟಗಾರರಿಗೆ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ತಮಗೆ ತಾವು ಸವಾಲು ಹಾಕಿಕೊಳ್ಳುವ ವೇದಿಕೆಯಾಗುತ್ತಿದೆ. ಗುಲ್ವೀರ್ ಸಿಂಗ್ ಉತ್ತಮ ಲಯದಲ್ಲಿದ್ದು, ಇತ್ತೀಚೆಗೆ ನಡೆದ ನ್ಯೂಯಾರ್ಕ್ ಸಿಟಿ ಹಾಫ್ ಮ್ಯಾರಥಾನ್‌ನಲ್ಲಿ 59:42 ಸಮಯದಲ್ಲಿ ಮೂರನೇ ಸ್ಥಾನ ಪಡೆದಿದ್ದರು. ಇದು ಭಾರತೀಯ ಓಟಗಾರನೊಬ್ಬ ದಾಖಲಿಸಿದ ಅತ್ಯುತ್ತಮ ಹಾಫ್ ಮ್ಯಾರಥಾನ್ ಸಮಯವಾಗಿದೆ.


ಗುಲ್ವೀರ್ ಪ್ರದರ್ಶನ: 10,000 ಮೀ (27:00.22) ಮತ್ತು 5,000 ಮೀ (12:59.77) ವಿಭಾಗಗಳಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಅವರು, 2025ರಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದರು. ಜೊತೆಗೆ ಟಾಟಾ ಸ್ಟೀಲ್ ವರ್ಲ್ಡ್ 25ಕೆ ಕೋಲ್ಕತ್ತಾ ಸ್ಪರ್ಧೆಯಲ್ಲಿ 1:12:06 ಸಮಯದೊಂದಿಗೆ ದಾಖಲೆ ನಿರ್ಮಿಸಿದ್ದರು.

ಸ್ಪರ್ಧೆಗೆ ಉತ್ಸಾಹ: ಗುಲ್ವೀರ್: ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ದೇಶದ ಅತ್ಯಂತ ಸ್ಪರ್ಧಾತ್ಮಕ ರಸ್ತೆ ಓಟಗಳಲ್ಲಿ ಒಂದಾಗಿದೆ. ಇಲ್ಲಿ ಮತ್ತೆ ಸ್ಪರ್ಧಿಸಲು ಉತ್ಸಾಹವಾಗುತ್ತಿದೆ, ಎಂದು ಗುಲ್ವೀರ್ ಸಿಂಗ್ ತಿಳಿಸಿದ್ದಾರೆ. ಈ ವರ್ಷದ ಸ್ಪರ್ಧೆಯಲ್ಲಿ ಉಗಾಂಡಾದ ಹರ್ಬರ್ಟ್ ಕಿಬೆಟ್, ಕೀನ್ಯಾದ ವಿನ್ಸೆಂಟ್ ಲಂಗಾಟ್, ಇಥಿಯೋಪಿಯಾದ ಗೆಮೆಚು ಡಿಡಾ ಮತ್ತು ಎರಿಟ್ರಿಯಾದ ಸ್ಯಾಮುಯೆಲ್ ಹಾಬ್ಟೆ ಸೇರಿದಂತೆ ಅಂತಾರಾಷ್ಟ್ರೀಯ ಆಟಗಾರರು ಭಾಗವಹಿಸಲಿದ್ದಾರೆ. ಇಂತಹ ಸ್ಪರ್ಧೆಗಳು ಭಾರತೀಯ ಆಟಗಾರರನ್ನು ಇನ್ನಷ್ಟು ಉತ್ತಮ ಪ್ರದರ್ಶನ ನೀಡಲು ಪ್ರೇರೇಪಿಸುತ್ತವೆ. ಯುವ ಪ್ರತಿಭೆಗಳಿಗೆ ಸ್ಫೂರ್ತಿಯಾಗುತ್ತದೆ, ಎಂದು ಅವರು ಹೇಳಿದ್ದಾರೆ.

ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು

ಪದಬಂಧ

ರಾಜಾ ಸಂಗಮೇಶ ಹಿರೇಮಠ



5935

ಎಡದಿಂದ ಬಲಕ್ಕೆ
3.ಒಳ್ಳೆಯ ನಡತೆ–ಸದಾಚಾರವಿದು (3)
4.ಹಿತದಿಂದ ಹೊರತಾದುದು (3)
5.ಉಪ್ಪುನೀರಿನ ವಿಶಾಲ ಜಲರಾಶಿ ತಿರುಗಿದೆ (3)
6.ಮಂದಹಾಸದ ಸಮಾನಪದ (4)
8.ಒಂದೇ ರೀತಿಯ–ತುಲನಾತ್ಮಕವಾದುದು (3)
10.ಎಲ್ಲ ಭಾಗಗಳನ್ನೂ ಒಳಗೊಂಡಿದ್ದು (3)
11.ನ್ಯಾಯಕ್ಕಾಗಿ ವಾದ ಮಾಡುವ ಉದ್ಯೋಗ (4)
14.ಸಭೆಯ ನಡಾವಳಿವೂ ಹೌದು–ಕಾರ್ಯಸೂಚಿಯೂ ಹೌದು (3)
16.ಮಿಕ್ಕಿದ್ದು–ಹೆಚ್ಚು ಎಂಬರ್ಥದ ಶಬ್ದ (3)
17.ವಿಶ್ವಾಮಿತ್ರನ ಪೂರ್ವನಾಮ (3)

ಮೇಲಿನಿಂದ ಕೆಳಕ್ಕೆ
1.ಒಪ್ಪದೇ "ಇಲ್ಲ" ಎನ್ನುವುದು (3)
2.ಅವನತಿಯ ಹಾದಿಯಲ್ಲಿರುವುದು (3)
3.ಇದು ಒಳ್ಳೆಯ ಮನಸ್ಸು (3)
4.ಇದು ಹಣ್ಣುಗಳ ಮಿಶ್ರಣ (4)
7.ಗುಣಿಸಲಾಗುವ ಸಂಖ್ಯೆಯಿದು (3)
9. ಕೃಷ್ಣನ ಒಂದು ಹೆಸರು (3)
10.ಸವೆದು ಹೋಗಿ ಚಲಾವಣೆಯಾಗದ್ದು (4)
12.ಕ್ರಿಯೆಯನ್ನು ಮಾಡುವ ಸಾಧನ (3)
13.ಯಜ್ಞದ ಸೌದೆ–ಕಡ್ಡಿಗಳು ತಲೆಕೆಳಗಾಗಿವೆ (3)
15.ಮಂತ್ರವನ್ನು ಉಚ್ಚರಿಸುತ್ತಿರು (3)

5934 ಉತ್ತರ

ಎಡದಿಂದ ಬಲಕ್ಕೆ:
2.ಯಜಮಾನಿಕೆ 4.ಬಾಳು
5.ವಕೀಲ 6.ನಡೆವಕ್ಕಿ
8.ಹಕ್ಕು 9.ಧಾಮ
14.ಸಮಾರೋಪ
16.ರೋಚಕ 17.ಅಂಗ
18.ನಡತೆಗೆಡು

ಮೇಲಿನಿಂದ ಕೆಳಕ್ಕೆ :
1.ನಡವಳಿಕೆ 3.ಮಾಧವ
4.ಬಾಲಗ್ರಹ 6.ನಗು
7.ಅಕ್ಕಿ 10.ಮಲರೋಗ
11.ನವೀಕರಣ 12.ಧ್ವಂಸ
13.ತಾಪ 15.ಮಾನ್ಯತೆ

ಭಾರತಕ್ಕೆ ಮತ್ತೊಂದು ಪದಕ ಖಚಿತ

• ಹೊಸದಿಲ್ಲಿ: ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಸ್ಟೇಜ್–1 ಆರ್ಚರಿ ಟೂರ್ನಿಯಲ್ಲಿ ಭಾರತ ಮತ್ತೊಂದು ಪದಕ ಖಚಿತಪಡಿಸಿಕೊಂಡಿದೆ. ಚಿಕಿತಾ ತನಿಪಾರ್ಥಿ ಮತ್ತು ರಾಜತ್ ಚೌಹಾಣ್ ಕಾಂಪೌಂಡ್ ಮಿಶ್ರ ತಂಡ ವಿಭಾಗದ ಫೈನಲ್‌ಗೆ ಪ್ರವೇಶಿಸಿದ್ದಾರೆ. ಅಗ್ರ ಶ್ರೇಯಾಂಕದ ಈ ಜೋಡಿ ಮೊದಲ ಸುತ್ತಿನಲ್ಲಿ ಬೈ ಪಡೆದು, ನಂತರ ಚೈನೀಸ್ ತೈಪೆ ವಿರುದ್ಧ 159–155 ಹಾಗೂ ಕಜಕಿಸ್ತಾನ್ ವಿರುದ್ಧ 157–153 ಅಂತರದಲ್ಲಿ ಗೆದ್ದು ಮಲೇಷ್ಯಾ ವಿರುದ್ಧ ಫೈನಲ್‌ಗೆ ತಲುಪಿದೆ. ಇದೇ ವೇಳೆ ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ ರಿಧಿ ಫೋರ್ ಮತ್ತು ದೇವಾಂಗ್ ಗುಪ್ತಾ ಜೋಡಿ ಮೊದಲ ಸುತ್ತಿನಲ್ಲಿ ಬೈ ಪಡೆದರೂ, ವಿಯೆಟ್ನಾಂ ವಿರುದ್ಧ 06 ಅಂತರದಲ್ಲಿ ಸೋತು ಹೊರಬಿದ್ದಿದೆ.

ಸ್ಕೀಟ್ ಶೂಟರ್‌ಗಳಿಗೆ ಕಠಿಣ ಸವಾಲು

• ಹೊಸದಿಲ್ಲಿ: ಮೊರೊಕ್ಕೊದ ಟ್ಯಾಂಜಿಯರ್‌ನಲ್ಲಿ ಶುಕ್ರವಾರದಿಂದ ಆರಂಭವಾಗುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವರ್ಲ್ಡ್ ಕಪ್‌ನಲ್ಲಿ ಭಾರತೀಯ ಸ್ಕೀಟ್ ಶೂಟರ್‌ಗಳಿಗೆ ಕಠಿಣ ಸ್ಪರ್ಧೆ ಎದುರಾಗಲಿದೆ. ಮೊದಲ ದಿನ ಪುರುಷರು ಮತ್ತು ಮಹಿಳೆಯರು ತಲಾ 75 ಗುರಿಗಳನ್ನು ಹೊಡೆಯಲಿದ್ದು, ನಂತರ 50 ಟಾರ್ಗೆಟ್ ಹಾಗೂ ಭಾನುವಾರ ಫೈನಲ್ ನಡೆಯಲಿದೆ. ಭಾರತ ಪುರುಷ, ಮಹಿಳಾ ವಿಭಾಗಗಳಲ್ಲಿ ಗರಿಷ್ಠ ಆರು ಆಟಗಾರರನ್ನು ಕಣಕ್ಕಿಳಿಸಿದೆ. ಜೊತೆಗೆ ರ್ಯಾಂಕಿಂಗ್ ಅಂಕಗಳಿಗಾಗಿ ಪ್ರತ್ಯೇಕವಾಗಿ ಇಬ್ಬರು ಆಟಗಾರರು ಭಾಗವಹಿಸಲಿದ್ದಾರೆ. ಮಹಿಳಾ ವಿಭಾಗದಲ್ಲಿ ಒಲಿಂಪಿಕ್ ಚಾಂಪಿಯನ್ ಚಿಲಿಯ ಫ್ರಾನ್ಸಿಸ್ಕಾ ಕ್ರೋವೆಟ್ಟೋ ಚಾಡಿಡ್, ಅಮೆರಿಕದ ವಿಶ್ವ ಚಾಂಪಿಯನ್ ಸಮಾಂಥಾ ಸಿಮಂಟನ್, ಇಟಲಿಯ ಡಿಯಾನಾ ಬಕೋಸಿ ಸೇರಿದಂತೆ ಹಲವು ಶ್ರೇಷ್ಠ ಶೂಟರ್‌ಗಳು ಸ್ಪರ್ಧಿಸಲಿದ್ದಾರೆ.

ಫುಟ್‌ಬಾಲ್: ಪಾಕ್‌ಗೆ ಭಾರತ ಕಿಕ್

• ಮಾಲೆ(ಮಾಲ್ಡೀವ್ಸ್): ಜಗತ್ತಿನ ಎಲ್ಲಾ ಕ್ಷೇತ್ರದ ಎಲ್ಲಾ ವಿಭಾಗಳಲ್ಲೂ ಪಾಕಿಸ್ತಾನ ಭಾರತದ ಮುಂದೆ ಮಂಡಿಯೂರುತ್ತಿರುವ ಮಧ್ಯೆ ಗುರುವಾರ ನಡೆದ ಸ್ಯಾಫ್ ಅಂಡರ್–20 ಫುಟ್‌ಬಾಲ್ ಪಂದ್ಯಾವಳಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿದೆ.

ಮಾಲ್ಡೀವ್ಸ್‌ನ ಮಾಲೆಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಭಾರತೀಯ ಹುಡುಗರು ಪಾಕಿಗಳ ಬೇಟೆಯಾಡಿದರು. ಯಾವುದೇ ಕ್ಷಣಕ್ಕೂ ಮುನ್ನಡೆ ಬಿಟ್ಟುಕೊಡದೆ, ಗೆಲುವಿನ ಮಾರ್ಗದಲ್ಲೇ ಇದ್ದು ಗೆದ್ದು ಬೀಗಿತು. ಇದರೊಂದಿಗೆ ಪಾಕ್ ತಂಡವನ್ನು 3–0ರಿಂದ ಸೋಲಿಸಿ ಪಂದ್ಯಾವಳಿಯಿಂದ ಓಡಿಸಿತು ಭಾರತ. ಪಂದ್ಯದಲ್ಲಿ ಮೊದಲಿನಿಂದಲೂ ಪಾಕ್ ಪಾಲಿಗೆ ಭಾರತೀಯರು ದುಃಸ್ವಪ್ನವಾಗಿ ಕಾಡಿದರು. ಮೂರನೇ ನಿಮಿಷದಲ್ಲಿ ಪಾಕ್ ಡಿಫೆನ್ಸ್ ಅನ್ನು ಛಿದ್ರಗೊಳಿಸಿದ ವಿಶಾಲ್ ಯಾದವ್ ಗೋಲು ಬಾರಿಸಿ ಮುನ್ನಡೆ ತಂದುಕೊಟ್ಟರು. ಮುಂದೆ ಪಾಕ್ ಮಾಡಿದ ಹಲವು ಪ್ರಯತ್ನಗಳನ್ನು ಸಲೀಸಾಗಿ ತಡೆಯೊಡ್ಡಿದ ಭಾರತ 64ನೇ ನಿಮಿಷದಲ್ಲಿ ಎರಡನೇ ಗೋಲು ಬಾರಿಸಿತು. 20 ನಿಮಿಷ ಒಂದೇ ಗೋಲಿಗೆ ಪರದಾಡಿದ ಪಾಕ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿತು. 84ನೇ ನಿಮಿಷದಲ್ಲಿ ಮೂರನೇ ಗೋಲು ಬಾರಿಸಿದ ಭಾರತ ಗೆಲುವಿನ ನಗೆ ಬೀರಿತು. ಪಾಕಿಸ್ತಾನ ನೋಡುತ್ತಲೇ ನಿಂತಿತು. ಪ್ರಯತ್ನ ಪಟ್ಟು ಸೊರಗಿತು, ಸೋತು ಸುಣ್ಣಾಯಿತು.

- ಸ್ಯಾಫ್ ಅಂಡರ್–20 ಪಂದ್ಯಾವಳಿ
- 3–0ರಿಂದ ಭಾರೀ ಗೆಲುವು
- ಸೆಮಿಫೈನಲ್‌ಗೆ ಬ್ಲ್ಯೂ ಬಾಯ್ಸ್

ಕಿರುಸುದ್ದಿ

ಅಕ್ರಮ ಗೋ ಸಾಗಾಟ: ಆರೋಪಿ ಬಂಧನ



ಸುಳ್ಯ: ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಮಿತ್ತಡ್ಕ ಎಂಬಲ್ಲಿ ಅಕ್ರಮವಾಗಿ ಗೋ ಸಾಗಾಟ ನಡೆಸುತ್ತಿದ್ದ ವಾಹನವನ್ನು ಪೊಲೀಸರು ಬೆನ್ನಟ್ಟಿ ವಶಪಡಿಸಿಕೊಂಡು ಆರೋಪಿಗಳನ್ನು ಬಂಧಿಸಿದ ಘಟನೆ ಗುರುವಾರ ಮುಂಜಾನೆ ನಡೆದಿದೆ.

ಸುಳ್ಯ ಪಟ್ಟಣದ ಮೂಲಕ ಗಾಂಧಿನಗರ ಆಲೆಟ್ಟಿ ಕ್ರಾಸ್ ಬಳಿಗೆ ಪೊಲೀಸರು ರೌಂಡ್ಸ್ ತಲುಪಿದಾಗ ಆಲೆಟ್ಟಿ ರಸ್ತೆ ತಿರುವಿನಲ್ಲಿ ಬೊಲೆರೊ ವಾಹನದ ಹಿಂಬದಿಗೆ ಹಸಿರು ಬಣ್ಣದ ನೆಟ್ ಕಟ್ಟಿ ಅನುಮಾನಸ್ಪದವಾಗಿ ಹೋಗುತ್ತಿರುವುದನ್ನು ಗಮನಿಸಿದ ಅಧಿಕಾರಿಗಳು ವಾಹನವನ್ನು ಬೆನ್ನಟ್ಟಿ ಹಿಂಬಲಿಸಿ ಮಿತ್ತಡ್ಕ ಖಾಸಗಿ ಶಾಲೆ ಬಳಿ ವಾಹನವನ್ನು ತಪಾಸಣೆ ನಡೆಸಿದಾಗ ಯಾವುದೇ ಪರವಾನಿಗೆ ಇಲ್ಲದೇ ಕಳ್ಳತನಗೈದು ಅಕ್ರಮವಾಗಿ ಗೋವುಗಳನ್ನು ಹಿಂಸಾತ್ಮಕವಾಗಿ ಸಾಗಿಸುತ್ತಿದ್ದು ವಾಹನದಲ್ಲಿದ್ದ ಸುನೈನ್ ಎಂಬಾತ ಪರಾರಿಯಾಗಿದ್ದಾನೆ. ಇನ್ನೊಬ್ಬ ಆರೋಪಿ ಕೇರಳ ಕಣ್ಣೂರು ಮೂಲದ ಇಸಾಕ್ ಕೆ. ಕೆ. ಜೊತೆಗೆ ವಾಹನ ಮತ್ತು ಗೋವುಗಳನ್ನು ವಶಕ್ಕೆ ಪಡೆದು ಆರೋಪಿಯನ್ನು ಬಂಧಿಸಿ ನ್ಯಾಯಾಲಕ್ಕೆ ಹಾಜರು ಪಡಿಸಲಾಗಿದೆ.

ನಕಲಿ ವೆಬ್ ಸೈಟ್ ತೆರೆದು ಆನ್‌ಲೈನ್ ಗ್ಯಾಂಬ್ಲಿಂಗ್ ಗೇಮ್ ಮೂಲಕ ವಂಚನೆ

ಮಂಗಳೂರು: ಮಂಗಳೂರು ಸಿಟಿ ಪೊಲೀಸ್ ಎಂಬ ಹೆಸರಿನಲ್ಲಿ ನಕಲಿ ವೆಬ್ ಸೈಟ್ ತೆರೆದು ಆನ್‌ಲೈನ್ ಗ್ಯಾಂಬ್ಲಿಂಗ್ ಗೇಮ್‌ಗಳನ್ನು ಸೃಷ್ಟಿಸಿ ವಂಚನೆ ಮಾಡುತ್ತಿರುವ ಅಪರಿಚಿತ ಗ್ಯಾಂಗ್ ವಿರುದ್ಧ ಸೆನ್ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ. ಠಾಣೆ ಪೊಲೀಸ್ ಉಪ ನಿರೀಕ್ಷಕ ರೇವಣ ಸಿದ್ದಪ್ಪ ಅವರು ಮಾ.25ರಂದು ಸಂಜೆ 5 ಗಂಟೆಗೆ ಗೂಗಲ್ ಪರಿಶೀಲಿಸುತ್ತಿರುವಾಗ 'ಮಂಗಳೂರು ಸಿಟಿ ಪೊಲೀಸ್'' ಎಂಬ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ತೆರೆದಿರುವುದು ಗಮನಕ್ಕೆ ಬಂದಿದೆ.. ವೆಬ್‌ಸೈಟ್ ಮೂಲಕ ಮಲ್ಟಿ ಸ್ಕ್ಯಾಟರ್ ಪ್ರಾಗ್ಯಾಮ್ಟಿಕ್ ಎಂದು ಹಲವಾರು ಆನ್‌ಲೈನ್ ಗ್ಯಾಂಬ್ಲಿಂಗ್ ಗೇಮ್‌ಗಳಾದ Gates of Olympus, Mahjong wins 3, Srtarlight Princes 1000, Sweet Bonaza 1000, Bander ceme, Domino QQ, Poker 0maha ಮೊದಲಾದ JACKPOTPLAY ಗೇಮ್‌ಗಳ ಮೂಲಕ ಸಾರ್ವಜನಿಕರನ್ನು ವಂಚಿಸಿ ಹಣ ಗಳಿಸುತ್ತಿರುವುದು ಕಂಡು ಬಂದಿದೆ.ಈ ರೀತಿಯಾಗಿ ಮಂಗಳೂರು ನಗರ ಪೊಲೀಸರ ಹೆಸರನ್ನು ಬಳಿಸಿಕೊಂಡು ನಕಲಿ ವೆಬ್‌ಸೈಟ್ ತೆರೆದು ಆನ್‌ಲೈನ್ ಸೈಬರ್ ವಂಚನೆ ಮಾಡುತ್ತಿರುವವರ, ನಕಲಿ ವೆಬ್‌ಸೈಟ್ ತೆರೆದವರ ಹಾಗೂ ಆನ್‌ಲೈನ್ ಗ್ಯಾಂಬ್ಲಿಂಗ್ ನಡೆಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

ಬಿಟ್ ಕಾಯಿನ್ ಖರೀದಿ: ಲಕ್ಷಾಂತರ ರೂ. ವಂಚನೆ

ಕುಂದಾಪುರ: ಆನ್‌ಲೈನ್ ಮೂಲಕ ಬಿಟ್ ಕಾಯಿನ್ ಖರೀದಿ ಮಾಡಿ ಹಣವನ್ನು ದ್ವಿಗುಣ ಮಾಡಿ ಕೊಡುವುದಾಗಿ ನಂಬಿಸಿ ಲಕ್ಷಾಂತರ ರೂ. ವಂಚಿಸಿದ ಘಟನೆ ಕುಂದಾಪುರದಲ್ಲಿ ನಡೆದಿದೆ. ಕುಂದಾಪುರ ಅಂಕದಕಟ್ಟೆ ನಿವಾಸಿ ಯಶೋಧ ಎಂಬವರಿಗೆ ಚಂದ್ರಿಕಾ ಅಂಕದಕಟ್ಟೆ ಮತ್ತು ಭಾಸ್ಕರ ಶಿವಮೊಗ್ಗ ಎಂಬವರು ಆನ್‌ಲೈನ್ ಮೂಲಕ ಬಿಟ್ ಕಾಯಿನ್ ಖರೀದಿ ಮಾಡಿ ಹಣವನ್ನು ದ್ವಿಗುಣ ಮಾಡಿ ಕೊಡುವುದಾಗಿ ನಂಬಿಸಿ, ಬೈಂದೂರಿನ ಪ್ರದೀಪ್ ಶೆಟ್ಟಿ ಎಂಬವರು ಕೋಟೇಶ್ವರ ಗ್ರಾಮದ ಅಂಕದಕಟ್ಟೆ ಸಹನಾ ಹಾಲ್ ಸಮೀಪ ಚಂದ್ರಿಕಾ ಎಂಬವರ ಕಚೇರಿಗೆ ಹಣ ನೀಡುವಂತೆ ಹೇಳಿದ್ದರು. ಚಂದ್ರಿಕಾ ಅವರು ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೆಲವು ನಕಲಿ ಕಾಗದ ಪತ್ರಗಳನ್ನು ಸೃಷ್ಟಿಸಿಕೊಂಡು ಬಿಟ್ ಕಾಯಿನ್ ವ್ಯವಹಾರವು ಕಾನೂನಾತ್ಮಕ ವ್ಯವಹಾರವಾಗಿದ್ದು ಲೈಸನ್ಸ್ ಇರುವುದಾಗಿ ಸುಳ್ಳು ಹೇಳಿ ನಂಬಿಸಿ ಯಶೋಧಾ ಅವರಿಂದ 3,80,000 ರೂಪಾಯಿ ಪಡೆದು, ಹಂತ ಹಂತವಾಗಿ 17 ಲಕ್ಷ ರೂಪಾಯಿ ಹಣವನ್ನು ಹೂಡಿಕೆ ಮಾಡಿಸಿಕೊಂಡಿದ್ದರು. ಈ ಬಗ್ಗೆ ಬಾಂಡ್ ನೀಡದೇ ಮುಂದೂಡುತ್ತಾ ಬಂದಿದ್ದು, ಹೂಡಿಕೆ ಮಾಡಿದ ಹಣಕ್ಕೆ ಬಾಂಡ್ ನೀಡುವಂತೆ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದು, ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಹಾಕಿದ್ದಾರೆ. ಇದೇ ರೀತಿ ಶಂಕರ ನಾಯ್ಕ, ಲೀಲಾ ಹಾಗೂ ನಾಗಶ್ರೀ ಎಂಬವರಿಂದಲೂ ಹಣವನ್ನು ದ್ವಿಗುಣ ಮಾಡಿ ಕೊಡುವುದಾಗಿ ನಂಬಿಸಿ ಪಡೆದುಕೊಂಡು, ಲಕ್ಷಾಂತರ ರೂಪಾಯಿ ವಂಚನೆ ಮಾಡಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಯಶೋಧಾ ಅವರ ಜಾತಿಗೆ ನಿಂದನೆ ಮಾಡಿ ಬೆದರಿಕೆ ಹಾಕಿದ್ದಾರೆ ಎಂದು ನೀಡಿದ ದೂರಿನಂತೆ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಡಗಿನ ಇಬ್ಬರು ಅರಣ್ಯಾಧಿಕಾರಿಗಳಿಗೆ ಮುಂಬಡ್ತಿ ನೀಡಿ ರಾಜ್ಯ ಸರ್ಕಾರ ಆದೇಶ

ಮಡಿಕೇರಿ: ಕೊಡಗಿನ ಇಬ್ಬರು ಅರಣ್ಯಾಧಿಕಾರಿಗಳಿಗೆ ಮುಂಬಡ್ತಿ ನೀಡಿ ಸರಕಾರಆದೇಶಿಸಿದೆ.ವನ್ಯಜೀವಿವಿಭಾಗದಲ್ಲಿ ಎ.ಸಿ.ಎಫ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ವಾಟೇರಿರ ಕಾರ್ಯಪ್ಪ ಅವರಿಗೆ ಡಿ.ಸಿ.ಎಫ್ ಆಗಿ ಪದೋನ್ನತಿ ನೀಡಿ ಆನೆ ಕಾರ್ಯಪಡೆಗೆ ನಿಯುಕ್ತಿ ಮಾಡಲಾಗಿದೆ.

ಮೂಲತಃ ಮಡಿಕೇರಿ ಯವರಾದ ವಾಟೇರಿರ ಕಾರ್ಯಪ್ಪ ಅವರು ಬಹುಪಾಲು ಹೊರ ಜಿಲ್ಲೆಗಳಲ್ಲೇ ಕರ್ತವ್ಯ ನಿರ್ವಹಿಸಿದ್ದರು. ದಕ್ಷ ಅರಣ್ಯ ಅಧಿಕಾರಿಗಳಲ್ಲಿ ಒಬ್ಬರೆಂದು ಗುರುತಿಸಿಕೊಂಡಿರುವ ಇವರನ್ನು ಕೊಡಗು ಜಿಲ್ಲೆಗೆ ವರ್ಗಾವಣೆ ಮಾಡುವಂತೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ವಿಧಾನ ಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಮಾಡಿದ್ದ ಹಿನ್ನೆಲೆಯಲ್ಲಿ 2024ರಲ್ಲಿ ಮಡಿಕೇರಿ ವನ್ಯ ಜೀವಿ





ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿತ್ತು.

ಇವರು ಅಧಿಕಾರ ವಹಿಸಿಕೊಂಡ ಬಳಿಕ, ತಲಕಾವೇರಿ ವನ್ಯಜೀವಿ ವಿಭಾಗದಲ್ಲಿ 2020 ರಿಂದ 2023 ರವರೆಗೆ ಕಾಮಗಾರಿ ನಡೆಸದೆಯೇ ಕೋಟ್ಯಂತರ ರೂ. ಬಿಲ್ ಪಾವತಿಯಾಗಿದ್ದ ಪ್ರಕರಣವನ್ನು ಬೆಳಕಿಗೆ ತಂದಿದ್ದರಲ್ಲದೆ, 2020 ರಿಂದ ನಿಂತುಹೋಗಿದ್ದ ಕಾಮಗಾರಿ ಟೆಂಡರ್ (ಪತ್ರಿಕಾ ಜಾಹೀರಾತುಗಳೊಂದಿಗೆ) ಪ್ರಕ್ರಿಯೆಗಳನ್ನು ಮತ್ತೆ ಆರಂಭಿಸಿ ಅರಣ್ಯ ಇಲಾಖೆಯಲ್ಲಿ ಪಾರದರ್ಶಕತೆಗೆ ಒತ್ತು ನೀಡಿದ್ದರು. ಇದೀಗ ಅವರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಮುಂಬಡ್ತಿ ನೀಡಿರುವ ಸರಕಾರ ಆನೆ ಕಾರ್ಯಪಡೆಗೆ ನಿಯುಕ್ತಿಗೊಳಿಸಿದೆ.

ಮತ್ತೊಂದೆಡೆ ಕೊಡಗು ಜಿಲ್ಲೆಯ ತಿತಿಮತಿ ವಿಭಾಗದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿಸೇವೆಸಲ್ಲಿಸುತ್ತಿದ್ದ ಕಂಬೆಯಂಡ ಪಿ. ಗೋಪಾಲ್ ಅವರನ್ನು ಕೊಡಗು ಜಿಲ್ಲೆಯ ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಿ ಸರ್ಕಾರ ಆದೇಶಿಸಿದೆ.

ಗೋಪಾಲ್ ಅವರು ಮೂಲತಃ ಮಡಿಕೇರಿ ತಾಲೂಕಿನ ಕಕ್ಕಬ್ಬೆ ಗ್ರಾಮ ದವರಾಗಿದ್ದು. ಪ್ರಸ್ತುತ ವೀರಾಜಪೇಟೆಯಲ್ಲಿ ನೆಲೆಸಿದ್ದಾರೆ.

ಹಿಂದೆ ಸಕಲೇಶಪುರದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಅವರನ್ನು ಬಳಿಕ ನಾಗರಹೊಳೆ ಮತ್ತು ತಿತಿಮತಿಗೆ ನಿಯೋಜಿಸಲಾಗಿತ್ತು.

ಇರಾನ್‌ನಿಂದ ಹೊರಟಿರುವ 'ಅರೋರಾ' ಸ್ವಾಗತಕ್ಕೆ ಸಜ್ಜಾಗುತ್ತಿದೆ ನವಮಂಗಳೂರು ಬಂದರು

ಶೀಘ್ರ ಇನ್ನೊಂದು ಎಲ್‌ಪಿಜಿ ಹಡಗು

ಮಂಗಳೂರು: ಅಮೆರಿಕದ ಕಠಿಣ ಆರ್ಥಿಕ ನಿರ್ಬಂಧಗಳ ಕಾರಣದಿಂದಾಗಿ ಕಳೆದ ಏಳು ವರ್ಷಗಳಿಂದ ಸ್ಥಗಿತಗೊಂಡಿದ್ದ ಇರಾನ್ ಮತ್ತು ಭಾರತದ ನಡುವಿನ ಇಂಧನ ವ್ಯವಹಾರ ಮತ್ತೆ ಚಿಗುರೊಡೆದಿದೆ. ದೀರ್ಘಕಾಲದ ಬಿಕ್ಕಟ್ಟಿನ ನಂತರ, ಇರಾನ್‌ನಿಂದ ಅಡುಗೆ ಅನಿಲವನ್ನು ಹೊತ್ತ ಬೃಹತ್ ಹಡಗು ನವಮಂಗಳೂರು ಬಂದರಿಗೆ ಶೀಘ್ರದಲ್ಲೇ ಆಗಮಿಸಲಿದೆ ಎಂದು ಅಂತಾರಾಷ್ಟ್ರೀಯ ಹಡಗು ಸಂಚಾರ ದತ್ತಾಂಶಗಳು ಖಚಿತಪಡಿಸಿವೆ.

ಇರಾನ್‌ನಿಂದ ಸುಮಾರು 44,000 ಟನ್ ಎಲ್‌ಪಿಜಿ ಹೊತ್ತು ತರುತ್ತಿರುವ 'ಅರೋರಾ' ಹೆಸರಿನ ಬೃಹತ್ ನೌಕೆಯು ಪ್ರಸ್ತುತ ಮಂಗಳೂರು ಬಂದರಿನತ್ತ ಮುಖ ಮಾಡಿದೆ. ಈ ಮೊದಲು ಚೀನಾಕ್ಕೆ ತೆರಳಬೇಕಿದ್ದ ಈ ಹಡಗು, ಹಾದಿ ಬದಲಿಸಿ ಭಾರತದತ್ತ ಬರುತ್ತಿರುವುದು ವಿಶೇಷ ವಾಗಿದೆ. ಈ ಅನಿಲವನ್ನು ಭಾರತದ ಪ್ರಮುಖ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಹಂಚಿಕೊಳ್ಳಲಿವೆ.

ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಯುದ್ಧದ ಪರಿಸ್ಥಿತಿಯಿಂದಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಡುಗೆ ಅನಿಲದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದೀಗ ಇರಾನ್‌ನಿಂದ ನೇರ ಪೂರೈಕೆ ಆರಂಭವಾಗಿರುವುದರಿಂದ ದೇಶದಲ್ಲಿ, ಅದರಲ್ಲೂ ಪ್ರಮುಖವಾಗಿ ದಕ್ಷಿಣ ಭಾರತದಲ್ಲಿ ಎಲ್‌ಪಿಜಿ ಅಭಾವ ನೀಗುವ ನಿರೀಕ್ಷೆಯಿದೆ.

ಮತ್ತೆರಡು ಹಡಗು

ನವ ಮಂಗಳೂರು ಬಂದರಿಗೆ ಶೀಘ್ರದಲ್ಲೇ 2.62 ಲಕ್ಷ ಟನ್ ಕಚ್ಚಾ ತೈಲ ಹೊತ್ತ ಮತ್ತೆರಡು ಹಡಗು ಆಗಮಿಸಲಿದೆ. ಪಶ್ಚಿಮ ಆಫ್ರಿಕಾ ಮತ್ತು ಸೌದಿ ಅರೇಬಿಯಾದಿಂದ ಎರಡು ಬೃಹತ್ ತೈಲ ಹೊತ್ತ ಹಡಗು ಆಗಮಿಸಲಿದ್ದು ಎಂಆರ್ ಪಿಎಲ್ ತೈಲಾಗಾರಕ್ಕೆ ಪೂರೈಸಲಿದೆ.

ಎರಡು ದಿನಗಳ ಹಿಂದಷ್ಟೇ ರಷ್ಯಾದಿಂದ ಒಂದು ಲಕ್ಷ ಟನ್ ತೈಲ ಹೊಂದಿದ್ದ ಹಡಗು ಮಂಗಳೂರಿಗೆ ಆಗಮಿಸಿತ್ತು. ಮಾಹಿತಿ ಪ್ರಕಾರ, ಈಗಾಗಲೇ 1.53 ಲಕ್ಷ ಟನ್ ತೈಲವನ್ನು ಮಂಗಳೂರಿನ ತೈಲಾಗಾರಕ್ಕೆ ಪೂರೈಸಲಾಗಿತ್ತು. ಇದೀಗ ಮತ್ತೆರಡು ಹಡಗು ಇನ್ನೆರಡು ದಿನದಲ್ಲಿ ಬರಲಿದೆ ಎಂಬ ಮಾಹಿತಿ ಇದೆ. ಪೋಪಿ ಪಿ ಹೆಸರಿನ ಸೌದಿ ಅರೇಬಿಯಾ ಹಡಗು ಮಾ.27ರಂದು ಮಂಗಳೂರು ತಲುಪಲಿದೆ. 1.41 ಲಕ್ಷ ಟನ್ ತೈಲದೊಂದಿಗೆ ಸೌದಿಯ ಅಲ್ ಮುಜ್ಜೈರುಘ್ ಬಂದರಿನಿಂದ ಈ ಹಡಗು ಮಾರ್ಚ್ 17ರಂದು ಹೊರಟಿತ್ತು. ಇನ್ನೊಂದು ಹಡಗು ಸನ್ ರೈಸ್ ವೇಯಲ್ಲಿ 1.21 ಲಕ್ಷ ಟನ್ ಕಚ್ಚಾ ತೈಲ ಇರಲಿದ್ದು ಅದು ಮಾ.29ರಂದು ಮಂಗಳೂರು ತಲುಪಲಿದೆ. ಈ ಹಡಗು ಪಶ್ಚಿಮ ಆಫ್ರಿಕಾದ ಕೇಪ್ ಲೋಪೆಜ್ ನಿಂದ ಮಾ.6ರಂದು ಹೊರಟಿತ್ತು. ಇವೆರಡರಿಂದಲೂ ಎನ್‌ಎಂಪಿಎ ಒಳಗಿನಿಂದ ಮಂಗಳೂರು ತೈಲಾಗಾರಕ್ಕೆ ಕಚ್ಚಾ ತೈಲ ಪೂರೈಕೆಯಾಗಲಿದೆ.

ದೇಶ್ ರಕ್ಷಕ್ ಹೆಸರಿನ ತೈಲ ಹಡಗು ಈಗಾಗಲೇ ಆಗಮಿಸಿದ್ದು, 53486 ಟನ್ ಕಚ್ಚಾ ತೈಲವನ್ನು ಅನ್ ಲೋಡ್ ಮಾಡುತ್ತಿದೆ. ಸದ್ಯದಲ್ಲೇ ರಷ್ಯಾದಿಂದ ಮತ್ತೊಂದು ತೈಲ ಹಡಗು ಓಯಸಿಸ್ ಬರಲಿದ್ದು ಅದರ ಮೂಲಕ 99,900 ಮೆಟ್ರಿಕ್ ಟನ್ ತೈಲವನ್ನು ಮಂಗಳೂರು ಬಂದರಿನಿಂದ ತೈಲಾಗಾರಕ್ಕೆ ಒದಗಿಸಲಿದೆ.

ನವ ಮಂಗಳೂರು ಬಂದರಿಗೆ 40,000ನೇ ಹಡಗು ಆಗಮನ



ಮಂಗಳೂರು: ನವ ಮಂಗಳೂರು ಬಂದರು ಪ್ರಾಧಿಕಾರ ಗುರುವಾರ ಸಂಜೆ 4 ಗಂಟೆಗೆ ಬರ್ತ್ ಸಂಖ್ಯೆ 13ಕ್ಕೆ ಎಲ್‌ಪಿಜಿ ಟ್ಯಾಂಕರ್ 'ಎಂ.ಟಿ. ಅಪೋಲೋ ಓಶನ್' ಆಗಮನದೊಂದಿಗೆ ಮಹತ್ವದ ಮೈಲುಗಲ್ಲನ್ನು ದಾಖಲಿಸಿದೆ. ಈ ಹಡಗು ಬಂದರು ಸ್ಥಾಪನೆಯ ನಂತರ ಆಗಮಿಸಿದ 40,000ನೇ ಹಡಗು ಎಂಬ ವಿಶೇಷ ದಾಖಲೆಯನ್ನು ಮಾಡಿದೆ.

ಈ ಮಹತ್ವದ ಸಂದರ್ಭದಲ್ಲಿ ನವಮಂಗಳೂರು ಬಂದರು ಪ್ರಾಧಿಕಾರ ಉಪಾಧ್ಯಕ್ಷರಾದ ಎಸ್. ಶಾಂತಿ ಅವರು ಹಡಗಿನ ಕ್ಯಾಪ್ಟನ್ ಅವರನ್ನು ಸನ್ಮಾನಿಸಿ ಹಡಗನ್ನು ಅಧಿಕೃತವಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಬಂದರಿನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಎಂ.ಟಿ. ಅಪೋಲೋ ಓಶನ್ ಹಡಗು 16,000 ಮೆಟ್ರಿಕ್ ಟನ್ ಎಲ್‌ಪಿಜಿ ಅನ್ನು ಇಳಿಸಲಿದೆ.

40,000ನೇ ಹಡಗಿನ ಆಗಮನವು ನವ ಮಂಗಳೂರು ಬಂದರು ಪ್ರಾಧಿಕಾರದ ಬೆಳವಣಿಗೆ ಮತ್ತು ಕಾರ್ಯಕ್ಷಮತೆಯ ಮತ್ತೊಂದು ಮಹತ್ವದ ಸಾಧನೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಪಶ್ಚಿಮ ಕರಾವಳಿಯ ಪ್ರಮುಖ ಸಮುದ್ರ ದ್ವಾರವಾಗಿ ಅದರ ಸ್ಥಾನವನ್ನು ಮತ್ತಷ್ಟು ದೃಢಪಡಿಸುತ್ತದೆ.

ಕದ್ರಿ ಮೈದಾನದಲ್ಲಿ 25ನೇ ವರ್ಷದ ಶ್ರೀರಾಮೋತ್ಸವಕ್ಕೆ ಸಂಭ್ರಮದ ಚಾಲನೆ

ಮನಸೆಳೆಯಿತು ಭವ್ಯ ಶೋಭಾಯಾತ್ರೆ

ಮಂಗಳೂರು: ವಿಶ್ವಹಿಂದು ಪರಿಷತ್ ಮತ್ತು ಶ್ರೀರಾಮೋತ್ಸವ ಸಮಿತಿ ಮಂಗಳೂರು ವತಿಯಿಂದ ಮಾ.29ರವರೆಗೆ ಕದ್ರಿ ಮೈದಾನದಲ್ಲಿ 25ನೇ ವರ್ಷದ ಶ್ರೀರಾಮೋತ್ಸವ ಆಯೋಜಿಸಲಾಗಿದ್ದು, ಗುರುವಾರ ಭವ್ಯ ಶೋಭಾಯಾತ್ರೆ ನಡೆಯಿತು.

ಕದ್ರಿ ಶ್ರೀ ಮಂಜುನಾಥ ದೇವಸ್ಥಾನದಿಂದ ಕದ್ರಿ ಮೈದಾನಕ್ಕೆ ಶ್ರೀರಾಮ, ಸೀತಾ, ಲಕ್ಷ್ಮಣ, ಹನುಮಂತ ದೇವರ ರಜತ ಮೂರ್ತಿಗಳ ಭವ್ಯ ಶೋಭಾಯಾತ್ರೆ ನೆರವೇರಿತು. ಬಳಿಕ ಕದ್ರಿ ಮೈದಾನದ ವೇದಿಕೆಯಲ್ಲಿ ಭಜನೆ ನಡೆಯಿತು. ಮೆರವಣಿಗೆಯಲ್ಲಿ ಕಲಶ ಹೊತ್ತ ಮಹಿಳೆಯರು, ಕುಣಿತ ಭಜನೆ, ಗಾರುಡಿ ಗೊಂಬೆಗಳು, ಚೆಂಡೆವಾದನ ಮೆರುಗು ನೀಡಿದವು.

ಕದ್ರಿ ದೇವಸ್ಥಾನದಲ್ಲಿ ಉದ್ಯಮಿ ಪುಷ್ಪರಾಜ ಜೈನ್ ಅವರು ಶೋಭಾಯಾತ್ರೆಗೆ ಚಾಲನೆ ನೀಡಿದರು. ಶ್ರೀ ಕ್ಷೇತ್ರ ಕದ್ರಿಯ ಆಡಳಿತ ಮೊಕ್ತೇಸರ ಎ.ಜೆ.ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಆರ್‌ಎಸ್‌ಎಸ್ ಹಿರಿಯ ಮುಖಂಡರಾದ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅತಿಥಿಗಳಾಗಿದ್ದರು.

ದೇರೆಬೈಲ್ ವಿಠಲದಾಸ ತಂತ್ರಿ ಮಾತನಾಡಿ, ಧರ್ಮ ವಿರೋಧಿ, ದೇಶ ವಿರೋಧಿಗಳು ನಮ್ಮೊಳಗೂ ಇದ್ದಾರೆ. ಅಂತಹವರನ್ನು ಮೊದಲು ನಿಗ್ರಹಿಸಬೇಕು. ದುಷ್ಟರನ್ನು ಶಿಕ್ಷಿಸಲು ನಾವು ಶ್ರೀರಾಮನ ಹಾಗೂ ಹನುಮಂತನ ಗುಣಗಳನ್ನು ಅಳವಡಿಸಬೇಕು ಎಂದು ಹೇಳಿದರು. 'ರಾಮ ಇರುವಲ್ಲಿ ಹನುಮಂತನೂ ಇರುತ್ತಾನೆ. ಹನುಮಂತನ ಸ್ವಾಮಿ ನಿಷ್ಠೆ ನಮಗೆ ಮಾದರಿ ಆಗಬೇಕು' ಎಂದರು.

ಉದ್ಯಮಿ ರವೀಂದ್ರ ಶೇಟ್ ಮಾತನಾಡಿ, ಎಲ್ಲರೂ ಜತೆಯಾಗಿಕೊಂಡು ಒಗ್ಗಟ್ಟಿನಿಂದ ಶ್ರೀರಾಮೋತ್ಸವವನ್ನು ಯಶಸ್ಸುಗೊಳಿಸಬೇಕಿದೆ ಎಂದರು.

ಶ್ರೀರಾಮೋತ್ಸವ ಸಮಿತಿಯ ಅಧ್ಯಕ್ಷ ಸುನಿಲ್ ಆಚಾರ್, ಗೌರವಾಧ್ಯಕ್ಷ ಪ್ರೊ. ಎಂ.ಬಿ.ಪುರಾಣಿಕ್, ಕಾರ್ಯಾಧ್ಯಕ್ಷ ಸುದರ್ಶನ ಮೂಡುಬಿದಿರೆ ಮುಂತಾದವರು ಉಪಸ್ಥಿತರಿದ್ದರು.



ಇಂದು ಬೆಳಗ್ಗೆ ಗಣಹೋಮ, ದೇವರ ಪ್ರತಿಷ್ಠೆ, ಧ್ವಜಾರೋಹಣ ನಡೆಯಲಿದೆ. ಈ ಬಾರಿ ಶ್ರೀರಾಮೋತ್ಸವದ ರಜತ ವರ್ಷಾಚರಣೆ ಅಂಗವಾಗಿ ನಾಲ್ಕು ದಿನಗಳ ಕಾಲ ಅದ್ದೂರಿಯಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾ.29 ರಂದು ರಾತ್ರಿ 8ಕ್ಕೆ ಮಹಾಪೂಜೆ, 8.30ಕ್ಕೆ ರಾವಣ ದಹನ, ಆಕರ್ಷಕ ಸುಡುಮದ್ದು ಪ್ರದರ್ಶನ ನಡೆಯಲಿದೆ.

'ವರಾಹಿ'ಯಲ್ಲಿ ಯಾರಿಗೂ ಅನ್ಯಾಯ ಆಗದು : ಹೆಬ್ಬಾಳಕರ್

ಕುಂದಾಪುರ: ವರಾಹಿ ಯೋಜನೆಗೆ ಸಂಬಂಧಪಟ್ಟಂತೆ ಈಗಾಗಲೇ ಎರಡೂ ಕಡೆಯ ರೈತರು ಮನವಿ ನೀಡಿದ್ದು, ಯಾರಿಗೂ ಅನ್ಯಾಯ ಆಗಬಾರದು ಎಂಬುದೇ ಜಿಲ್ಲಾಡಳಿತ ಹಾಗೂ ಸರ್ಕಾರದ ಆಶಯವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಹೇಳಿದ್ದಾರೆ.

ಕುಂದಾಪುರದ ಕೋಟೇಶ್ವರ ಸಮೀಪದ ಯುವ ಮೆರಿಡಿಯನ್ ಹೆಲಿಪ್ಯಾಡ್ ಬಳಿ ಗುರುವಾರ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವರು, ಈಗಾಗಲೇ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರೈತಾಪಿ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.



ಬೈಂದೂರು ನೂತನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಸರ್ಕಾರಿ ಬಸ್‌ಗಳು ಪ್ರವೇಶಿಸುವುದಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳ ಸಭೆ ಕರೆದು ಶೀಘ್ರವೇ ಸಮಸ್ಯೆ ಬಗೆ ಹರಿಸಲಾಗುವುದು ಎಂದರು.

ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ, ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತೆ ರಶ್ಮಿ ಎಸ್.ಆರ್., ಕುಂದಾಪುರ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ಕುಂದಾಪುರ ಇನ್ಸ್‌ಪೆಕ್ಟರ್ ಜಯರಾಮ್ ಗೌಡ, ಮಾಜಿ ಶಾಸಕ ಕೆ.ಗೋಪಾಲ ಪೂಜಾರಿ, ವಿಕಾಸ್ ಹೆಗ್ಡೆ, ಅರವಿಂದ ಪೂಜಾರಿ, ಸಂಪಿಗೇಡಿ ಸಂಜೀವ ಶೆಟ್ಟಿ, ರಮೇಶ ಕಾಂಚನ್ ಉಡುಪಿ, ಸಂತೋಷ್ ಶೆಟ್ಟಿ ಬಲಾಡಿ, ಯುವ ಮೆರಿಡಿಯನ್ ಆಡಳಿತ ಪಾಲುದಾರ ಉದಯ ಕುಮಾರ್ ಶೆಟ್ಟಿ ಮೊದಲಾದವರು ಇದ್ದರು.

> ರೈತಾಪಿ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ

ಪುಂಜಾಲಕಟ್ಟೆ–ಚಾರ್ಮಾಡಿ ಭಾಗದಲ್ಲಿ ಅಭಿವೃದ್ಧಿ ಕಾಮಗಾರಿಗೆ ವೇಗ | ಮಳೆಗಾಲ ಪ್ರಾರಂಭಕ್ಕೂ ಮುನ್ನ ಶೇ. 80 ರಷ್ಟು ಕೆಲಸ ಪೂರ್ಣಗೊಳಿಸಲು ಯೋಜನೆ

ಶೀಘ್ರವೇ ಸಂಪೂರ್ಣ ಬದಲಾಗಲಿದೆ ಇಲ್ಲಿನ ಪ್ರಮುಖ ಪೇಟೆಗಳ ಚಿತ್ರಣ!

ಬೆಳ್ತಂಗಡಿ: ಮಂಗಳೂರು–ಎಲ್ಲುಪುರಂ ರಾಷ್ಟ್ರೀಯ ಹೆದ್ದಾರಿಯ ಸುಮಾರು 35 ಕಿ.ಮೀ. ವ್ಯಾಪ್ತಿಯಲ್ಲಿ ಕಳೆದೆರಡು ವರ್ಷಗಳಿಂದ ಕಾಮಗಾರಿ ನಡೆಯುತ್ತಿದೆ. ಇದೀಗ ಪುಂಜಾಲಕಟ್ಟೆ–ಚಾರ್ಮಾಡಿ ಭಾಗದಲ್ಲಿ ಅಭಿವೃದ್ಧಿ ಕಾಮಗಾರಿ ವೇಗ ಪಡೆದಿದ್ದು, ಪ್ರಮುಖ ಪೇಟೆಗಳ ಚಿತ್ರಣ ಸಂಪೂರ್ಣ ಬದಲಾಗುತ್ತಿದೆ.

ಕೆಲವು ಭಾಗಗಳಲ್ಲಿ ಒಂದು ಹಂತದ ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಕಡೆಗಳಲ್ಲಿ ರಸ್ತೆ ವಿಸ್ತರಣೆ, ರಸ್ತೆ ನೇರಗೊಳಿಸುವುದು ಸಹಿತ ಇತರ ಕಾಮಗಾರಿಗಳು ಸಾಗುತ್ತಿವೆ. ಗ್ರಾಮೀಣ ಭಾಗಗಳಲ್ಲಿ ಹೆದ್ದಾರಿ ಹಾದು ಹೋಗುವ ಸ್ಥಳಗಳು ಅಗಲಗೊಳ್ಳುತ್ತಿವೆ. ಚರಂಡಿ, ತಡೆಗೋಡೆ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಪ್ರಸ್ತುತ ಉಜಿರೆ ಪೇಟೆ ಭಾಗದಲ್ಲಿ ಕಾಮಗಾರಿ ಭರ ದಿಂದ ಸಾಗುತ್ತಿದೆ. ರಸ್ತೆ ಅಗಲೀಕರಣದಿಂದ ಕೆಲವು ಪ್ರದೇಶಗಳ ಸ್ವರೂಪ ಬದಲಾಗಿದೆ. ಮುಂಡಾಜೆ, ಚಾರ್ಮಾಡಿ, ಮದ್ದಡ್ಕ ಪೇಟೆ ಪ್ರದೇಶಗಳಲ್ಲಿ ಪ್ರಸ್ತುತ ಕಾಮಗಾರಿ ನಡೆಯುತ್ತಿದೆ. ಕಾಮಗಾರಿ ನಡೆದ ಸ್ಥಳಗಳಲ್ಲಿ ಪೇಟೆಗಳ ಚಿತ್ರಣ ಬದಲಾಗುತ್ತಿದೆ.



ಕಾಮಗಾರಿ ವೇಳೆ ಟ್ರಾಫಿಕ್ ಜಾಮ್ ಸಮಸ್ಯೆ ಹೆಚ್ಚುತ್ತಿದೆ. ರಸ್ತೆ ಪೂರ್ಣಗೊಂಡ ಸ್ಥಳಗಳಲ್ಲಿ ಎರಡನೇ ಹಂತದ ಡಾಂಬರೀಕರಣ ನಡೆದಿದೆ. ಪೇಟೆ ಹಾಗೂ ಅಗತ್ಯ ಪ್ರದೇಶಗಳಲ್ಲಿ ಚರಂಡಿ ನಿರ್ಮಿಸಲಾಗಿದ್ದು, ಇದರಲ್ಲಿ ಫುಟ್‌ಪಾತ್ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಕೆಲವೆಡೆ ಚರಂಡಿಗಳು ತೆರೆದಿದ್ದು ಅದಕ್ಕೆ ಸ್ಲ್ಯಾಬ್ ಅಳವಡಿಸುವ ಕಾರ್ಯ ಪೂರ್ಣಗೊಂಡಿಲ್ಲ. ಅಲ್ಲಿ ಚರಂಡಿ ತೆರೆದಿರು ವುದರಿಂದ ಹಲವಾರು ಜನರು ಬಿದ್ದು ಗಾಯಗೊಂಡು ಆಸ್ಪತ್ರೆ ಸೇರಿದ ಘಟನೆಗಳು ನಡೆದಿವೆ. ಚರಂಡಿಗಳ ಬದಿ ತಡೆಬೇಲಿ ಅಳವಡಿಸಿದ್ದು, ಇದಕ್ಕೆ ಪೈಂಟಿಂಗ್ ಕೆಲಸ ಸಾಗುತ್ತಿದೆ. ಬೆಳ್ತಂಗಡಿ ಮುಖ್ಯ ಪೇಟೆಯಲ್ಲಿ ಅಂದರೆ ಸಂತೆಕಟ್ಟೆಯ ಅಯ್ಯಪ್ಪ ಗುಡಿಯಿಂದ ಗ್ರಂಥಾಲಯದ ತನಕದವರೆಗೆ ವಿಸ್ತರಣೆಯ ಯಾವುದೇ ಚಟುವಟಿಕೆಗಳು ಪ್ರಾರಂಭವಾಗಿಲ್ಲ. ಆದರೆ ಮುಖ್ಯ ಸೇತುವೆಯಾಗಿದ್ದ ಬೆಳ್ತಂಗಡಿ ಸೇತುವೆಯನ್ನು ಈಗಾಗಲೇ ಕೆಡವಲಾಗಿದೆ. ವಾಹನಗಳು ಹೊಸ ಸೇತುವೆಯಲ್ಲಿ ಸಂಚರಿಸುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಯಾವುದೇ ಕೆಲಸ ಮಾಡುವುದು ದುಸ್ತರ ಹೀಗಾಗಿ ಮುಖ್ಯ ಮಳೆಗಾಲ ಪ್ರಾರಂಭವಾಗುವ ಮೊದಲು ಶೇ. 80 ರಷ್ಟು ಕಾಮಗಾರಿ ಮುಗಿಯಬಹುದು ಎಂದು ಅಂದಾಜಿಸಲಾಗಿದೆ.

> **ಶೀಘ್ರ ಪರಿಹಾರ**
> ವಾಹನ ಸವಾರರಿಗೆ ತೊಂದರೆಯಾಗದಂತೆ ಕಾಮಗಾರಿ ನಡೆಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಅಲ್ಲಲ್ಲಿ ಇರುವ ಸಾಮಾನ್ಯ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಲ್ಪಿಸಲಾಗುವುದು.
> ■ ಕೆ.ಎಸ್.ಚಂದ್ರಶೇಖರ್, ಇಇ, ರಾಷ್ಟ್ರೀಯ ಹೆದ್ದಾರಿ ಇಲಾಖೆ, ದ.ಕ.

> ಕಾಮಗಾರಿಯ ಪೂರ್ಣ ಚಿತ್ರಣದ ಬಗ್ಗೆ ಜನರಲ್ಲಿ ಗೊಂದಲಗಳಿವೆ. ಅಲ್ಲಲ್ಲಿ ಕೆಲವು ಸಮಸ್ಯೆಗಳು ಕಂಡುಬರುತ್ತಿದ್ದು, ಈ ಸಮಸ್ಯೆಗಳಿಗೆ ಪರಿಹಾರ ಒದಗಿಸಿ ಕಾಮಗಾರಿ ಮುಂದುವರಿಯ ಬೇಕಿದೆ. ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಅಗತ್ಯ ಸಂಚಾರ ಸೂಚನೆಗಳನ್ನು ಒದಗಿಸಬೇಕು.
> ■ ಉಷಾ ಶೆಟ್ಟಿ, ಉಜಿರೆ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 36° 25°
ಉಡುಪಿ 33° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 27, ಮಾರ್ಚ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಕಾಸರಗೋಡು ಜಿಲ್ಲಾಮಟ್ಟದ ಕ್ಲಿಯರಿಂಗ್ ಸೆಂಟರ್ ಚುರುಕು



ಪುಟ 6

ಸತತ ಮೂರನೇ ಬಾರಿಗೆ ಶಿರ್ವಕ್ಕೆ 'ಗಾಂಧಿ ಗ್ರಾಮ ಪುರಸ್ಕಾರ'

ಜೀವನದಿ ನೇತ್ರಾವತಿಯ ಮಡಿಲಿನ ಊರಿನಲ್ಲಿ ಮೂರು ದಿನಗಳ ಕಾಲ ಕನ್ನಡ ಹಬ್ಬದ ಸಂಭ್ರಮ



ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿ ನೇತ್ರಾವತಿಯ ತೀರ ಬಂಟ್ವಾಳದಲ್ಲಿ ಮೂರು ದಿನಗಳ ಕಾಲ ನಡೆಯುವ ಜಿಲ್ಲಾ 28ನೇ ಕನ್ನಡ ಸಾಹಿತ್ಯೋತ್ಸವಕ್ಕೆ ಗುರುವಾರ ಸಂಜೆ 'ಕನ್ನಡ ಸಾಂಸ್ಕೃತಿಕ ದಿಬ್ಬಣ'ದ ಮೆರವಣಿಗೆ ಮೂಲಕ ಸಂಭ್ರಮದ ಚಾಲನೆ ನೀಡಲಾಯಿತು. ಪೊಳಲಿ ದ್ವಾರದಿಂದ ಹೊರಟ ಕನ್ನಡ ಭುವನೇಶ್ವರಿಯ ಮೆರವಣಿಗೆ ಸ್ವರ್ಣಕಲಾಮಂದಿರದ ಪಂಜೆ ಮಂಗೇಶರಾಯ ಹೆಸರಿನ ಸಭಾಂಗಣದಲ್ಲಿ ಸಂಪನ್ನಗೊಂಡಿತು. (ಪುಟ 2)

ಸುತ್ತಮುತ್ತ

ಸೋಮವಾರಪೇಟೆ ವ್ಯಾಪ್ತಿಯ ವಿವಿಧೆಡೆಗಳಲ್ಲಿ ಮದ್ಯ ಮಾರಾಟ ನಿಷೇಧ

ಮಡಿಕೇರಿ: ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ ನಡೆಯಲಿರುವ ರಾಮನವಮಿ ಉತ್ಸವ ಕಾರ್ಯಕ್ರಮದ ಹಿನ್ನಲೆಯಲ್ಲಿ ಮಾ.27 ರಂದು ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12ರವರೆಗೆ ಸೋಮವಾರಪೇಟೆ ಪಟ್ಟಣ ಪಂಚಾಯತ್ ವ್ಯಾಪ್ತಿ, ಆಬ್ಬೂರ ಕಟ್ಟೆ ಗ್ರಾಮ, ಐಗೂರು ಗ್ರಾಮ ಮತ್ತು ಮಾದಾಪುರ ಗ್ರಾಮ ಹಾಗೂ ಅದರ ಸುತ್ತಮುತ್ತಲಿನ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಮದ್ಯದ ಅಂಗಡಿ, ಬಾರ್, ಹೊಟೇಲ್ ಮತ್ತು ಕ್ಲಬ್‌ಗಳಲ್ಲಿ ಎಲ್ಲಾ ವಿಧದ ಮದ್ಯ ಹಾಗೂ ಹೋಮ್ ಮೇಡ್ ವೈನ್ ಮಾರಾಟ ಸಂಪೂರ್ಣ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಆದೇಶ ಹೊರಡಿಸಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ತ್ಯಾಜ್ಯ: ಕಾನೂನು ಉಲ್ಲಂಘನೆ ವಿರುದ್ಧ ಕ್ರಮ

ಪೆರ್ಲ: ಎಣ್ಮಕಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧೆಡೆ ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ಪಂಚಾಯತ್ ಮತ್ತು ಜಿಲ್ಲಾ ಜಾಗೃತ ದಳ ನಿಗಾ ತೀವ್ರಗೊಳಿಸಿದೆ. ಎಣ್ಮಕಜೆ ಗ್ರಾಮ ಪಂಚಾಯತ್‌ನ ಇಡಿಯಡ್ಕದಿಂದ ಶೇಣಿ ವರೆಗಿನ ರಸ್ತೆಯ ಎರಡೂ ಬದಿಗಳಲ್ಲಿ ತ್ಯಾಜ್ಯ ಕಂಡು ಬಂದಿದ್ದು ಈಗಾಗಲೇ ವಿವಿಧೆಡೆ ಸ್ಥಾಪಿಸಿದ ಸಿಸಿ ಕ್ಯಾಮರಾ ಮೂಲಕ ಕೆಲವರನ್ನು ಈಗಾಗಲೇ ಪತ್ತೆ ಹಚ್ಚಲಾಗಿದ್ದು, ಅಂತಹವರನ್ನು ಕೇಂದ್ರೀಕರಿಸಿ ನಿಗಾ ವಹಿಸಲಾಗಿದ್ದು ಇನ್ನು ಕೆಲವು ಬಾಡಿಗೆ ಕಟ್ಟಡಗಳನ್ನು ಕೇಂದ್ರೀಕರಿಸಿ ತ್ಯಾಜ್ಯ ಹೊರ ಚೆಲ್ಲುವ ಪ್ರಕ್ರಿಯೆಯೂ ಕಂಡು ಬಂದಿದೆ. ಇಂತಹ ಸಂಸ್ಥೆಗಳ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಮುನ್ಸೂಚನೆ ನೀಡಲಾಗಿದ್ದು ಮುಂದಿನ ದಿನಗಳಲ್ಲಿ ತ್ಯಾಜ್ಯ ವಿರುದ್ಧ ಕಟ್ಟು ನಿಟ್ಟಿನ ಕ್ರಮ ಬಿಗಿಗೊಳಿಸಲಾಗುತ್ತಿದೆ. ಕಾನೂನು ಉಲ್ಲಂಘಿಸುವವರಿಗೆ 5000ದಿಂದ 50000 ರೂ.ಗಳ ವರೆಗೆ ದಂಡ ವಿಧಿಸಲಾಗುವುದು ಎಂದು ಸಂಬಂಧಪಟ್ಟವರು ತಿಳಿಸಿದ್ದಾರೆ.

ಏ.1: ನಾಪೋಕ್ಲು ಪರಿಸರದಲಿ ಮದ್ಯ ಮಾರಾಟ ನಿಷೇಧ

ಮಡಿಕೇರಿ: ನಾಪೋಕ್ಲುವಿನಲ್ಲಿ ನಡೆಯಲಿರುವ ಹಿಂದೂ ಜನ ಜಾಗೃತಿ ಸಮಾವೇಶ ಹಿನ್ನಲೆಯಲ್ಲಿ ಏ.1 ರಂದು ಬೆಳಿಗ್ಗೆ 6 ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯವರೆಗೆ ನಾಪೋಕ್ಲು ಹಾಗೂ ಅದರ ಸುತ್ತಮುತ್ತಲಿನ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಮದ್ಯದ ಅಂಗಡಿ, ಬಾರ್, ಹೊಟೇಲ್, ಕ್ಲಬ್‌ಗಳಲ್ಲಿ ಎಲ್ಲಾ ವಿಧದ ಮದ್ಯ ಹಾಗೂ ಹೋಮ್ ಮೇಡ್ ವೈನ್ ಮಾರಾಟ ನಿಷೇಧಿಸಲಾಗಿದೆ.

ಕಟಪಾಡಿ ಓವರ್‌ಪಾಸ್ ಸಂಚಾರಕ್ಕೆ ರೆಡಿ

ಜಸ್ಟ್ ಒಂದು ವಾರ!

ಟ್ರಾಫಿಕ್ ಕಿರಿಕಿರಿಗೆ ಸಿಗಲಿದೆ ಶಾಶ್ವತ ಮುಕ್ತಿ



ಸಂಗಮ ವಿಶೇಷ

ಉಡುಪಿ: ಇಲ್ಲಿನ ರಾಷ್ಟ್ರೀಯ ಹೆದ್ದಾರಿ 66ರ ಅತ್ಯಂತ ಜನನಿಬಿಡ ಜಂಕ್ಷನ್ ಆದ ಕಟಪಾಡಿಯಲ್ಲಿ ವಾಹನ ಸವಾರರು ಎದುರಿಸುತ್ತಿದ್ದ ಟ್ರಾಫಿಕ್ ಸಮಸ್ಯೆಗೆ ಶೀಘ್ರವೇ ಪರಿಹಾರ ಸಿಗಲಿದೆ.

ಇಲ್ಲಿ ನಿರ್ಮಿಸಲಾದ ಬಹು ನಿರೀಕ್ಷಿತ ಓವರ್‌ಪಾಸ್‌ನ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಮುಂದಿನ ಒಂದು ವಾರದೊಳಗೆ ವಾಹನಗಳ ಸಂಚಾರಕ್ಕೆ ಮುಕ್ತವಾಗಲಿದೆ.

ಕಾಮಗಾರಿ ಅಂತಿಮ ಹಂತಕ್ಕೆ

ಓವರ್‌ಪಾಸ್‌ನ ಮೇಲ್ಭಾಗದ ಡಾಂಬರೀ ಕರಣ ಮತ್ತು ಸುರಕ್ಷತಾ ತಡೆಗೋಡೆಗಳ ಕೆಲಸ ಮುಗಿದಿದ್ದು, ಈಗ ಬಣ್ಣ ಬಳಿಯುವುದು ಮತ್ತು ನಾಮಫಲಕ ಅಳವಡಿಕೆಯಂತಹ ಅಂತಿಮ ಸ್ಪರ್ಶ ನೀಡಲಾಗುತ್ತಿದೆ. ಮಳೆಗಾಲ ಆರಂಭಕ್ಕೂ ಮುನ್ನವೇ ಈ ಯೋಜನೆಯನ್ನು ಲೋಕಾರ್ಪಣೆಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಿದ್ಧತೆ ನಡೆಸಿದೆ.

ಟ್ರಾಫಿಕ್ ಕಿರಿಕಿರಿಗೆ ಮುಕ್ತಿ

ಮಂಗಳೂರು- ಉಡುಪಿ ನಡುವೆ ಸಂಚರಿಸುವ ವಾಹನಗಳು ಕಟಪಾಡಿ ಜಂಕ್ಷನ್‌ನಲ್ಲಿ ಸಿಗ್ನಲ್‌ಗಾಗಿ ದೀರ್ಘಕಾಲ ಕಾಯಬೇಕಾಗಿತ್ತು. ಈ ಓವರ್‌ಪಾಸ್ ಕಾರ್ಯಾರಂಭ ಮಾಡಿದರೆ, ಹೆದ್ದಾರಿಯ ವಾಹನಗಳು ತಡೆರಹಿತವಾಗಿ ಸಾಗಲಿವೆ.

ಯಾರ್‍ಯಾರಿಗೆ ಅನುಕೂಲ?

ಈ ಓವರ್ ಪಾಸ್ ಆರಂಭವಾದರೆ ಶಿರ್ವ, ಮಂಚಿಕಲ್‌ಭಾಗದ ಕಡೆಯಿಂದ ಬರುವ ವಾಹನಗಳಿಗೆ ಜಂಕ್ಷನ್ ದಾಟಲು ಸುಲಭವಾಗಲಿದ್ದು, ಅಪಘಾತ ಸಂಖ್ಯೆಯೂ ಕಡಿಮೆಯಾಗಲಿದೆ.


ಸರಣಿ ಅಪಘಾತಗಳನ್ನು ತಡೆಗಟ್ಟಲು ಸಹಕಾರಿ

ಓವರ್‌ಪಾಸ್ ಕೆಳಭಾಗದಲ್ಲಿ ಸ್ಥಳೀಯ ವಾಹನಗಳ ಸಂಚಾರಕ್ಕಾಗಿ ಸುಸಜ್ಜಿತ ಸರ್ವಿಸ್ ರಸ್ತೆ ಹಾಗೂ ಚರಂಡಿ ವ್ಯವಸ್ಥೆಯನ್ನು ಅಂತಿಮಗೊಳಿಸಲಾಗುತ್ತಿದೆ. ಇದಲ್ಲದೆ ಈ ಭಾಗದಲ್ಲಿ ಹೆದ್ದಾರಿ ದಾಟುವ ಪಾದಚಾರಿಗಳ ಸುರಕ್ಷತೆಗಾಗಿ ವಿಶೇಷ ಜೀಬ್ರಾ ಕ್ರಾಸಿಂಗ್ ಮತ್ತು ಹೈಮಾಸ್ಟ್ ದೀಪಗಳನ್ನು ಅಳವಡಿಸಲು ಕೂಡಾ ಯೋಜಿಸಲಾಗಿದೆ. ಇದು ಕಟಪಾಡಿ ಜಂಕ್ಷನ್‌ನಲ್ಲಿ ಈ ಹಿಂದೆ ಸಂಭವಿಸುತ್ತಿದ್ದ ಸರಣಿ ಅಪಘಾತಗಳನ್ನು ತಡೆಗಟ್ಟಲು ಸಹಕಾರಿಯಾಗಲಿದೆ.

ನಿಗೂಢ ಸದ್ದಿಗೆ ಬೆಚ್ಚಿಬಿದ್ದ ಜನತೆ

ಅನುಮಾನ ಸೃಷ್ಟಿಸಿದ 'ನಿಗೂಢ' ವಿಮಾನ!!

ಬೆದ್ರ ಪರಿಸರದಲ್ಲಿ ಕಾಡಿದ ಆತಂಕ



ಸಂಗಮ ವಿಶೇಷ

ಮೂಡುಬಿದಿರೆ: ಮಧ್ಯಪ್ರಾಚ್ಯ ಯುದ್ಧದ ಗುಂಗಿನಲ್ಲಿರುವ ಜನತೆಗೆ ಗುರುವಾರ ದಿನ ಮಧ್ಯಾಹ್ನ ಆಗಸದಲ್ಲಿ ಕೇಳಿಸಿದ ಭಾರೀ ಸದ್ದು ಅಕ್ಷರಶಃ ಆತಂಕಕ್ಕೆ ತಳ್ಳಿತ್ತು.

ಭಾರೀ ಸದ್ದು ಮಾಡುತ್ತಾ ಪುಟ್ಟ ವಿಮಾನವೊಂದು ಮೂಡುಬಿದಿರೆ ಪರಿಸರದ ಆಗಸದ ಮೇಲೆ 3.35ರ ಸುಮಾರಿಗೆ ಹಾರಿದ್ದು, ಇಲ್ಲಿನ ಜನತೆ ಕ್ಷಣಕಾಲ ಭಯಾತಂಕಕ್ಕೆ ಒಳಗಾದರು. ಅತ್ತ ವಿಶ್ವದಲ್ಲಿ ಯುದ್ಧದ ಕಾರ್ಮೋಡ ಒಂದೆಡೆ ಯಾದರೆ, ಇದೀಗ ಯುದ್ಧ ವಿಮಾನವನ್ನು ಹೋಲುವ ಈ ವಿಮಾನ ಆಗಸದಲ್ಲಿ ಹಾರಿದ್ದು ಭಾರೀ ಚರ್ಚೆಗೆ ಕಾರಣವಾಗಿದೆ.

ಆಗಸದಲ್ಲಿ ಒಂದು ಪ್ರದಕ್ಷಿಣೆ

ವಿಮಾನದ ಭೀಕರ ಸದ್ದಿಗೆ ಬೆಚ್ಚಿ ಬಿದ್ದ ಜನ ಮನೆಯಿಂದ ಹೊರಬಂದು ಆಗಸ ನೋಡುವಂತಾಗಿದೆ. ಮೂಡುಬಿದಿರೆಯ ಆಗಸದಲ್ಲಿ ಒಂದು ಪ್ರದಕ್ಷಿಣೆ ಹಾಕಿದ ವಿಮಾನ ಮತ್ತೆ ಕಣ್ಮರೆಯಾಗಿದೆ. ವಿಮಾನದ ಈ ಹಾರಾಟ ಹಲವು ಪ್ರಶ್ನೆ ಹುಟ್ಟು ಹಾಕುವಂತೆ ಮಾಡಿದೆ.

ಸುಖೋಯ್‌ಯೇ? ಮಿಗ್ ವಿಮಾನವೇ???

ಮೂಡುಬಿದಿರೆ ಪರಿಸರದ ಬಾನಿನಲ್ಲಿ 'ಕಾಣಿಸಿದ್ದು' ಸುಖೋಯ್ ಅಥವಾ ಮಿಗ್ ಏರ್ ಕ್ರಾಫ್ಟ್ ಮಾದರಿಯ ವಿಮಾನ ಹಾರಾಟವಾಗಿದ್ದು ಅತ್ಯಂತ ವೇಗವಾಗಿ ಹಾರಿದ ಪರಿಣಾಮ ಇದು ಯಾವ ವಿಮಾನ ಎಂದು ಸರಿಯಾಗಿ ಪತ್ತೆ ಮಾಡಲು ಸಾಧ್ಯವಾಗಿಲ್ಲ.

'ದುಡ್ಡು ತೆಗೆದುಕೊಳ್ಳುವಲ್ಲಿ ಕಾಡಿದೆ ದಿಡ್ಡು ಸಮಸ್ಯೆ' ಸಂಗಮ ವರದಿಗೆ ಎಚ್ಚೆತ್ತ ಆಡಳಿತ

ಅಪಾಯಕಾರಿ ದಿಡ್ಡಿಗೆ ಬಿದ್ದಿದೆ ತಾತ್ಕಾಲಿಕ ತೇಪೆ!



ಬಂಟ್ವಾಳ: ಬ್ರಹ್ಮರಕೂಟ್ಲು ಟೋಲ್ ಗೇಟ್ ರಸ್ತೆಯ ಮಧ್ಯದಲ್ಲಿ ಚಾಲಕರನ್ನು ಕಾಡುತ್ತಿದ್ದ ಕಾಂಕ್ರೀಟ್ ಪಿಲ್ಲರ್ ಬೆಡ್‌ಗೆ ಸದ್ಯದ ಮಟ್ಟಿಗೆ ಈಗ ಮುಕ್ತಿ ಸಿಕ್ಕಿದೆ.

ಸಚಿತ್ರ ವರದಿಗೆ ಎಚ್ಚೆತ್ತರು

ಈ ದಿಡ್ಡಿನಿಂದಾಗಿ ಸ್ಕೂಟರ್ ಸಹ ಸವಾರೆ ಗಾಯಗೊಂಡಿದ್ದು, ಈ ಪಿಲ್ಲರ್ ಬೆಡ್ ಚಾಲಕರ, ಪ್ರಯಾಣಿಕರ ಪಾಲಿಗೆ ತೀವ್ರ ಅಪಾಯಕಾರಿಯಾಗಿ ಪರಿಣಮಿಸಿರುವ ಬಗ್ಗೆ 'ಹೊಸದಿಗಂತ' ಸಚಿತ್ರ ವರದಿ ಪ್ರಕಟಿಸಿದ ಬೆನ್ನಲ್ಲೇ ಎಚ್ಚೆತ್ತುಕೊಂಡ ಬ್ರಹ್ಮರಕೂಟ್ಲುವಿನ ಟೋಲ್ ಗೇಟ್‌ನ ನಿರ್ವಾಹಕರು ತೇಪೆ ಕಾರ್ಯವನ್ನು ಕೈಗೊಂಡಿದ್ದಾರೆ.

ಈ ಟೋಲ್‌ಗೇಟ್ ರಸ್ತೆಯಲ್ಲಿ ವಾಹನ ಸಂಚಾರದ ಸ್ಥಳದಲ್ಲಿ ಕಾಂಕ್ರೀಟ್ ಬೆಡ್ ರೀತಿಯ ದಿಡ್ಡು ನಿರ್ಮಾಣ ಮಾಡಿದ ಬಗ್ಗೆ ಯಾವುದೇ ಪೂರ್ವ ಸೂಚನೆಯಾಗಲೀ, ಸುರಕ್ಷತಾ ಕ್ರಮವಾಗಲೀ ಅಳವಡಿಸಿರಲಿಲ್ಲ. »ಪುಟ 6

ಮೊದಲಪುಟದಲ್ಲೇ ಸಚಿತ್ರ, ವಿಶೇಷ ವರದಿ


ಬ್ರಹ್ಮರಕೂಟ್ಲು ಟೋಲ್ ಗೇಟ್‌ನಲ್ಲಿ ಚಾಲಕರಿಗೆ ಮತ್ತೊಂದು ಸವಾಲು
ದುಡ್ಡು ತಗೊಳ್ಳುವಲ್ಲಿ ಕಾಡಿದೆ ದಿಡ್ಡು ಸಮಸ್ಯೆ

ಟೋಲ್ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿದ್ದ ಈ ಕಾಂಕ್ರೀಟ್ ಬೆಡ್ ಬಗ್ಗೆ ಹೊಸದಿಗಂತದ ಸಂಗಮ ಮೊದಲ ಪುಟದಲ್ಲಿ 'ದುಡ್ಡು ತೆಗೆದುಕೊಳ್ಳುವಲ್ಲಿ ಕಾಡಿದೆ ದಿಡ್ಡು ಸಮಸ್ಯೆ' ಶೀರ್ಷಿಕೆಯಲ್ಲಿ ಮಾ.23 ರಂದು ವಿಶೇಷ ವರದಿ ಪ್ರಕಟಿಸಿ ಗಮನಸೆಳೆದಿತ್ತು.

ದ್ವಿಚಕ್ರ ಸವಾರೆ ಮಹಿಳೆಗೆ ಗಾಯವಾಗಿತ್ತು, ಲಾರಿ ಕೂಡಾ ಡಿಕ್ಕಿಯಾಗಿತ್ತು

ಶನಿವಾರ ರಾತ್ರಿ ಸ್ಕೂಟರಿನ ಹಿಂದುಗಡೆ ಕುಳಿತು ಸಂಚರಿಸುತ್ತಿದ್ದ ಮಹಿಳೆಯ ಕಾಲಿಗೆ ತಾಗಿ ತೀವ್ರ ಗಾಯವಾಗಿತ್ತು. ಇದಲ್ಲದೆ ಅಂದೇ ಈ ದಿಡ್ಡು ಗಮನಕ್ಕೆ ಬಾರದೆ ಲಾರಿಯೊಂದು ಇದಕ್ಕೆ ಡಿಕ್ಕಿ ಹೊಡೆದು ಹಾನಿಯಾಗಿತ್ತು. ಈ ಸಂದರ್ಭ ವಾಹನ ಸವಾರರು ಹಾಗೂ ಟೋಲ್ ಗೇಟ್ ಸಿಬ್ಬಂದಿಗಳ ನಡುವೆ ಮಾತಿನ ಚಕಮಕಿ ಕೂಡಾ ನಡೆದಿತ್ತು.

ಬೆಂಕಿಯ ಕೆನ್ನಾಲಿಗೆಗೆ ಎಕರೆಗಟ್ಟಲೆ ಹಸಿರು ಆಹುತಿ



ಕಡಬ ತಾಲೂಕಿನ ಕ್ಯೊಲ ಗ್ರಾಮದ ಸಬಳೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಪಕ್ಕದ ಜಾಗ ಹಾಗೂ ಕಲಾಯಿ, ನೆಲ್ಯೋಟ್ಟು ಎಂಬಲ್ಲಿ ಗುರುವಾರ ದಿನ ಆಕಸ್ಮಿಕವಾಗಿ ಬೆಂಕಿ ಬಿದ್ದು ಸುಮಾರು ಒಂಭತ್ತು ಎಕರೆ ಪ್ರದೇಶದಲ್ಲಿ ಬೆಂಕಿ ಆವರಿಸಿ ಹಾನಿ ಉಂಟಾಗಿದೆ.

ಕಾಸರಗೋಡು ಜಿಲ್ಲೆಯಲ್ಲಿ ಅಡುಗೆ ಅನಿಲ ಪೂರೈಕೆ ಸುಲಲಿತಗೊಳಿಸಲು ಆಡಳಿತ ಸಾಹಸ

ಎಲ್‌ಪಿಜಿ ಆದ್ಯತಾ ಪಟ್ಟಿಗೆ ಆಸ್ಪತ್ರೆಗಳ ಸೇರ್ಪಡೆ



ಕಾಸರಗೋಡು: ವಾಣಿಜ್ಯ ವಲಯದ ಎಲ್‌ಪಿಜಿ ಅಡುಗೆ ಅನಿಲ ಸಿಲಿಂಡರ್‌ಗಳ ಆದ್ಯತಾ ವಿಭಾಗದಲ್ಲಿ ಈಗ ಕಾಸರಗೋಡು ಜಿಲ್ಲೆಯ ಆಸ್ಪತ್ರೆಗಳನ್ನು ಸೇರ್ಪಡೆಗೊಳಿಸಲಾಗಿದೆ.

ಕೇಂದ್ರದ ಸ್ಪಷ್ಟನೆ ಬೆನ್ನಿಗೇ ಆದೇಶ

ಕೊಲ್ಲಿ ಯುದ್ಧದ ಭೀತಿ, ಸಮುದ್ರ ಮಾರ್ಗ ದಿಗ್ಬಂಧನ ಆತಂಕದ ಮಧ್ಯೆ ಭಾರತದಲ್ಲಿ ಅಗತ್ಯದ ಅಡುಗೆ ಅನಿಲ ಪೂರೈಕೆಯಾಗುತ್ತಿದೆ ಎಂದು ಕೇಂದ್ರ ಸರಕಾರ ಸ್ಪಷ್ಟಪಡಿಸಿದ್ದು, ಈ ನಿಟ್ಟಿನಲ್ಲಿ ರಾಜ್ಯ ಸರಕಾರವು ಆದೇಶವೊಂದನ್ನು ಹೊರಡಿಸಿ ಕಾಸರಗೋಡು ಸಹಿತ ಎಲ್ಲಾ ಜಿಲ್ಲೆಗಳಲ್ಲೂ ಎಲ್‌ಪಿಜಿ ವಿತರಣೆ ಆದ್ಯತಾ ಪಟ್ಟಿಗೆ ಇನ್ನಷ್ಟು ವಿಭಾಗಗಳನ್ನು ಸೇರಿಸಲು ಸರಬರಾಜು ಇಲಾಖೆಗೆ ತಿಳಿಸಿದೆ. »ಪುಟ 6

ಲಿಸ್ಟ್‌ನಲ್ಲಿ ಯಾವ್ಯಾವುದು?

ಅಂಗನವಾಡಿಗಳು, ಪೌಷ್ಠಿಕ ಆಹಾರ ಉತ್ಪಾದಿಸುವ ಕೇಂದ್ರಗಳು, ನೈಸರ್ಗಿಕ ಅನಿಲ ಬಳಸುವ ಸ್ಮಶಾನಗಳು, ಇತ್ಯಾದಿಗಳನ್ನು ಈ ಮೊದಲೇ ಆದ್ಯತಾ ಪಟ್ಟಿಯಲ್ಲಿ ಸೇರಿಸಿ ಆದೇಶ ಹೊರಡಿಸಲಾಗಿದೆ. ಇದೀಗ ಜಿಲ್ಲೆಯ ಆಸ್ಪತ್ರೆಗಳನ್ನು ಒಳಪಡಿಸಲಾಗಿದೆ.

ಈಗ ಪಟ್ಟಿಗೆ ಹೆಚ್ಚಿನ ಎಲ್ಲಾ ಆಸ್ಪತ್ರೆಗಳು

ಅತ್ಯಾವಶ್ಯಕ ಸೇವೆಗಳಿಗಾಗಿ ವಿತರಿಸಲು ಪ್ರತಿದಿನ ನಿಗದಿತ ಪ್ರಮಾಣದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಈ ವಿಭಾಗಗಳಿಗೆ ಮೀಸಲಿರಿಸಲು ಸೂಚನೆ ನೀಡಲಾಗಿದೆ. ಜಿಲ್ಲೆಯ ಹೆಚ್ಚಿನ ಎಲ್ಲಾ ಆಸ್ಪತ್ರೆಗಳನ್ನು ಈ ಯೋಜನೆಯಲ್ಲಿ ಒಳಪಡಿಸಲಾಗಿದೆ.

ತೀವ್ರ ನಿಗಾ ಇರಿಸಲಿದೆ ಇಲ್ಲಿ ವಿಶೇಷ ಸಮಿತಿ...

ಆದ್ಯತಾ ವಲಯಗಳಿಗೆ ಸೇರ್ಪಡೆಗೊಳಿಸಲಾದ ವಿಭಾಗಗಳಿಗೆ ರಾಜ್ಯ ಸರಕಾರದ ನಿರ್ದೇಶನದ ಪ್ರಕಾರ ಸಮರ್ಪಕವಾದ ರೀತಿಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಸಲಾಗುತ್ತಿದೆಯೇ ಎಂಬುದನ್ನು ಜಿಲ್ಲಾಧಿಕಾರಿ ನೇತೃತ್ವದಲ್ಲಿ ರೂಪಿಸಲಾದ ವಿಶೇಷ ಸಮಿತಿ ತೀವ್ರ ನಿಗಾ ಇರಿಸಲಿದೆ. ಅಲ್ಲದೆ ಈ ನಿಟ್ಟಿನಲ್ಲಿ ತಪ್ಪೆಸಗಿದರೆ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

ಗಜಪಡೆಗಳ ದರ್ಬಾರ್‌ಗೆ ಗಣಗೂರು ಗ್ರಾಮ ಪಂಚಾಯತ್ ವ್ಯಾಪ್ತಿ ಹೈರಾಣ

ಪರಿಹಾರ ಬೇಡ, ಫಸಲು ಉಳಿಸಿಕೊಡಿ ಎಂದ ಅನ್ನದಾತರು



ಸೋಮವಾರಪೇಟೆ: ಇಲ್ಲಿನ ಗಣಗೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ದಿನದಿಂದ ದಿನಕ್ಕೆ ಸತತವಾಗಿ ಹೆಚ್ಚುತ್ತಿದ್ದು, ಕೃಷಿಕರು ಕಂಗಾಲಾಗಿದ್ದಾರೆ.

ಕೃಷಿ ಭೂಮಿಗೆ ಪ್ರತಿನಿತ್ಯ ಕಾಡಾನೆ

ಗಣಗೂರು, ಯರಪಾರೆ, ಬಾಣಾವಾರ, ಗೋಣಿಮರೂರು ಗ್ರಾಮಗಳ ಕೃಷಿ ಭೂಮಿಗೆ ಪ್ರತಿನಿತ್ಯ ಕಾಡಾನೆಗಳು ದಾಳಿ ಮಾಡುತ್ತಿವೆ ಎಂದು ಗ್ರಾಮಸ್ಥರು ದೂರಿದ್ದಾರೆ. ಗೋಣಿಮರೂರು -ಯರಪಾರೆ ಗ್ರಾಮದ ನಿವಾಸಿ ಗಣೇಶ್ ಎಂಬವರ ಜೋಳದ ಫಸಲನ್ನು ಹಾನಿಪಡಿಸಿವೆ. ರಮೇಶ್ ಎಂಬವರ ತೆಂಗಿನ ಗಿಡಗಳನ್ನು ಆನೆಗಳು ಮುರಿದು ತಿಂದು ಪೂರ್ಣವಾಗಿ ನಾಶ ಪಡಿಸಿವೆ. »ಪುಟ 6

ಏನೇನು ಬೇಡಿಕೆ?

- ಕಾಡಾನೆ ಕಂದಕಗಳನ್ನು ದುರಸ್ತಿ ಪಡಿಸಬೇಕು
- ಸೋಲಾರ್ ತಂತಿಬೇಲಿಯ ನಿರ್ವಹಣೆ ಮಾಡಬೇಕು
- ಸಿಬ್ಬಂದಿಗಳು ಪಟಾಕಿ ಸಿಡಿಸಿ ತೆರಳಿದರೆ, ಕೃಷಿ ಭೂಮಿಗೆ ಕಾಡಾನೆ ಹಾವಳಿ ನಿಯಂತ್ರಣ ಅಸಾಧ್ಯ

ಬಂಟ್ವಾಳದ ನೇತ್ರಾವತಿ ತಟದಲ್ಲಿ 28ನೇ ದ.ಕ.ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ 2

ಬಜೆಟ್: ಸ್ಮಾರ್ಟ್ ಸಿಟಿ ಅಭಿವೃದ್ಧಿಗೆ 'ಸ್ಮಾರ್ಟ್' ಯೋಜನೆಗಳು 3

ರಾಷ್ಟ್ರೀ ಹೆದ್ದಾರಿ ಎನ್‌ಎಚ್ 66ರಲ್ಲಿ ವಾಹನ ವೇಗಕ್ಕೆ ಟ್ರಾಫಿಕ್ ಸಿಗ್ನಲ್ ಅಡ್ಡಿ! 4

ವಿಧಾನಸಭಾ ಚುನಾವಣೆ: ಜಿಲ್ಲೆಯಲ್ಲಿ ಒಟ್ಟು 32 ಮಂದಿ ಅಭ್ಯರ್ಥಿಗಳು 5

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಶುಕ್ರವಾರ 27, ಮಾರ್ಚ್ 2026

ಸುತ್ತಮುತ್ತ

ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್. ಹರಗಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಸುಳ್ಯ: ಸುಳ್ಯದ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಸಾಹಿತಿ ವೈ.ಎಸ್. ಹರಗಿ ಅವರ 'ಇಮಾಮ್ ಸಾಹೇಬರ ಕುದುರೆ' ಕಾದಂಬರಿಗೆ 2025ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.
ಅವರ 2024ನೇ ಸಾಲಿನ ಅತ್ಯುತ್ತಮ ಕೃತಿ ಎಂದು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿಯಲ್ಲಿ ರೂ.25 ಸಾವಿರ ನಗದು ಬಹುಮಾನ,



ಫಲಕ, ಪ್ರಶಸ್ತಿ ಪ್ರಮಾಣ ಪತ್ರ ಒಳಗೊಂಡಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದ್ದಾರೆ.
ವೈ.ಎಸ್. ಹರಗಿ ಅವರು ಕನ್ನಡದ ಪ್ರಮುಖ ಕಾದಂಬರಿಕಾರ ಮತ್ತು ಕಥೆಗಾರರಾಗಿದ್ದು ಅವರ ಪ್ರಸಿದ್ಧ ಕಾದಂಬರಿ 'ಉರಿವ ಜಲ' ಕೃತಿಗೆ 2014ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರ ಸಾಹಿತ್ಯವು ಮುಖ್ಯವಾಗಿ ಗ್ರಾಮೀಣ ಬದುಕಿನ ವಾಸ್ತವತೆ ಮತ್ತು ಜನಸಾಮಾನ್ಯರ ಮನಮುಟ್ಟುವ ಕೃತಿಗಳಾಗಿರುವ ಹಿನ್ನಲೆಯಲ್ಲಿ ಅವರ ಮತ್ತೊಂದು ಕೃತಿ 2025ನೇ ಸಾಲಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾಗಿದೆ. ಅವರ ನಾನಾ ಕೃತಿಗಳನ್ನು ಗುರುತಿಸಿ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ, ಚಡಗ ಪ್ರಶಸ್ತಿ, ಡಾ. ಶಾಂತರಾಮ್ ಪ್ರಶಸ್ತಿ, ವಿಶ್ವೇಶ್ವರಯ್ಯ ಪ್ರಶಸ್ತಿ, ಅವ್ವ ಪ್ರಶಸ್ತಿಗಳು ಲಭಿಸಿದೆ.
ಫೊಟೋ: 26 – ಹರಗಿ ಪ್ರಶಸ್ತಿ

ಮಾ.29: ಗಂಗೊಳ್ಳಿಯಲ್ಲಿ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಕುಂದಾಪುರ: ದೃಷ್ಟಿ(ಪ್ರ) ದಾನ ಯೋಜನೆ 2026–27 ಕರ್ನಾಟಕ ಸರಕಾರ, ಉಡುಪಿ ಜಿಲ್ಲಾ ಅಂಧತ್ವ ನಿವಾರಣಾ ವಿಭಾಗ, ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ ಗಂಗೊಳ್ಳಿ, ಗ್ರಾಮ ಪಂಚಾಯತ್ ಗಂಗೊಳ್ಳಿ, ಪಾರ್ವತಿ ಮಹಾಬಲ ಶೆಟ್ಟಿ ಚಾರಿಟೇಬಲ್ ಟ್ರಸ್ಟ್, ಶಿರೂರು ಮುದ್ದುಮನೆ, ಶ್ರೀ ನಾರಾಯಣ ಗುರು ಜನ ಸೇವಾ ಬಳಗ ಗಂಗೊಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ಗಂಗೊಳ್ಳಿ ಸ.ಪಿ. ಹಿರಿಯ ಪ್ರಾಥಮಿಕ ಶಾಲೆಯ ವಠಾರದಲ್ಲಿ ಮಾ.29ರಂದು ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಗೋಪಾಲ ಪೂಜಾರಿ (9964794645), ಗೋಪಾಲ ಚಂದನ್ (9980093409) ಅಥವಾ ಹರ್ಷೇಂದ್ರ ಆಚಾರ್ಯ (9900816255) ಸಂಪರ್ಕಿಸಬಹುದು ಎಂದು ಸಂಘಟಕರು ತಿಳಿಸಿದ್ದಾರೆ.

ಏ.2: ಕುಂದಾಪುರದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ


ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತಾ ಮತ್ತು ಜೀವನೋಪಾಯ ಇಲಾಖೆ ಹಾಗೂ ತಾಲೂಕು ಪಂಚಾಯತ್ ಕುಂದಾಪುರ ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ–2026 ಏಪ್ರಿಲ್ 2 ರಂದು ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜು ಇಲ್ಲಿ ನಡೆಯಲಿದೆ. ಉದ್ಯೋಗ ಮೇಳದಲ್ಲಿ ವಿವಿಧ ಕಂಪನಿಗಳು ಭಾಗವಹಿಸಲಿದ್ದು ಅಭ್ಯರ್ಥಿಗಳು ಸಂಬಂಧಿಸಿದ ವಿದ್ಯಾರ್ಹತೆ, ಆಗತ್ಯ ದಾಖಲೆಗಳೊಂದಿಗೆ ಉದ್ಯೋಗ ಮೇಳದಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಅಭ್ಯರ್ಥಿಗಳು ್ಥಟಜಿ. ್ಜ್ಚಿ.ಜ್ಞಿ ವೆಬ್‌ಸೈಟ್‌ಗೆ ಭೇಟಿ ನೀಡಿ, ಉದ್ಯೋಗ ಮೇಳ–2026 ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅವಿನಾಶ್, ಜಿಲ್ಲಾ ವ್ಯವಸ್ಥಾಪಕರು, ಮೊ.ನಂ: 9844234080 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ವಿಕಲಚೇತನ ಫಲಾನುಭವಿಗಳಿಂದ ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ ಪ್ರಸಕ್ತ ಸಾಲಿನ ನಗರಸಭಾ ನಿಧಿಯ ಶೇ. 5 ರ ವಿಕಲಚೇತನ ಕಲ್ಯಾಣ ಕಾರ್ಯಕ್ರಮದಡಿ ಮನೆಯ ಮೇಲ್ಛಾವಣಿ ದುರಸ್ಥಿ ನಿವೇಶನ ಖರೀದಿ, ವಿಕಲಚೇತನ ಬೆನ್ನುಹುರಿ ಮುರಿತಕ್ಕೆ ಒಳಗಾದ ಶಾಶ್ವತ ಅಂಗವಿಕಲತೆ ಹೊಂದಿದ ಫಲಾನುಭವಿಗಳ ಪೋ?ಕರಿಗೆ ಪೋ?ಣಾ ಭತ್ಯೆ ಹಾಗೂ ಅಂಗವಿಕಲರಿಗೆ ಆರೋಗ್ಯ ವಿಮೆ ಸೌಲಭ್ಯ ಪಡೆಯಲು ಅರ್ಹ ವಿಕಲಚೇತನ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ನಿಗಧಿತ ಅರ್ಜಿಯೊಂದಿಗೆ ಪೂರಕ ದಾಖಲೆಗಳನ್ನು ಸಲ್ಲಿಸಲು ಏಪ್ರಿಲ್ 7 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಪೌರಾಯುಕ್ತರು, ನಗರಸಭೆ, ಉಡುಪಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯಕ್ತಿ ನಾಪತ್ತೆ

ಉಡುಪಿ: ಮುಂಬೈನಲ್ಲಿ ಸಂಬಂಧಿಕರೊಂದಿಗೆ ವಾಸವಿದ್ದ ಯತಿರಾಜ (53) ಅವರು ತಂದೆ–ತಾಯಿ ಮೃತಪಟ್ಟ ಬಳಿಕ ಬೆಂಗಳೂರಿನಲ್ಲಿ ವಾಸವಿರುವುದಾಗಿ ಕರೆ ಮಾಡಿ ಮನೆಯವರಿಗೆ ತಿಳಿಸಿದ್ದು, ಆಗಾಗ ಫೋನ್ ಕರೆ ಮಾಡುತ್ತಿದ್ದು ಇತ್ತೀಚೆಗೆ 4–5



ತಿಂಗಳಿನಿಂದ ದೂರವಾಣಿ ಸಂಪರ್ಕಕ್ಕೆ ಸಿಕ್ಕಿರುವುದಿಲ್ಲ, ಸಂಬಂಧಿಕರಲ್ಲಿ ಹಾಗೂ ಬೆಂಗಳೂರಿನಲ್ಲಿ ಗುರುತು ಪರಿಚಯದವರಲ್ಲಿ ವಿಚಾರಿಸಿದರೂ ಯಾವುದೇ ಮಾಹಿತಿ ದೊರೆತಿರುವುದಿಲ್ಲ, 5 ಅಡಿ 4 ಇಂಚು ಎತ್ತರ, ಸಾಧಾರಣ ಶರೀರ, ಗೋಧಿ ಮೈಬಣ್ಣ, ಕೋಲು ಮುಖ ಹೊಂದಿರುವ ಸದ್ರಿ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಹಿರಿಯಡಕ ಪೊಲೀಸ್ ಠಾಣೆ ಪಿ.ಎಸ್.ಐ ಮೊ.ನಂ: 9480805452, ಬ್ರಹ್ಮಾವರ ವೃತ್ತ ನಿರೀಕ್ಷಕರ ಕಚೇರಿ ದೂ.ಸಂಖ್ಯೆ: 9480805432 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಹಿರಿಯಡ್ಕ ಪೊಲೀಸ್ ಠಾಣಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಬಂಟ್ವಾಳದ ನೇತ್ರಾವತಿ ತಟದಲ್ಲಿ 28ನೇ ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಸಂಭ್ರಮದ ಚಾಲನೆ

ಅದ್ದೂರಿಯಾಗಿ ಸಾಗಿತು ಕನ್ನಡ ಸಾಂಸ್ಕೃತಿಕ ದಿಬ್ಬಣ ಮೆರವಣಿಗೆ

ಬಂಟ್ವಾಳ: ಜಿಲ್ಲೆಯ ಜೀವ ನದಿ ನೇತ್ರಾವತಿಯ ತೀರ ಬಂಟ್ವಾಳದಲ್ಲಿ ಮೂರುದಿನಗಳ ಕಾಲ ನಡೆಯುವ ದ.ಕ. ಜಿಲ್ಲಾ 28ನೇ ಕನ್ನಡ ಸಾಹಿತ್ಯೋತ್ಸವಕ್ಕೆ ಗುರುವಾರ ಸಂಜೆ 'ಕನ್ನಡ ಸಾಂಸ್ಕೃತಿಕ ದಿಬ್ಬಣ'ದ ಮೆರವಣಿಗೆ ಮೂಲಕ ಸಂಭ್ರಮದ ಚಾಲನೆ ನೀಡಲಾಯಿತು.
ಬಿ.ಸಿ.ರೋಡಿನ ಕೈಕಂಬದಲ್ಲಿರುವ ಪೊಳಲಿ ದ್ವಾರದಿಂದ ಹೊರಟ ಕನ್ನಡ ಭುವನೇಶ್ವರಿಯ ಮೆರವಣಿಗೆ ಬಿ.ಸಿ.ರೋಡಿನ ರಾಜಾರಸ್ತೆಯಲ್ಲಿ ಸಾಗಿ ಬಂದು ನಾರಾಯಣ ಗುರುವೃತ್ತದ ಬಳಿ ಹಾಕಲಾದ ಸ್ವಾತಂತ್ರ್ಯ ಯೋಧ ದಿ. ಡಾ.ಅಮ್ಮೆಂಬಳ ಬಾಳಪ್ಪ ಅವರ ಹೆಸರಿನ ಪ್ರಧಾನ ಪ್ರವೇಶ ದ್ವಾರವನ್ನು ಪ್ರವೇಶಿಸಿ, ಸ್ವರ್ಶಾಕಲಾಮಂದಿರದ ಪಂಜೆ ಮಂಗೇಶರಾಯ ಹೆಸರಿನ ಸಭಾಂಗಣದಲ್ಲಿ ಸಂಪನ್ನಗೊಂಡಿತು.
ಬಿ.ಸಿ.ರೋಡಿನ ಸಂಚಯಗಿರಿ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಪ್ರೊ.ತುಕರಾಮ್ ಪೂಜಾರಿ ಅವರು ಕೈಕಂಬ ಪೊಳಲಿ ದ್ವಾರದ ಬಳಿ ಕನ್ನಡದ ಧ್ವಜ ಹಸ್ತಾಂತರಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭ ದಲ್ಲಿ ಸಮ್ಮೇಳನಾಧ್ಯಕ್ಷ ಹಿರಿಯ ಪತ್ರಕರ್ತರು, ಸಾಹಿತಿ ಚಿದಂಬರ ಬೈಕಂಪಾಡಿ ಅವರಿಗೆ ಮಲ್ಲಿಗೆಯ ಹಾರಹಾಕಿ ಪೇಟ ತೊಡಿಸಿ ಸ್ವಾಗತಿಸಲಾಯಿತು. ನೆರೆದ ಗಣ್ಯರು ಕನ್ನಡ ಭುನೇಶ್ವರಿಗೆ ಪುಷ್ಪಾರ್ಚನೆಗೈದರು.
ಸಮ್ಮೇಳನಾಧ್ಯಕ್ಷ ಚಿದಂಬರ ಬೈಕಂಪಾಡಿ, ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಂ.ಪಿ. ಶ್ರೀನಾಥ್, ಬಂಟ್ವಾಳ ತಾಲೂಕು ಕಸಾಪ ಅಧ್ಯಕ್ಷ ವಿಶ್ವನಾಥ್ ಬಂಟ್ವಾಳ ಹಾಗೂ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷ ಪ್ರೊ. ತುಕರಾಮ್ ಪೂಜಾರಿ ಅವರನ್ನು ತೆರೆದ ವಾಹನದಲ್ಲಿ ಕುಳ್ಳಿರಿಸಿ ಸಮ್ಮೇಳನ ಸಭಾಂಗಣದತ್ತ ಮೆರವಣಿಗೆಯಲ್ಲಿ ಕರೆತರಲಾಯಿತು.
ಶಾಲಾ ಮಕ್ಕಳ ಸ್ಕೌಟ್ಸ್, ಗೈಡ್ಸ್, ಬುಲ್ ಬುಲ್ಸ್, ಗೊಂಬೆ ಕುಣಿತ, ಡೊಳ್ಳು ಕುಣಿತ, ಮಕ್ಕಳ ಕುಣಿತ ಭಜನೆ, ಕಂಬಳದ ಕೋಣ, ಚೆಂಡೆ, ವಾದ್ಯಗೋಷ್ಠಿಗಳು ಮೆರವಣಿಗೆ ವಿಶೇಷ ಮೆರಗು ನೀಡಿತು.
ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್, ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಅಬುಬಕ್ಕರ್ ಅಮ್ಮುಂಜೆ, ಕಾರ್ಯದರ್ಶಿಗಳಾದ ದೇವಪ್ಪ ಕುಲಾಲ್, ರಾಮದಾಸ್ ಬಂಟ್ವಾಳ, ಚಂದ್ರಹಾಸ ಶೆಟ್ಟಿ, ಕೋಶಾಧಿಕಾರಿ ಸುಭಾಶ್ಚಂದ್ರ ಜೈನ್ ವಿವಿಧ ಸಮಿತಿಯ ಪದಾಧಿಕಾರಿಗಳಾದ ಪ್ರಭಾಕರ ಪ್ರಭು, ಸರಪಾಡಿ ಅಶೋಕ್ ಶೆಟ್ಟಿ, ಕೃಷ್ಣಕುಮಾರ್ ಪೂಂಜ, ಎಚ್.ಕೆ. ನಯನಾಡು, ಸೇಷಪ್ಪಮಾಸ್ಟರ್ ತುಂಬೆ, ಅಬ್ಬಾಸ್ ಅಲಿ, ಸುಕುಮಾರ್ ಬಂಟ್ವಾಳ, ಮಚ್ಚೇಂದ್ರ ಸಾಲಿಯಾನ್, ಮೋಹನ್ ಶೆಟ್ಟಿ ಪಂಜಿಕಲ್ಲು, ರಮಾನಂದ ನೂಜಿಪ್ಪಾಡಿ, ಉಮ್ಮರ್ ಮಂಚಿ ಸೇರಿದಂತೆ ಹಲವಾರು ಗಣ್ಯರು, ಸಾಹಿತ್ಯಾಸಕ್ತರು, ಸಾಹಿತಿಗಳು ಉಪಸ್ಥಿತರಿದ್ದರು.
ಮೆರವಣಿಗೆ ಸಾಗುವ ದಾರಿಯುದ್ದ ಹಾಗೂ ನಾರಾಯಣಗುರುವೃತ್ತದ ಸುತ್ತ ಕನ್ನಡ ಧ್ವಜಗಳನ್ನು ಅಲ್ಲಲ್ಲಿ ಸಾಹಿತಿಗಳು, ಸಾಹಿತ್ಯಾಸಕ್ತಿರಿಗೆ ಸ್ವಾಗತಕೋರಿ ಪ್ಲೆಕ್ಸ್‌ಗಳು ಅಳವಡಿಸಲಾಗಿದೆ.

ಪಂಜೆ ಭವನ ನನೆಗುದಿಗೆ

ಸಾಹಿತ್ಯ, ಕಲೆ, ರಂಗಭೂಮಿ ಹೀಗೆ ಎಲ್ಲಾ ರಂಗಕ್ಕೂ ಬಂಟ್ವಾಳ ತನ್ನದೇ ಆದ ಛಾಪನ್ನು ಮೂಡಿಸಿದ್ದಲ್ಲದೆ ಈ ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆ ನೀಡಿದ ಮಹನೀಯರು ಇಲ್ಲಿ ಹುಟ್ಟಿ ಬೆಳೆದರೂ ಸುಸಜ್ಜಿತವಾದ ರಂಗಮಂದಿರವಾಗಲಿ, ಸಭಾಂಗಣವಾಗಲೀ ಇಲ್ಲದಿರುವುದು ದೊಡ್ಡ ಕೊರತೆ!. ಹಾಗಾಗಿ ಬಿ.ಸಿ.ರೋಡಿನಲ್ಲಿರುವ ಖಾಸಗಿ ಕಲಾ ಮಂದಿರದಲ್ಲಿ ಬಾಡಿಗೆ ತೆತ್ತು ಮಾ. 28ರವರೆಗೆ ದ.ಕ. ಜಿಲ್ಲಾ 28ನೇ ಕನ್ನಡ ಸಮ್ಮೇಳನ ನಡೆಸಲಾಗುತ್ತಿದೆ. ವಿಶೇಷ ವೆಂದರೆ ಈ ಕಲಾಮಂದಿರದ ಸಭಾಂಗಣಕ್ಕೆ ಬಂಟ್ವಾಳದಲ್ಲೇ ಜನಿಸಿರುವ ಸಾಹಿತಿ, ದಿ. ಪಂಜೆಮಂಗೇಶರಾಯರ ಹೆಸರನ್ನಿಡಲಾಗಿದೆ. ಇತ್ತ ಈ ಸಭಾಂಗಣದಿಂದ ಸರಿ ಸುಮಾರು ಆರ್ಧ ಕಿ.ಮೀ. ದೂರದಲ್ಲಿ ಅವರ ಮನೆ ಪಕ್ಕದಲ್ಲಿ ನಿರ್ಮಾಣ ಹಂತದ ಪಂಜೆ ಮಂಗೇಶರಾಯರ ಸಭಾಭವನದ ಕಾಮಗಾರಿ ನನೆಗುದಿಗೆ ಬಿದ್ದಿದ್ದು, ಸಮ್ಮೇಳನದ ನೆನಪಿಗಾದರೂ ಸರಕಾರದ ಮಟ್ಟದಲ್ಲಿ ಒತ್ತಡಹಾಕಿ ಇದನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ನಿರ್ಣಯ ಕೈಗೊಳ್ಳಬೇಕೆಂಬ ಕೂಗು ಸಾಹಿತಿಗಳ ವಲಯದಿಂದ ಕೇಳಿ ಬಂದಿದೆ.

ಕನ್ನಡಭವನದ ಕಡೆಗಣನೆ...

ಅದೇ ರೀತಿಸಮ್ಮೇಳನ ನಡೆಯುವ ಸಭಾಂಗಣದಿಂದ ಆರ್ಧಮುಕ್ಕಾಲು ಕಿ.ಮೀ. ದೂರದ ಬಿ.ಸಿ.ರೋಡಿನ ಕೈಕುಂಜ ರಸ್ತೆಯಲ್ಲಿ 'ಕನ್ನಡ ಭವನ' ಇದೆ. ಬಂಟ್ವಾಳದಲ್ಲಿ ನಡೆಯುವ ಜಿಲ್ಲಾ ಸಮ್ಮೇಳನದ ಪ್ರಯುಕ್ತ ಈ ಕನ್ನಡಭವನವನ್ನು ಶುಚಿಗೊಳಿಸಿ ಕನಿಷ್ಠ ಬಣ್ಣ ಬಳಿದು ಸುಂದರಗೊಳಿಸುವ ಪ್ರಜ್ಞೆ ತಾಲೂಕು ಕಸಾಪಕ್ಕೆ ಮೂಡದಿರುವುದು ವಿಪರ್ಯಾಸವಾಗಿದೆ.!
ಮೂರುದಿನಗಳ ಕಾಲ ನಡೆಯುವ ಜಿಲ್ಲಾ ಸಮ್ಮೇಳನದಲ್ಲಿ ಸಾಹಿತಿಗಳು, ಆಸಕ್ತರು ಒಂದಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದು, ಈ ಸಂದರ್ಭ ಕನ್ನಡ ಭವನಕ್ಕು ಭೇಟಿ ನೀಡುವ ಸಾಧ್ಯತೆಗಳಿರುತ್ತದೆ. ಆದರೆ ಕನ್ನಡ ಬ್ಬಬಳಿಯುವ ಮಾತು ಬದಿಗಿರಲಿ ಭವನಕ್ಕೆ ಅಂಟಿರುವ ಪಾಚಿಯನ್ನು ಸ್ವಚ್ಛ ಮಾಡಿಲ್ಲ, ಅಕ್ಕ– ಪಕ್ಕದಲ್ಲಿರುವ ಗ್ಯಾರೇಜ್‌ಗೆ ದುರಸ್ತಿಗೆಂದು ಬಂದಿರುವ ವಾಹನಗಳು ಭವನದ ವಠಾರದೊಳಗೆ ಅಕ್ರಮ ನಿಲುಗಡೆಯ ತಾಣವಾಗಿದೆ.
ಭವನದಿಂದ ಮೆರವಣಿಗೆ ಮಾಡಬಹುದಿತ್ತು....
ಬಿ.ಸಿರೋಡಿನಕೈಕಂಬದಬದಲಾಗಿಕೈಕುಂಜದಲ್ಲಿರುವ ಕನ್ನಡ ಭವನದ ವಠಾರದಿಂದಲೇ ಕನ್ನಡ ಸಾಂಸ್ಕೃತಿಕ ದಿಬ್ಬಣವನ್ನು ಆರಂಭಿಸಬಹುದಾಗಿತ್ತು. ಆಗ ಇದಕ್ಕೊಂದು ಮಹತ್ವವು ಬರುತಿತ್ತು ಎಂಬುದು ಹಿರಿಯ ಸಾಹಿತಿಗಳ ಅಭಿಪ್ರಾಯವಾಗಿದೆ.





ಬಂಟ್ವಾಳದಲ್ಲಿ 5ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ

ಪ್ರಸ್ತುತ ದ.ಕ.ಜಿಲ್ಲಾ 28ನೇ ಕನ್ನಡ ಸಾಹಿತ್ಯ ಸಮ್ಮೇಳನ ಬಂಟ್ವಾಳದಲ್ಲಿ ನಡೆಯುತ್ತಿದ್ದು,ಇದಕ್ಕು ಮೊದಲು ನಾಲ್ಕು ಜಿಲ್ಲಾ ಸಾಹಿತ್ಯ ಸಮ್ಮೇಳನ ಸಂಘಟಿಸಿದ ಕೀರ್ತಿ ಬಂಟ್ವಾಳಕ್ಕಿದೆ. 2000 ನೇ ಇಸವಿಯಲ್ಲಿ ಮೊಡಂಕಾಪಿನ ದೀಪಿಕಾ ಪ್ರೌಢಶಾಲಾ ವಠಾರದಲ್ಲಿ,2003 ರಲ್ಲಿ ಬಂಟ್ವಾಳ ಎಸ್‌ಡಿಎಂ ಸಭಾಂಗಣದಲ್ಲಿ,2011 ರಲ್ಲಿ ತಾಲೂಕಿನ ಅಳಿಕೆಯಲ್ಲಿ ಹಾಗೂ 2014 ರಲ್ಲಿ ಪೊಳಲಿಯಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆದಿದೆ.ಇದೀಗ ಐದನೇ ಬಾರಿಗೆ ಬಿ.ಸಿ.ರೋಡಿಗೆ ಸಮೀಪದ ಖಾಸಗಿ ಸಭಾಂಗಣದಲ್ಲಿ ಆಯೋಜಿಸಲಾಗುತ್ತಿದೆ. ಡಾ.ವಿರ್ಯ ಲಕ್ಷೀನಾರಾಯಣ ಆಳ್ವ ಪುಸ್ತಕ ಪ್ರದರ್ಶನಗಳ ಮಳಿಗೆ-ನಿರಂಜನ ವಸ್ತು ಪ್ರದರ್ಶನ ಮಳಿಗೆಗಳು ಸಿದ್ಧಗೊಂಡಿದೆ. ಮೂವತ್ತಕ್ಕೂ ಅಧಿಕ ಪುಸ್ತಕ ಮಳಿಗೆಗಳು– ವಸ್ತು ಪ್ರದರ್ಶನಗಳ ಮಳಿಗೆಗಳು– ಕರಕುಶಲ– ಗುಡಿ ಕೈಗಾರಿಕೆ– ಕೈಮಗ್ಗ– ಆಹಾರ ಸಹಿತ ವಿವಿಧ ಮಳಿಗೆಗಳು, ಪಟ್ಟಾಂಗ ಕಟ್ಟೆ, ಉತ್ತರ ಹೇಳಿ ಪುಸ್ತಕ ಗೆಲ್ಲಿ, ಗ್ರಾಮೀಣ ಪ್ರತಿಭೆಗಳ ನೃತ್ಯಇತ್ಯಾದಿಗಳೆಲ್ಲ ಸಮ್ಮೇಳನದಲ್ಲಿದೆ.

ಇಂದಿನ ಕಾರ್ಯಕ್ರಮ

ಶುಕ್ರವಾರ ಬೆಳಿಗ್ಗೆ 9–45ಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು 28ನೇ ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನ ಉದ್ಘಾಟಿಸುವರು. ಹಿರಿಯ ಸಾಹಿತಿ–ಪತ್ರಕರ್ತ ಚಿದಂಬರ ಬೈಕಂಪಾಡಿ ಸರ್ವಾಧ್ಯಕ್ಷತೆ ವಹಿಸಲಿದ್ದಾರೆ, ಕರ್ನಾಟಕ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸಾಂಸ್ಕೃತಿಕ ಕಾರ್ಯಕ್ರಮ, ಸಂಸದ ಕ್ಯಾ. ಬ್ರಿಜೇಶ್ ಚೌಟ ವಸ್ತುಪ್ರದರ್ಶನ, ಶಾಸಕ ರಾಜೇಶ್ ನ್ಯಾಕ್ ಪುಸ್ತಕ ಮತ್ತು ಇತರೆ ಮಳಿಗೆಗಳ ಉದ್ಘಾಟನೆ ನೆರವೇರಿಸಲಿದ್ದಾರೆ. ಹಲವಾರು ಗಣ್ಯರು ಈ ಸಂದರ್ಭ ಉಪಸ್ಥಿತರಿರುವರು.

ಪುತ್ತೂರು ಅಕ್ಷಯ ಪದವಿ ಕಾಲೇಜಿನಲ್ಲಿ ಅಂಕುರ ಭಿತ್ತಿಪತ್ರ ಅನಾವರಣ

ಪುತ್ತೂರು: ಅಕ್ಷಯ ಪದವಿ ಕಾಲೇಜಿನಲ್ಲಿ ಅದ್ವಯ ಕನ್ನಡ ಸಾಹಿತ್ಯ ಸಂಘದಿಂದ ಅಂಕುರ ಭಿತ್ತಿಪತ್ರ ಅನಾವರಣ ಕಾರ್ಯಕ್ರಮವು ನಡೆಯಿತು.
ಪುತ್ತೂರಿನ ಕರ್ನಾಟಕ ಸಂಘದ ಅಧ್ಯಕ್ಷ ಪುರಂಧರ ಭಟ್ ಬಿ. ಅವರು ಅಂಕುರ ಭಿತ್ತಿಪತ್ರಿಕೆಯನ್ನು ಅನಾವರಣಗೊಳಿಸಿ ದೀಪ ಪ್ರಜ್ವಲನೆಗೈದರು. ತಮ್ಮ ಬಾಲ್ಯದ ದಿನಗಳಲ್ಲಿನ ನೆನಪುಗಳನ್ನು ಮೆಲುಕು ಹಾಕಿದ ಅವರು ಮುಂದಿನ ದಿನಗಳಲ್ಲಿ ಅಂಕುರ ಹೆಮ್ಮರವಾಗುವಂತೆ ನಿಮ್ಮ ಭವಿಷ್ಯವು ಉಜ್ವಲವಾಗಲಿ ಎಂದು ಶುಭ ಹಾರೈಸಿದರು.



ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಉಮೇಶ್ ನಾಯಕ್ ಅತಿಥಿಗಳಾಗಿದ್ದರು. ಅಧ್ಯಕ್ಷತೆ ವಹಿಸಿದ್ದ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಜಯಂತ್ ನಡುಬೈಲು, ಸಾಹಿತ್ಯದ ಚಟುವಟಿಕೆಗಳನ್ನು ನಿರಂತರವಾಗಿ ಮುಂದುವರೆಸಿ ಮತ್ತು ಇದನ್ನು ಹವ್ಯಾಸವಾಗಿ ಬೆಳೆಸಿಕೊಳ್ಳಿ, ಮುಂದೆ ಅದೇ ಹವ್ಯಾಸ ನಿಮ್ಮಲ್ಲಿ ಕೌಶಲ ಬೆಳೆಸುವಂತೆ ಮಾಡುತ್ತದೆ ಎಂದರು.
ಅದ್ವಯ ಕನ್ನಡ ಸಾಹಿತ್ಯ ಸಂಘದ ಸಂಯೋಜಕ ಹರೀಶ್ಚಂದ್ರ, ಕಾಲೇಜಿನ ಉಪ ಪ್ರಾಂಶುಪಾಲ ರಕ್ಷಣ್, ಅದ್ವಯ ಕನ್ನಡ ಸಾಹಿತ್ಯ ಸಂಘದ ಅಧ್ಯಕ್ಷ ಸಂತೋಷ್, ಕಾರ್ಯದರ್ಶಿ ಸುದೀಪ್ ಇದ್ದರು. ದೀಪಶ್ರೀ ಪ್ರಾರ್ಥಿಸಿದರು. ಉಪನ್ಯಾಸಕ ಹರಿಶ್ಚಂದ್ರ ಪ್ರಸ್ತಾವನೆಗೈದರು. ಉಪನ್ಯಾಸಕಿ ರಶ್ಮಿತಾ ಎಸ್. ಬಹುಮಾನಿತರ ಪಟ್ಟಿ ವಾಚಿಸಿದರು. ಕೋಮಲಾಕ್ಷಿ, ಕನಕ ಅತಿಥಿಗಳ ಪರಿಚಯಿಸಿದರು. ಲಾವಣ್ಯ ವಂದಿಸಿದರು. ಧನ್ಯಶ್ರೀ ನಿರ್ವಹಿಸಿದರು.

ಪುಸ್ತಕ ಬಹುಮಾನ

ಕಾಲೇಜಿನ ಆರು ವಿಭಾಗಕ್ಕೆ ಒಂದರಂತೆ ವಿದ್ಯಾರ್ಥಿಗಳಿಗೆ ಪುಸ್ತಕ ಬಹುಮಾನವನ್ನು ನೀಡಲಾಯಿತು. ಬಹುಮಾನಪಡೆದುಕೊಂಡ ವಿದ್ಯಾರ್ಥಿಗಳು ಎಲ್ಲರಿಗೂ ವಾಚನ ಮಾಡಲು ಅವಕಾಶ ಸಿಗಬೇಕೆಂದು ಪುಸ್ತಕಗಳನ್ನು ಗ್ರಂಥಾಲಯಕ್ಕೆ ಹಸ್ತಾಂತರಿಸಿದರು.

ಜ್ಞಾನದಾ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಬೈಂದೂರು: ಜ್ಞಾನದಾ ಶಿಕ್ಷಣ ಸಂಸ್ಥೆಯ ಅಧೀನದ ಜ್ಞಾನದಾ ಎಚ್‌ಪಿಎಸ್ ಶಾಲೆ ನರ್ಸರಿ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮ ನಡೆಯಿತು. ಕಾರ್ಯದರ್ಶಿ ಧೀರಜ್ ಆರ್. ಶಿರೂರ್ಕರ್ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಸಂಸ್ಥೆಯ ಖಜಾಂಚಿ ಚಂಪಾ ಆರ್. ಶಿರೂರ್ಕರ್ ಮಾತನಾಡಿದರು. ಎಲ್‌ಕೆಜಿ ಮತ್ತು ಯುಕೆಜಿ ಎಲ್ಲಾ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ನೀಡಲಾಯಿತು. ಪ್ರಾಂಶುಪಾಲ ಡಾ. ರವಿದಾಸ್ ಶೆಟ್ಟಿ ಪ್ರಾಸ್ತಾವಿಸಿದರು. ಐಶ್ವರ್ಯ ಸ್ವಾಗತಿಸಿ, ಧನ್ವಿ ವಂದಿಸಿದರು. ಅಂಜಲಿ ನಿರೂಪಿಸಿದರು.

ಹೆಮ್ಮಾಡಿ ಗ್ರಾ.ಪಂ.ನ ಗ್ರಾಮಸಭೆಯಲ್ಲಿ ಗ್ರಾಮಸ್ಥರಿಗೆ ಪಿಡಿಒ ಭಾವನಾ ಭರವಸೆ

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ

ಕುಂದಾಪುರ: ಹೆಮ್ಮಾಡಿ ಗ್ರಾಮ ಪಂಚಾಯತ್‌ನ ದ್ವಿತೀಯ ಸುತ್ತಿನ ಗ್ರಾಮಸಭೆ ಮತ್ತು ಮಹಿಳೆಯರ ವಿಶೇಷ ಗ್ರಾಮಸಭೆಯಲ್ಲಿ ಕೇಳಿ ಬಂದಿತು.
ಬಹುತೇಕ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಹೆಮ್ಮಾಡಿ ಗ್ರಾಮದ ಹಲವು ಮನೆಗಳಿಗೆ ಕುಡಿಯುವ ನೀರಿನ ಪೂರೈಕೆ ಆಗುತ್ತಿಲ್ಲ, ಬೇಸಿಗೆಯಲ್ಲಿ ಜನರಿಗೆ ಸಮಸ್ಯೆ ಆಗದಂತೆ ಕುಡಿಯುವ ಶುದ್ಧ ನೀರನ್ನು ಸರಬರಾಜು ಮಾಡಬೇಕು ಎಂದು ಸ್ಥಳೀಯರು ಆಗ್ರಹಿಸಿದರು.
ಹೆಮ್ಮಾಡಿ ಗ್ರಾಪಂ. ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ಬಾವಿಗಳಲ್ಲಿ ನೀರಿನ ಮಟ್ಟ ಕಡಿಮೆಯಾಗುತ್ತಿದ್ದು, ಬೇಸಿಗೆಯಲ್ಲಿ ಕುಡಿಯುವ ಶುದ್ಧ ನೀರು ನೀಡಲು ಕ್ರಮಕೈಗೊಳ್ಳುವುದಾಗಿ ಪಿಡಿಒ ಭಾವನಾ ಭರವಸೆ ನೀಡಿದರು.
ಹೆಮ್ಮಾಡಿ ದೇವಸ್ಥಾನದ ಸಮೀಪದಲ್ಲಿರುವ ಅಪಾಯಕಾರಿ ದೇವದಾರಿ ಮರವನ್ನು ತೆರವುಗೊಳಿಸಬೇಕೆಂದು ಅನೇಕ ಬಾರಿ ಆಗ್ರಹಿಸಿದರೂ ಯಾವುದೇ ಪ್ರಯೋಜನವಾಗಿಲ್ಲ, ವಿದ್ಯುತ್ ತಂತಿ ಬದಲಿಸುವ ಸಂದರ್ಭ ಮೆಸ್ಕಾಂ ಮರವನ್ನು ತೆರವುಗೊಳಿಸುವ ಕಾರ್ಯ ಮಾಡಬೇಕಿತ್ತು. ಇನ್ನಾದರೂ ಸ್ಥಳೀಯಾಡಳಿತ ಈ ಬಗ್ಗೆ ಹೆಚ್ಚಿನ ಗಮನ ಹರಿಸಿ ಅಪಾಯಕಾರಿ ಮರ ತೆರವುಗೊಳಿಸಲು ಕ್ರಮಕೈಗೊಳ್ಳಬೇಕೆಂದು ಸ್ಥಳೀಯರಾದ ಕರುಣಾಕರ ಪೈ ಆಗ್ರಹಿಸಿದರು.



ಸ್ಥಳೀಯ ಸರಕಾರಿ ಶಾಲೆಯೊಂದರಲ್ಲಿ ಒಂದು ಕಟ್ಟಡದಿಂದ ಇನ್ನೊಂದು ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡುವ ವಿದ್ಯುತ್ ತಂತಿ ನೇತಾಡುತ್ತಿದ್ದು, ಇದರಿಂದ ಸಮೀಪದಲ್ಲಿರುವ ತೋಟದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ, ಕೈಗೆಟಕುವ ಸ್ಥಿತಿಯಲ್ಲಿರುವ ವಿದ್ಯುತ್ ತಂತಿಯನ್ನು ತೆರವುಗೊಳಿಸಿ ಭೂಗತ ಕೇಬಲ್ ಅಳವಡಿಸಬೇಕೆಂದು ಕರುಣಾಕರ ಪೈ ಮನವಿ ಮಾಡಿದರು.
ಗ್ರಾಮದಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗ್ರಾಪಂ.ಗೆ ಲಿಖಿತವಾಗಿ ಮನವಿ ಮಾಡಬೇಕು ಎಂದು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ, ಗ್ರಾಪಂ. ಆಡಳಿತಾಧಿಕಾರಿ ಸತ್ಯನಾರಾಯಣ ಹೇಳಿದರು.
ಹೆಮ್ಮಾಡಿ ಗ್ರಾಮ ಆಡಳಿತ ಅಧಿಕಾರಿ ಹರೀಶ್, ಮೆಸ್ಕಾಂ ಜೆಇ ಸುರೇಶ ಬಾಬು, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಪರಶುರಾಮ, ಅಂಗನವಾಡಿ ಕಾರ್ಯಕರ್ತೆ ವಿಜಯಲಕ್ಷ್ಮೀ ಪೈ, ಆರೋಗ್ಯ ಇಲಾಖೆಯ ಸಿಎಚ್‌ಒ ಸದಾನಂದ, ಅರಣ್ಯ ಇಲಾಖೆಯ ಎಚ್ .ತಿಮ್ಮಪ್ಪ ಇಲಾಖೆ ಮಾಹಿತಿ ನೀಡಿದರು.
ಮಹಿಳೆಯರ ವಿಶೇಷ ಗ್ರಾಮಸಭೆಯಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ವಿಚಾರ ಗಳಾಗಲಿ, ಸಮಸ್ಯೆಗಳಾಗಲಿ ಯಾವುದೂ ಪ್ರಸ್ತಾಪವಾಗದಿರುವುದು ವಿಶೇಷವಾಗಿತ್ತು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಸಂಬಂಧಪಟ್ಟ ಇಲಾಖೆಗಳಿಂದ ಸಭೆಯಲ್ಲಿ ಯಾವುದೇ ಮಾಹಿತಿ ನೀಡಲಿಲ್ಲ.
ಪಿಡಿಒ ಭಾವನಾ ನಿರ್ವಹಿಸಿದರು. ಗ್ರಾಪಂ ಸಿಬ್ಬಂದಿ ಪ್ರಭಾಕರ ವರದಿ ವಾಚಿಸಿದರು. ಕಾರ್ಯದರ್ಶಿ ಗಿರಿಜಾ ಜಮಾ ಖರ್ಚಿನ ವಿವರ ಮಂಡಿಸಿದರು.

ಮಾಲ್ ಪೈಪೋಟಿ ನಡುವೆ ಸಣ್ಣ ವ್ಯಾಪಾರಿಗಳತ್ತ ಗ್ರಾಹಕರನ್ನು ಸೆಳೆಯುವ ಯೋಜನೆ

ಮಾ.29: 'ಪುತ್ತೂರು ಶಾಪಿಂಗ್ ಹಬ್ಬ'ದ ಮೆಗಾ ಡ್ರಾ

ಪುತ್ತೂರು: ಮಾಲ್ ವ್ಯಾಪಾರದ ಪೈಪೋಟಿಯ ನಡುವೆ ಸಣ್ಣ ವ್ಯಾಪಾರಿಗಳ ಕಡೆಯೂ ಗ್ರಾಹಕರನ್ನು ಸೆಳೆಯುವ ಯೋಜನೆಯಾಗಿ ಪ್ರಥಮ ಬಾರಿಗೆ ಪುತ್ತೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘ ಪ್ರಸ್ತುತ ಪಡಿಸಿದ 'ಪುತ್ತೂರು ಶಾಪಿಂಗ್ ಹಬ್ಬ'ದ ಮೆಗಾ ಡ್ರಾ ಮಾ.29ರಂದು ಪುತ್ತೂರು ಕೋ ಓಪರೇಟಿವ್ ಟೌನ್ ಬ್ಯಾಂಕ್ ಸಭಾಂಗಣದಲ್ಲಿ ಸಂಜೆ ಗಂಟೆ 5.30ಕ್ಕೆ ನಡೆಯಲಿದೆ.
ಗುರುವಾರ ಸುದ್ದಿಗೋಷ್ಠಿಯಲ್ಲಿ ಪುತ್ತೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ರವಿಕೃಷ್ಣ ಕಲ್ಲಾಜೆ ಮಾತನಾಡಿ, ಕಳೆದ ಎರಡು ತಿಂಗಳಿನಿಂದ ಪುತ್ತೂರು ಶಾಪಿಂಗ್ ಹಬ್ಬದ ಆಚರಣೆಯು ಹೆಚ್ಚಿನ ವಾಣಿಜ್ಯ ಮಳಿಗೆಯಲ್ಲಿ ಖರೀದಿ ಮಾಡಿದ ಗ್ರಾಹಕರಿಗೆ ಗಿಫ್ಟ್ ಕೂಪನ್ ಕೊಡುವ ಮೂಲಕ ವ್ಯಾಪಾರ ವ್ಯವಹಾರವನ್ನು ಉತ್ತೇಜಿಸುವ ಸಲುವಾಗಿ ಕಳೆದ 8 ವಾರ ಪ್ರತಿ ವಾರ ಸಂಘದ ಕಚೇರಿಯಲ್ಲಿ ಕೂಪನ್ ಡ್ರಾ ಮಾಡಿ ಅದರಲ್ಲಿ ಬಹುಮಾನವಾಗಿ 5ಜಿ ಮೊಬೈಲ್ ಫೋನ್ ಹಾಗೂ 80 ಸಮಾಧಾನಕರ ಬಹುಮಾನಗಳನ್ನು ಗ್ರಾಹಕರಿಗೆ ವರ್ತಕರ ಮೂಲಕ ವಿತರಿಸಲಾಗಿದೆ. ಇದೀಗ ಮೆಗಾ ಡ್ರಾವನ್ನು ವರ್ತಕ ಸಂಘದ ಕುಟುಂಬ ಸಮ್ಮಿಲನ ಕಾರ್ಯಕ್ರಮದ ಜೊತೆಗೆ ಆಯೋಜಿಸಲಾಗಿದೆ ಎಂದರು.



ಮೆಗಾ ಬಂಪರ್ ಬಹುಮಾನಗಳು

ಮೆಗಾ ಬಂಪರ್ ಬಹುಮಾನವಾಗಿ ಮಾರುತಿ ಆಲ್ಟೋ ಕಾರು, ಅದರ ಜೊತೆಗೆ ಬೈಕ್, ಫ್ರಿಡ್ಜ್ ಆನ್‌ಡ್ರಾಯ್ಡ್ ಟಿ.ವಿ.ಯನ್ನು ಅದೃಷ್ಟವಂತ ಗ್ರಾಹಕರು ಪಡೆಯಲಿದ್ದಾರೆ ಎಂದು ಪುತ್ತೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ರವಿಕೃಷ್ಣ ಕಲ್ಲಾಜೆ ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಂಗಳೂರು ಕೆನರಾ ಚೇಂಬರ್ ಆಫ್ ಕಾಮರ್ಸ್ ಹಾಗೂ ಇಂಡಸ್ಟ್ರೀಸ್ ಅಧ್ಯಕ್ಷ ಪಿ.ಬಿ. ಅಹಮ್ಮದ್ ಮುದಸ್ಸರ್, ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್‌ನ ಮಾಲಕ ಬಲರಾಮ ಆಚಾರ್ಯ, ಸೋಜಾ ಅಲ್ಯೂಮಿನಿಯಂ ಮಾಲಕ ಗಿಲ್ಬರ್ಟ್ ಡಿ'ಸೋಜ ಆಗಮಿಸಲಿದ್ದಾರೆ ಎಂದು ರವಿಕೃಷ್ಣ ಕಲ್ಲಾಜೆ ಹೇಳಿದರು.
ಪುತ್ತೂರಿನ ಸುತ್ತಮುತ್ತ ವ್ಯಾಪಾರ ವ್ಯವಹಾರದ ಅನುಗುಣವಾಗಿ ಸುಮಾರು 120 ಮಳಿಗೆಗಳಲ್ಲಿ ವರ್ತಕರು ಲಾಭದ ಒಂದಾಂಶದಲ್ಲಿ ಗ್ರಾಹಕರಿಗೆ ಉಚಿತವಾಗಿ ಕೂಪನ್ ವಿತರಿಸಿದ್ದಾರೆ. ಸುಮಾರು 70 ಸಾವಿರ ಮಂದಿ ಗ್ರಾಹಕರಿಗೆ ಕೂಪನ್ ತಲುಪಿದೆ. ಸ್ಪಂದಿಸಿದ ವರ್ತಕರಿಗೆ, ಗ್ರಾಹಕರಿಗೆ ಕೃತಜ್ಞತೆಗಳೊಂದಿಗೆ ಮುಂದೆಯೂ ಗ್ರಾಹಕರಿಗೆ ವಿಶೇಷ ಕಾರ್ಯ ಕ್ರಮ ಆಯೋಜಿಸಲಾಗುವುದು ಎಂದರು.
ಪುತ್ತೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಪ್ರಧಾನ ಕಾರ್ಯದರ್ಶಿ ಉಲ್ಲಾಸ್ ಪೈ, ಉಪಾಧ್ಯಕ್ಷ ಮನೋಜ್ ಟಿ.ವಿ., ಎಂ.ಜಿ. ಅಬ್ದುಲ್ ರಫೀಕ್, ಕೋಶಾಧಿಕಾರಿ ಜಾನ್ ಕುಟಿನ್ಹಾ ಪುತ್ತೂರು ಹಬ್ಬದ ಸಂಚಾಲಕ ಶಶಿರಾಜ್ ರೈ ಇದ್ದರು.

ಮೊಬೈಲ್‌ನ ಅತಿಯಾದ ಬಳಕೆಯ ವಿರುದ್ಧ ಮಕ್ಕಳಲ್ಲಿ ಅಗತ್ಯ ಜಾಗೃತಿ, ಅರಿವು ಮೂಡಿಸುವ ಉದ್ದೇಶ: ಸಚಿವ ಮಧು ಬಂಗಾರಪ್ಪ

'ಮೊಬೈಲ್ ಬಿಡಿ–ಪುಸ್ತಕ ಹಿಡಿ' ಅಭಿಯಾನ ರಾಜ್ಯದಲ್ಲಿ ಹಮ್ಮಿಕೊಳ್ಳಲು ಸೂಚನೆ

ಬೆಳ್ತಂಗಡಿ: ವಿದ್ಯಾರ್ಥಿಗಳ ಕಲಿಕಾ ಸಮಗ್ರ ವ್ಯಕ್ತಿತ್ವ ವಿಕಾಸವನ್ನು ಸಾಧಿಸುವ ಉದ್ದೇಶದಿಂದ 'ಮೊಬೈಲ್ ಬಿಡಿ–ಪುಸ್ತಕ ಹಿಡಿ' ಅಭಿಯಾನವನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲು ಆದೇಶಿಸಲಾಗಿದೆ.
1 ನೇತರಗತಿಯಿಂದ 12ನೇ ತರಗತಿಯವರೆಗೆ



ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ಶಾಲಾವಧಿಯಲ್ಲಿ ಮೊಬೈಲ್ ಅನ್ನು ಶಾಲಾ ಕಾಲೇಜುಗಳ ಆವರಣದಲ್ಲಿ ಉಪಯೋಗಿ ಸುವುದನ್ನು ನಿಷೇಧಿಸಲು ಸರಕಾರ ಆದೇಶ ಮಾಡಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದ್ದಾರೆ.
ಮೊಬೈಲ್‌ನ ಅತಿಯಾದ ಬಳಕೆಯ ವಿರುದ್ಧ ಮಕ್ಕಳಲ್ಲಿ ಅಗತ್ಯ ಜಾಗೃತಿ ಮತ್ತು ಅರಿವು ಮೂಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಮತ್ತು ಮೊಬೈಲ್ ಬಳಕೆ ಮಕ್ಕಳನ್ನು ಅತ್ಯಂತ ಆಘಾತಕಾರಿ ಅಪಾಯಗಳಿಗೆ ಒಡ್ಡುತ್ತಿದ್ದು ಅವರನ್ನು ಮಾನಸಿಕ ಶೋಭೆಗೆ ಕೂಡ ದೂಡುತ್ತಿದ್ದು ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಸೂಕ್ತ ಕ್ರಮ ವಹಿಸುವುದೇ ಎಂದು ವಿಧಾನಪರಿಷತ್ ನಲ್ಲಿ ಸದಸ್ಯ ಪ್ರತಾಪಸಿಂಹ ನಾಯಕ್ ಉಜಿರೆ ಅವರು ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿ ಅವರು ಮಾಹಿತಿ ನೀಡಿದರು.
ಶಾಲಾ, ಕಾಲೇಜುಗಳ ಆವರಣದಲ್ಲಿ ಮೊಬೈಲ್ ಬಳಕೆಯನ್ನುನಿಷೇಧಿಸುವಂತೆರಾಜ್ಯದಎಲ್ಲಾಶಾಲೆಗಳ ಮುಖ್ಯ ಶಿಕ್ಷಕರನ್ನೊಳಗೊಂಡಂತೆ ಶಿಕ್ಷಣ ಇಲಾಖೆ ಎಲ್ಲ ಪ್ರಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಅತಿಯಾದ ಹಾಗೂ ಅನಿಯಂತ್ರಿತ ಮೊಬೈಲ್ ಫೋನ್‌ಗಳು ಸಾಧನಗಳ ಬಳಕೆಯಿಂದಾಗಿ ಓದುವಿಕೆಯಲ್ಲಿ ಗಣನೀಯ ಕುಸಿತ ಉಂಟಾಗುತ್ತಿರುವುದು ಕಂಡು ಬರುತ್ತಿರುವುದು ಸಹಿತ ಓದಿನಲ್ಲಿ ಆಸಕ್ತಿ ಕುಂಠಿತವಾಗುತ್ತಿರುವುದು, ಏಕಾಗ್ರತೆ ಹಿನ್ನಡೆಯಾಗುತ್ತಿರುವುದು ಮತ್ತು ಮಾನಸಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳು ಉಂಟಾಗುತ್ತಿರುವುದು ಕೂಡ ಕಂಡು ಬಂದಿದೆ.
ವಿದ್ಯಾರ್ಥಿಗಳಲ್ಲಿ ಮೊಬೈಲ್ ಬಳಕೆಯಿಂದ ಉಂಟಾಗುವ ಮಾನಸಿಕ ಕೋಭ ಮತ್ತು ಖಿನ್ನತೆ ಮುಂತಾದ ಸಮಸ್ಯೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಶಾಲೆಗಳಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳಾದ ಪಾತ್ರಾಭಿನಯ, ಜಾನಪದ ನೃತ್ಯ ಪೋಸ್ಟರ್ ಬರವಣಿಗೆ ಸ್ಪರ್ಧೆ, ಚರ್ಚಾ ಕೂಟ ಪ್ರಬಂಧ ಬರಹ, ಚಿತ್ರಕಲೆ ಹಾಗೂ ತಜ್ಞರಿಂದ ಉಪನ್ಯಾಸ ಮುಂತಾದ ಚಟುವಟಿಕೆಗಳ ಮೂಲಕ ಸಮೂಹ ಮಾಧ್ಯಮಗಳು ಮತ್ತು ಅಂತರ್ಜಾಲದ ಸುರಕ್ಷಿತ ಬಳಕೆಯ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳ ಶಿಕ್ಷಕರಿಗೆ ತರಬೇತಿ

ವಿದ್ಯಾರ್ಥಿಗಳಲ್ಲಿ ಮೊಬೈಲ್ ಹಾಗೂ ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆ ವಿರುದ್ಧ ಅಗತ್ಯ ಜಾಗೃತಿ ಮೂಡಿಸಲು ಸರ್ಕಾರಿ, ಅನುದಾನಿತ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. ತರಬೇತಿ 11 ಮಾಡ್ಯೂಲ್‌ಗಳಲ್ಲಿ ಸಮೂಹ ಮಾಧ್ಯಮಗಳು, ಅಂತರ್ಜಾಲದ ಸುರಕ್ಷಿತ ಬಳಕೆ' ಕುರಿತ ವಿಷಯವೂ ಒಳಗೊಂಡಿದೆ. ಇದಲ್ಲದ ಅಂತರ್ಜಾಲ, ಸಾಮಾಜಿಕ ಮಾಧ್ಯಮಗಳು. ಮೊಬೈಲ್‌ಗಳ ಸುರಕ್ಷಿತ ಬಳಕೆಯ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಪೋಸ್ಟರ್ ಸಿದ್ಧಪಡಿಸಿ ಶಾಲೆಗಳಿಗೆ ವಿತರಿಸಲಾಗುತ್ತಿದೆ ಎಂದು ಮಧು ಬಂಗಾರಪ್ಪ ತಿಳಿಸಿದ್ದಾರೆ.



ಸುತ್ತ ಮುತ್ತ

ಇಂದು ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವ

ಮುಲ್ಕಿ: ವಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಇಂದು (ಮಾ.27) ವಾರ್ಷಿಕ ರಥೋತ್ಸವವು ಶ್ರೀ ಸಂಸ್ಥಾನ ಶ್ರೀ ಕಾಶಿಮಠಾಧೀಶ ಶ್ರೀಮತ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಶುಭಾಶೀರ್ವಾದಗಳೊಂದಿಗೆ ನಡೆಯಲಿದೆ. ಅಂದು ಬೆಳಗ್ಗೆ 9ಕ್ಕೆ ಶ್ರೀ ವೆಂಕಟರಮಣ ದೇವರಿಗೆ ಪಂಚಾಮೃತ ಅಭಿಷೇಕ, ಮಧ್ಯಾಹ್ನ 12ಕ್ಕೆ ಮಹಾ ನೈವೇದ್ಯ ಮಂಗಳಾರತಿ, 12.30ಕ್ಕೆ ಶ್ರೀ ದೇವರು ಯಜ್ಞಕ್ಕೆ ಹೊರಡುವುದು, ಸಂಜೆ 3.45ಕ್ಕೆ ಯಜ್ಞ ಪೂರ್ಣಾಹುತಿ, ಸಂಜೆ 6.30ಕ್ಕೆ ಬ್ರಹ್ಮ ರಥಾರೋಹಣ, ಭೂರಿ ಸಮಾರಾಧನೆ, ರಾತ್ರಿ ಬ್ರಹ್ಮರಥದಲ್ಲಿ ಶ್ರೀ ದೇವರಿಗೆ ದೀಪ ನಮಸ್ಕಾರ, ಶ್ರೀ ನರಸಿಂಹ ಸ್ತುತಿ, ರಾತ್ರಿ ಪೂಜೆ, ಬ್ರಹ್ಮರಥೋತ್ಸವ, ವಿಶ್ರಾಂತಿ ಪೂಜೆ, ದೇವದರ್ಶನ ಸೇವೆ, ಚಂದ್ರ ಮಂಡಲ ಉತ್ಸವ, ವಸಂತ ಪೂಜೆ, ಏಕಾಂತ ಶಯನಪೂಜೆ ನಡೆಯಲಿದೆ. ಮಾ.28ಕ್ಕೆ ಬೆಳಗ್ಗೆ 10ಕ್ಕೆ ಕವಾಟೋದ್ಘಾಟನೆ, ಸಂಜೆ 3.30ಕ್ಕೆ ಅವಭೃತ ಓಕುಳಿ ಉತ್ಸವ ನಡೆಯಲಿದೆ.

ಪಾವಂಜೆ ಶ್ರೀಕ್ಷೇತ್ರದಲ್ಲಿ ಇಂದು ಶ್ರೀರಾಮ ತಾರಕ ಮಂತ್ರ ಹೋಮ

ಮುಲ್ಕಿ: ಹಳೆಯಂಗಡಿ ಸಮೀಪದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ನಾಗವ್ರಜ ಕ್ಷೇತ್ರದ ಆಂಜನೇಯ ಸ್ವಾಮಿಯ ಸನ್ನಿಧಿಯಲ್ಲಿ ಶ್ರೀ ರಾಮ ನವಮಿಯ ಪ್ರಯುಕ್ತ ಮಾ.27ಕ್ಕೆ ಸೂರ್ಯೋದಯದಿಂದ ಸೂರ್ಯಾಸ್ತದ ತನಕ ಶ್ರೀ ರಾಮ ತಾರಕ ಮಂತ್ರ ಹೋಮ ಹಾಗೂ ಬೆಳಿಗ್ಗೆ 10ಕ್ಕೆ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ಮಕ್ಕಳ ಯಕ್ಷ ಬಳಗ ವತಿಯಿಂದ ಹನುಮ ವೇಷಧಾರಿಗಳಾಗಿ 'ಶ್ರೀ ರಾಮ ಸ್ತುತಿ' ಯೊಂದಿಗೆ ನೃತ್ಯ ಸೇವೆಗೈಯಲ್ಲಿದ್ದಾರೆ. ಭಕ್ತರೆಲ್ಲರಿಗೂ ಶ್ರೀರಾಮ ತಾರಕ ಮಂತ್ರ ಹೋಮದಲ್ಲಿ ಭಾಗವಹಿಸಲು ಮುಕ್ತಾವಕಾಶವಿದೆ ಎಂದು ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ

ಇಲಾಖಾ ಪರೀಕ್ಷೆಗಳಿಗೆ ಜೆಸಿಐನಿಂದ ಉಚಿತ ತರಬೇತಿ

ಪುತ್ತೂರು: ರಾಜ್ಯ ಸರಕಾರದ ವಿವಿಧ ವೃಂದದ ಸರಕಾರಿ ಅಧಿಕಾರಿಗಳಿಗೆ ಕಡ್ಡಾಯಗೊಳಿಸಲಾದ 2026 ನೇ ಸಾಲಿನ ಒಂದನೇ ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗವು ಮೇ 9ರಿಂದ ನಡೆಸುವ ಹಿನ್ನಲೆಯಲ್ಲಿ ಈ ಬಾರಿಯೂ ಜೆಸಿಐ ವತಿಯಿಂದ ಉಚಿತ ತರಬೇತಿ ತರಗತಿಗಳನ್ನು ಏರ್ಪಡಿಸಲಾಗಿದೆ. ಕೋರ್ಟ್ ಬಳಿಯ ಇಂಡಿಯನ್ ಆರ್ಕೇಡ್ ಕಟ್ಟಡದಲ್ಲಿರುವ ಜೆಸಿಐ ಸಭಾಂಗಣದಲ್ಲಿ ಏ.5ಕ್ಕೆ ಬೆಳಗ್ಗೆ 10.30ಕ್ಕೆ ತರಗತಿಯನ್ನು ಆರಂಭಿಸಲಾಗುವುದು. ಕಾರ್ಯನಿರತ ಸರಕಾರಿ ನೌಕರರು ತರಬೇತಿಯ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಜೆಸಿಐ ಅಧ್ಯಕ್ಷ ಜಿತೇಶ್ ರೈ ಸಿ.ಎಚ್. ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮುಲ್ಕಿ ದೇಂದಡ್ಕ ದೇವಸ್ಥಾನದಲ್ಲಿ ಶ್ರೀದೇವರ ಪಲ್ಲಕ್ಕಿ ಉತ್ಸವ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ಶ್ರೀ ದೇವರಿಗೆ ಅಷ್ಟಬಂಧ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕದ ಅಂಗವಾಗಿ ಬುಧವಾರ ರಾತ್ರಿ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿಗಳ ಅಮೃತ ಹಸ್ತದಲ್ಲಿ, ಪ್ರಧಾನ ಅನುವಂಶಿಕ ಅರ್ಚಕ ಪಿ. ಸುಬ್ರಹ್ಮಣ್ಯ ಭಟ್ ಉಪಸ್ಥಿತಿಯಲ್ಲಿ ಶ್ರೀ ದೇವರ ಬಲಿ ಉತ್ಸವ, ಪಲ್ಲಕ್ಕಿ ಉತ್ಸವ, ವಸಂತ ಮಂಟಪದಲ್ಲಿ ಶ್ರೀ ದೇವರಿಗೆ ವಿಶೇಷ ಪೂಜೆ ನಡೆದು ಪ್ರಸಾದ ವಿತರಣೆ ನಡೆಯಿತು. ಕಟೀಲು ಕ್ಷೇತ್ರದ ಅರ್ಚಕ ವಾಸುದೇವ ಆಸ್ರಣ್ಣ, ಲಕ್ಷ್ಮೀ ನಾರಾಯಣ ಆಸ್ರಣ್ಣ ಹಾಗೂ ಕಸಾಪ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಕ್ಷೇತ್ರಕ್ಕೆ ಭೇಟಿ ನೀಡಿ ಪ್ರಸಾದ ಸ್ವೀಕರಿಸಿ ದೇಂದಡ್ಕ ಬ್ರಹ್ಮಕಲಶೋತ್ಸವ ಸಂಪನ್ನಗೊಂಡಿತು.

ಆತೂರು ದೇವಸ್ಥಾನದಲ್ಲಿ ಧ್ವಜಸ್ತಂಭದ ತೈಲಾಧಿವಾಸ

ಕಡಬ: ಕಡಬ ತಾಲೂಕಿನ ಕೊೖಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ನೂತನ ಧ್ವಜಸ್ತಂಭದ ತೈಲಾಧಿವಾಸ ಕಾರ್ಯಕ್ರಮ ಬುಧವಾರ ನಡೆಯಿತು. ದೇವಸ್ಥಾನದ ಪವಿತ್ರಪಾಣಿ ವೆಂಕಟ್ರಮಣ ಕುದುರೆತ್ತಾಯ ಅವರು ಧಾರ್ಮಿಕ ವಿಧಿ ವಿಧಾನ ನೆರವೇರಿಸಿದರು. ಉತ್ಸವ ಸಮಿತಿಯ ಅಧ್ಯಕ್ಷ ಧರ್ಣಪ್ಪ ಗೌಡ ಕೋರಿಕ್ಕಾರು, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ನೀರಜ್ ಕುಮಾರ್ ರೈ ಆರುವಾರುಬಾಳಿಕೆ, ಮಾಜಿ ಅಧ್ಯಕ್ಷ ಯದುಶ್ರೀ ಆನೆಗುಂಡಿ, ಸದಸ್ಯ ವಿಷ್ಣುಮೂರ್ತಿ ಬಡಕಿಲ್ಲಾಯ, ಸುನೀತ್ ರಾಜ್ ಶೆಟ್ಟಿ, ಯತೀಶ್ ಗುಂಡಿಜೆ, ಸಂಜೀವ ಸುದೆಂಗಳ, ಶ್ರೀಧರ ಪೂಜಾರಿ ತುಂಬೆತಡ್ಕ, ಸುಜಾತ ಶೆಟ್ಟಿ, ಮೀನಾಕ್ಷಿ ಮುಂಡೈಮಾರ್, ಅಭಿವೃದ್ಧಿ ಸಮಿತಿ ಅಧ್ಯಕ್ಷ ಶೀನಪ್ಪ ಗೌಡ ವಳಕಡಮ, ಉತ್ಸವ ಸಮಿತಿಯ ಉಪಾಧ್ಯಕ್ಷ ಮೋಹನ್‌ದಾಸ್ ಶೆಟ್ಟಿ ಬಡಿಲ, ಶ್ರೀನಿವಾಸ ಗೌಡ ಪಲ್ಲಡ್ಕ, ಸಂಜೀವ ಗೌಡ ಪರಂಗಾಜೆ, ರಾಜೀವ ಗೌಡ ಪೊಸಲಕ್ಕೆ ಮತ್ತಿತರರಿದ್ದರು.

ಅಂದಾಜು 156.17 ಕೋಟಿ ರೂ.ಗಳ ಮಿಗತೆ ಬಜೆಟ್ ಮಂಡನೆ | ನಗರವಾಸಿಗಳಿಗೆ ಬಂಪರ್

ಸ್ಮಾರ್ಟ್ ಸಿಟಿ ಅಭಿವೃದ್ಧಿಗೆ 'ಸ್ಮಾರ್ಟ್' ಯೋಜನೆಗಳು

ಜನಪ್ರತಿನಿಧಿಗಳ ಆಡಳಿತವಿಲ್ಲದೆ ಒಂದು ವರ್ಷ ಕಳೆದಿರುವ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆಡಳಿತಾಧಿಕಾರಿ ಹಾಗೂ ದ.ಕ. ಜಿಲ್ಲಾಧಿ ಕಾರಿ ದರ್ಶನ್ ಎಚ್.ವಿ. ಅವರು ಪಾಲಿಕೆಯ ಮಂಗಳಾ ಸಭಾಂಗಣದಲ್ಲಿ ಚೊಚ್ಚಲ ಬಜೆಟ್ ಮಂಡಿಸಿದರು. 2025-26ನೆ ಸಾಲಿನಲ್ಲಿ ಬಜೆಟ್‌ನಲ್ಲಿ ಒಟ್ಟು 644.64 ಕೋಟಿ ರೂ.ಗಳ ಜಮೆಗಳನ್ನು ನಿರೀಕ್ಷಿಸಲಾಗಿದ್ದು, ಡಿಸೆಂಬರ್ 2025ರ ಅಂತ್ಯಕ್ಕೆ 342.25 ಕೋಟಿ ರೂ. ಜಮೆಗಳನ್ನು ಸ್ವೀಕರಿಸಲಾಗಿದೆ. ಅಂದಾಜು 156.17 ಕೋಟಿ ರೂ.ಗಳ ಮಿಗತೆ ಬಜೆಟ್ ಮಂಡಿಸಲಾಗಿದ್ದು 'ಮಡಿಲು ಯೋಜನೆ ವಿಸ್ತರಣೆ', 'ನಮ್ಮ ಯೋಧ ಯೋಜನೆ', ಯಕ್ಷಗಾನಕ್ಕೆ ಪ್ರೋತ್ಸಾಹ, ತುಳು ಭಾಷೆಯ ಸಂಸ್ಕೃತಿಗೆ ಉತ್ತೇಜನ ಸಹಿತ ಹಲವು ಯೋಜನೆಗಳನ್ನು ಘೋಷಿಸಿದ್ದಾರೆ.

ಮಂಗಳೂರು: ಜನಪ್ರತಿನಿಧಿಗಳ ಆಡಳಿತವಿಲ್ಲದೆ ಒಂದು ವರ್ಷ ಕಳೆದಿರುವ ಮಂಗಳೂರು ಮಹಾನಗರ ಪಾಲಿಕೆ ಗುರುವಾರ ಆಡಳಿತಾಧಿಕಾರಿ ಅವರಿಂದ 2026-27ನೆ ಸಾಲಿನ ಬಜೆಟ್ ಮಂಡನೆಯ ಅಪರೂಪದ ಕ್ಷಣಕ್ಕೆ ಸಾಕ್ಷಿಯಾಯಿತು.

ಸಾಮಾನ್ಯವಾಗಿ ಬಜೆಟ್ ಅಧಿವೇಶನವು ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರಿಂದ ಪರ ವಿರೋಧ ಚರ್ಚೆ, ವಾದ ವಿವಾದಕ್ಕೆ ಆಸ್ಪದ ವಾಗುತ್ತಿತ್ತು. ಆದರೆ ಸದ್ಯ ಆಡಳಿತಾಧಿಕಾರಿಯಿಂದ ನಿರ್ವಹಿಸಲ್ಪಡುತ್ತಿರುವ ಪಾಲಿಕೆಯಲ್ಲಿ ಮಂಡಿಸಲಾದ ಬಜೆಟ್ ಬಳಿಕ ಪತ್ರಕರ್ತರ ಕೆಲವೊಂದು ಪ್ರಶ್ನೆಗಳಿಗೆ ಆಡಳಿತಾಧಿಕಾರಿ ಅವರ ಉತ್ತರದೊಂದಿಗೆ ಕೊನೆಗೊಂಡಿತು.

ಪಾಲಿಕೆಯ ಆಡಳಿತಾಧಿಕಾರಿ ಹಾಗೂ ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅವರು ಪಾಲಿಕೆಯ ಮಂಗಳಾ ಸಭಾಂಗಣದಲ್ಲಿ ಮಂಡಿಸಿರುವ 2026-27ನೆ ಸಾಲಿನ ಬಜೆಟ್ ಅಂದಾಜು (ಆರಂಭಿಕ ಶುಲ್ಕ ಸೇರಿದಂತೆ) ಮೊತ್ತ 93768.94 ಲಕ್ಷ ರೂ. (937.69 ಕೋಟಿ ರೂ.). ಇದರಲ್ಲಿ ಅಂದಾಜು 781.51 ಕೋಟಿ ರೂ. ವೆಚ್ಚ ಪಾವತಿಯಾಗಿದೆ. ಈ ಮೂಲಕ ಅಂದಾಜು 156.17 ಕೋಟಿ ರೂ.ಗಳ ಮಿಗತೆ ಬಜೆಟ್ ಮಂಡನೆಯಾಯಿತು.

ಬಜೆಟ್ ಪುಸ್ತಕವನ್ನು ಸಂಪೂರ್ಣ ಓದುವ ಮೂಲಕ 2026-27ನೆ ಸಾಲಿನ ಬಜೆಟ್ ಬಗ್ಗೆ ವಿವರ ನೀಡಿದ ಆಡಳಿತಾಧಿಕಾರಿ ದರ್ಶನ್ ಎಚ್.ವಿ., 2025-26ನೆ ಸಾಲಿನಲ್ಲಿ ಬಜೆಟ್‌ನಲ್ಲಿ ಒಟ್ಟು 644.64 ಕೋಟಿ ರೂ.ಗಳ ಜಮೆಗಳನ್ನು ನಿರೀಕ್ಷಿಸಲಾಗಿದ್ದು, ಡಿಸೆಂಬರ್ 2025ರ ಅಂತ್ಯಕ್ಕೆ 342.25 ಕೋಟಿ ರೂ. ಜಮೆಗಳನ್ನು ಸ್ವೀಕರಿಸಲಾಗಿದೆ ಎಂದರು.

ಇದೇ ವೇಳೆ ಕಳೆದ ಸಾಲಿನಲ್ಲಿ 789.72 ಕೋಟಿ ರೂ. ಪಾವತಿಗಳಲ್ಲಿ ಪಾಲಿಕೆಯ ಸ್ವಯಂ ಸಂಪನ್ಮೂಲ ಕ್ರೋಢೀಕರಣ ಹಾಗೂ ಸರಕಾರದಿಂದ ಬಿಡುಗಡೆಯಾದ ಅನುದಾನಗಳ ಆಧಾರದಲ್ಲಿ ಡಿಸೆಂಬರ್ ಅಂತ್ಯಕ್ಕೆ 393.47 ಕೋಟಿ ರೂ.ಗಳನ್ನು ಪಾವತಿಸಿರುವುದಾಗಿ ತಿಳಿಸಿದರು. 2026-27ನೆ ಸಾಲಿನಲ್ಲಿ ಆಸ್ತಿ ತೆರಿಗೆಯಿಂದ 90 ಕೋಟಿ ರೂ., ನೀರು ಸರಬರಾಜು ಶುಲ್ಕವಾಗಿ 55 ಕೋಟಿ ರೂ., ಘನತ್ಯಾಜ್ಯ ನಿರ್ವಹಣಾ ಕರ 26 ಕೋಟಿ ರೂ., ಇತರ ಆದಾಯವಾಗಿ 26.48 ಕೋಟಿ ರೂ., ಕಟ್ಟಡ ಪರವಾನಿಗೆ- ಪ್ರೀಮಿಯಂ ಎಫ್‌ಎಆರ್‌ನಿಂದ 26 ಕೋಟಿ ರೂ., ಮಾರುಕಟ್ಟೆ ಸಾಲ 7.31 ಕೋಟಿ ರೂ., ಬ್ಯಾಂಕ್ ಬಡ್ಡಿ 15 ಕೋಟಿ ರೂ., ಮಾರುಕಟ್ಟೆ, ಇತರ ಬಾಡಿಗೆಯಾಗಿ 5.47 ಕೋಟಿ ರೂ., ರಸ್ತೆ ಕಡಿತ, ಪುನರ್ ನಿರ್ಮಾಣ ಶುಲ್ಕದಿಂದ 3 ಕೋಟಿ ರೂ. ಸೇರಿದಂತೆ ಒಟ್ಟು 337.25 ಕೋಟಿ ರೂ.ಗಳ ಅಂದಾಜು ಆದಾಯವನ್ನು ನಿರೀಕ್ಷಿಸಲಾಗಿದೆ.

ರಾಜ್ಯ ಸರಕಾರದಿಂದ ವೇತನ, ಎಸ್‌ಎಫ್‌ಸಿ ಮುಕ್ತ ನಿಧಿ, ಪೌರ ಕಾರ್ಮಿಕರ ನೇರ ಪಾವತಿ ವೇತನ, ಸ್ಟ್ಯಾಂಪ್ ಶುಲ್ಕದ ಸರ್‌ಚಾರ್ಜ್ ಸೇರಿದಂತೆ ವಿವಿಧ ಯೋಜನೆಗಳಿಗೆ ಒಟ್ಟು 199.23 ಕೋಟಿ ರೂ. ಅನುದಾನವನ್ನು ನಿರೀಕ್ಷಿಸಲಾಗಿದೆ. ಕೇಂದ್ರದಿಂದ ಅಮೃತ್ 2.0, ಜಲ್ ಹಿ ಅಮೃತ್, ನಲ್ಮ್, ಸ್ವಚ್ಛ ಭಾರತ ಮಿಷನ್, 15ನೆ ಹಣಕಾಸು ಮುಕ್ತ ಅನುದಾನ, 16ನೆ ಹಣಕಾಸು, ಎನ್‌ಜಿಟಿ ಸೇರಿದಂತೆ ಒಟ್ಟು 93.36 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದೆ. ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಕಂದಾಯ ಅಧಿಕಾರಿ (ಆಡಳಿತ) ಅಕ್ಷತಾ ಉಪಸ್ಥಿತರಿದ್ದರು.

ಹಲವು ಹೊಸ ಯೋಜನೆಗಳ ಘೋಷಣೆ

ಮನಪಾ ಆಡಳಿತಾಧಿಕಾರಿ ದರ್ಶನ್ ಎಚ್.ವಿ. ಅವರು ಮಂಡಿಸಿದ ಬಜೆಟ್‌ನಲ್ಲಿನ ಹಲವು ಹೊಸ ಯೋಜನೆಗಳನ್ನು ಘೋಷಿಸಲಾಗಿದೆ.

ಮಡಿಲು ಯೋಜನೆ ವಿಸ್ತರಣೆ

ಮನಪಾ ಕಚೇರಿಯಲ್ಲಿ ಆರಂಭಿಸಿರುವ 'ಮಡಿಲು' ಶಿಶುಪಾಲನಾ ಕೇಂದ್ರವನ್ನು ವಲಯ ಕಚೇರಿಗಳಾದ ಸುರತ್ಕಲ್ ಹಾಗೂ ಕದ್ರಿಯಲ್ಲಿಯೂ ತೆರೆಯಲು ನಿರ್ಧರಿಸಲಾಗಿದೆ. ಜಿಲ್ಲಾಧಿಕಾರಿ ಕಚೇರಿಯ ಮಾದರಿಯಲ್ಲಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯುವ ಮೂಲಕ ಅಲ್ಲಿ ಸರಕಾರಿ ಕಚೇರಿ ಸಿಬ್ಬಂದಿ, ಅಧಿಕಾರಿಗಳ ಮಕ್ಕಳ ಜತೆ ಸೀಮಿತ ಅವಧಿಗೆ ಸಾರ್ವಜನಿಕರ ಮಕ್ಕಳಿಗೂ ಅವಕಾಶ ಕಲ್ಪಿಸಲು ಚಿಂತಿಸಲಾಗಿದೆ. ಈ ಉದ್ದೇಶಕ್ಕೆ 50 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಆಸರೆ- ಹೆಣ್ಣು ಮಕ್ಕಳ ಭರವಸೆಯ ಮಡಿಲು

ಪಾಲಿಕೆ ವ್ಯಾಪ್ತಿಯಲ್ಲಿ 14 ವರ್ಷದೊಳಗಿನ ಹೆಣ್ಣು ಮಕ್ಕಳು ವಿವಿಧ ರೀತಿಯ ದೌರ್ಜನ್ಯ, ಶೋಷಣೆಗೆ ಒಳಗಾದ, ಪೋಷಕರು- ಸಂಬಂಧಿಕರನ್ನು ಕಳೆದುಕೊಂಡು ಅನಾಥವಾಗಿರುವ, ರಸ್ತೆಯಲ್ಲಿ ಭಿಕ್ಷಾಟನೆಯಲ್ಲಿ ತೊಡಗಿಕೊಂಡಿರುವ ಹೆಣ್ಣು ಮಕ್ಕಳ ಪೋಷಣೆ, ರಕ್ಷಣೆ, ಶಿಕ್ಷಣ ಹಾಗೂ ಭವಿಷ್ಯದ ಮೇಲ್ವಿಚಾರಣೆ, ಜವಾಬ್ದಾರಿ ವಹಿಸುವ ಸಂಸ್ಥೆಗಳಿಗೆ ತಲಾ 15 ಲಕ್ಷ ರೂ.ನಂತೆ 30 ಲಕ್ಷ ರೂ.ಗಳ ಪ್ರೋತ್ಸಾಹ ಧನ.

ಯಕ್ಷಗಾನಕ್ಕೆ ಪ್ರೋತ್ಸಾಹ

ಯಕ್ಷಗಾನವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 10 ಲಕ್ಷ ರೂ.ಗಳ ಅನುದಾನ. ತುಳು ಭಾಷೆಯ ಸಂಸ್ಕೃತಿ, ಕಲಾರೂಪಗಳಿಗೆ ಉತ್ತೇಜನಕ್ಕಾಗಿ ತುಳು ಭಾಷೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ತುಳು ಯುವ ಕವಿಗಳು, ಕಲಾಕೃತಿಗಳು ಹಾಗೂ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಟ್ಟ ನಾಟಕಗಳಿಗೆ ಗೌರವ ನೀಡುವ ಉದ್ದೇಶದಿಂದ 50 ಲಕ್ಷ ರೂ. ಅನುದಾನ ಕಾಯ್ದಿರಿಸಲಾಗಿದೆ. ಕಲೆಗಳ ಪ್ರಕಾರ, ಮಹತ್ವದ ಆಧಾರದ ಮೇಲೆ ಈ ಅನುದಾನವನ್ನು ವಿನಿಯೋಗಿಸಲಾಗುತ್ತದೆ.

ಪೌರ ಕಾರ್ಮಿಕರಿಗೆ ಕಲ್ಯಾಣ ನಿಧಿ

ಪೌರ ಕಾರ್ಮಿಕರ ಸಾಮಾಜಿಕ ಭದ್ರತೆಯನ್ನು ದೃಢಪಡಿಸುವ ಉದ್ದೇಶದಿಂದ 2026-27ನೆ ಸಾಲಿಗೆ 50 ಲಕ್ಷ ರೂ.ಗಳನ್ನು ಗುಂಪು ಜೀವ ವಿಮಾ ಯೋಜನೆಯನ್ನು ಮೀಸಲಿರಿಸಲಾಗಿದೆ. ಪ್ರತಿ ಕಾರ್ಮಿಕರಿಗೆ ತಗಲುವ ವಾರ್ಷಿಕ ಪ್ರೀಮಿಯಂ ಅನ್ನು ಪಾಲಿಕೆಯಿಂದಲೇ ಭರಿಸಲಾಗುತ್ತದೆ. ಪಾಲಿಕೆ ವ್ಯಾಪ್ತಿಯ ಜನಸಂದಣಿ ಇರುವ ಸ್ಥಳಗಳಲ್ಲಿ ವಿಶೇಷವಾಗಿ ಬಸ್ ನಿಲ್ದಾಣ, ಮಾರುಕಟ್ಟೆ, ಸಾರ್ವಜನಿಕ ಆಸ್ಪತ್ರೆಗಳ ಆವರಣದಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳ ಆರೋಗ್ಯ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸುಸಜ್ಜಿತ ಶೌಚಾಲಯ ನಿರ್ಮಾಣ ಹಾಗೂ ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳನ್ನು ಮೇಲ್ದರ್ಜೆಗೇರಿಸಲು 1 ಕೋಟಿ ರೂ. ಕಾಯ್ದಿರಿಸಲಾಗಿದೆ.

ಆಶ್ರಯ ಸಂಸ್ಥೆಗಳಿಗೆ ಸಹಾಯಧನ

ವಯೋವೃದ್ಧರು, ವಿಕಲಚೇತನ ಮಕ್ಕಳ ಕ್ಷೇಮಾಭಿವೃದ್ಧಿಗೆ ಸ್ಪಂದಿಸುವ ಸಂಘ ಸಂಸ್ಥೆಗಳಿಗೆ 20 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ. ಪ್ಲಾಸ್ಟಿಕ್ ಮುಕ್ತ ಪರಿಸರಕ್ಕಾಗಿ ಅಭಿಯಾನದ ಮುಂದುವರಿದ ಭಾಗವಾಗಿ ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿಸಲು ಪ್ರತಿ ಮನೆಗೆ 2 ಬಟ್ಟೆಯ ಕೈಚೀಲಗಳನ್ನು ನೀಡಲು 80 ಲಕ್ಷ ರೂ.ಮೊತ್ತ ಕಾಯ್ದಿರಿಸಲಾಗಿದೆ.

ಬೀದಿ ನಾಯಿಗಳ ಪುನರ್ವಸತಿ ಕೇಂದ್ರ

ಬೀದಿ ನಾಯಿಗಳ ಹಾವಳಿ ತಡೆಗಟ್ಟಿ ಅವುಗಳಿಗೆ ಸೂಕ್ತ ಆಶ್ರಯ ಒದಗಿಸಲು ಈಗಾಗಲೇ ಮಂಗಳೂರು ತಾಲೂಕಿನ ಬೊಂಡಂತಿಲ ಗ್ರಾಮದಲ್ಲಿ 5 ಎಕರೆ ಜಾಗವನ್ನು ಗುರುತಿಸಲಾಗಿದೆ. ಅಲ್ಲಿ ವ್ಯವಸ್ಥೆ ಕಲ್ಪಿಸಲ 2 ಕೋಟಿ ರೂ. ಕಾಯ್ದಿರಿಸಲಾಗಿದ್ದು, ಆಸಕ್ತ ಸರಕಾರೇತರ ಸಂಸ್ಥೆ ಅಥವಾ ಖಾಸಗಿ ಸಂಸ್ಥೆಗಳ ಮೂಲಕ ನಿರ್ವಹಣೆಗೆ ಯೋಜನೆ. ಪಚ್ಚನಾಡಿ ಪ್ರದೇಶದ ಡಂಪಿಂಗ್ ಯಾರ್ಡ್‌ನಿಂದ ಸ್ಥಳೀಯರಿಗೆ ಆಗುತ್ತಿರುವ ದುರ್ವಾಸನೆಯನ್ನು ತಡೆಗಟ್ಟಲು ಆಧುನಿಕ ತಂತ್ರಜ್ಞಾನ ಬಳಸಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಸೂಕ್ತ ಪರಿಹಾರ ನೀಡುವ ವ್ಯಕ್ತಿ/ಸಂಸ್ಥೆಗಳಿಗೆ ಉತ್ತೇಜನ ಹಾಗೂ ನಗರ ವ್ಯಾಪ್ತಿಯ ಸಮಸ್ಯೆಗಳಿಗೆ ಪರಿಹಾರ ನೀಡುವ ವಿನೂತನ ವಿಧಾನಗಳಿಗೆ 50 ಲ.ರೂ. ಕಾಯ್ದಿರಿಸಲಾಗಿದೆ.

ರಾಷ್ಟ್ರಧ್ವಜಗಳ ನಿರ್ವಹಣೆ

ಕದ್ರಿಯಲ್ಲಿ ನಿರ್ಮಾಣವಾಗಿರುವ ಹಾಗೂ ಟಾಗೋರ್ ಪಾರ್ಕ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಬೃಹತ್ ಗಾತ್ರದ ರಾಷ್ಟ್ರಧ್ವಜಗಳ ವಾರ್ಷಿಕ ನಿರ್ವಹಣೆಯನ್ನು ಪಾಲಿಕೆಯಿಂದ ಮಾಡಲಾಗುವುದು. ಪ್ರತಿ ತಿಂಗಳು ರಾಷ್ಟ್ರ ಧ್ವಜ ಬದಲಾವಣೆಯೊಂದಿಗೆ ಸಮರ್ಪಕ ನಿರ್ವಹಣೆಗಾಗಿ 12 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ. ಮಂಗಳೂರು ನಗರವನ್ನು 2032ರ ವೇಳೆಗೆ ಸುಸಜ್ಜಿತ ಹಾಗೂ ನವೀನ ಮಾದರಿಯ ಸೌಕರ್ಯಗಳನ್ನು ಹೊಂದಿದ ಪ್ರಥಮ ಮಾದರಿ ನಗರವನ್ನಾಗಿಸಲು ಸ್ವಚ್ಛ ಮಂಗಳೂರು ಪರಿಕಲ್ಪನೆಯಡಿ ಸರ್ವತೋಮುಖ ಅಭಿವೃದ್ಧಿಗಾಗಿ ಡಿಪಿಆರ್ ತಯಾರಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 30 ಲ.ರೂ. ಮೀಸಲಿಡಲಾಗಿದೆ.



ಸ್ವಚ್ಛ ವಾಹಿನಿ ವಿಶೇಷ ಕಾರ್ಯಪಡೆ



ನಗರದ ಸ್ವಚ್ಛತೆ ಖಾತರಿಪಡಿಸುವುದು ಹಾಗೂ ತ್ಯಾಜ್ಯ ಸುರಿಯುವ ಸ್ಥಳಗಳಲ್ಲಿ ಜಿಪಿಎಸ್ ಮತ್ತು ಸಮಯ ಮುದ್ರಿತ ಛಾಯಾ ಚಿತ್ರದೊಂದಿಗೆ ಸಾರ್ವಜನಿಕರು ತಮ್ಮ ದೂರನ್ನು ಪಾಲಿಕೆಯ ಅಧಿಕೃತ ವಾಟ್ಸಾಪ್ ಸಂಖ್ಯೆಗೆ ಬೆಳಗ್ಗೆ 10ರಿಂದ ಸಂಜೆ 6ರ ಅವಧಿಯಲ್ಲಿ ದೂರು ನೀಡಿದರೆ, ದೂರು ನೀಡಿದ 6 ಗಂಟೆಯೊಳಗೆ ತೆರವುಗೊಳಿಸಲು ಸ್ವಚ್ಛವಾಹಿನಿ ಎಂಬ ವಿಶೇಷ ಕಾರ್ಯಪಡೆ ರಚಿಸಲಾಗುತ್ತದೆ. ಇದಕ್ಕಾಗಿ ಪ್ರತ್ಯೇಕ ವಾಟ್ಸಾಪ್ ಸಂಖ್ಯೆಯನ್ನು ಶೀಘ್ರವೇ ಪ್ರಕಟಿಸಲಾಗುವುದು. ಆರಂಭದಲ್ಲಿ ವಲಯ ಮಟ್ಟದಲ್ಲಿ ಈ ವಿಶೇಷ ಕಾರ್ಯಪಡೆ ಆರಂಭಗೊಂಡು ಯಶಸ್ಸಿನ ಆಧಾರದ ಮೇಲೆ ಪ್ರತಿ ವಾರ್ಡ್‌ಗಳಿಗೂ ವಿಸ್ತರಣೆ ಮಾಡಲಾಗುವುದು. ಮಾತ್ರವಲ್ಲದೆ, ಫಲ್ಗುಣಿ, ನೇತ್ರಾವತಿ ನದಿ ಪಾತ್ರಗಳಲ್ಲಿ ಹಳೆ ಕಟ್ಟಡದ ಅವಶೇಷಗಳನ್ನು ಸುರಿದು ಮಾಲಿನ್ಯಗೊಳಿಸುವ ಕೃತ್ಯಗಳು ನಡೆಯುತ್ತಿದ್ದು, ಅಂತಹವರಿಗೆ ದಂಡದ ಜತೆ ಎಫ್‌ಐಆರ್ ಹಾಕಲು ನಿರ್ಧರಿಸಲಾಗಿದೆ. ಬೆಳ್ತಂಗಡಿ ಗ್ರಾ.ಪಂ.ನಲ್ಲಿ ಕಸ ಹಾಕುವವರಿಗೆ 5000 ರೂ.ವರೆಗೆ ದಂಡ ವಿಧಿಸಲಾಗುತ್ತಿದೆ. ಅದೇ ಮಾದರಿಯಲ್ಲಿ ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲೂ ಎಲ್ಲೆಂದರಲ್ಲಿ ಕಸ ಸುರಿಯುವವರ ವಿರುದ್ಧ ದಂಡವನ್ನು ಹೆಚ್ಚಿಸಿ ಎಚ್ಚರಿಕೆ ಮೂಡಿಸುವ ಕ್ರಮ ವಹಿಸಲಾಗುವುದು ಎಂದು ಪಾಲಿಕೆ ಆಡಳಿತಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದರು.

ಕಂಬಳದ ಹೆಜ್ಜೆಗೆ ಸಂಸ್ಕೃತಿಯ ಸ್ಪಂದನ ಯೋಜನೆ




ಬಜೆಟ್‌ನಲ್ಲಿ ಕಂಬಳವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಮಂಗಳೂರು ನಗರದಲ್ಲಿ ನಡೆಯುವ ಮೂರು ಕಂಬಗಳಿಗೆ ತಲಾ 3 ಲಕ್ಷ ರೂ.ನಂತೆ ಅನುದಾನ ನೀಡಲು 9 ಲಕ್ಷ ರೂ. ಮೀಸಲಿರಿಸಲಾಗಿದೆ. ಇದು ಕಂಬಳ ಪ್ರಿಯರಿಗೆ ಖುಷಿ ನೀಡಿದೆ.

ಪ್ರವಾಸೋದ್ಯಮಕ್ಕೆ ಉತ್ತೇಜನ

"ಕರಾವಳಿಯ ಮೂರು ಜಿಲ್ಲೆಗಳನ್ನು ಒಳಗೊಂಡು ಈಗಾಗಲೇ ತಲಪಾಡಿಯಿಂದ ಕಾರವಾರದವರೆಗಿನ ಕರಾವಳಿ ತೀರದ ರಸ್ತೆಯನ್ನು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಚಿಂತಿಸಲಾಗಿದೆ. ಈ ನಿಟ್ಟಿನಲ್ಲಿ ಪಾಲಿಕೆ ವ್ಯಾಪ್ತಿಯ 22 ಕಿ.ಮೀ. ಉದ್ದದ ಕಡಲ ತೀರವನ್ನು ಅತ್ಯಾಧುನಿಕ ಮಾದರಿಯ ರಸ್ತೆಯನ್ನಾಗಿಸಲು ಪ್ರಥಮ ಹಂತದ ವಿಸ್ತೃತಾ ಯೋಜನಾ ವರದಿ (ಡಿಪಿಆರ್) ತಯಾರಿಸಲು ನಿರ್ಧರಿಸಲಾಗಿದೆ.

● ದರ್ಶನ್ ಎಚ್.ವಿ.

'ನಮ್ಮ ಯೋಧ' ಯೋಜನೆ



ದೇಶಕ್ಕಾಗಿ ಹೋರಾಡಿ ಮೃತಪಟ್ಟ ವೀರ ಯೋಧರ ಕುಟುಂಬಕ್ಕೆ ಸ್ಪಂದಿಸುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಭೂ ಸೇನೆ, ವಾಯು ಪಡೆ, ನೌಕಾಪಡೆಗಳ ಜತೆಗೆ ಅರೆ ಸೈನಿಕ ಪಡೆಗಳ (ಬಿಎಸ್‌ಎಫ್, ಸಿಆರ್‌ಪಿಎಫ್, ಸಿಐಎಸ್‌ಎಫ್, ಅಸ್ಸಾಂ ರೈಫಲ್ಸ್, ಎಸ್ ಎಸ್‌ಬಿ ಮತ್ತು ಎನ್ ಎಸ್‌ಜಿ) ವೀರ ಮರಣ ಹೊಂದಿದ ಯೋಧರ ಆಸರೆಗಾಗಿ ತಲಾ 5 ಲ.ರೂ. ನಂತೆ ಧನಸಹಾಯ ನೀಡಲು 20 ಲಕ್ಷ ರೂ.ಗಳನ್ನು ಮೀಸಲಿಡಲಾಗಿದೆ.

ಕನ್ನಾಡಿ ದೇಗುಲದ ಮಹೋತ್ಸವ: ಇಂದು ಮಹಾರಥೋತ್ಸವ ಸಂಭ್ರಮ



ಬೆಳ್ತಂಗಡಿ: ಯುಗಾದಿಯಂದು 66ನೆಯ ವರ್ಷದ ಶ್ರೀರಾಮ ನಾಮ ಸಪ್ತಾಹದ ಉದ್ಘಾಟನೆಯೊಂದಿಗೆ ಆರಂಭವಾದ ಧರ್ಮಸ್ಥಳ ಗ್ರಾಮದ ನಿತ್ಯಾನಂದ ನಗರದಲ್ಲಿನ ಶ್ರೀ ರಾಮ ಕ್ಷೇತ್ರ ಮಹಾಸಂಸ್ಥಾನಮ್‌ನ ಮಹೋತ್ಸವದ 5ನೇ ದಿನ ಸೋಮವಾರ ಬೆಳಿಗ್ಗೆ ನವದುರ್ಗಾ ಹೋಮ, ನವ ದುರ್ಗೆಯರಿಗೆ ವಿಶೇಷ ಅಲಂಕಾರ ಪೂಜೆ ನೆರವೇರಿತು.

ಬೆಳ್ಳಿ ರಥೋತ್ಸವ

ರಾತ್ರಿ ಶ್ರೀ ದುರ್ಗಾಪರಮೇಶ್ವರಿ ದೇವಿಯ ಬಲಿ ಉತ್ಸವ ಮತ್ತು ಚಂದ್ರಮಂಡಲ ಉತ್ಸವ, ಮಂಗಳವಾರ ಪುಷ್ಪರಥ, ಬುಧವಾರ ಬೆಳ್ಳಿರಥೋತ್ಸವ ನೆರವೇರಿತು. ಗುರುವಾರ ಸಂಜೆ 7 ಗಂಟೆಯಿಂದ ಕ್ಷೇತ್ರದಲ್ಲಿ ಶ್ರೀ ಹನುಮಾನ್ ರಥೋತ್ಸವ, ಕಟ್ಟೆಪೂಜೆ, ಕೆರೆ ದೀಪೋತ್ಸವ, ದೇವರ ಉತ್ಸವ ನಡೆಯಿತು.

ಇಂದಿನ ಕಾರ್ಯಕ್ರಮ

ಕ್ಷೇತ್ರದ ಪ್ರತಿಷ್ಠಾ ಮಹೋತ್ಸವದ ಪ್ರಯುಕ್ತ ಇಂದು (ಮಾ.27) ಸಂಜೆ 7ರಿಂದ ದೇವರ ಪಾಲಕಿ ಬಲಿ ಉತ್ಸವ, ಬ್ರಹ್ಮರಥೋತ್ಸವ ನಡೆಯಲಿದೆ. ರಾತ್ರಿ ಕ್ಷೇತ್ರದ ರಕ್ತೇಶ್ವರಿ ಮತ್ತು ಗುಳಿಗ ದೈವದ ನೇಮೋತ್ಸವ ಕ್ಷೇತ್ರದ ಪೀಠಾಧೀಶ ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಉಪಸ್ಥಿತಿಯಲ್ಲಿ ನೆರವೇರಲಿದೆ.

ಸೇವಾ ಕಾರ್ಯದಿಂದ ಸುಸಂಸ್ಕೃತ ಸಮಾಜ ನಿರ್ಮಾಣ: ಈಶ್ವರ್ ಮಲ್ಪೆ



ಆಲಂಕಾರು: ಸಮಾನ ಮನಸ್ಕರಿಂದ ಮಾತ್ರ ಸಮಾಜ ಸೇವೆ ಮಾಡಲು ಸಾಧ್ಯ. ಸಂಸ್ಕಾರಯುತ ಶಿಕ್ಷಣದಿಂದ ಮತ್ತು ಸಮಾಜ ಮುಖಿಯಾದ ಸಂಘಟನೆಯಿಂದ ಪರಸ್ಪರ ಸಹಕಾರ ಸಹಬಾಳ್ವೆಯ ಜೀವನ ಪದ್ಧತಿಯನ್ನು ಕಲಿಸುತ್ತದೆ. ಉತ್ತಮ ಸಮಾಜವನ್ನು ನಿರ್ಮಿಸಲು ಪ್ರೇರಣೆ ನೀಡುತ್ತದೆ ಎಂದು ಖ್ಯಾತ ಮುಳುಗು ತಜ್ಞ ಈಶ್ವರ್ ಮಲ್ಪೆ ಹೇಳಿದರು.

ಅವರು ಬುಧವಾರ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂದರ್ಭ ಶ್ರೀ ದುರ್ಗಾಂಬ ಅಲಂಕಾರ ಸಮಿತಿ ಆಲಂಕಾರು ಇದರ ಆಶ್ರಯದಲ್ಲಿ ನೂತನ ಆ್ಯಂಬುಲೆನ್ಸ್ ಲೋಕಾರ್ಪಣೆಗೊಳಿಸಿ, ಮಾತನಾಡಿದರು.

ಮಾಣಿಲ ಶ್ರೀಧಾಮದ ಮೋಹನದಾಸ ಸ್ವಾಮೀಜಿ ಮಾತನಾಡಿ, ಅದೃಷ್ಟ ಚೀಟಿ ಮೂಲಕ ಪಡೆದ ಸಂಪತ್ತನ್ನು ಸಮಾಜಕ್ಕೆ ನೀಡಿರುವುದು ಉತ್ತಮ ಕಾರ್ಯ. ಯುವಕರ ಈ ಕಾರ್ಯ ಯುವ ಜನತೆಗೆ ಮಾದರಿಯಾಗಲಿದೆ ಎಂದು ಹಾರೈಸಿದರು.

ದುರ್ಗಾಂಬ ಅಲಂಕಾರ ಸಮಿತಿಯ ಅಧ್ಯಕ್ಷ ಗಣರಾಜ ಕೆ. ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕ ರವಿ ಕಕ್ಕೆಪದವು ಉದ್ಘಾಟಿಸಿದರು. ಕಡಬ ಉಪ ತಹಶೀಲ್ದಾರರ ಜಿ. ಗೋಪಾಲ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ರಾವ್, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ. ಹೇಮಂತ ರೈ ಮನವಳಿಕೆಗುತ್ತು, ಡಾ. ಮಮತಾ ಪಿ. ಶೆಟ್ಟಿ, ಸೀತಾರಾಮ ರೈ ಸವಣೂರು, ಅಲಂಕಾರ ಸಮಿತಿಯ ಗೌರವಾಧ್ಯಕ್ಷ ರಿತೇಶ್ ಭಂಡಾರಿ, ಮಾಜಿ ಶಾಸಕ ಎಸ್. ಅಂಗಾರ, ಡಾ. ಎಂ.ವಿ. ಭಟ್, ಡಾ. ಹರಿದಾಸ ಭಟ್, ಡಾ. ಕೃತಿ ಶೆಟ್ಟಿ, ಡಾ. ಕುಮಾರ ಸುಬ್ರಹ್ಮಣ್ಯ ಇದ್ದರು. ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ಸ್ವಾಗತಿಸಿ, ಕೌಶಿಕ್ ಕಾರ್ಯಕ್ರಮ ವಂದಿಸಿದರು. ಮೋಹನ್ ಕುಮಾರ್ ಪಟ್ಟೆ, ಅಶೋಕ್ ಶರವೂರು, ಶೇಷಪ್ಪ ಪೂಜಾರಿ ನೆಕ್ಕಿಲಾಡಿ, ಶಶಿಕಿರಣ್ ಸಹಕರಿಸಿದರು.



ಕ್ಯಾಂಪ್ಕೊದ 'ಸಾಂತ್ವನ' ಯೋಜನೆಯಡಿ ಬೆಳ್ತಂಗಡಿ ಶಾಖೆಯ ಸಕ್ರಿಯ ಸದಸ್ಯ ಬೆನೆಡಿಕ್ಟ್ ವೇಗಸ್, ಕನಾಜೆ ಅವರ ವೈದ್ಯಕೀಯ ಚಿಕಿತ್ಸೆಗಾಗಿ ರೂ. 72,065 ಅನ್ನು ಕ್ಯಾಂಪ್ಕೊ ಸಂಸ್ಥೆಯ ನಿರ್ದೇಶಕ ದಯಾನಂದ ಹೆಗ್ಡೆ ಲೀನಾ ಲಸ್ರಾಡೊ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭ ಉಪ ಪ್ರಧಾನ ವ್ಯವಸ್ಥಾಪಕ ಗೋವಿಂದ ಭಟ್ ಎಸ್., ಬೈಕಂಪಾಡಿ ವಲಯದ ಪ್ರಾದೇಶಿಕ ವ್ಯವಸ್ಥಾಪಕ ನಿತಿನ್ ಕೋಟ್ಯಾನ್, ಕ್ಯಾಂಪ್ಕೊ ಬೆಳ್ತಂಗಡಿ ಶಾಖೆಯ ವ್ಯವಸ್ಥಾಪಕ ಶ್ರೀಕೃಷ್ಣ ಕೆ. ಎಸ್., ಸಿಬ್ಬಂದಿಗಳು ಉಪಸ್ಥಿತರಿದ್ದರು.



ಮುಲ್ಕಿ ಅರಮನೆ ವಠಾರದಲ್ಲಿ ಮೇ 2 ರಂದು ನಡೆಯಲಿರುವ ಪವಮಾನ ಯಾಗ ಮತ್ತು ಸರ್ವೈಶ್ವರ್ಯ ಪೂಜೆಯ ಆಮಂತ್ರಣವನ್ನು ಮುಲ್ಕಿ ಸೀಮೆಯ ಅರಸರಾದ ದುಗ್ಗಣ್ಣ ಸಾವಂತರು ಬಿಡುಗಡೆಗೊಳಿಸಿದರು. ಪ್ರಾಣ ಪ್ರತಿಷ್ಠಾನದ ಮಾರ್ಗದರ್ಶಕ ಪಿ.ಜಿ., ಯೋಗಚಾರ್ಯ ವಿನೋದ್, ಟ್ರಸ್ಟಿ ಗಣೇಶ್ ಮುಲ್ಕಿ, ಅನಂತ್ ಹೆಜಮಾಡಿ, ಕಾರ್ನಾಡ್ ಶ್ರೀರಾಮ ಸೇವಾ ಮಂಡಳಿಯ ಕೋಶಾಧಿಕಾರಿ ಕೇಶವ್ ಮುಲ್ಕಿ, ಜೆಸಿಐ ಮುಲ್ಕಿ ಶಾಂಭವಿ ಅಧ್ಯಕ್ಷ ಭಾಸ್ಕರ್ ಶೆಟ್ಟಿಗಾರ್ ಉಪಸ್ಥಿತರಿದ್ದರು.

ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ದೀಪಪ್ರದಾನ' | ಪ್ರೌಢಶಾಲಾ ಮಕ್ಕಳಿಗೆ ಪುಸ್ತಕ, ಸಮವಸ್ತ್ರ ವಿತರಣೆ

ಸಂಸ್ಕಾರಯುತ ಶಿಕ್ಷಣವು ಜೀವನದ ಆಧಾರ ಶಿಲೆ: ವಿಷ್ಣುಪ್ರಸಾದ್ ಹೆಬ್ಬಾರ್

ಬಂಟ್ವಾಳ: ಕಲ್ಲಡ್ಕ ಶ್ರೀ ರಾಮ ಹಿರಿಯ ಪ್ರಾಥಮಿಕ ಶಾಲೆಯ ವೇದವ್ಯಾಸ ಧ್ಯಾನ ಮಂದಿರದಲ್ಲಿ 7ನೇ ತರಗತಿಯ ಬೀಳ್ಕೊಡುಗೆ 'ದೀಪ ಪ್ರದಾನ' ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಯಾಗಿ ಬೆಂಗಳೂರು ಮಣಿಪಾಲ ಫೌಂಡೇಶನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರಿನಾರಾಯಣ ಶರ್ಮ ಭಾಗವಹಿಸಿ, ಸಂಸ್ಕಾರಯುತ ಶಿಕ್ಷಣವನ್ನು ನೀಡುತ್ತಿರುವ ವಿದ್ಯಾಕೇಂದ್ರದ ಕಾರ್ಯಚಟುವಟಿಕೆಯನ್ನು ಶ್ಲಾಘಿಸಿ, ಈ ರೀತಿಯಾಗಿ ಮಕ್ಕಳಿಗೆ ಸಂಸ್ಕಾರದ ಜೊತೆಯಲ್ಲಿ ಶಿಕ್ಷಣ ದೊರೆಯುವ ಶಾಲೆಯನ್ನು ಎಲ್ಲಿಯೂ ಕಂಡಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಂಪರಾ ವಿದ್ಯಾಪೀಠಂ ಅಲಕೋಡೆ ಕೇರಳಂ, ಬೇಕಲ ಗೋಕುಲಂ ಗೋಶಾಲಾ ಸ್ಥಾಪಕ ಜ್ಯೋತಿಷಿ ವಿಷ್ಣುಪ್ರಸಾದ್ ಹೆಬ್ಬಾರ್ ಮಾತನಾಡಿ, ಜೀವನದ ಆಧಾರ ಶಿಲೆ ವಿದ್ಯೆ. ಭಾರತೀಯ ಸಂಸ್ಕೃತಿ, ಭಾಷೆ, ವಿದ್ಯೆ ನಮ್ಮಲ್ಲಿರಬೇಕು. ಮಾತೃ ಭಾಷೆಯಲ್ಲಿ ದೊರೆಯುವ ಸ್ವಾತಂತ್ರ್ಯ ಬೇರೆ ಭಾಷೆಯಲ್ಲಿ ಬರಲು ಸಾಧ್ಯವಿಲ್ಲ, ಶ್ಲೋಕಗಳನ್ನು ಪಠಣ ಮಾಡುವುದರಿಂದ ಸಂಸ್ಕಾರ ಸಿಗುತ್ತದೆ ಎಂದರು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಅವರು ಸಭಾಧ್ಯಕ್ಷತೆ ವಹಿಸಿ, ಶಿಕ್ಷಣದ ಜೊತೆಗೆ ಸಂಸ್ಕಾರ ಕೊಡಬೇಕು. ಭಾರತೀಯರಾಗಿಯೇ ಇರಬೇಕು ಎಂಬ ಉದ್ದೇಶದಿಂದ ಈ ಶಾಲೆ ಪ್ರಾರಂಭವಾಯಿತು. ಶಿಕ್ಷಣದ ಜೊತೆಯಲ್ಲಿ ಸಂಸ್ಕಾರವನ್ನು ಜೋಡಿಸಿಕೊಳ್ಳುವುದು ನಮ್ಮತನ ರೂಪಿಸುವಂತದ್ದು, ಮೊದಲು ಸಂಸ್ಕಾರ ಕೊಡುವವಳು ತಾಯಿ. ನಮ್ಮ ಮಾತೃ ಭಾಷೆಯಲ್ಲಿ ಶಿಕ್ಷಣ ದೊರೆತಾಗ ನಮ್ಮ ಸಂಸ್ಕಾರ ಗಟ್ಟಿಯಾಗುತ್ತದೆ ಎಂದರು.



ಮೊದಲಿಗೆ 7ನೇ ತರಗತಿಯ ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆಗೈದು, ತಿಲಕಧಾರಣೆ ಮಾಡಿಸಿ, ಹಿರಿಯರಿಂದ ಆಶೀರ್ವಾದ ಪಡೆದುಕೊಂಡರು. 6ನೇ ವಿದ್ಯಾರ್ಥಿಗಳು 7ನೇ ತರಗತಿ ವಿದ್ಯಾರ್ಥಿಗಳಿಗೆ ಪುಷ್ಪ ಪ್ರಧಾನ ಮಾಡಿದರು. 6ನೇ ತರಗತಿಯ ವಿದ್ಯಾರ್ಥಿ ಭೂಮಿಕಾ ಪ್ರೇರಣಾ ಗೀತೆ ಹಾಡಿದರು. ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಸಮವಸ್ತ್ರ ವಿತರಿಸಲಾಯಿತು. ಇದೇ ವೇಳೆ 7ನೇ ತರಗತಿಯ ವಿದ್ಯಾರ್ಥಿಗಳು ತಾವು ಕಲಿತ ಶಾಲೆಗೆ ಡೆಸ್ಕ್, ಬೆಂಚ್‌ಗಳನ್ನು ಕೊಡುಗೆಯಾಗಿ ನೀಡಿದರು. ಉಡುಪಿ ಏಸ್‌ಕ್ರೀಟ್ ಆಡಿಷನ್ಸ್ ಇಂಡಿಯಾದ ನಿರ್ದೇಶಕ ಸಂದೀಪ್ ಶೆಟ್ಟಿ, ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ, ಸಂಚಾಲಕ ವಸಂತ ಮಾಧವ, ರಾಷ್ಟ್ರ ಸೇವಿಕ ಸಮಿತಿಯ ದಕ್ಷಿಣ ಪ್ರಾಂತದ ಮಾರ್ಗದರ್ಶಿ ಮಂಡಳಿಯ ಸದಸ್ಯೆ ಡಾ. ಕಮಲಾ ಪ್ರಭಾಕರ್ ಭಟ್, ಶ್ರೀರಾಮ ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೃಷ್ಣಪ್ರಸಾದ್ ಕಾಯರ್ ಕಟ್ಟೆ, ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು ವಿದ್ಯಾರ್ಥಿಗಳಾದ ಪ್ರಾಪ್ತಿ ಸ್ವಾಗತಿಸಿ, ಸದ್ವಿ ನಿರೂಪಿಸಿ, ಪ್ರಣಮ್ಯ ವಂದಿಸಿದರು.

ಸುತ್ತಮುತ್ತ

ಶ್ರೀ ಗುಡೇ ಮಹಾಲಿಂಗೇಶ್ವರ ಕ್ಷೇತ್ರ: ಸ್ವರ್ಣಶಿಖರ ಪ್ರತಿಷ್ಠೆ

ಬೈಂದೂರು: ಹೇರಂಜಾಲು ಗ್ರಾಮದ ಇತಿಹಾಸ ಹಾಗೂ ಪೌರಾಣಿಕ ಪ್ರಸಿದ್ಧವಾದ ಶ್ರೀ ಗುಡೇ ಮಹಾಲಿಂಗೇಶ್ವರ ದೇವಸ್ಥಾನಕ್ಕೆ



ನೂತನ ರಾಜಗೋಪುರ ನಿರ್ಮಿಸಲಾಗಿದ್ದು ಸಮರ್ಪಣಾ ಕಾರ್ಯಕ್ರಮದ ಅಂಗವಾಗಿ ಬುಧವಾರ ಬೆಳಿಗ್ಗೆ ವೇ. ಮೂ. ಕಟ್ಟೆ ಶಂಕರ ಭಟ್ ನವಿಲುಗೋಣ ಇವರ ಮಾರ್ಗದರ್ಶನದಲ್ಲಿ ನೂತನ ಧ್ವಜಪ್ರತಿಷ್ಠೆ, ಮಹಾಬಲಿ ಪೀಠ, ಕ್ಷೇತ್ರಪಾಲ, ಕಲಾ ಹೋಮ ಮಹಾಪೂಜೆ ನಡೆಯಿತು. ನೂತನ ರಾಜಗೋಪುರಕ್ಕೆ ಕ್ರೇನ್ ಮೂಲಕ ಸ್ವರ್ಣಶಿಖರ ಪ್ರತಿಷ್ಠಾಪಿಸಲಾಯಿತು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಸಂಜೆ ರಂಗಪೂಜೆ, 108 ಕಲಶ ಸ್ಥಾಪನೆಯಾಯಿತು. ರಾತ್ರಿ ಮಂಗಳೂರು ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ತಂಡದವರಿಂದ ಕೊಲ್ಲೂರು ಶ್ರೀ ಮೂಕಾಂಬಿಕಾ ನೃತ್ಯಗಾಥೆ ಹಾಗೂ ನೃತ್ಯ ಕಾರ್ಯಕ್ರಮಗಳು ನಡೆಯಿತು. ಸೇವಾಕರ್ತ ಎಚ್. ಜಯಶೀಲ ಎನ್. ಶೆಟ್ಟಿ ಎಚ್. ರವೀಂದ್ರ ಶೆಟ್ಟಿ, ದೇವಳದ ಖಜಾಂಚಿ ಎಚ್. ವಿಜಯ್ ಶೆಟ್ಟಿ ಗ್ರಾಪಂ ಮಾಜಿ ಅಧ್ಯಕ್ಷ ಬಟ್ವಾಡಿ ಅಣ್ಣಪ್ಪ ಶೆಟ್ಟಿ, ಉದ್ಯಮಿ ಕಿರಣ್ ಶೆಟ್ಟಿ ಮನಿಷ್ ಜೆ. ಶೆಟ್ಟಿ ಸುಜಯ್ ಎಸ್. ಶೆಟ್ಟಿ ಸುಧಾಕರ ಎಸ್. ಶೆಟ್ಟಿ ದೇವಳದ ವ್ಯವಸ್ಥಾಪನಾ ಸಮಿತಿ ಪದಾಧಿಕಾರಿಗಳು ಮತ್ತಿತರರು ಇದ್ದರು. ಈಗಾಗಲೇ ಸುಮಾರು 250 ಋತ್ವಿಜರು ಯಾಗಶಾಲೆಯಲ್ಲಿ ಅತಿರುದ್ರ ಮಹಾಯಾಗವನ್ನು ನಡೆಸುತ್ತಿದ್ದಾರೆ. ಮೂರನೇ ದಿನವೂ ಕೂಡ ಸಹಸ್ರಾರು ಸಂಖ್ಯೆ ಭಕ್ತಾದಿಗಳು ದೇವಳಕ್ಕೆ ಬಂದು ಈ ಧಾರ್ಮಿಕ ಕಾರ್ಯಕ್ಕೆ ಸಾಕ್ಷಿಯಾಗುತ್ತಿದ್ದಾರೆ.

ಬಣ್ಣದ ವೇಷ ವಿಭಾಗ: ಎಸ್‌ಡಿಎಂನ ವಿಬಿನ್ ಪೂಜಾರಿ ಪ್ರಥಮ

ಬೆಳ್ತಂಗಡಿ: ಸುರತ್ಕಲ್ ಗೋವಿಂದಾಸ್ ಕಾಲೇಜು, ಆಗರಿ ಶ್ರೀನಿವಾಸ ಭಾಗವತರ ಸಂಸ್ಮರಣಾ ವೇದಿಕೆ ಆಶ್ರಯದಲ್ಲಿ 25ನೇ ವರ್ಷದ ಆಗರಿ ಪ್ರಶಸ್ತಿ ಪ್ರದಾನ ಸಂದರ್ಭ ನಡೆದ 'ಯಕ್ಷಯಾನ – 2026' ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ



ಅಂತರ್ ಕಾಲೇಜು ತೆಂಕುತಿಟ್ಟು ಯಕ್ಷಗಾನ ಸ್ಪರ್ಧೆಯಲ್ಲಿ ಉಜಿರೆ ಎಸ್. ಡಿ.ಎಂ. ಯಕ್ಷಗಾನ ಕಲಾಕೇಂದ್ರವು 'ತರಣಿಸೇನಕಾಳಗ' ಎಂಬ ಪ್ರಸಂಗವನ್ನು ಪ್ರಸ್ತುತ ಪಡಿಸಿ ಸಮಗ್ರ ದ್ವಿತೀಯ ತಂಡ ಪ್ರಶಸ್ತಿಯನ್ನು ಪಡೆದಿದೆ. ಈ ಪ್ರಸಂಗದಲ್ಲಿ 'ರಾವಣ' ಪಾತ್ರಧಾರಿಯಾಗಿ ಬಣ್ಣದ ವೇಷ ವಿಭಾಗದಲ್ಲಿ ಉಜಿರೆ ಎಸ್‌ಡಿಎಂ ಪೊಲಿಟೆಕ್ನಿಕ್ ಕಾಲೇಜಿನ ವಿಬಿನ್ ಪೂಜಾರಿ ಪ್ರಥಮ ಪ್ರಶಸ್ತಿ ಪಡೆದಿದ್ದಾರೆ. ವಿಬಿನ್ ಪೂಜಾರಿ ಉಜಿರೆ ಎಸ್‌ಡಿಎಂ ಪಾಲಿಟೆಕ್ನಿಕ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಯಾಗಿದ್ದು, ಅವರ ವಿಶೇಷ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಕೇಂದ್ರದ ಯೋಜನೆಗಳ ಬಗ್ಗೆ ಮಾಹಿತಿ ಕಾರ್ಯಾಗಾರ

ಮುಲ್ಕಿ: ರಾಜ್ಯ ಪ್ರಶಸ್ತಿ ಪುರಸ್ಕೃತ ಹಳೆಯಂಗಡಿಯ ಮಹಿಳಾ ಮಂಡಲ ವತಿಯಿಂದ ಈ ಶ್ರಮ ಕಾರ್ಡ್, ಹಾಗೂ ಎನ್‌ಪಿಎಸ್ ಶ್ರಮ ಯೋಗಿ ಮಾನ್ ಧನ್ ಯೋಜನೆಯ ಬಗ್ಗೆ ಮಾಹಿತಿ ಕಾರ್ಯಾಗಾರ ಮಹಿಳಾ ಮಂಡಲದ ಸಭಾಂಗಣದಲ್ಲಿ ನಡೆಯಿತು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ನೋಡಲ್ ಅಧಿಕಾರಿ ಧನಂಜಯ್ ರವರು ಮಾಹಿತಿ ನೀಡಿದರು. ಮಹಿಳಾ ಮಂಡಲದ ಅಧ್ಯಕ್ಷೆ ರೇಷ್ಮಾ, ಸೇವಾ ಪ್ರತಿನಿಧಿ ಸವಿತಾ ಶರತ್ ಬೆಳ್ಳಾಯರು, ರಮ್ಯಾ ವಿಎಲ್ಎ ಪಡುಪಣಂಬೂರು ಉಪಸ್ಥಿತರಿದ್ದರು, ಮಂಡಲದ ಕೋಶಾಧಿಕಾರಿ ರಾಜೇಶ್ವರಿ ಸ್ವಾಗತಿಸಿ, ಕಾರ್ಯದರ್ಶಿ ಪ್ರೇಮಲತಾ ಯೋಗೀಶ್ ವಂದಿಸಿದರು. ಸುಜಾತ ವಾಸುದೇವ್ ನಿರೂಪಿಸಿದರು. ಮಹಿಳಾ ಮಂಡಲದ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು

ಆಟೋ – ಬೈಕ್ ನಡುವೆ ಅಪಘಾತ: ಇಬ್ಬರಿಗೆ ಗಂಭೀರ ಗಾಯ

ಮುಲ್ಕಿ: ಬಪ್ಪನಾಡು ಏಳಿಂಜೆ ಹೆದ್ದಾರಿಯ ಕೊಲಕಾಡಿ ರೈಲ್ವೆ ಗೇಟ್ ಬಳಿ ಬೈಕ್ ಮತ್ತು ಆಟೋ ನಡುವೆ ಅಪಘಾತ ಬುಧವಾರ ರಾತ್ರಿ 8 ಸಂಭವಿಸಿದ್ದು, ಇಬ್ಬರು ಸವಾರರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಾಳುಗಳನ್ನು ಆಟೋ ಚಾಲಕ ಕವತ್ತಾರು ಗುಡ್ಡೆಯಂಗಡಿ ನಿವಾಸಿ ಸಂತೋಷ್ (38) ಮತ್ತು ಬೈಕ್ ಸವಾರ ಕೊಲ್ಲೂರುಪದವು ನಿವಾಸಿ ಕೀರ್ತನ್ ಪೂಜಾರಿ (30) ಎಂದು ಗುರುತಿಸಲಾಗಿದೆ. ಗಾಯಾಳು ಬೈಕ್ ಸವಾರ ಕೀರ್ತನ್ ಮುಲ್ಕಿಯಿಂದ ಕೊಲ್ಲೂರುಪದವು ಕಡೆಗೆ ಹೋಗುತ್ತಿದ್ದು, ಕೊಲಕಾಡಿ ರೈಲ್ವೇ ಗೇಟ್ ಬಳಿ ವಿರುದ್ಧ ದಿಕ್ಕಿನಲ್ಲಿ ಬಂದ ಆಟೋ ಜೊತೆ ಅಪಘಾತ ಸಂಭವಿಸಿದೆ. ಅಪಘಾತದಿಂದ ಎರಡು ವಾಹನಗಳಿಗೆ ಹಾನಿಯಾಗಿದ್ದು, ಇಬ್ಬರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಹಾಗೂ ಮುಲ್ಕಿ ಆಟೋ ರಿಕ್ಷಾ ಚಾಲಕ ಮಾಲಕರ ಸಂಘದ ಅಧ್ಯಕ್ಷ ದೇವರಾಜ ಕೊಲಕಾಡಿ ಭೇಟಿ ನೀಡಿ ಪರಿಶೀಲಿಸಿದ್ದು ಅಪಘಾತಕ್ಕೀಡಾದ ಎರಡು ವಾಹನಗಳನ್ನು ಸ್ಥಳದಿಂದ ತೆರವುಗೊಳಿಸಿದ್ದಾರೆ.

ಕ್ರಾಸ್‌ಗೆ ಒಂದರಂತೆ ಸಿಗ್ನಲ್ ಅಳವಡಿಕೆ | ಹೆಚ್ಚುತ್ತಿದೆ ಟ್ರಾಫಿಕ್ ಜಾಮ್ | ಪರ್ಯಾಯ ಕ್ರಮಕ್ಕೆ ಸೂಚನೆ

ಎನ್‌ಎಚ್ 66ರಲ್ಲಿ ವಾಹನ ವೇಗಕ್ಕೆ ಟ್ರಾಫಿಕ್ ಸಿಗ್ನಲ್ ಅಡ್ಡಿ!

ಸಂಗಮ ವಿಶೇಷ

ಸುರತ್ಕಲ್: ಕರ್ನಾಟಕದ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳಲ್ಲೊಂದು ಆಗಿರುವ ರಾಷ್ಟ್ರೀಯ ಹೆದ್ದಾರಿ ಎನ್‌ಎಚ್–66 ಇದೀಗ ವಾಹನ ಸವಾರರಿಗೆ ಸಂಕಷ್ಟದ ಹೆದ್ದಾರಿಯಾಗಿ ಮಾರ್ಪಟ್ಟಿದೆ.

ಅನಗತ್ಯ ವಿಳಂಬ!

ಒಂದೆಡೆ ಅತಿಯಾದ ವಾಹನ ಓಡಾಟ, ಇದರ ನಡುವೆ ತಡೆರಹಿತ ಸಂಚಾರಕ್ಕಾಗಿ ನಿರ್ಮಿಸಲಾದ ಈ ಹೆದ್ದಾರಿಯಲ್ಲೇ ಕ್ರಾಸ್‌ಗೆ ಒಂದರಂತೆ ಅತಿಯಾದ ಟ್ರಾಫಿಕ್ ಸಿಗ್ನಲ್‌ಗಳ ಅಳವಡಿಕೆ ವಾಹನಗಳ ನಿರಂತರ ಓಟಕ್ಕೆ ತೀವ್ರ ಅಡ್ಡಿಯಾಗಿದೆ. ಸ್ಥಳೀಯವಾಗಿ ಹಲವು ಪ್ರಮುಖ ಜಂಕ್ಷನ್‌ಗಳಲ್ಲಿ ಅಳವಡಿಸಲಾದ ಸಿಗ್ನಲ್ ಲೈಟ್‌ಗಳು ವಾಹನ ಸಂಚಾರವನ್ನು ನಿಯಂತ್ರಿಸುವ ಬದಲು, ಅನಗತ್ಯ ವಿಳಂಬ ಮತ್ತು ಟ್ರಾಫಿಕ್ ಜಾಮ್‌ಗೆ ಕಾರಣವಾಗುತ್ತಿವೆ ಎಂಬುದು ಸಾರ್ವಜನಿಕರ ಆರೋಪ. ವಿಶೇಷವಾಗಿ ಬೆಳಿಗ್ಗೆ ಮತ್ತು ಸಂಜೆ ಪೀಕ್ ಅವಧಿಯಲ್ಲಿ ಸಿಗ್ನಲ್‌ಗಳ ಮುಂದೆ ವಾಹನಗಳ ಸಾಲು ಕಿಲೋ ಮೀಟರ್‌ಗಳಷ್ಟು ಉದ್ದವಾಗುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ. ಇದಕ್ಕೆ ಮುಖ್ಯವಾಗಿ ಕೆಪಿಟಿ,





ನಂತೂರು, ಬೈಕಂಪಾಡಿ, ಮತ್ತಿತರ ಪ್ರದೇಶಗಳು ಉದಾಹರಣೆಯಾಗಿದೆ. ತಜ್ಞರ ಪ್ರಕಾರ, ಹೆದ್ದಾರಿಗಳ ಮುಖ್ಯ ಉದ್ದೇಶವೇ ತಡೆರಹಿತ ವೇಗದ ಸಂಚಾರ. ಈ ನಿಟ್ಟಿನಲ್ಲಿ ಹೆದ್ದಾರಿ ಮಾರ್ಗಸೂಚಿಗಳು ಹೆದ್ದಾರಿಗಳಲ್ಲಿ ಸಿಗ್ನಲ್ ಬಳಕೆಯನ್ನು ಕೇವಲ ಅಗತ್ಯವಿದ್ದಾಗ ಮಾತ್ರ ಅನುಮತಿಸುತ್ತವೆ.

ಸಿಗ್ನಲ್‌ಗಳ ಹೆಚ್ಚಳದಿಂದ ಅಪಘಾತಗಳ ಅಪಾಯವೂ ಏರಿಕೆಯಾಗಿದೆ. ವೇಗವಾಗಿ ಸಾಗುತ್ತಿರುವ ವಾಹನಗಳು ಸಿಗ್ನಲ್ ಬಳಿ ಹಠಾತ್ ಬ್ರೇಕ್ ಹಾಕಬೇಕಾಗುತ್ತಿರುವುದರಿಂದ ಹಿಂಬದಿ ಡಿಕ್ಕಿ ಪ್ರಕರಣಗಳು ಹೆಚ್ಚುತ್ತಿರುವುದು ಗಮನಾರ್ಹ. ಇದರಿಂದಾಗಿ ಹೆದ್ದಾರಿಯ ಸುರಕ್ಷತೆ ಪ್ರಶ್ನಾರ್ಥಕವಾಗಿದೆ.

ಸ್ಥಳೀಯ ನಿವಾಸಿಗಳು ಹಾಗೂ ವಾಹನ ಸವಾರರು ಸರ್ಕಾರಕ್ಕೆ ಪರ್ಯಾಯ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಎಲ್ಲೆಲ್ಲಿ ಸಿಗ್ನಲ್ ಬೇಡಿಕೆ?

ಪಣಂಬೂರು, ಕುಳಾಯಿ, ಇದೀಗ ಕೊಟ್ಟಾರ ಚೌಕಿ, ಮುಲ್ಕಿ ಪಟ್ಟಣಗಳಲ್ಲಿ ಹೊಸದಾಗಿ ಸಿಗ್ನಲ್ ವ್ಯವಸ್ಥೆ ಅಳವಡಿಸುವ ಬಗ್ಗೆ ಸಾರ್ವಜನಿಕ ವಲಯದಿಂದ ಬೇಡಿಕೆ ಕೂಡ ಈಗ ಹೆಚ್ಚುತ್ತಿದೆ.

ಕ್ರಮಕ್ಕೆ ಸಾರ್ವಜನಿಕ ವಲಯದಿಂದ ಆಗ್ರಹ

ಫ್ಲೈ ಓವರ್, ಅಂಡರ್‌ಪಾಸ್, ಸರ್ವಿಸ್ ರಸ್ತೆ ಹಾಗೂ ಯು–ಟರ್ನ್ ನಿಯಂತ್ರಣ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿಯಬೇಕು ಎಂಬುದು ಜನರ ಆಗ್ರಹ. ಒಟ್ಟಿನಲ್ಲಿ, ಹೆದ್ದಾರಿ 66ರಲ್ಲಿ ಸಿಗ್ನಲ್‌ಗಳ ಅತಿಯಾದ ಅಳವಡಿಕೆ ಹೆದ್ದಾರಿಯ ಮೂಲ ಉದ್ದೇಶವನ್ನೇ ಕುಂದಿಸುತ್ತಿದ್ದು, ಸಂಬಂಧಿತ ಅಧಿಕಾರಿಗಳು ತಕ್ಷಣವೇ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಅಂಡರ್ ಪಾಸ್, ಯುಟರ್ನ್ ಇಲ್ಲ!

ಹೆದ್ದಾರಿ 66ರ ವಿಸ್ತರಣೆಯ ಸಂದರ್ಭ ನಗರದ ಒಳಗೆ ಹಾದು ಹೋಗುವ ಪ್ರಮುಖ ಜಂಕ್ಷನ್‌ಗಳಲ್ಲಿ ಅಂಡರ್ ಪಾಸ್ ಅಗತ್ಯವಿತ್ತು. ಪ್ರಮುಖ ಬಡಾವಣೆಗಳ ಎರಡು ಬದಿಗಳಲ್ಲಿ ಸರ್ವಿಸ್ ರಸ್ತೆಯ ಆಗತ್ಯವಿತ್ತು. ಆದರೆ ಹಲವಾರು ಕಾನೂನು ಹೋರಾಟ, ಭೂಸ್ವಾಧೀನದ ಸಮಸ್ಯೆ ಮತ್ತಿತರ ಪ್ರಕ್ರಿಯೆಗಳಿಂದಾಗಿ ಹೆದ್ದಾರಿ ಇಲಾಖೆ ಹೆದ್ದಾರಿಯ ಸ್ಪಷ್ಟ ರೂಪ ರೇಖೆಯ ಚಿತ್ರಣವನ್ನೇ ಬದಲಾಯಿಸಿ ನಗರಕ್ಕೆ ಹೊಂದಿಕೊಂಡಂತೆ ಆಗಲಗಿರಿದಾದ ರಸ್ತೆ, ಏಕಮುಖ ಮೇಲ್ಸೇತುವೆ ಸೇತುವೆ ನಿರ್ಮಿಸಿ ಇಂದು ಹೆದ್ದಾರಿಯಲ್ಲಿನ ತಿರುವಿಗೆ ಒಂದರಂತೆ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸುವದು ಸ್ಥಿತಿಗೆ ಬಂದು ತಲುಪಿದೆ. ಒಟ್ಟಾರೆಯಾಗಿ ಈ ವ್ಯವಸ್ಥೆ ವಾಹನ ಸವಾರರಿಗೆ ಕಿರಿಕಿರಿ ಏನಿಸಿದೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 'ವಾತ್ಸಲ್ಯ' ಮನೆ ಹಸ್ತಾಂತರ

ಸಮಾಜದ ಅಸಮಾನತೆ ದೂರ: ಡಾ. ಮೋಹನ ಆಳ್ವ

ಮೂಡುಬಿದಿರೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ವಾತ್ಸಲ್ಯ ಕಾರ್ಯಕ್ರಮದಡಿಯಲ್ಲಿ ನಿರ್ಮಾಣಗೊಂಡಿರುವ ವಾತ್ಸಲ್ಯ ಮನೆಯನ್ನು ಮೂಡುಬಿದಿರೆ ತಾಲೂಕಿನ ದರೆಗುಡ್ಡೆ ಗ್ರಾಮದ ಗುರುಬೆಟ್ಟು ಮನೆಯ ಚಂದ್ರಾವತಿ ಅವರಿಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಬುಧವಾರ ಹಸ್ತಾಂತರಿಸಿದರು.

ನಂತರ ಮಾತನಾಡಿದ ಆಳ್ವರು ಈ ದೇಶದಲ್ಲಿ ಐಶ್ವರ್ಯವಂತರೂ ಇದ್ದಾರೆ. ಅದೇ ರೀತಿ ಕಡು ಬಡವರು ಕೂಡಾ ಇದ್ದಾರೆ. ಅಕ್ಷರಸ್ಥರು ಇದ್ದಾರೆ. ಅನಕ್ಷರಸ್ಥರೂ ಇದ್ದಾರೆ. ಈ ಅಸಮಾನತೆಯನ್ನು ಹೋಗಲಾಡಿಸಿದವರು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಹಾಗೂ ಹೇಮಾವತಿ ಹೆಗ್ಗಡೆ ಅವರು. ಎಂದರು.

10 ಸಾವಿರ ನೆರವು

ಕೊರೋನಾ ಸಂದರ್ಭ 'ವಾತ್ಸಲ್ಯ' ಕಾರ್ಯಕ್ರಮ ಆರಂಭಿಸಿದಾಗ ಕೆಲ ಕುಟುಂಬಗಳಿಗೆ ದಿನನಿತ್ಯದ ಆಹಾರ ತಯಾರಿ ಮಾಡಲು ಪಾತ್ರೆ, ಬಟ್ಟೆ ಸಮಸ್ಯೆ, ಶೌಚಾಲಯ, ಸ್ನಾನಗೃಹ ಸಮಸ್ಯೆಯಿರುವ ಕುಟುಂಬಗಳು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಮನೆ ಇಲ್ಲದ ನಿರ್ಗತಿಕ ಕುಟುಂಬಗಳಿಗೆ ಮನೆ ರಚನೆ, ವಾತ್ಸಲ್ಯ ಕಿಟ್ ವಿತರಣೆ, ವಾತ್ಸಲ್ಯ ಮಿಕ್ಸ್ ವಿತರಣೆ, ಶೌಚಾಲಯ ಸ್ನಾನಗೃಹ ರಿಪೇರಿಯನ್ನು ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾತ್ತು. ಇದರ ಪ್ರಯೋಜನವನ್ನು ಜನರು ಪಡೆದುಕೊಳ್ಳುತ್ತಿದ್ದಾರೆ ಎಂದ ಅವರು ಬಳಿಕ ರೂ. ಹತ್ತು ಸಾವಿರವನ್ನು ಚಂದ್ರಾವತಿ ಕುಟುಂಬಕ್ಕೆ ನೀಡಿದರು.



> ವಾಸಿಸಲು ಮನೆಯೇ ಇಲ್ಲದ ನಿರ್ಗತಿಕ ಕುಟುಂಬಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನೆರವಾಗುತ್ತಿದೆ. ಅವರ ಬಾಳಿಕೆ ವಾತ್ಸಲ್ಯ ಯೋಜನೆ ಬೆಳಕಾಗುತ್ತಿದೆ.
> ● ಡಾ. ಎಂ. ಮೋಹನ ಆಳ್ವ

ಮೂಡುಬಿದಿರೆ ಚೌಟರ ಅರಮನೆಯ ಕುಲದೀಪ್ ಎಂ., ದರೆಗುಡ್ಡೆ ಗ್ರಾ. ಪಂ. ನ ಮಾಜಿ ಅಧ್ಯಕ್ಷ ಅಶೋಕ್ ಶೆಟ್ಟಿ ಬೇಲೊಟ್ಟು, ಮಾಜಿ ಸದಸ್ಯ ಪ್ರಸಾದ್, ಜನಜಾಗೃತಿ ವೇದಿಕೆಯ ತಾಲೂಕು ಅಧ್ಯಕ್ಷ ಸುಭಾಶ್ಚಂದ್ರ ಚೌಟ, ವಲಯ ಸದಸ್ಯ ಜಗತ್ಪಾಲ ಹೆಗ್ಡೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಜಯಾನಂದ ಕೋಟ್ಯಾನ್, ದಿಲೀಪ್ ಮೇಲ್ವಿಚಾರಕಿ ಯಶೋದಾ, ವಾಲ್ಪಾಡಿ ಒಕ್ಕೂಟದ ಅಧ್ಯಕ್ಷೆ ವಿದ್ಯಾ, ಬೆಳುವಾಯಿ ವಲಯದ ಪ್ರತಿನಿಧಿ ಇದ್ದರು.

ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಧನಂಜಯ ಪ್ರಾಸ್ತಾವಿಕ ನುಡಿಗಳನ್ನಾಡಿ, ತಾಲೂಕಿನ 117 ಕುಟುಂಬಗಳಿಗೆ ಮಾಶಾಸನ ನೀಡಲಾಗುತ್ತಿದೆ. 88 ಕುಟುಂಬಗಳಿಗೆ ವಾತ್ಸಲ್ಯ ಕಿಟ್ ನೀಡಲಾಗಿದೆ. 12 ಕುಟುಂಬಗಳಿಗೆ ವಾತ್ಸಲ್ಯ ಮಿಕ್ಸ್, 6 ಮಂದಿಗೆ ವಾತ್ಸಲ್ಯ ವಿದ್ಯಾನಿಧಿ, 3 ವಾತ್ಸಲ್ಯ ಹಳೆ ಮನೆ ರಿಪೇರಿ, ಒಂದು ಸೋಲಾರ್, ನಳ್ಳಿ ನೀರಿನ ಅಳವಡಿಕೆ, ಹಾಗೂ ಈಗಾಗಲೇ 6 ವಾತ್ಸಲ್ಯ ಮನೆ ರಚಿಸಲಾಗಿದೆ ಎಂದರು. ಜ್ಞಾನ ವಿಕಾಸ ಸಮನ್ವಯಾಧಿಕಾರಿ ವಿದ್ಯಾ ವಂದಿಸಿದರು.

150ಕ್ಕೂ ಅಧಿಕ ಜೋಡಿ ಕೋಣಗಳು ಭಾಗವಹಿಸುವ ನಿರೀಕ್ಷೆ

ನಾಳೆ ಹೊನಲು ಬೆಳಕಿನ ಉಬಾರ್ ಕಂಬಳೋತ್ಸವ

ಪುತ್ತೂರು: ಉಪ್ಪಿನಂಗಡಿ ವಿಜಯ–ವಿಕ್ರಮ ಜೋಡುಕರೆ ಕಂಬಳ ಸಮಿತಿ ಆಶ್ರಯದಲ್ಲಿ 40ನೇ ವರ್ಷದ ಹೊನಲು ಬೆಳಕಿನ 'ಉಬಾರ್ ಕಂಬಳೋತ್ಸವ' ಮಾ.28ಕ್ಕೆ ಉಪ್ಪಿನಂಗಡಿ ಕೂಟೇಲು ನೇತ್ರಾವತಿ ಕಿನಾರೆಯಲ್ಲಿ ನಡೆಯಲಿದೆ.

ಗುರುವಾರ ಕಂಬಳ ಸಮಿತಿಯ ಕಾರ್ಯಾಧ್ಯಕ್ಷ ಅಶೋಕ್ ಕುಮಾರ್ ರೈ ಅರ್ಪಣೆಗುತ್ತು ಮಾಹಿತಿ ನೀಡಿ, ಡಾ.ಡಿ. ವೀರೇಂದ್ರ ಹೆಗ್ಗಡೆ ಕೃಪಾಶೀರ್ವಾದ ಹಾಗೂ ಶಾಸಕ ಅಶೋಕ್ ಕುಮಾರ್ ರೈ ಸಾರಥ್ಯದಲ್ಲಿ ನಡೆಯುವ ಈ ಕಂಬಳದಲ್ಲಿ 150ಕ್ಕೂ ಮಿಕ್ಕಿ ಜೋಡಿ ಕೋಣಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಏ.28ಕ್ಕೆ ಬೆಳಗ್ಗೆ 9.31ಕ್ಕೆ ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನಾಯಕ್ ಉದ್ಘಾಟನೆ ನೆರವೇರಿಸಲಿದ್ದು, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ ಸಭಾ ಅಧ್ಯಕ್ಷತೆ ವಹಿಸಲಿದ್ದಾರೆ. ಉಪ್ಪಿನಂಗಡಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ಲಲಿತಾ, ಉದ್ಯಮಿ ಧನ್ಯಕುಮಾರ್ ಬಿಳಿಯೂರುಗುತ್ತು, ಪ್ರವೀಣ್ ಕುಮಾರ್ ಕದಿಕ್ಕಾರುಬೀಡು ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಸಂಜೆ ಸಭಾ ಕಾರ್ಯಕ್ರಮ ಶಾಸಕ ಅಶೋಕ್ ಕುಮಾರ್ ರೈ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಸಭಾಪತಿ ಯು.ಟಿ. ಖಾದರ್, ಸಚಿವರಾದ ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಸಂಸದ ಕ್ಯಾ. ಬ್ರಿಜೇಶ್ ಚೌಟ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭ ಉದ್ಯಮ ಕ್ಷೇತ್ರದ ಎಸ್.ಕೆ. ಆನಂದ್, ಕಂಬಳ ಕ್ಷೇತ್ರದ ಸದಾಶಿವ ಸಾಮಾಗಿ ಸಂಪಿಗೆದಡಿ, ಕಂಬಳ ಹಾಗೂ ಶಿಲ್ಪಶಾಸ್ತ್ರದ ಸೇವೆಗಾಗಿ ಬೆಳ್ಳಿಪ್ಪಾಡಿ ಕೊಡಮೊಟ್ಯ ಸುರೇಶ್ ಕೃಷ್ಣಯ್ಯ ಆಚಾರ್ಯ ಅವರಿಗೆ ಸನ್ಮಾನ ನಡೆಯಲಿದೆ. ರಾಷ್ಟ್ರೀಯ ಜೂನಿಯರ್ ಕಬಡ್ಡಿ ಆಟಗಾರ ಅಧೀಶ್ ಶೆಟ್ಟಿ ಬರೆಮೇಲು ಅವರಿಗೆ ಅಭಿನಂದನೆ ನಡೆಯಲಿದೆ. ವಿಶೇಷ ಆಕರ್ಷಣೆಯಾಗಿ ಚಲನಚಿತ್ರ ನಟರಾದ ವಸಿಷ್ಠ ಸಿಂಹ, ಸುಕೃತಾ ನಾಗ್, ಅರವಿಂದ ಬೋಳಾರ್ ಭಾಗವಹಿಸಲಿದ್ದಾರೆ ಎಂದರು.

ಕಂಬಳ ಸಮಿತಿ ಗೌರವಾಧ್ಯಕ್ಷ ನಂದಾವರ ಉಮೇಶ್ ಶೆಣೈ, ಪ್ರಧಾನ ಕಾರ್ಯದರ್ಶಿ ಕೇಶವ ಭಂಡಾರಿ ಕೈಪ, ಸಂಘಟನಾ ಕಾರ್ಯದರ್ಶಿ ಯೋಗೀಶ್ ಎಸ್. ಸಾಮಾನಿ, ಗೌರವ ಸಲಹೆಗಾರ ನಿರಂಜನ್ ರೈ ಮಠಂತಬೆಟ್ಟು ಉಪಸ್ಥಿತರಿದ್ದರು.



ಬಹುಮಾನಗಳು

ಕನೆ ಹಲಗೆ ವಿಭಾಗ: ಪ್ರಥಮ- ಒಂದೂವರೆ ಪವನ್, ದ್ವಿತೀಯ- 1 ಪವನ್, ಅಡ್ಡ ಹಲಗೆ ವಿಭಾಗ: ಪ್ರ- 1 ಪವನ್, ದ್ವಿ- ಅರ್ಧ ಪವನ್, ಹಗ್ಗ ಹಿರಿಯ ವಿಭಾಗ: ಪ್ರ- ಒಂದೂವರೆ ಪವನ್, ದ್ವಿ- 1 ಪವನ್, ಹಗ್ಗ ಕಿರಿಯ ವಿಭಾಗ: ಪ್ರ- 1 ಪವನ್, ದ್ವಿ- ಅರ್ಧ ಪವನ್, ನೇಗಿಲು ಹಿರಿಯ ವಿಭಾಗ: ಪ್ರ- ಒಂದೂವರೆ ಪವನ್, ದ್ವಿ- 1 ಪವನ್, ನೇಗಿಲು ಕಿರಿಯ ವಿಭಾಗ: ಪ್ರ- 1 ಪವನ್, ದ್ವಿ- ಅರ್ಧ ಪವನ್, ಕನೆಹಲಗೆ ವಿಭಾಗದಲ್ಲಿ ಭಾಗವಹಿಸಿದ ಎಲ್ಲಾ ಕೋಣಗಳ ಯಜಮಾನರಿಗೆ ವಿಜಯ–ವಿಕ್ರಮ ಟ್ರೋಫಿ ನೀಡಿ ಗೌರವಿಸಲಾಗುವುದು (ಬಹುಮಾನ ನಿಶಾನೆಗೆ ನೀರು ಹಾಯಿಸಿದಲ್ಲಿ ಮಾತ್ರ).

ಗರ್ಭಕಂಠ ಕ್ಯಾನ್ಸರ್ ವಿರುದ್ಧದ ಲಸಿಕೆ ಸುರಕ್ಷಿತ: ವೈದ್ಯಾಧಿಕಾರಿ ಡಾ. ಪಾರ್ವತಿ



ಮಡಿಕೇರಿ: ಭಾರತದ ಮಹಿಳೆಯರಲ್ಲಿ ಹರಡುತ್ತಿರುವ ಕ್ಯಾನ್ಸರ್‌ಗಳಲ್ಲಿ ಎರಡನೇ ಅಪಾಯಕಾರಿ ಗರ್ಭಕಂಠದ ಕ್ಯಾನ್ಸರ್ ತಡೆಯಲು 14 ವರ್ಷದ ಹೆಣ್ಣು ಮಕ್ಕಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕೆ ನೀಡುವ ಕಾರ್ಯಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಚೇರಂಬಾಣೆಯಲ್ಲಿ ಚಾಲನೆ ನೀಡಲಾಯಿತು.

ಆಡಳಿತ ವೈದ್ಯಾಧಿಕಾರಿ ಡಾ. ಪಾರ್ವತಿ ಮಾತನಾಡಿ, ಅಪಾಯಕಾರಿ ಕ್ಯಾನ್ಸರ್ ನಂತಹ ಪಿಡುಗು ತೊಲಗಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ 14 ವರ್ಷದ ಮೇಲ್ಪಟ್ಟು 15 ವರ್ಷದ ಒಳಗಿನ ಎಲ್ಲಾ ಹೆಣ್ಣು ಮಕ್ಕಳನ್ನು ಗುರಿಯಾಗಿಸಿಕೊಂಡು ಉಚಿತವಾಗಿ ಎಚ್‌ಪಿವಿ ಲಸಿಕೆ ನೀಡಲಾಗುತ್ತಿದೆ ಎಂದರು.

ಮಕ್ಕಳ ಭವಿಷ್ಯಕ್ಕಾಗಿ ಎಲ್ಲಾ ಪೋಷಕರು ಈ ಅಭಿಯಾನದಲ್ಲಿ ಇಲಾಖೆಯೊಂದಿಗೆ ಸಹಕಾರ ನೀಡಿ, ಲಸಿಕೆಯನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಕರೆ ನೀಡಿದರು. ಲಸಿಕೆಯಿಂದ ಯಾವುದೇ ತೊಂದರೆ ಆಗುವುದಿಲ್ಲ, ಅತ್ಯುತ್ತಮ ಮತ್ತು ಸುರಕ್ಷಿತ ಗುಣಮಟ್ಟದ ಲಸಿಕೆ ಇದಾಗಿದ್ದು ಯಾವ ರೀತಿಯ ಅಡ್ಡ ಪರಿಣಾಮವೂ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಒಂದು ಲಸಿಕೆ ಕೊಡಿಸಿ ಮಹಿಳೆಯರ ಜೀವ ಉಳಿಸಿ ಹಾಗೂ ತಾಯಂದಿರನ್ನು ಬದುಕಿಸಿ ಎಂದು ಡಾ.ಪಾರ್ವತಿ ಅವರು ಒತ್ತಿ ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ.ನ ಮಿಲನಾ ಮುತ್ತಮ್ಮ, ಬಿಂದು ಹಾಗೂ ಸಮುದಾಯ ಆರೋಗ್ಯ ಅಧಿಕಾರಿ ಕಾರ್ತಿಕ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾದ ಕೃತ್ತಿಕಾ, ಭವಾನಿ, ಚಂದ್ರಕಲಾ, ಪೂರ್ಣಿಮಾ ಹಾಗೂ ಆಶಾ ಕಾರ್ಯಕರ್ತರು ಇದ್ದರು.

ಕೊರಗ ಸಮುದಾಯಕ್ಕೆ ಕೃಷಿಭೂಮಿ, ಡಿಸಿ ಮನ್ನಾ ಜಮೀನು ಹಂಚಿಕೆಗೆ ಮನವಿ

ಬೈಂದೂರು: ಬಜೆಟ್ ಅಧಿವೇಶನನದಲ್ಲಿ ಬೈಂದೂರು ವಿಧಾನ ಸಭಾ ಕ್ಷೇತ್ರದ ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಡಿ.ಸಿ ಮನ್ನಾ ಭೂಮಂಜೂರು ಮಾಡಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯದವರು ಆಗ್ರಹ ಪಡಿಸುತ್ತಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ? ಇದ್ದಲ್ಲಿ ಈ ಬಗ್ಗೆ ಈವರೆಗೆ ಕೈಗೊಂಡ ಕ್ರಮವೇನು ಹಾಗೂ ಭೂಮಿಗಳನ್ನು ಅರ್ಹ ಭೂರಹಿತರಿಗೆ ನೀಡಲು ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರಿಸಿ, ಕರ್ನಾಟಕ ಭೂ ಮಂಜುರಾತಿ ನಿಯಮ 1969ರ ನಿಯಮ 5ರಂತೆ ಶೇ.50% ಜಮೀನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿರಿಸಲು ಅವಕಾಶವಿದ್ದು ನಿಯಮ 7ರಡಿ ಜಮೀನು ಹಂಚಿಕೆ ಮಾಡಲು ಅವಕಾಶವಿದೆ. ಬಾಕಿ ಉಳಿದಿರುವ ಡಿ.ಸಿ ಮನ್ನಾ ಜಮೀನುಗಳನ್ನು ಅರ್ಹರಿಗೆ ಶೀಘ್ರವಾಗಿ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸುವ ಕುರಿತು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಡಿ.ಸಿ ಮನ್ನಾ ಸಮಿತಿಯನ್ನು ರಚಿಸಲಾಗಿರುತ್ತದೆ ಎಂದು ಶಾಸಕರ ಪ್ರಶ್ನೆಗೆ ಉತ್ತರಿಸಿದ್ದಾರೆ.



ಕೃಷಿಭೂಮಿ ಹಕ್ಕು ನೀಡಲು ಮನವಿ

ಜಿಲ್ಲೆಯಲ್ಲಿ ಮೂಲ ನಿವಾಸಿ ಕೊರಗ ಸಮುದಾಯದವರು ಕೃಷಿಭೂಮಿ ಹಕ್ಕಿಗಾಗಿ ಆಗ್ರಹಿಸುತ್ತಿದ್ದು, ಜಿಲ್ಲೆಯಲ್ಲಿ ಕೊರಗ ಸಮುದಾಯದವರು ಕೃಷಿಭೂಮಿ ವಂಚಿತರಾಗಿರುವುದರಿಂದ ಈ ಸಮುದಾಯಕ್ಕೆ ಕೃಷಿಭೂಮಿ ಮಂಜೂರು ಮಾಡಲು ಕೇಳಿರುವ ಉಪ ಪ್ರಶ್ನೆಗೆ ಉತ್ತರಿಸಿದ ಸಚಿವರು ಜಿಲ್ಲೆಯಲ್ಲಿ ಭೂರಹಿತ ಕೊರಗ ಸಮುದಾಯದವರಿಗೆ ಜಮೀನು ಮಂಜೂರಾತಿ ಸಂಬಂಧ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗಿರುತ್ತದೆ ಎಂದು ಉತ್ತರಿಸಿದ್ದಾರೆ.

ಉಡುಪಿ ಜಿಲ್ಲೆಯ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಶಾಸಕರ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರಿಸಿ, ಉಡುಪಿ ಜಿಲ್ಲೆಯ 68 ವಿವಿಧ ಇಲಾಖೆಯಲ್ಲಿ ಎ ವೃಂದದಲ್ಲಿ 143, ಬಿ ವೃಂದದಲ್ಲಿ 399, ಸಿ ವೃಂದದಲ್ಲಿ 3505 ಹಾಗೂ ಡಿ ವೃಂದದಲ್ಲಿ 1561 ಒಟ್ಟು 5608 ಹುದ್ದೆಗಳು ಬಾಕಿ ಇರುತ್ತದೆ. ಗ್ರೂಪ್ ಸಿ ಹಾಗೂ ಗ್ರೂಪ್ ಡಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದ್ದು, ಸರಕಾರದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ 8157 ಹುದ್ದೆಗಳನ್ನು ನೇಮಕಾತಿಯನ್ನು ಪೂರ್ಣಗೊಳಿಸಿದ್ದು, 3081 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

ಕಡಬ ವಿಶ್ವ ಹಿಂದೂ ಪರಿಷದ್‌ನಿಂದ ಶ್ರೀರಾಮ ನವಮಿ ಉತ್ಸವ ಆಚರಣೆ



ಕಡಬ: ವಿಶ್ವ ಹಿಂದೂ ಪರಿಷದ್‌ನ ಕಡಬ ಪ್ರಖಂಡದ ನೇತೃತ್ವದಲ್ಲಿ ಕಡಬ ವಿಶ್ವ ಹಿಂದೂ ಪರಿಷದ್ ಕಾರ್ಯಾಲಯ ಧರ್ಮಶ್ರೀಯಲ್ಲಿ ಶ್ರೀರಾಮ ಸ್ತೋತ್ರ, ಹನುಮಾನ್ ಚಾಲೀಸ ಹಾಗೂ ಭಜನೆ ನಡೆಸುವ ಮೂಲಕ ಶ್ರೀರಾಮ ನವಮಿ ಉತ್ಸವ ಗುರುವಾರ ಜರಗಿತು.

ಉತ್ಸವದ ಪ್ರಯುಕ್ತ ಬೌದ್ಧಿಕ್ ನೀಡಿದ ಮಾತೃಶಕ್ತಿ ಪ್ರಮುಖ್ ಪ್ರೇಮಲತಾ ಕೇಪುಂಜ, ಶ್ರೀರಾಮನು ಮರ್ಯಾದಾ ಪುರುಷೋತ್ತಮ ಎಂದೇ ಹೆಸರಾಗಿದ್ದು, ರಾಮನ ಆದರ್ಶ ಮತ್ತು ತತ್ವಗಳು ನಮಗೆ ದಾರಿದೀಪ. ಧರ್ಮದ ರಕ್ಷಣೆಗಾಗಿ ಕೆಲಸ ಮಾಡುವ ಉತ್ಸಾಹ ಈ ರಾಮ ನವಮಿ ಆಚರಣೆ ಯಿಂದ ಇಮ್ಮಡಿಗೊಳ್ಳಲಿ ಎಂದರು.

ವಿಶ್ವ ಹಿಂದೂ ಪರಿಷದ್‌ನ ಕಡಬ ಪ್ರಖಂಡದ ಗೌರವಾಧ್ಯಕ್ಷ ವಾಸುದೇವ ಭಟ್ ಕಡ್ಯ ಅವರ ನೇತೃತ್ವದಲ್ಲಿ ಭಜನೆ ನಡೆಯಿತು.

ದುರ್ಗಾವಾಹಿನಿ ಸಂಯೋಜಕಿ ದೇವಕಿ ಪೂವಳ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಡಬ 65ನೇ ವರ್ಷದ ಏಕಾಹ ಭಜನೋತ್ಸವ ಸಮಿತಿಯ ಅಧ್ಯಕ್ಷ ದಯಾನಂದ ಗೌಡ ಆರಿಗ, ಕಾರ್ಯದರ್ಶಿ ಜಯಂತ ಕುತ್ಯಾಡಿ, ವಿಶ್ವ ಹಿಂದೂ ಪರಿಷದ್ ಹಾಗೂ ಬಜರಂಗದಳ ಪ್ರಮುಖರಾದ ಪ್ರಮೋದ್ ರೈ ನಂದುಗುರಿ, ಉಮೇಶ್ ಆಚಾರ್ಯ ಗೋಳಿಯಡ್ಕ, ರಕ್ಷಿತ್ ಕೇಪು, ಸುಖೇಶ್ ಕುಮಾರ್, ಪ್ರೇಮಚಂದ್ರ ಅಜ್ಜರಮೂಲೆ, ಸುರೇಶ್ ಕೋಟೆಗುಡ್ಡೆ, ಕಿಶನ್‌ಕುಮಾರ್ ರೈ ಪೆರಿಯಡ್ಕ, ಗಣೇಶ್ ಕಳಾರ, ರಂಜಿತ್ ಅಮೈ, ಕೃಷ್ಣರಾಜ್ ತಲೇಕಿ, ಕೃಷ್ಣ ರೈ ನೆಕ್ಕಿತಡ್ಕ, ಮಧುಕುಮಾರ್ ವಿದ್ಯಾನಗರ ಮತ್ತಿತರರು ಉಪಸ್ಥಿತರಿದ್ದರು.

ಡಾ. ಶಿವರಾಮ ಕಾರಂತ ಬಾಲವನ ಅಭಿವೃದ್ಧಿ ಸಮಿತಿ ರಚನೆ | ಸಮಿತಿಯಲ್ಲಿ ವಿದ್ವಾಂಸರು, ಸಾಹಿತಿಗಳಿಗೆ ಸಿಗದ ಸ್ಥಾನ

ನೂತನ ಬಾಲವನ ಸಮಿತಿಗೆ ಕಾರಂತಾಭಿಮಾನಿಗಳು, ಸಾಹಿತಿಗಳ ಅಸಮಾಧಾನ

ಪುತ್ತೂರು: ನಗರದ ಪರ್ಲಡ್ಕದಲ್ಲಿರುವ ಡಾ. ಶಿವರಾಮ ಕಾರಂತ ಬಾಲವನವನ್ನು ಅಭಿವೃದ್ಧಿ ಪಡಿಸಲು ನೂತನ ಸಮಿತಿಯನ್ನು ರಚಿಸಿ ತಕ್ಷಣದಿಂದ



ಜಾರಿ ಬರುವಂತೆ ಕರ್ನಾಟಕ ಕನ್ನಡ ಸಂಸ್ಕೃತಿ ಇಲಾಖೆಯ ಅಧೀನ ಕಾರ್ಯದರ್ಶಿ ಶಾಂತಲಾ ಎಣದು ಆದೇಶಿಸಿದ್ದಾರೆ.

ನೂತನ ಸಮಿತಿ ಅಧ್ಯಕ್ಷ ರಾಗಿ ಶಾಸಕ ಅಶೋಕ್ ಕುಮಾರ್ ರೈ, ಸದಸ್ಯರಾಗಿ ಪುತ್ತೂರು ಉಪ ವಿಭಾಗದ ಸಹಾಯಕ ಆಯುಕ್ತ ಎ. ಸ್ಟೆಲ್ಲಾ ವರ್ಗೀಸ್, ಬಾಲವನ ಈಜುಕೊಳದ ಮುಖ್ಯಸ್ಥ ಪಿಟ್ಲ ಅಡ್ಯನಡ್ಕದ ವಾರಣಾಸಿ ಫಾರ್ಮ್‌ನ ಪಾರ್ಥ ವಾರಣಾಸಿ, ಪ್ರತಿಮಾ ಹೆಗ್ಡೆ



ಪರ್ಲಡ್ಕ, ದತ್ತಾತ್ರೇಯ ರಾವ್, ನ್ಯಾಯವಾದಿ ಸ್ವಾತಿ ಜಗನ್ನಾಥ ರೈ ಗೆಣಸಿನಕುಮೇರು ಹಾಗೂ ಶಿವಪ್ರಸಾದ್ ರೈ ಮಠಂತಬೆಟ್ಟು ಅವರನ್ನು ನೇಮಕಗೊಳಿಸಿ ಆದೇಶಿಸಲಾಗಿದೆ.

ಸಾಹಿತಿಗಳ ಅಸಮಾಧಾನ...?

ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಡಾ. ಶಿವರಾಮ ಕಾರಂತರ ನಾಡು–ನುಡಿಗೆ ನೀಡಿರುವ ಕೊಡುಗೆ ಅಪಾರ. ಸಾಹಿತ್ಯ, ಯಕ್ಷಗಾನ ಕ್ಷೇತ್ರಗಳಲ್ಲಿ ಅವರು ತನ್ನದೇ ಆದ ಛಾಪನ್ನು ಮೂಡಿಸಿದವರು. ಅವರ ಆಶಯಗಳನ್ನು ಕಾರ್ಯರೂಪಕ್ಕೆ ತರಬೇಕಾದದ್ದು ಅತ್ಯಗತ್ಯ. ಈ ನಿಟ್ಟಿನಲ್ಲಿ ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿನ ಪ್ರಬುದ್ಧರನ್ನು, ವಿದ್ವಾಂಸರನ್ನು ಡಾ. ಶಿವರಾಮ ಕಾರಂತ ಬಾಲವನ ಅಭಿವೃದ್ಧಿ ಸಮಿತಿಗೆ ನೇಮಕ ಮಾಡಬೇಕಾಗಿತ್ತು ಎಂದು ಕಾರಂತರ ಅಭಿಮಾನಿಗಳು, ಸಾಹಿತಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾರಂತರ ಬರಹ, ಜೀವನ, ಆಸಕ್ತಿ, ಜೀವ ವೈವಿಧ್ಯತೆ ಮತ್ತು ಪರಿಸರ, ವಿಜ್ಞಾನ, ಯಕ್ಷಗಾನ, ಚಿತ್ರಕಲೆ ಗೊತ್ತಿಲ್ಲದವರನ್ನು, ರಾಜಕೀಯ ಪಕ್ಷದ ಬೆಂಬಲಿಗರನ್ನು ಸಮಿತಿಗೆ ನೇಮಿಸಿಕೊಳ್ಳಲಾಗಿದೆ. ಈ ಸಮಿತಿಗೆ ಬದ್ಧತೆ, ಮಾನ್ಯತೆ ಇಲ್ಲ ಎಂಬ ಆರೋಪ ಕೇಳಿ ಬಂದಿದೆ.

ಬಾಲವನ ಅಭಿವೃದ್ಧಿ ಮತ್ತು ಸಮಿತಿ ರಚನೆ ಕುರಿತು ಸಹಾಯಕ ಆಯುಕ್ತರಿಗೆ ಲಿಖಿತ ಮನವಿ, ಬೇಡಿಕೆ, ಸಲಹೆ ಪತ್ರ ನೀಡಿದ್ದರೂ ಇದಕ್ಕೆ ಮನ್ನಣೆ ನೀಡದೆ, ಶಾಸಕರ ಶಿಫಾರಸ್ಸಿಗೆ ಸಮ್ಮತಿ ನೀಡುತ್ತಿರುವುದು ಅಕ್ರಮ, ನಿಯಮ ಉಲ್ಲಂಘನೆ ಆಗಿದೆ. ಈ ಕುರಿತು ಲೋಕಾಯುಕ್ತರು ಸ್ವತಃ ಭೇಟಿ ನೀಡಿ ಇಲ್ಲಿನ ಕೊರತೆ, ಸಮಸ್ಯೆಗಳ ಕುರಿತು ತನಿಖೆ ಮಾಡಬೇಕು ಎಂದು ಪುತ್ತೂರಿನ ಕಾರಂತಾಭಿಮಾನಿಗಳು ಒತ್ತಾಯಿಸಿದ್ದಾರೆ.

ಹಣ ಪಾವತಿಯಾಗಿಲ್ಲ!

ನೀರಿನ ಸಮಸ್ಯೆ ಕಾರಣದಿಂದ ಕಾರಂತ ಬಾಲವನದಲ್ಲಿ ಕೊಳವೆಬಾವಿ ಕೊರೆಯಲಾಗಿತ್ತು. ಆದರೆ, ಇದುವರೆಗೂ ಕೊಳವೆ ಬಾವಿಯ ಹಣವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿಲ್ಲ, ಮಕ್ಕಳ ಆಟಿಕೆ ಸಾಮಗ್ರಿಗಳು ತುಕ್ಕು ಹಿಡಿದು ಗಾಯಗಳಾಗುತ್ತಿದ್ದರೂ ಹೊಸ ಆಟಿಕೆ ಅಳವಡಿಸಲಾಗಿಲ್ಲ, ಕಟ್ಟಡದ ಕೆಲ ಭಾಗಗಳು ಕುಸಿಯುವ ಭೀತಿಯಲ್ಲಿದೆ.

ಸುತ್ತಮುತ್ತ

ಹಿಂದೂ ಸಮಾಜೋತ್ಸವ ಸಮಿತಿ ಸಭೆ ಇಂದು

ಕಾಸರಗೋಡು: ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರ ಪ್ರಾಂಗಣದಲ್ಲಿ ಮಾ.27ರಂದು ರಾತ್ರಿ 7 ಕ್ಕೆ ಹಿಂದೂ ಸಮಾಜೋತ್ಸವ ಸಮಿತಿ ಸಭೆ ಜರಗಲಿದೆ. ಸಮಿತಿ ಎಲ್ಲಾ ಪದಾಧಿಕಾರಿಗಳು, ಉಪಸಮಿತಿಗಳ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಳ್ಳಬೇಕೆಂದು ವಿನಂತಿಸಲಾಗಿದೆ. ಕಾಸರಗೋಡು ತಾಳಿಪಡ್ಪು ಮೈದಾನದಲ್ಲಿ ಜರಗಿದ ಹಿಂದು ಏಕತಾ ಸಂಗಮ ಕಾರ್ಯಕ್ರಮದ ಅವಲೋಕನ,ಲೆಕ್ಕಪತ್ರ ಮಂಡನೆ, ಸಮಿತಿ ಬರ್ಕಾಸು ಮತ್ತಿತರ ಕಾಯಕ್ರಮ ನಡೆಯಲಿವೆ.

ಮಾ.28, 29: ಕಾನತ್ತಿಲದಲ್ಲಿ ಧರ್ಮದೈವ ಕೋಲ

ಕಾಸರಗೋಡು: ಬದಿಯಡ್ಕ ಸಮೀಪದ ಕಾನತ್ತಿಲ ಶ್ರೀ ಧೂಮಾವತಿ ದೈವದ ಕೋಲ ಕಾರ್ಯಕ್ರಮವು ಮಾ.28 ಮತ್ತು 29ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಮಾ.28ರಂದು ಮಧ್ಯಾಹ್ನ ಗಣಪತಿ ಪೂಜೆ, ಅಪರಾಹ್ನ 3ಗಂಟೆಗೆ ತಂಬಿಲ, ರಾತ್ರಿ 7.30ಕ್ಕೆ ಶ್ರೀ ದುರ್ಗಾಪರಮೇಶ್ವರಿ ಪೂಜೆ, ಶ್ರೀ ದೈವದ ತೊಡಂಲ್, ಮಾ.29ರಂದು ಬೆಳಗ್ಗೆ 8ಗಂಟೆಗೆ ಶ್ರೀ ಧೂಮಾವತಿ ದೈವದ ನೃತ್ಯ ಸೇವೆ ನಡೆಯಲಿದೆ.

ಮಾ.29ರಿಂದ ಬಜಕೂಡ್ಲು ಶ್ರೀ ದೇವಳ ವಾರ್ಷಿಕ ಉತ್ಸವ

ಪೆರ್ಲ: ಬಜಕೂಡ್ಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ಉತ್ಸವ ಮಾ.29ರಿಂದ ಏ.3ರವರೆಗೆ ಬ್ರಹ್ಮಶ್ರೀ ದೇಲಂಪಾಡಿ ಅನಿರುದ್ಧ ತಂತ್ರಿಗಳ ನೇತೃತ್ವ ನಡೆಯಲಿದೆ. ಮಾ.29ರಂದು ಬೆಳಿಗ್ಗೆ 7.30ಕ್ಕೆ ಬೆಳಗ್ಗಿನ ಪೂಜೆ, 10ರಿಂದ ಗಣಪತಿಹೋಮ, ನಡೆಯಲ್ಲಿ ಪ್ರಾರ್ಥನೆ, ಶ್ರೀ ದೇವರ ರಾಜಾಂಗಣ ಪ್ರವೇಶ, ಧ್ವಜಾರೋಹಣ, ನವಕಾಭಿಷೇಕ, ತುಲಾಭಾರ ಸೇವೆ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ರಾತ್ರಿ 8ಕ್ಕೆ ಶ್ರೀ ಭೂತಬಲಿ, ಕಟ್ಟೆ ಪೂಜೆ, ಮಾ.30ರಂದು ಬೆಳಿಗ್ಗೆ10ಕ್ಕೆ ಶ್ರೀ ಭೂತಬಲಿ, ದರ್ಶನಬಲಿ, ರಾತ್ರಿ 8ಕ್ಕೆ ಶ್ರೀ ಭೂತಬಲಿ ಜರಗಲಿದೆ.ಮಾ.31ರಂದು ಬೆಳಿಗ್ಗೆ 10ಕ್ಕೆ ಶ್ರೀ ಭೂತಬಲಿ ಉತ್ಸವ, ರಾತ್ರಿ 8ಕ್ಕೆ ದೀಪೋತ್ಸವ, ಶ್ರೀ ಭೂತಬಲಿ, ಪಡು ಭಾಗಕ್ಕೆ ಸವಾರಿ, ಕಟ್ಟೆಪೂಜೆ ಜರಗಲಿದೆ. ಏ.1ರಂದು ಶ್ರೀಭೂತ ಬಲಿ, ಅಯ್ಯಂಗಾಯಿ ದರ್ಶನಬಲಿ, ರಾತ್ರಿ 9ಕ್ಕೆ ಶ್ರೀ ಭೂತಬಲಿ, ಕಟ್ಟೆ ಪೂಜೆ, ರಥೋತ್ಸವ, ಸುಡುಮದ್ದು ಪ್ರದರ್ಶನ, ಶಯನ, ಏ.2ರಂದು ಬೆಳಿಗ್ಗೆ ಕವಾಟೋದ್ಘಾಟನೆ, ಜಲದ್ರೋಣಿ ಪೂಜೆ, ಅಭಿಷೇಕ, ಹಣ್ಣುಕಾಯಿ ಸಮರ್ಪಣೆ, ಯಾತ್ರಾ ಹೋಮ, 1.30ಕ್ಕೆ ಶ್ರೀಬಲಿ, ಕಟ್ಟೆಪೂಜೆ, ಅವಭೃತ ಸ್ನಾನ, ದರ್ಶನಬಲಿ, ರಾಜಾಂಗಣದಲ್ಲಿ ಶ್ರೀಮುಡಿ ಗಂಧ ಪ್ರಸಾದ ವಿತರಣೆ, ಧ್ವಜಾವರೋಹಣ, ಮಂತ್ರಾಕ್ಷತೆ, ಏ.3ರಂದು ಬೆಳಗ್ಗೆ 9ಕ್ಕೆ ಶ್ರೀ ವ್ಯಾಘ್ರ ದೈವ (ಪಿಲಿಚಾಮುಂಡಿ) ನೇಮ ನಡೆಯಲಿದೆ. ಮಾ.31ರಂದು ಮಧ್ಯಾಹ್ನ 12 ಗಂಟೆಯಿಂದ 'ಸಮರ ಸೌಗಂಧಿಕಾ' ಎಂಬ ಯಕ್ಷಗಾನ ತಾಳಮದ್ದಳೆ, ಏ.1ರಂದು ರಾತ್ರಿ 7.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಏ.2ರಂದು ಮಧ್ಯಾಹ್ನ 1.30ರಿಂದ ಭಕ್ತಿಸಂಗೀತ ಕಾರ್ಯಕ್ರಮ ನಡೆಯಲಿದೆ.

ಏ.5: ಶ್ರೀ ಧೂಮಾವತಿ ದೈವಸ್ಥಾನದಲ್ಲಿ ಧರ್ಮನೇಮ

ಕಾಸರಗೋಡು: ನಗರದ ಸಮೀಪ ನುಳ್ಳಿಪ್ಪಾಡಿ ಅಣಂಗೂರು ಶ್ರೀ ಧೂಮಾವತಿ ದೈವಸ್ಥಾನದಲ್ಲಿ ಏ. 5ರಂದು ಶ್ರೀ ಧೂಮಾವತಿ ದೈವದ ಧರ್ಮ ನೇಮ ನಡೆಯಲಿದೆ. ಏ.4ರಂದು ರಾತ್ರಿ 7 ಗಂಟೆಗೆ ಗುಳಿಗನ ಕೋಲ, 8ಕ್ಕೆ ಯಕ್ಷಗಾನ ಬಯಲಾಟ ನಡೆಯಲಿದೆ. ಏ.5 ರಂದು ಬೆಳಿಗ್ಗೆ 9 ರಿಂದ ಧೂಮಾವತಿ ದೈವಕೋಲ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 4ಕ್ಕೆ ಪೊಟ್ಟ ದೈವದ ಕೋಲ, ರಾತ್ರಿ 8ಕ್ಕೆ ಕಾಯರ್ಪಳ್ಳ ಗುಳಿಗ ಬನದಲ್ಲಿ ಗುಳಿಗನ ಕೋಲದೊಂದಿಗೆ ಧರ್ಮ ನೇಮ ಜರಗಲಿದೆ.

ವಿಶ್ವ ಜಲದಿನಾಚರಣೆ: ತಣ್ಣೀರು ಚಪ್ಪರ ಸ್ಥಾಪನೆ

ಕಾಸರಗೋಡು: ವಿಶ್ವ ಜಲ ದಿನಾಚರಣೆಯ ಅಂಗವಾಗಿ ಕೇರಳ ವಾಟರ್ ಆಥೋರಿಟಿ ಎಂಪ್ಲೋಯೀಸ್ ಯೂನಿಯನ್ (ಸಿಐಟಿಯು) ಕಾಸರಗೋಡು ಮತ್ತು ಕಾಞಂಗಾಡು ಬ್ರಾಂಚ್ ಸಮಿತಿಗಳ ನೇತೃತ್ವದಲ್ಲಿ ಗ್ರಾಹಕರಿಗೆ ಮತ್ತು ನೌಕರರಿಗೆ ತಣ್ಣೀರು ಚಪ್ಪರ ಸ್ಥಾಪಿಸಲಾಯಿತು.
ಕಾಸರಗೋಡು ಬ್ರಾಂಚ್‌ನ ನೇತೃತ್ವದಲ್ಲಿ ವಿದ್ಯಾನಗರ ಸೆಕ್ಷನ್ ಪರಿಸರದಲ್ಲಿ ಸ್ಥಾಪಿಸಿದ ತಣ್ಣೀರು ಚಪ್ಪರವನ್ನು ನಗರಸಭಾ ಕೌನ್ಸಿಲರ್ ಅನಿಲ್ ಚೆನ್ನಿಕ್ಕರ ಉದ್ಘಾಟಿಸಿದರು. ಬ್ರಾಂಚ್ ಅಧ್ಯಕ್ಷ ಕೆ.ಎ.ವಿನೋದ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೆ.ಸತೀಶ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ಕೆ.ವಿನೋದ್, ಎಸ್.ಗೋವಿಂದರಾಜ್, ವಿ.ಎಂ.ಬಿನುಕುಮಾರ್ ಮಾತನಾಡಿದರು. ಚೆರುವತ್ತೂರು ಸೆಕ್ಷನ್ ಕಚೇರಿ ಪರಿಸರದಲ್ಲಿ ಕಾಞಂಗಾಡು ಬ್ರಾಂಚ್ ಸಮಿತಿಯ ನೇತೃತ್ವದಲ್ಲಿ ಸ್ಥಾಪಿಸಲಾದ ತಣ್ಣೀರು ಚಪ್ಪರವನ್ನು ಕೆ.ವಿ.ಶಿಜು ಉದ್ಘಾಟಿಸಿದರು.

ವಿಧಾನಸಭಾ ಚುನಾವಣೆ | ಅಂಚೆ ಮತಪತ್ರಕ್ಕಾಗಿ 1219 ಅರ್ಜಿಗಳು ಸಲ್ಲಿಕೆ
ಕಾಸರಗೋಡು ಜಿಲ್ಲಾಮಟ್ಟದ ಕ್ಲಿಯರಿಂಗ್ ಸೆಂಟರ್ ಚುರುಕು



ಕಾಸರಗೋಡು: ವಿಧಾನಸಭಾ ಚುನಾವಣೆ ಅಂಗವಾಗಿ ಅಂಚೆ ಮತಪತ್ರಕ್ಕೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಫಾರ್ಮ್ 12ಡಿ ಯಲ್ಲಿ 1219 ಅರ್ಜಿಗಳನ್ನು ಈಗಾಗಲೇ ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳಿಗೆ ಸಲ್ಲಿಸಲಾಗಿದೆ.
ಚುನಾವಣೆಯ ಹಿನ್ನೆಲೆಯಲ್ಲಿ ಅಗತ್ಯ ಸೇವಾ ವಿಭಾಗಗಳಲ್ಲಿ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವ ಅಧಿಕಾರಿಗಳು ಫಾರ್ಮ್ 12ಡಿ ಅನ್ನು ಭರ್ತಿ ಮಾಡುವ ಮೂಲಕ ಅಂಚೆ ಮತಪತ್ರಕ್ಕಾಗಿ ಅರ್ಜಿ ಸಲ್ಲಿಸಬಹುದು. ಆದರೆ ಚುನಾವಣಾ ಕರ್ತವ್ಯದಲ್ಲಿರುವ ಅಧಿಕಾರಿಗಳು ಮತ್ತು ವಿವಿಧ ಸರಕಾರಿ ಇಲಾಖೆಗಳ ಅಧಿಕಾರಿಗಳು ಫಾರ್ಮ್ 12 ಅನ್ನು ಭರ್ತಿ ಮಾಡುವ ಮೂಲಕ ಅಂಚೆ ಮತಪತ್ರಕ್ಕೆ ಅರ್ಜಿ ಸಲ್ಲಿಸಬಹುದು. ಜಿಲ್ಲೆಯಲ್ಲಿ ಅಂಚೆ ಮತಪತ್ರ ಅರ್ಜಿಗಳನ್ನು ಸ್ವೀಕರಿಸಲು ಸ್ಥಾಪಿಸಲಾದ ಜಿಲ್ಲಾ ಮಟ್ಟದ ಕ್ಲಿಯರಿಂಗ್ ಸೆಂಟರ್ ಮೂಲಕ ಈ ಯೋಜನೆಗಳನ್ನು ಸಂಯೋಜಿಸಲಾಗುತ್ತಿದೆ.
ಜಿಲ್ಲಾ ಮಟ್ಟದ ಕ್ಲಿಯರಿಂಗ್ ಸೆಂಟರ್‌ನಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಪ್ರಾಥಮಿಕ ಪರಿಶೀಲನೆಯ ನಂತರ ಇಲೆಕ್ಟ್ರೋನ್ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಲಾಗುತ್ತದೆ ಮತ್ತು ನಂತರ ಅಂತಿಮ ಪ್ರಕ್ರಿಯೆಗಾಗಿ ಆಯಾ ವಿಧಾನ ಸಭಾ ಕ್ಷೇತ್ರದ ಚುನಾವಣಾ ಅಧಿಕಾರಿಗಳಿಗೆ ಸಲ್ಲಿಸಲಾಗುತ್ತದೆ. ಜಿಲ್ಲೆಯ ಎಲ್ಲಾ ಐದು ಕ್ಷೇತ್ರಗಳ ಮಾಹಿತಿಯನ್ನು ಈ ರೀತಿ ಸಂಗ್ರಹಿಸಲಾಗಿದೆ.
12 ಡಿ ವಿಭಾಗದಲ್ಲಿ ಮಂಜೇಶ್ವರ ಕ್ಷೇತ್ರದಲ್ಲಿ 13, ಕಾಸರಗೋಡು ಕ್ಷೇತ್ರದಲ್ಲಿ 59, ಉದುಮದಲ್ಲಿ 198, ಕಾಞಂಗಾಡಿನಲ್ಲಿ 331 ಮತ್ತು ತೃಕ್ಕರೀಪ್ಪುರದಲ್ಲಿ 618 ಅರ್ಜಿಗಳನ್ನು ಇಲ್ಲಿಯವರೆಗೆ ಸ್ವೀಕರಿಸಲಾಗಿದೆ.
ಇತರ ಜಿಲ್ಲೆಗಳಿಗೆ ಅರ್ಜಿಗಳನ್ನು ಕಳುಹಿಸಲು ವಿಶೇಷ ಕ್ಲಿಯರೆನ್ಸ್ ವ್ಯವಸ್ಥೆಯನ್ನು ಮಾಡಲಾಗಿದೆ. ಕಣ್ಣೂರು, ಕೋಝಿಕ್ಕೋಡ್ ಮತ್ತು ವಯನಾಡು ಜಿಲ್ಲೆಗಳಿಗೆ 52 ಅರ್ಜಿಗಳನ್ನು ಕಣ್ಣೂರಿನ ಪ್ರಾದೇಶಿಕ ಮಟ್ಟದ ಕ್ಲಿಯರೆನ್ಸ್ ಕೇಂದ್ರಕ್ಕೆ ಮತ್ತು ಮಲಪ್ಪುರಂನಿಂದ ತಿರುವನಂತಪುರವರೆಗಿನ ಜಿಲ್ಲೆಗಳಿಗೆ ಅರ್ಜಿಗಳನ್ನು ಎರ್ನಾಕುಳಂನಲ್ಲಿರುವ ರಾಜ್ಯಮಟ್ಟದ ಕ್ಲಿಯರೆನ್ಸ್ ಕೇಂದ್ರಕ್ಕೆ ರವಾನಿಸಲಾಗುವುದೆಂದು ಕಾಸರಗೋಡು ಅಂಚೆ ಮತಪತ್ರ ನೋಡಲ್ ಅಧಿಕಾರಿ ಹೇಳಿದ್ದಾರೆ.
ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಜಿಲ್ಲಾ ಮಟ್ಟದ ಕ್ಲಿಯರಿಂಗ್ ಸೆಂಟರ್‌ನಲ್ಲಿ 33 ಮಂದಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆಂತರಿಕ ಜಾಗೃತ ಅಧಿಕಾರಿ ಟಿ.ಟಿ.ಸುರೇಂದ್ರನ್ ಅಂಚೆ ಮತಪತ್ರದ ಉಸ್ತುವಾರಿ ವಹಿಸಿರುವ ನೋಡಲ್ ಅಧಿಕಾರಿಯಾಗಿದ್ದಾರೆ. ಜಿಲ್ಲಾ ಮಟ್ಟದ ಕ್ಲಿಯರಿಂಗ್ ಸೆಂಟರ್ ಜೂನಿಯರ್ ಸೂಪರಿಂಟೆಂಡೆಂಟ್ ಪಿ.ವಿ.ಶಾಜಿ ಅವರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಮತದಾನದ ಅವಕಾಶ ಯಾರೂ ಕಳೆದುಕೊಳ್ಳದಂತೆ ನೋಡಿಕೊಳ್ಳಲು 1951ರ ಜನತಾ ಪ್ರಾತಿನಿಧ್ಯ ಕಾಯ್ದೆ 1961ರ ಚುನಾವಣಾ ನಡವಳಿಕೆ ನಿಯಮಗಳು – ಭಾರತ ಚುನಾವಣಾ ಆಯೋಗದ ವಿವಿಧ ಆದೇಶಗಳ ಆಧಾರದ ಮೇಲೆ ಅಂಚೆ ಮತಪತ್ರ ವ್ಯವಸ್ಥೆ ಕಡ್ಡಾಯ ಜಾರಿಗೊಳಿಸಲಾಗಿದೆ ಎಂದು ನೋಡಲ್ ಅಧಿಕಾರಿಗಳು ತಿಳಿಸಿದ್ದಾರೆ.

ಫಾರ್ಮ್ 12 ಅರ್ಜಿ


ಮತದಾನ ಕರ್ತವ್ಯದಲ್ಲಿರುವ ಮತಗಟ್ಟೆ ಅಧಿಕಾರಿಗಳು ಮತ್ತು ಮತಗಟ್ಟೆ ಅಧಿಕಾರಿಗಳಲ್ಲದವರಿಂದ ಮತದಾನ ನೋಂದಣಿಗಾಗಿ ಫಾರ್ಮ್ 12 ಅರ್ಜಿಗಳನ್ನು ಕ್ಲಿಯರೆನ್ಸ್ ಕೇಂದ್ರ ಮೂಲಕ ಪ್ರಕ್ರಿಯೆಗಾಗಿ ಸಲ್ಲಿಸಲಾಗುತ್ತಿದೆ. ಆದರಂತೆ ಗುರುವಾರ ಜಿಲ್ಲಾ ಮಟ್ಟದ ಕ್ಲಿಯರೆನ್ಸ್ ಕೇಂದ್ರದಲ್ಲಿ 945 ಫಾರ್ಮ್ 12 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಚುನಾವಣಾ ಆಯೋಗದ ಸೂಚನೆ ಪ್ರಕಾರ ಮುಂದಿನ ದಿನಗಳಲ್ಲಿ ಫಾರ್ಮ್ 12 ಅರ್ಜಿ ಸ್ವೀಕಾರ ಮುಂದುವರಿಯಲಿದೆ ಎಂದು ಅಂಚೆ ಮತಪತ್ರ ನೋಡಲ್ ಅಧಿಕಾರಿ ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಪೇರಾಲ್‌ನಲ್ಲಿ ಭಂಡಾರ ಕೋಟ್ಯದ ಪುನರ್ ಪ್ರತಿಷ್ಠಾಪನೆ, ವಿಷ್ಣು ಆಸ್ರಗೆ ಸನ್ಮಾನ



ಕುಂಬಳೆ: ಶ್ರೀ ಕ್ಷೇತ್ರ ಪೇರಾಲ್ ಭಂಡಾರ ಕೋಟ್ಯದ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮ ಕುಟುಂಬಸ್ಥರು, ಗ್ರಾಮಸ್ಥರು ಹಾಗೂ ಭಕ್ತರ ಸಹಕಾರದಿಂದ ಭಕ್ತಿಭಾವಪೂರ್ಣವಾಗಿ ಹಾಗೂ ಯಶಸ್ವಿಯಾಗಿ ವಿವಿಧ ಕಾರ್ಯಕ್ರಮಗಳೊಂದಿಗೆ ನೆರವೇರಿತು.
ಕಾರ್ಯಕ್ರಮದ ಅಂಗವಾಗಿ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರಿಗೆ ಗೌರವಪೂರ್ವಕ ಸನ್ಮಾನ ಸಲ್ಲಿಸಲಾಯಿತು. ಈ ಸಂದರ್ಭ ನಡೆದ ಧಾರ್ಮಿಕ ಸಭೆಯಲ್ಲಿ ಶ್ರೀ ಕ್ಷೇತ್ರದ ಗೌರವಾಧ್ಯಕ್ಷ ರಾಮಕೃಷ್ಣ ಆಳ್ವ ಬಳಕ್ಕಿಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಉಪಸ್ಥಿತರಿದ್ದರು. ಶ್ರೀ ಕ್ಷೇತ್ರ ಪೇರಾಲ್‌ನ ಪ್ರಧಾನ ಅರ್ಚಕ ಬಟ್ಯಪ್ಪ ಪೂಜಾರಿ, ಪುತ್ತೂರು ಕೊಟ್ಯ ದೈವಸ್ಥಾನದ ನಾರಾಯಣ ಪೂಜಾರಿ, ಬಂಬ್ರಾಣ ಕೋಟ್ಯದ ಮನೆ ಕ್ಷೇತ್ರದ ನಾರಾಯಣ ಪೂಜಾರಿ, ಪ್ರದೀಪ್ ಮಾಸ್ಟರ್ ಕಣ್ಣೂರು, ಭಾರತಿ ಮುಂತಾದವರು ಪಾಲ್ಗೊಂಡಿದ್ದರು.
ಅಲ್ಲದೆ ವಿವಿಧ ತರವಾಡು ಕ್ಷೇತ್ರಗಳ ಪಾತ್ರಿಗಳು, ಮುಖ್ಯಸ್ಥರು ಈ ಸಂದರ್ಭ ಉಪಸ್ಥಿತರಿದ್ದರು. ಶ್ರೀ ಕ್ಷೇತ್ರದ ಅಧ್ಯಕ್ಷ ರಾಮಕೃಷ್ಣ ಎಸ್. ಸ್ವಾಗತಿಸಿ, ಉಪಾಧ್ಯಕ್ಷ ರಾಜು ಬಿ. ವಂದಿಸಿದರು.

ಮಲ್ಲ ಪುಂಜಂಗೋಡು ಯಾದವ ತರವಾಡು ಮನೆಯ ಗೃಹಪ್ರವೇಶ, ಪ್ರತಿಷ್ಠಾ ಬ್ರಹ್ಮಕಲಶ



ಬದಿಯಡ್ಕ: ಶ್ರೀ ಮಾಞಾಳಮ್ಮ ವಿಷ್ಣುಮೂರ್ತಿ ದೈವಸ್ಥಾನ ಯಾದವ ತರವಾಡು ಪುಂಜಂಗೋಡು ಮಲ್ಲ ಇದರ ನೂತನ ತರವಾಡು ಮನೆಯ ಗೃಹಪ್ರವೇಶ, ಪುನರ್ ಪ್ರತಿಷ್ಠಾ ಬ್ರಹ್ಮಕಲಶ, ಶ್ರೀ ದೈವಗಳ ನೃತ್ಯ ಕಾರ್ಯಕ್ರಮ ಗುರುವಾರ ಆರಂಭವಾಯಿತು.

ಹಸಿರು ಹೊರೆಕಾಣಿಕೆ

ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಿಂದ ಹಸಿರುವಾಣಿ ಹೊರೆಕಾಣಿಕೆಯ ಭವ್ಯ ಶೋಭಾಯಾತ್ರೆ, ಉಗ್ರಾಣ ಮುಹೂರ್ತ ನಡೆಯಿತು. ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮೆನೇಜಿಂಗ್ ಟ್ರಸ್ಟಿ ಸತ್ಯನಾರಾಯಣ ಭಟ್ ದೀಪ ಬೆಳಗಿಸಿ ಶುಭಕೋರಿದರು. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.
ಸಂಜೆ ಬ್ರಹ್ಮಶ್ರೀ ವೇ.ಮೂ. ಕುಂಟಾರು ವಾಸುದೇವ ತಂತ್ರಿ, ಬ್ರಹ್ಮಶ್ರೀ ವೇ.ಮೂ. ಕುಂಟಾರು ರವೀಶ ತಂತ್ರಿ ಅವರನ್ನು ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ರಾತ್ರಿ ದೇವತಾ ಪ್ರಾರ್ಥನೆ, ಪ್ರಾಸಾದ ಶುದ್ಧಿ, ಪುಣ್ಯಾಹ ವಾಚನ, ಸ್ಥಳಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಬಲಿ ಕಾರ್ಯಕ್ರಮ ನಡೆಯಿತು.

ಇಂದು ತರವಾಡು ಗೃಹಪ್ರವೇಶ

ಮಾ.27ರಂದು ಬೆಳಗ್ಗೆ 6 ಗಂಟೆಗೆ ಗಣಪತಿ ಹೋಮ, 10 ಗಂಟೆಗೆ ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಆಗಮನ, ಪೂರ್ಣ ಕುಂಭ ಸ್ವಾಗತ, 10.11ರಿಂದ 11.24ರ ಒಳಗೆ ನಡೆಯುವ ವೃಷಭ ಲಗ್ನ ಶುಭ ಮುಹೂರ್ತದಲ್ಲಿ ತರವಾಡು ಗೃಹಪ್ರವೇಶ, ಶ್ರೀ ಮಾಞಾಳಮ್ಮ, ಶ್ರೀ ವಿಷ್ಣುಮೂರ್ತಿ, ಶ್ರೀ ಕೊರತ್ತಿ ಅಮ್ಮ, ಶ್ರೀ ಗುಳಿಗ, ಶ್ರೀ ಕುರವನ್ ದೈವಗಳ ಪ್ರತಿಷ್ಠೆ ಬ್ರಹ್ಮಕಲಶ, ಪ್ರಸಾಸ ವಿತರಣೆ, ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ.

ಅಡೂರು ಶ್ರೀ ದೇವಸ್ಥಾನದಲ್ಲಿ ಕೂಡ್ಲು ರಜತ ರಂಗದ ಹತ್ತನೇ ಕಾರ್ಯಕ್ರಮ



ಕಾಸರಗೋಡು: ಕೂಡ್ಲುಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದ ಬೆಳ್ಳಿಹಬ್ಬ ಸಂಬಂಧ ಸರಣಿ ರಜತ ರಂಗದ ಹತ್ತನೇ ಕಾರ್ಯಕ್ರಮ ಅಡೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ಬ್ರಹ್ಮಕಲಶೋತ್ಸವ ವೇಳೆ ಜರಗಿತು. ರಜತರಂಗ ಅಧ್ಯಕ್ಷ ಡಾ.ಹರಿಕಿರಣ್ ಬಂಗೇರ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಉದ್ಯಮಿ ಎಡಕ್ಕಾನ ಮಹಾಬಲೇಶ್ವರ ಭಟ್ ಮುಖ್ಯ ಅತಿಥಿಯಾಗಿದ್ದರು.
ಹಿರಿಯ ಚೇತನರಾದ ಅಡೂರು ಶಿವ ಮದ್ದಳೆಗಾರ ಮತ್ತು ಸೂರಿಕುಮೇರು ಗೋವಿಂದ ಭಟ್ ಅವರ ಕುರಿತು ಶೇಣಿ ವೇಣುಗೋಪಾಲ ಭಟ್ ಸಂಸ್ಮರಣೆ ಭಾಷಣ ಮಾಡಿದರು.

ಗೌರವಾರ್ಪಣೆ

ಕಾರ್ಯಕ್ರಮದಲ್ಲಿ ಕಲಾವಿದ ಅಡೂರು ಲಕ್ಷ್ಮೀನಾರಾಯಣ ಅವರಿಗೆ ಗೌರವಾರ್ಪಣೆ ನಡೆಯಿತು.
ಅಡೂರು ದೇವಾಲಯ ಉತ್ಸವ ಸಮಿತಿ ಉಪಾಧ್ಯಕ್ಷ ಬೆಳ್ಳಿಪ್ಪಾಡಿ ಸದಾಶಿವ ರೈ ಉಪಸ್ಥಿತರಿದ್ದರು. ತಲ್ಪಣಾಜೆ ವೆಂಕಟ್ರಮಣ ಭಟ್ ಸ್ವಾಗತಿಸಿ, ಕೃಷ್ಣಮೂರ್ತಿ ಅಡಿಗ ಕೂಡ್ಲು ವಂದಿಸಿದರು. ಪತ್ರಕರ್ತ ವೀಜಿ ಕಾಸರಗೋಡು ನಿರೂಪಿಸಿದರು.

ಯಕ್ಷಗಾನ ಪ್ರದರ್ಶನ

ತರಬೇತಿ ಕೇಂದ್ರದ ಸದಸ್ಯರಿಂದ 'ಕಿರಾತಾರ್ಜುನ' ಯಕ್ಷಗಾನ ಪ್ರದರ್ಶನ ನಡೆಯಿತು.

ಮಂಜೇಶ್ವರದಲ್ಲಿ ರಾಷ್ಟ್ರಕವಿ ಗೋವಿಂದ ಪೈ 143ನೇ ಜನ್ಮದಿನಾಚರಣೆ, ಸನ್ಮಾನ



ಮಂಜೇಶ್ವರ: ಕನ್ನಡದ ಪ್ರಥಮ ರಾಷ್ಟ್ರಕವಿ, ಬಹುಭಾಷಾ ವಿದ್ವಾಂಸ, ಸಂಶೋಧಕ ಮಂಜೇಶ್ವರ ಗೋವಿಂದ ಪೈಗಳ 143ನೇ ಜನ್ಮದಿನಾಚರಣೆ ಮಂಜೇಶ್ವರ ಗಿಳಿವಿಂಡುವಿನಲ್ಲಿ ಜರಗಿತು. ಗೋವಿಂದ ಪೈ ಸ್ಮಾರಕ ಸಮಿತಿಯ ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಾಹಿತಿಗಳು, ಕಲಾವಿದರು ಭಾಗವಹಿಸಿದ್ದರು.
ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಸದಸ್ಯ, ಬೆಂಗಳೂರಿನ ರಂಗಶಂಕರ ಸಂಸ್ಥೆಯ ಕಲಾವಿದ ಮುದ್ದಣ್ಣ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಗೋವಿಂದ ಪೈ ಪ್ರತಿಮೆಗೆ ಹಾರಾರ್ಪಣೆಗೈದರು. ಸ್ಮಾರಕ ಸಮಿತಿಯ ಅಧ್ಯಕ್ಷ, ಹಿರಿಯ ರಂಗಕರ್ಮಿ ಉಮೇಶ್ ಎಂ.ಸಾಲ್ಯಾನ್ ಅಧ್ಯಕ್ಷತೆ ವಹಿಸಿ, ಸಮಕಾಲೀನ ಸಂದರ್ಭ ಪೈಗಳ ಸಾಹಿತ್ಯದ ಮಹತ್ವ, ಸ್ಮಾರಕ ಸಮಿತಿ ಕೆಲಸಕಾರ್ಯಗಳ ಕುರಿತು ಮಾತನಾಡಿದರು.
ಕವಿ, ಪತ್ರಕರ್ತ, ಸಾಹಿತಿ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಕಾರ್ಯಕ್ರಮ ಉದ್ಘಾಟಿಸಿ, ಗೋವಿಂದ ಪೈಗಳ ಕಾವ್ಯ ಮತ್ತು ಸಂಶೋಧನಾ ಲೇಖನಗಳ ಕುರಿತು ಬೆಳಕು ಚೆಲ್ಲಿದರು. ಕವಿ ಕಯ್ಯಾರರು ಪೈಗಳ ಬಗ್ಗೆ ಬರೆದ ರಾಷ್ಟ್ರಕವಿ ಕವನವನ್ನು ಅವರು ವಾಚಿಸಿದರು. ಬಹುಭಾಷಾ ಕವಿ ರವೀಂದ್ರನ್ ಪಾಡಿ ಮಲೆಯಾಳ ಕವಿತೆಗಳನ್ನು ಪ್ರಸ್ತುತಪಡಿಸಿದರು.

ಕವಿತೆ ವಾಚನ

ಕವಯಿತ್ರಿ ಶಶಿಕಲಾ ಕುಂಬಳೆ ಅವರು ಗೋವಿಂದ ಪೈಗಳ ವ್ಯಕ್ತಿತ್ವ ಮತ್ತು ಕ್ರಿಯಾಶಕ್ತಿಯನ್ನು ಅನಾವರಣಗೊಳಿಸುವ ಸ್ವರಚಿತ ಕವಿತೆ ವಾಚಿಸಿದರು. ಗಡಿನಾಡ ಗಾಯಕ ದಿವಾಕರ ಪಿ. ಅಶೋಕನಗರ ಅವರಿಂದ ಗೋವಿಂದ ಪೈ ಗೀತೆಗಳ ಗಾಯನ ನೆರವೇರಿತು.

ಮುದ್ದಣ್ಣಗೆ ಸನ್ಮಾನ

ಮುಖ್ಯ ಅತಿಥಿಯಾಗಿದ್ದ ಮುದ್ದಣ್ಣ ಅವರನ್ನು ಗೋವಿಂದ ಪೈ ಸ್ಮಾರಕ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.
ಸ್ಮಾರಕ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿಗಾರ್ ಸ್ವಾಗತಿಸಿ, ಸಮಿತಿ ಸದಸ್ಯ ಕಮಲಾಕ್ಷ ಕನಿಲ ವಂದಿಸಿದರು.

ಮಾ.30ರಿಂದ ಕುಂಬಳೆ ಆರಿಕ್ಕಾಡಿ ಪಾರೆ ಶ್ರೀ ಭಗವತೀ ಕ್ಷೇತ್ರದಲ್ಲಿ ಕಳಿಯಾಟ ಉತ್ಸವ

ಕಾಸರಗೋಡು: ಅತಿ ಪುರಾತನ ದೇವಿ ಚೈತನ್ಯದಿಂದ ಭಕ್ತ ಜನರ ವಿಶ್ವಾಸ ಕ್ಷೇತ್ರವಾದ ಕುಂಬಳೆ ಆರಿಕ್ಕಾಡಿ ಪಾರೆ ಶ್ರೀ ಭಗವತೀ ಆಲಿ ಚಾಮುಂಡಿ ಕ್ಷೇತ್ರದಲ್ಲಿ ಮಾ.30ರಿಂದ ಏ.6ರ ತನಕ ವಾರ್ಷಿಕ ಕಳಿಯಾಟ ಮಹೋತ್ಸವವು ಜರಗಲಿದೆ ಎಂದು ಕಾರ್ಯಕ್ರಮದ ಸಂಘಟಕರು ಗುರುವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮಾ.30ರಂಧು ಚಪ್ಪರ ಮುಹೂರ್ತ

ಮಾ.30ರಂದು ಸಂಜೆ 4ಕ್ಕೆ ಚಪ್ಪರ ಮುಹೂರ್ತ, ದೀಪ ಪ್ರತಿಷ್ಠೆ, ರಾತ್ರಿ 8ರಿಂದ ಅನ್ನದಾನ, 10ರಿಂದ ಭಂಡಾರಮನೆ ಕ್ಷೇತ್ರ ಸ್ಥಾನಿಕರು ಮತ್ತು ವಾದ್ಯಘೋಷಗಳೊಂದಿಗೆ ಭಂಡಾರ ಆಗಮನ, 31ರಂದು ಬೆಳಗ್ಗೆ 5ಕ್ಕೆ ಧ್ವಜಾರೋಹಣ, ಸಂಜೆ 6ರಿಂದ ವಿವಿಧ ದೈವಗಳ ವೆಳ್ಳಾಟ, ರಾತ್ರಿ 7ರಿಂದ ಭಜನೆ ನಡೆಯಲಿದೆ.

ಏ.1ರಂದು ದೈವಗಳ ವೆಳ್ಳಾಟ

ಏ.1ರಂದು ಬೆಳಗ್ಗೆ 8ರಿಂದ ವಿವಿಧ ದೈವಗಳ ವೆಳ್ಳಾಟ, ಭಜನೆ, ರಾತ್ರಿ 7ರಿಂದ ವಿವಿಧ ದೈವಗಳ ವೆಳ್ಳಾಟ, ಏ.2ರಂದು ಬೆಳಗ್ಗೆ 8ರಿಂದ ವಿವಿಧ ದೈವಗಳ ವೆಳ್ಳಾಟ, ಭಜನೆ, ರಾತ್ರಿ 8ರಿಂದ ನೃತ್ಯ ಕಾರ್ಯಕ್ರಮ, ಏ.3ರಂದು ನಡು ಕಳಿಯಾಟ, ಬೆಳಿಗ್ಗೆ 8ರಿಂದ ವಿವಿಧ ದೈವಗಳ ಕೋಲ, ಭಜನೆ, ರಾತ್ರಿ 8ಕ್ಕೆ ಹುಲ್ಪೆ ಸಮರ್ಪಣೆ, 10 ಗಂಟೆಯಿಂದ ಕೈಕೊಟ್ಟುಕಳಿ ನಡೆಯಲಿದೆ.

ದೈವಗಳ ಕೋಲ

ಏ.4ರಂದು ಬೆಳಗ್ಗೆ 6ಕ್ಕೆ ಆಲಿಭೂತ, 10ಕ್ಕೆ ವಿವಿಧ ದೈವಗಳ ಕೋಲ, ಭಜನೆ, ರಾತ್ರಿ 8ರಿಂದ ಸಂಗೀತ ಕಾರ್ಯಕ್ರಮ, 9.30ಕ್ಕೆ ವಿವಿಧ ದೈವಗಳ ಕೋಲ, ಏ.5ರಂದು ಬೆಳಗ್ಗೆ 6.30ರಿಂದ ಆಲಿಭೂತ, 8ರಿಂದ ವಿವಿಧ ದೈವಗಳ ಕೋಲ ನಡೆಯಲಿದೆ.

ಧಾರ್ಮಿಕ ಸಭೆ

ಸಂಜೆ 6ಕ್ಕೆ ನಡೆಯುವ ಧಾರ್ಮಿಕ ಸಭೆಯಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಆಶೀರ್ವಚನ ನೀಡುವರು. ಮಲಬಾರ್ ದೇವಸ್ವಂ ಮಂಡಳಿ ಅಧ್ಯಕ್ಷ ಒ.ಕೆ.ವಾಸು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ತೀಯಾ ಮಹಾಸಭಾದ ರಾಜ್ಯಾಧ್ಯಕ್ಷ ಗಣೇಶ್ ಅರಮಂಗಾನಂ ಶುಭಹಾರೈಸುವರು.

ಧ್ವಜಾವರೋಹಣ

ಏ.6ರಂದು ಬೆಳಗ್ಗೆ 6.30ಕ್ಕೆ ಆಲಿಭೂತ, 8ರಿಂದ ವಿವಿಧ ದೈವಗಳ ಕೋಲ, ರಾತ್ರಿ 10ಕ್ಕೆ ಧ್ವಜಾವರೋಹಣ, ಭಂಡಾರ ಹಿಂತಿರುಗುವುದು ಎಂದರು.
ಗೋಷ್ಠಿಯಲ್ಲಿ ಜಗದೀಶ್ ಪ್ರಸಾದ್ ಕೂಡ್ಲು, ಗಣೇಶ್ ಅರಮಂಗಾನಂ, ಸಂತೋಷ್ ಕುಂಬಳೆ, ದೀಪಕ್ ಕಾರ್ಳೆ, ನವೀನ್‌ಕುಮಾರ್ ವಳ್ಳಂ, ಆರಿಕ್ಕಾಡಿ ಮೊದಲಾದವರು ಉಪಸ್ಥಿತರಿದ್ದರು.



ಕ್ಯಾಂಪ್ಕೋ ಸದಸ್ಯರ ವೈದ್ಯಕೀಯ ಸಹಾಯ ನಿಧಿಯಡಿ 77,300 ರೂ. ಚೆಕ್‌ನ್ನು ಥೋಮಸ್ ಎ.ಜೆ. ಮಲಕಲ್ಲು ಅವರಿಗೆ ಪ್ರಮುಖ ಆಸ್ಪತ್ರೆಯ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಕ್ಯಾಂಪ್ಕೋ ನಿರ್ದೇಶಕ ವಿವೇಕಾನಂದ ಗೌಡ ಅವರು ಕ್ಯಾಂಪ್ಕೋ ಬಂದಡ್ಕ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಹಸ್ತಾಂತರಿಸಿದರು. ಕ್ಯಾಂಪ್ಕೋ ಬದಿಯಡ್ಕ ಪ್ರಾದೇಶಿಕ ವ್ಯವಸ್ಥಾಪಕ ಚಂದ್ರ ಎಂ., ಬಂದಡ್ಕ ಶಾಖೆಯ ಸಿಬ್ಬಂದಿಗಳಿದ್ದರು.



ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮತ್ತು ನೇಮ ಏ.2ರಿಂದ ಏ.6ರ ವರೆಗೆ ಜರಗಲಿದೆ. ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರದಲ್ಲಿ ಸಿದ್ಧತಾ ಸಭೆ ಜರಗಿತು. ಸಭೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು, ಗೌರವ ಸಲಹೆಗಾರ ಕೆ.ಪಿ.ಸೋಮಶೇಖರ, ಕಾರ್ಯಾಧ್ಯಕ್ಷ ಮೋಹನ್ ಶೆಟ್ಟಿ ತೂಮಿನಾಡು, ಪ್ರಧಾನ ಉಪಾಧ್ಯಕ್ಷ ಬಾಲಕೃಷ್ಣ ದೀಕ್ಷಾ ವುಡ್, ಕೋಶಾಧಿಕಾರಿ ವಿಶ್ವನಾಥ ಮಡಿವಾಳಪಾಲ್, ಕಾರ್ಯದರ್ಶಿ ಮಧುಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ವಿಧಾನಸಭಾ ಚುನಾವಣೆ: ಜಿಲ್ಲೆಯಲ್ಲಿ ಒಟ್ಟು 32 ಮಂದಿ ಅಭ್ಯರ್ಥಿಗಳು

ಕಾಸರಗೋಡು: ಕೇರಳ ರಾಜ್ಯ ವಿಧಾನಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯುವ ಸಮಯ ಗುರುವಾರ ಅಪರಾಹ್ನ ಮುಕ್ತಾಯಗೊಂಡಿದೆ. ಅದರಂತೆ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಾಗಿ ಒಟ್ಟು 32 ಮಂದಿ ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿದ್ದಾರೆ.
ಮಂಜೇಶ್ವರ ಕ್ಷೇತ್ರದಲ್ಲಿ ಅತೀ ಹೆಚ್ಚು ಅಂದರೆ 11 ಮಂದಿ ಅಭ್ಯರ್ಥಿಗಳಿದ್ದಾರೆ. ಕಾಞಂಗಾಡು ಕ್ಷೇತ್ರದಲ್ಲಿ ಅತೀ ಕಡಿಮೆ ಅಂದರೆ 4 ಮಂದಿ ಅಭ್ಯರ್ಥಿಗಳಿದ್ದಾರೆ. ಈ ಮಧ್ಯೆ ವಿಧಾನ ಸಭೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಗಳನ್ನು ನೀಡಲಾಗಿದೆ.



ಮಂಜೇಶ್ವರದಲ್ಲಿ ಕೊನೆಯ ದಿನದಂದು ಮೂವರು ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಂಡಿದ್ದಾರೆ. ಎಸ್‌ಡಿಪಿಐ ಅಭ್ಯರ್ಥಿ ಕೆ.ಎಂ.ಅಶ್ರಫ್, ಸ್ವತಂತ್ರ ಅಭ್ಯರ್ಥಿಗಳಾದ ಮುಹಮ್ಮದ್ ರಫೀಕ್ ಮತ್ತು ಎನ್.ಕೇಶವ ನಾಯಕ್ ತಮ್ಮ ನಾಮಪತ್ರಗಳನ್ನು ಹಿಂಪಡೆದಿದ್ದಾರೆ. ತೃಕ್ಕರೀಪ್ಪುರ ಕ್ಷೇತ್ರದಲ್ಲಿ ಟ್ವೆಂಟಿ 20 ಅಭ್ಯರ್ಥಿ ರಮಣಿ ಕೆ.ವಿ. ಮತ್ತು ಕಾಸರಗೋಡು ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿ ಎಂ.ಎ.ಲತೀಫ್ ತಮ್ಮ ನಾಮ ಪತ್ರಗಳನ್ನು ಹಿಂತೆಗೆದುಕೊಂಡರು.

ಅಭ್ಯರ್ಥಿಗಳ ವಿವರ ಇಂತಿದೆ:

ತೃಕ್ಕರೀಪ್ಪುರ ಕ್ಷೇತ್ರದಲ್ಲಿ 6 ಮಂದಿ

ಡಾ.ವಿ.ಪಿ.ಪಿ.ಮುಸ್ತಾಫ (ಸಿಪಿಎಂ – ಕತ್ತಿ ಸುತ್ತಿಗೆ ನಕ್ಷತ್ರ), ಸಂದೀಪ್ ವಾರಿಯರ್ (ಕಾಂಗ್ರೆಸ್ – ಕೈ), ರವಿ ಕುಳಂಗರ (ಟ್ವೆಂಟಿ 20 – ಹಲಸು), ಮುಸ್ತಾಫ ಪಿ.ಪಿ. (ಸ್ವತಂತ್ರ – ಕತ್ತರಿ), ಮುಸಾಫ ವಿ.ಪಿ. (ಸ್ವತಂತ್ರ – ಚೈನ್), ಸಂದೀಪ್ ಎಲಾಟ್ (ಸ್ವತಂತ್ರ – ಗ್ಯಾಸ್ ಸಿಲಿಂಡರ್).

ಕಾಞಂಗಾಡು ಕ್ಷೇತ್ರದಲ್ಲಿ 4 ಅಭ್ಯರ್ಥಿಗಳು

ವಕೀಲ ಗೋವಿಂದನ್ ಪಳ್ಳಿಕ್ಕಾಪಿಲ್ (ಸಿಪಿಐ – ಕತ್ತಿ ಕುರಲ್), ಎಂ.ಬಾಲರಾಜ್ (ಬಿಜೆಪಿ – ತಾವರೆ), ವಿಜಯ್‌ಕುಮಾರ್ ಬಿ. (ಬಹುಜನ ಸಮಾಜ ಪಕ್ಷ – ಆನೆ), ಶೈಜಿ ಒಟ್ಟಪಳ್ಳಿ (ಕೇರಳ ಕಾಂಗ್ರೆಸ್ – ಆಟೋರಿಕ್ಷಾ).

ಉದುಮ ಕ್ಷೇತ್ರದಲ್ಲಿ ಆರು ಅಭ್ಯರ್ಥಿಗಳು

ಸಿ.ಎಚ್.ಕುಂಞಂಬು (ಸಿಪಿಎಂ – ಕತ್ತಿ ಸುತ್ತಿಗೆ ನಕ್ಷತ್ರ), ನೀಲಕಂಠನ್ (ಕಾಂಗ್ರೆಸ್ – ಕೈ), ಮನುಲಾಲ್ ಮೇಲತ್ (ಬಿಜೆಪಿ – ತಾವರೆ), ಕುಂಞಂಬು ಪಿ.ಪಿ. (ಸ್ವತಂತ್ರ – ದುರ್ಬೀನು), ಕುಂಞಿರಾಮನ್ (ಸ್ವತಂತ್ರ – ಬ್ಯಾಟ್), ನಜೀರ್ (ಸ್ವತಂತ್ರ – ಡ್ರಿಲ್ ಮೆಷಿನ್).

ಕಾಸರಗೋಡು ಕ್ಷೇತ್ರದಲ್ಲಿ 5 ಅಭ್ಯರ್ಥಿಗಳು

ಅಶ್ವಿನಿ ಎಂ.ಎಲ್. (ಬಿಜೆಪಿ – ತಾವರೆ), ಕಲ್ಲಟ್ರ ಮಾಹಿನ್ ಹಾಜಿ (ಮುಸ್ಲಿಂಲೀಗ್ – ಏಣಿ), ಮುಹಮ್ಮದ್ ಅಲಿ ಫತ್ತಾಹ್ ಬಿ.ಎಂ. (ಸ್ವತಂತ್ರ – ಬ್ಯಾಟ್, ಶಾನವಾಸ್ ಎ.ಎ. (ಸ್ವತಂತ್ರ – ಡೈಮಂಡ್), ಶಾನವಾಸ್ ಪಾದೂರು (ಸ್ವತಂತ್ರ – ಬ್ಯಾಟರಿ ಟಾರ್ಚ್).

ಮಂಜೇಶ್ವರ ಕ್ಷೇತ್ರದಲ್ಲಿ 11 ಅಭ್ಯರ್ಥಿಗಳು

ಎ.ಕೆ.ಎಂ.ಅಶ್ರಫ್ (ಮುಸ್ಲಿಂಲೀಗ್ – ಏಣಿ), ಕೆ.ಆರ್. ಜಯಾನಂದ (ಸಿಪಿಎಂ – ಕತ್ತಿ ಸುತ್ತಿಗೆ ನಕ್ಷತ್ರ), ಸಂಜೀವ (ಬಹುಜನ ಸಮಾಜ ಪಕ್ಷ – ಆನೆ), ಕೆ.ಸುರೇಂದ್ರನ್ (ಬಿಜೆಪಿ – ತಾವರೆ), ಕಣ್ಣೂರು ಅಬ್ದುಲ್ಲ ಮಾಸ್ಟರ್ (ಸ್ವತಂತ್ರ – ಗ್ಯಾಸ್ ಸಿಲಿಂಡರ್), ಅಬ್ದುಲ್ ಲತೀಫ್ (ಸ್ವತಂತ್ರ – ದೂರದರ್ಶನ), ಜೀನ್ ಲವಿನಾ ಮೊಂತೆರೋ (ಸ್ವತಂತ್ರ – ಬ್ಯಾಟರಿ ಟಾರ್ಚ್), ಜೋನ್ ಡಿಸೋಜಾ (ಸ್ವತಂತ್ರ – ಟ್ರಕ್), ಮುಹಮ್ಮದ್ ಅಶ್ರಫ್ ಪಾಪಿಯಾ ಮನೆ (ಸ್ವತಂತ್ರ – ಬಾವಲಿ), ಮುಹಮ್ಮದ್ ಅಶ್ರಫ್ ಕೆ.ಎ. ಸಿಎಂ ಹೌಸ್ (ಸ್ವತಂತ್ರ – ಗ್ಯಾಸ್ ಸ್ಟೌವ್), ಡಿ.ಸುರೇಂದ್ರನ್ ನಾಯರ್ (ಸ್ವತಂತ್ರ – ಡೈಮಂಡ್).

ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಚುನಾವಣಾ ತರಬೇತಿ: ಸಾಮಾನ್ಯ ವೀಕ್ಷಕರಿಂದ ಮೌಲ್ಯಮಾಪನ

ಕಾಸರಗೋಡು: ವಿಧಾನಸಭಾ ಚುನಾವಣೆಯನ್ನು ಸುಗಮವಾಗಿ ನಡೆಸುವ ನಿಟ್ಟಿನಲ್ಲಿ ಮತಗಟ್ಟೆ ಅಧಿಕಾರಿಗಳಿಗೆ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ತರಬೇತಿ ಕಾರ್ಯಕ್ರಮ ನಡೆಯಿತು. ಪ್ರಿಸೈಡಿಂಗ್ ಆಫೀಸರ್‌ಗಳು, ಪ್ರಥಮ ಮತಗಟ್ಟೆ ಅಧಿಕಾರಿಗಳಿಗೆ ಆಯೋಜಿಸಲಾದ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 374 ಮಂದಿ ಭಾಗವಹಿಸಿದ್ದರು.
ಮತದಾನ ಯಂತ್ರಗಳ ಸೆಟ್ಟಿಂಗ್, ಮತದಾನ ದಿನದ ಕಾರ್ಯವಿಧಾನಗಳು ಮತ್ತು ವಿವಿಪ್ಯಾಟ್ ಯಂತ್ರಗಳ ಕಾರ್ಯನಿರ್ವಹಣೆಯ ಕುರಿತು ಅಧಿಕಾರಿಗಳಿಗೆ ಸಮಗ್ರ ವಿವರವಾದ ಪ್ರಾಯೋಗಿಕ ತರಬೇತಿಯನ್ನು ನೀಡಲಾಯಿತು.
ಸಾಮಾನ್ಯ ವೀಕ್ಷಕರಾದ ಜ್ಞಾನೇಶ್ವರ ಕೊಂಡಿಭಾವು ಕಿಲಾರಿ ಮತ್ತು ವಿಜಯ್ ಬಾಲಕೃಷ್ಣ ವಾಘ್ಮಾರೆ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಚಟುವಟಿಕೆಗಳನ್ನು ಪರಿಶೀಲಿಸಿದರು. ವೀಕ್ಷಕರು ತರಬೇತಿ ತರಗತಿಗಳ ಪ್ರಗತಿ ಮತ್ತು ಅಧಿಕಾರಿಗಳಿಗೆ ನೀಡಲಾದ ಸೂಚನೆ ನೇರವಾಗಿ ಗಮನಿಸಿದರು. ಚುನಾವಣಾ ಕೆಲಸದಲ್ಲಿ ತೊಡಗಿರುವವರ ಸಂದೇಹಗಳನ್ನು ಹೋಗಲಾಡಿಸುವುದು, ಚುನಾವಣಾಪ್ರಕ್ರಿಯೆಯನ್ನು ಪಾರದರ್ಶಕವಾಗಿ ಪೂರ್ಣಗೊಳಿಸಲು ಜಾಗೃತಿ ಒದಗಿಸುವುದರ ಮೇಲೆ ತರಬೇತಿ ಕೇಂದ್ರೀಕರಿಸಿದೆ.
ರಾಜ್ಯ ಮಟ್ಟದ ಮಾಸ್ಟರ್ ಟ್ರೈನರ್‌ಗಳಾದ ಸಜಿತ್ ಕುಮಾರ್ ಪಿ., ವಲ್ಸನ್ ಎಂ.ಎ., ಡಿಎಲ್‌ಎಂಟಿಗಳಾದ ಧನಂಜಯನ್, ಅಜಿತ ಕುಮಾರ್ ಬಿ., ಎಎಲ್‌ಎಂಟಿಗಳಾದ ಜಯಪ್ರಕಾಶ್ ಆಚಾರ್ಯ, ಸುಚೇಶ್ ಪಿ., ಅಖಿಲ್ ಎ.ಜೆ., ಪ್ರಣವ್‌ರಾಜ್, ಶಿವರಾಮ ಎಂ., ಬಶೀರ್, ಕ್ಲಿಂಟ್ ಥೋಮಸ್, ಅನಿಕುಟ್ಟನ್ ಕೆ., ಮಜೀದ್ ಎನ್.ಎ., ಬಶೀರ್, ಅಬ್ದುಲ್ಲ ತರಗತಿ ನಡೆಸಿಕೊಟ್ಟರು. ಆರಂಭದಲ್ಲಿ ಕಾಸರಗೋಡು ಆರ್‌ಡಿಒ ಬಿನು ಜೋಸೆಫ್ ತರಗತಿಗೆ ಚಾಲನೆ ನೀಡಿ ಮಾತನಾಡಿದರು.

ಸುತ್ತಮುತ್ತ

ಭಂಡಾರ್‌ಕಾರ್ಸ್ ಪದವಿ ಕಾಲೇಜಿನ ವಾರ್ಷಿಕೋತ್ಸವ

ಕುಂದಾಪುರ: ಕುಂದಾಪುರದ ಭಂಡಾರ್‌ಕಾರ್ಸ್ ಪದವಿ ಕಾಲೇಜಿನ ವಾರ್ಷಿಕೋತ್ಸವ ಸಂಭ್ರಮವು ಮಾ. 27 ರಿಂದ ಮಾ. 29 ವರೆಗೆ ಮೂರು ದಿನಗಳ ಕಾಲ ನಡೆಯಲಿದೆ. ಮಾ.27 ರ ಬೆಳಗ್ಗೆ 9 ಕ್ಕೆ ಪ್ರತಿಭಾ ಪ್ರದರ್ಶನ – ಅಂತರ್ ತರಗತಿ ಸ್ಪರ್ಧೆಗಳು ನಡೆಯಲಿದ್ದು, ಶ್ರೀ ಕುಂದೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವಾಸುದೇವ ಯಡಿಯಾಳ್ ಉದ್ಘಾಟಿಸಲಿದ್ದಾರೆ. ಕಾಲೇಜಿನ ವಿಶ್ವಸ್ಥ ಮಂಡಳಿ ಉಪಾಧ್ಯಕ್ಷ ಕೆ. ಶಾಂತರಾಮ ಪ್ರಭು ಅಧ್ಯಕ್ಷತೆ ವಹಿಸಲಿದ್ದಾರೆ. ಮಾ.28 ರ ಬೆಳಗ್ಗೆ 10ಕ್ಕೆ ಕಾಲೇಜು ವಾರ್ಷಿಕೋತ್ಸವವನ್ನು ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ, ದಾನಿ ಡಾ. ಎಚ್. ಎಸ್. ಶೆಟ್ಟಿ ಉದ್ಘಾಟಿಸಲಿದ್ದಾರೆ. ಕೆ. ಶಾಂತರಾಮ ಪ್ರಭು ಅಧ್ಯಕ್ಷತೆ ವಹಿಸಲಿದ್ದು, ಕರ್ನಾಟಕ ಬ್ಯಾಂಕಿನ ಮುಖ್ಯ ವಾಣಿಜ್ಯ ಅಧಿಕಾರಿ ಚಂದ್ರಶೇಖರ್ ಮುಖ್ಯ ಅತಿಥಿಯಾಗಿ, ಕಾಲೇಜಿನ ಪ್ರಾಂಶುಪಾಲ ಡಾ. ಶುಭಕರಾಚಾರಿ ಭಾಗವಹಿಸಲಿದ್ದಾರೆ. ನಿವೃತ್ತ ಸಿಬಂದಿ, ವಿವಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು, ಸಾಧಕ ವಿದ್ಯಾರ್ಥಿಗಳಿಗೆ ಸಮ್ಮಾನ ನಡೆಯಲಿದೆ.
ಮಾ.29 ರಂದು ಹಳೆ ವಿದ್ಯಾರ್ಥಿಗಳ ಸಮ್ಮಿಲನ ನಡೆಯಲಿದೆ. ಬೆಳಗ್ಗೆ ಕಾಲೇಜಿನ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ, ಹಳೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈವಿಧ್ಯ, ಮಧ್ಯಾಹ್ನ ಸಭಾ ಕಾರ್ಯಕ್ರಮವನ್ನು ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್ ಉದ್ಘಾಟಿಸಲಿದ್ದು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಸ್. ಶ್ರೀಹರಿ ಚಾತ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಕಟನೆ ತಿಳಿಸಿದೆ.

ವಿಶ್ವ ರಂಗಭೂಮಿ ದಿನಾಚರಣೆ ನಾಳೆ

ಕೋಟ: ಯಕ್ಷಗಾನ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡುತ್ತಿರುವ ಕೋಟದ ಕಲಾಪೀಠ ಸಂಸ್ಥೆಯು ಇದೀಗ ವಿಶ್ವ ರಂಗಭೂಮಿ ದಿನಾಚರಣೆಯ ಅಂಗವಾಗಿ ಮಾ.28ರಂದು ಗುಂಡ್ಮಿ ಸಾಲಿಗ್ರಾಮದ ಸದಾನಂದ ರಂಗ ಮಂಟಪದಲ್ಲಿ ಸುಗ್ರೀವ ಸಖ್ಯ ಎಂಬ ಯಕ್ಷಗಾನ ಹಮ್ಮಿಕೊಂಡಿದೆ. ವಿಶೇಷ ಆಹ್ವಾನಿತರಾಗಿ, ಉಡುಪಿಯ ಪ್ರಜ್ಞಾನಮ್ ಟ್ರಸ್ಟ್ ಇದರ ಸಂಚಾಲಕರಾದ ಜಿ.ಪಿ.ಪ್ರಭಾಕರ ತುಮರಿ ಹಾಗೂ ರಂಗ ನಿರ್ದೇಶಕರಾದ ರೋಹಿತ್ ಬೈಕಾಡಿಯವರು ಭಾಗವಹಿಸಲಿರುವರು. ಹಿಮ್ಮೇಳದಲ್ಲಿ ಉದಯ ಹೊಸಾಳ, ಗಣೇಶ ಶೆಣೈ, ವಾಗ್ವಿಲಾಸ ಭಟ್ಟ ಹಾಗೂ ಮುಮ್ಮೇಳದಲ್ಲಿ ಅನುಪ, ಅನಂತ, ಅನುಷಾ, ಸಾಹಿತ್ಯ, ಶ್ರೀನಿಧಿ, ಹಾಗೂ ಶ್ರೇಯಸ್‌ರವರು ಭಾಗವಹಿಸಲಿಕ್ಕಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನರೇಂದ್ರಕುಮಾರ್‌ಗೆ ಹುಟ್ಟೂರ ಸಾಹಿತ್ಯ ಸಾಧಕ ಶ್ರೀ ಪುರಸ್ಕಾರ

ಕೋಟ: ಮಿತ್ರ ಮಂಡಳಿ ಕೋಟ ನೀಡುತ್ತಿರುವ ಸಾಹಿತ್ಯ ಸಾಧಕರಿಗೆ ಈ ವರ್ಷದ ಹುಟ್ಟೂರ ಸಾಹಿತ್ಯ ಸಾಧಕ ಪುರಸ್ಕಾರಕ್ಕೆ ಕೋಟದ ವಿವೇಕ ಬಾಲಕಿಯರ



ಪ್ರೌಢಶಾಲೆಯ ಶಿಕ್ಷಕರಾಗಿರುವ ನರೇಂದ್ರ ಕುಮಾರ್ ಕೋಟ ಆಯ್ಕೆಯಾಗಿದ್ದಾರೆ. ಇದೇ ಏ.4ರಂದು ಅಪರಾಹ್ನ 3 ಗಂಟೆಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಟದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡುವುದೆಂದು ಮಿತ್ರ ಮಂಡಳಿಯ ಪ್ರೊ. ಸಿ. ಉಪೇಂದ್ರ ಸೋಮಯಾಜಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ತಾತ್ಕಾಲಿಕ ತೇಪೆ!

ಇದೀಗ ಈ ಸಿಮೆಂಟ್ ಬೆಡ್ ನಿರ್ಮಾಣಕ್ಕೆ ತೇಪೆಯಂತಹ ಸುರಕ್ಷತಾ ಕ್ರಮ ಅಳವಡಿಸಲಾಗಿರುವುದು ಕಂಡು ಬರುತ್ತಿದ್ದು, ಇದು ಪೂರ್ಣ ಪ್ರಮಾಣದ ಸುರಕ್ಷತಾ ಕ್ರಮವಲ್ಲ ಎಂದು ಸಾರ್ವಜನಿಕರು ಹಾಗೂ ವಾಹನ ಸವಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇಂತಹ ತೇಪೆ ಕಾಮಗಾರಿಗಳಿಂದಾಗಿಯೇ ಇಲ್ಲಿನ ಟೋಲ್ ಗೇಟ್ ನಿತ್ಯವೂ ಸುದ್ದಿಯಾಗುತ್ತಿದೆ.

ಆಸ್ಪತ್ರೆಗಳ ಸೇರ್ಪಡೆ

ಜಿಲ್ಲೆಯ ಆದ್ಯತಾ ವಲಯದಲ್ಲಿ ಸರಕಾರಿ ಆಸ್ಪತ್ರೆಗಳು, ಸರಕಾರಿ ವೈದ್ಯಕೀಯ ಕಾಲೇಜುಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತೀವ್ರ ನಿಗಾ ಘಟಕಗಳು, ತುರ್ತು ಚಿಕಿತ್ಸೆ ನೀಡುವ ಖಾಸಗಿ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿಭಾಗದವರು ವಾಸಿಸುತ್ತಿರುವ ಹಾಸ್ಟೆಲ್‌ಗಳು, ರೆಸಿಡೆನ್ಶಿಯಲ್ ಸಂಸ್ಥೆಗಳು, ಸರಕಾರ ಮತ್ತು ಸಾಮೂಹಿಕ ಸಂಸ್ಥೆಗಳು ನಡೆಸುತ್ತಿರುವ ವಿವಿಧ ಕೇಂದ್ರಗಳು, ಸಂತ್ರಸ್ತ ಶಿಬಿರಗಳು, ತುರ್ತು ಶೆಲ್ಟರ್‌ಗಳು, ಸ್ಮಶಾನಗಳು ಮುಂತಾದವುಗಳನ್ನು ಒಳಪಡಿಸಲಾಗಿದೆ.

ಗಜಪಡೆಗಳ ದರ್ಬಾರ್

ಕಾಡಾನೆ ಹಾವಳಿಯಿಂದ ಕೃಷಿ ಫಸಲನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ನಮಗೆ ಯಾವುದೇ ಪರಿಹಾರ ಬೇಡ. ಒಂದೆರಡು ಸಾವಿರ ಪರಿಹಾರದಿಂದ ಕುಟುಂಬ ಸಾಕಲು ಸಾಧ್ಯವಿಲ್ಲ, ಕಾಡಾನೆ ಹಾವಳಿ ತಡೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕು. ಯರಪಾರೆಯಲ್ಲಿ ಒಂದೆರಡು ಕಿ.ಮೀನಷ್ಟು ಸೋಲಾರ್ ತಂತಿಬೇಲಿ ಅಳವಡಿಸಿಕೊಡಬೇಕು ಎಂದು ರೈತರಾದ ರೇವಣ್ಣ, ಹರೀಶ್ ಆಗ್ರಹಿಸಿದ್ದಾರೆ. ಕಾಡಾನೆ ಕಂದಕಗಳನ್ನು ದುರಸ್ತಿ ಪಡಿಸಬೇಕು. ಸೋಲಾರ್ ತಂತಿಬೇಲಿಯ ನಿರ್ವಹಣೆ ಮಾಡಬೇಕು. ಸಿಬ್ಬಂದಿಗಳು ಪಟಾಕಿ ಸಿಡಿಸಿ ತೆರಳಿದರೆ, ಕಾಡಾನೆ ಹಾವಳಿ ನಿಯಂತ್ರಣ ಅಸಾಧ್ಯದ ಮಾತು ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾಪು ತಾಲೂಕಿನ ಗ್ರಾಮ ಪಂಚಾಯತ್‌ಗೆ ಸಾಧನೆಯ ಹ್ಯಾಟ್ರಿಕ್ | ಅತ್ಯುನ್ನತ ಪುರಸ್ಕಾರಕ್ಕೆ ಆಯ್ಕೆ

ಸತತ ಮೂರನೇ ಬಾರಿಗೆ ಶಿರ್ವಕ್ಕೆ 'ಗಾಂಧಿ ಗ್ರಾಮ ಪುರಸ್ಕಾರ'

ಉಡುಪಿ/ಶಿರ್ವ: ಗ್ರಾಮೀಣಾಭಿವೃದ್ಧಿಯಲ್ಲಿ ಮಾದರಿ ಎನಿಸಿಕೊಂಡಿರುವ ಕಾಪು ತಾಲೂಕಿನ ಶಿರ್ವ ಗ್ರಾಮ ಪಂಚಾಯತ್, ಕರ್ನಾಟಕ ಸರ್ಕಾರದ 2024–25ನೇ ಸಾಲಿನ ಪ್ರತಿಷ್ಠಿತ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾಗಿದೆ. ಈ ಮೂಲಕ 2019–20 ಹಾಗೂ 2021–22ನೇ ಸಾಲಿನ ಬಳಿಕ ಮೂರನೇ ಬಾರಿಗೆ ಈ ಗೌರವಕ್ಕೆ ಪಾತ್ರವಾಗುವ ಮೂಲಕ ಸಾಧನೆಯ ಹ್ಯಾಟ್ರಿಕ್ ಬರೆದಿದೆ.
ಸಂಪನ್ಮೂಲ ಕ್ರೋಢೀಕರಣ, ತ್ಯಾಜ್ಯ ನಿರ್ವಹಣೆ ಮತ್ತು ನರೇಗಾ ಯೋಜನೆಯ ಯಶಸ್ವಿ ಅನುಷ್ಠಾನದ ಹಿನ್ನೆಲೆಯಲ್ಲಿ ಕಾಪು ತಾಲೂಕಿನ 16 ಪಂಚಾಯತ್‌ಗಳ ಪೈಕಿ ಶಿರ್ವ ಈ ಮಹತ್ವದ ಮೈಲಿಗಲ್ಲು ಸ್ಥಾಪಿಸಿದೆ.

ಏನಿದು ಗಾಂಧಿ ಗ್ರಾಮ ಪುರಸ್ಕಾರ?
ಮಹಾತ್ಮ ಗಾಂಧೀಜಿಯವರ 'ಗ್ರಾಮ ಸ್ವರಾಜ್ಯ'ದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಶ್ರಮಿಸುವ ಅತ್ಯುತ್ತಮ ಗ್ರಾಮ ಪಂಚಾಯತ್‌ಗಳನ್ನು ಗುರುತಿಸಿ ಗೌರವಿಸಲು ಕರ್ನಾಟಕ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿದೆ. ಪ್ರತಿ ವರ್ಷ ರಾಜ್ಯದ ಪ್ರತಿ ತಾಲೂಕಿನಿಂದ ಆಡಳಿತಾತ್ಮಕವಾಗಿ ಅತ್ಯುತ್ತಮ ಸಾಧನೆ ತೋರಿದ ಕೇವಲ ಒಂದು ಪಂಚಾಯತ್ ಅನ್ನು ಮಾತ್ರ ಈ ಅತ್ಯುನ್ನತ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗುತ್ತದೆ.



ಸಂಗಮ ವಿಶೇಷ

ಆಯ್ಕೆಯ ಮಾನದಂಡಗಳು
ಈ ಪುರಸ್ಕಾರಕ್ಕೆ ಆಯ್ಕೆ ಮಾಡುವ ಮೊದಲು ಪಂಚಾಯತ್ ರಾಜ್ ಇಲಾಖೆಯು ಪಾರದರ್ಶಕವಾದ 'ಸ್ಕೋರಿಂಗ್' ಪದ್ಧತಿಯನ್ನು ಅನುಸರಿಸುತ್ತದೆ. ತೆರಿಗೆ ವಸೂಲಾತಿಯಲ್ಲಿನ ಪ್ರಗತಿ, ಶುದ್ಧ ಕುಡಿಯುವ ನೀರಿನ ಪೂರೈಕೆ, ವೈಜ್ಞಾನಿಕವಾಗಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಹಾಗೂ ನರೇಗಾ ಯೋಜನೆಯಡಿ ದಾಖಲೆಯ ಮಾನವ ದಿನಗಳ ಸೃಜನೆಯನ್ನು ಪರಿಗಣಿಸಲಾಗುತ್ತದೆ. ತಾಲೂಕು ಮಟ್ಟದಲ್ಲಿ ಶಿರ್ವ, ಮಜೂರು ಮತ್ತು ಕೋಟೆ ಪಂಚಾಯತ್‌ಗಳು ಅಂತಿಮ ಸುತ್ತಿನಲ್ಲಿದ್ದು, ಸಮಗ್ರ ಅಂಕಿ–ಅಂಶಗಳ ಆಧಾರದ ಮೇಲೆ ಶಿರ್ವವನ್ನು ವಿಜೇತ ಎಂದು ಘೋಷಿಸಲಾಗಿದೆ.

ಸಾಧಕ ಪಂಚಾಯತ್‌ಗೆ ಸಿಗುವ ಗೌರವ
ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾದ ಪಂಚಾಯತ್‌ಗೆ ರಾಜ್ಯ ಸರ್ಕಾರದಿಂದ ಐದು ಲಕ್ಷ ರೂಪಾಯಿಗಳ ನಗದು ಅನುದಾನದ ಜೊತೆಗೆ ಪ್ರಶಸ್ತಿ ಫಲಕ ಮತ್ತು ಸ್ಮರಣಿಕೆಯನ್ನು ನೀಡಿ ಗೌರವಿಸಲಾಗುತ್ತದೆ. ಈ ನಗದು ಬಹುಮಾನವನ್ನು ಪಂಚಾಯತ್ ವ್ಯಾಪ್ತಿಯಲ್ಲಿ ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಬಳಸಿಕೊಳ್ಳಲು ಅವಕಾಶವಿರುತ್ತದೆ. ಪ್ರತಿ ವರ್ಷ ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ಬೆಂಗಳೂರಿನಲ್ಲಿ ನಡೆಯುವ ಭವ್ಯ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.

ಡಿಜಿಟಲೀಕರಣದ ಯಶಸ್ಸು
ಸರ್ಕಾರಿ ಸೇವೆಗಳನ್ನು ಜನರಿಗೆ ತಲುಪಿಸುವಲ್ಲಿ ಶಿರ್ವ ಪಂಚಾಯತ್ 'ಜನಸ್ನೇಹಿ' ಆಡಳಿತವನ್ನು ಅಳವಡಿಸಿಕೊಂಡಿದೆ. ಪಂಚತಂತ್ರ ತಂತ್ರಾಂಶದ ಮೂಲಕ ಆನ್‌ಲೈನ್ ಪರವಾನಗಿಗಳು ಮತ್ತು ದಾಖಲೆಗಳನ್ನು ಸಕಾಲದಲ್ಲಿ ವಿತರಿಸುವ ಮೂಲಕ ಭ್ರಷ್ಟಾಚಾರ ರಹಿತ ಆಡಳಿತಕ್ಕೆ ನಾಂದಿ ಹಾಡಿದೆ. ಸಂಪನ್ಮೂಲ ಕ್ರೋಢೀಕರಣದಲ್ಲಿ ಅಂದರೆ ತೆರಿಗೆ ವಸೂಲಾತಿಯಲ್ಲಿ ಶೇ. 100ರಷ್ಟು ಗುರಿ ತಲುಪಿರುವುದು ಪಂಚಾಯತ್‌ನ ಆರ್ಥಿಕ ಶಿಸ್ತನ್ನು ಎತ್ತಿ ತೋರಿಸುತ್ತದೆ. ಈ ಎಲ್ಲಾ ಅಂಶಗಳು ಶಿರ್ವವನ್ನು ರಾಜ್ಯ ಮಟ್ಟದ ಪ್ರತಿಷ್ಠಿತ 'ಗಾಂಧಿ ಗ್ರಾಮ' ಪಟ್ಟಿಯಲ್ಲಿ ಸತತವಾಗಿ ಸ್ಥಾನ ಪಡೆಯುವಂತೆ ಮಾಡಿದೆ.

ತ್ಯಾಜ್ಯ ನಿರ್ವಹಣೆ, ನರೇಗಾ ಸಾಧನೆ
ಶಿರ್ವ ಗ್ರಾ.ಪಂ. ವೈಜ್ಞಾನಿಕ ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ವ್ಯವಸ್ಥೆ ಪ್ರತಿ ಮನೆಯಿಂದ ಕಸ ಸಂಗ್ರಹಿಸಿ ಅದನ್ನು ಸೂಕ್ತವಾಗಿ ವಿಂಗಡಿಸುವ ಮೂಲಕ ಗ್ರಾಮವನ್ನು 'ಪ್ಲಾಸ್ಟಿಕ್ ಮುಕ್ತ' ಮಾಡುವ ನಿಟ್ಟಿನಲ್ಲಿ ಗ್ರಾ.ಪಂ ಗಮನಾರ್ಹ ಹೆಜ್ಜೆ ಇರಿಸಿದೆ. ಅಲ್ಲದೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯಡಿ ದಾಖಲೆ ಪ್ರಮಾಣದ ಮಾನವ ದಿನಗಳನ್ನು ಸೃಜಿಸಿ, ಕೆರೆಗಳ ಪುನರುಜ್ಜೀವನ ಮತ್ತು ಶಾಲಾ ಆವರಣ ಗೋಡೆಗಳ ನಿರ್ಮಾಣದಂತಹ ಸಮುದಾಯ ಆಸ್ತಿಗಳನ್ನು ಸೃಷ್ಟಿಸಿರುವುದು ಈ ಪುರಸ್ಕಾರಕ್ಕೆ ಪ್ರಮುಖ ಬಲ ನೀಡಿದೆ.

ಶ್ರೀ ಗುಡೇ ಮಹಾಲಿಂಗೇಶ್ವರ ದೇಗುಲ ರಾಜಗೋಪುರ ಲೋಕಾರ್ಪಣೆ

ತುಂಬು ಮನಸ್ಸಿನ ಕಾರ್ಯಕ್ಕೆ ಉತ್ತಮ ಫಲ

ಬೈಂದೂರು: ಮನುಷ್ಯ ತನ್ನ ಜೀವಿತದ ಅವಧಿಯಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸಿಕೊಂಡು ಭಗವಂತನ ಕೃಪೆ ಪಡೆಯುವುದಲ್ಲದೇ ತನ್ನ ಕಾರ್ಯಕ್ಷೇತ್ರದಲ್ಲಿ ಪ್ರಯತ್ನಶೀಲನಾದಾಗ ಮಾತ್ರ ಯಶಸ್ಸು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಉತ್ತಮ ಮನಸ್ಸಿನಿಂದ ಮಾಡಿದ ಕಾರ್ಯಗಳಿಗೆ ಉತ್ತಮ ಫಲ ದೊರೆಯುತ್ತದೆ ಎಂದು ಘಟಪ್ರಭಾ ಗುಬ್ಬಲಗುಡ್ಡ ಕೆಂಪಯ್ಯಸ್ವಾಮಿ ಮಠಾಧೀಶ ಶ್ರೀ ಮ.ನಿ.ಪ್ರ.ಸ್ವ.ಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ಹೇಳಿದರು.
ಹೇರಂಜಾಲು ಗ್ರಾಮದ ಪೌರಾಣಿಕ ಪ್ರಸಿದ್ಧವಾದ ಶ್ರೀ ಗುಡೇ ಮಹಾಲಿಂಗೇಶ್ವರ ದೇವಸ್ಥಾನದ ನೂತನ ರಾಜಗೋಪುರವನ್ನು ಗುರುವಾರ ವೃಷಭಲಗ್ನ ಮುಹೂರ್ತದಲ್ಲಿ ಲೋಕಾರ್ಪಣೆಗೊಳಿಸಿ ಅವರು ಆಶೀರ್ವಚನ ನೀಡಿದರು.
ದೇವಳದ ನೂತನ ಧ್ವಜಸ್ತಂಭ ಹಾಗೂ ಹೆಬ್ಬಾಗಿಲು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಸೇತುವೆ, ರಸ್ತೆ ಹಾಗೂ ಆಸ್ಪತ್ರೆಯ ಅಭಿವೃದ್ಧಿ ಮಾಡಿದರೆ ಕೇವಲ ಆ ಭಾಗದ ಜನರ ಅಭಿವೃದ್ಧಿಯಾಗುತ್ತದೆ. ದೇವಾಲಯಗಳ ಅಭಿವೃದ್ಧಿಯಿಂದ ಇಡೀ ಮಾನವ ಕುಲವೇ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದರು.



ಉಡುಪಿ ದೇವರ ನಾಡು

> ಪ್ರತಿಯೊಂದರಲ್ಲಿಯೂ ದೇವರನ್ನು ಕಾಣುವ ನಮ್ಮ ಪರಂಪರೆ ಈ ಮಣ್ಣಿನ ಸಂಸ್ಕೃತಿ. ಅದರಲ್ಲಿಯೂ ಉಡುಪಿ ಜಿಲ್ಲೆ ದೇವರ ನಾಡು, ಇಲ್ಲಿನ ದೇವಾಲಯಗಳು ಅನ್ನಪ್ರಸಾದದ ಮೂಲಕ ಬಡವರ ಹಸಿವನ್ನು ನೀಗಿಸುವ ಕೆಲಸಮಾಡುತ್ತಿದೆ. ಈ ಭಾಗದ ಜನರು ದೇವರ ಸೇವೆಯಲ್ಲಿ ಪಕ್ಷಭೇದ ಮರೆತು ಸಂಘಟಿತರಾಗುವುದು ಶ್ಲಾಘನೀಯ.
> ● ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಮಾಜಿ ಸಚಿವ ಬಾಲಚಂದ್ರ ಜಾರಕಿಹೊಳಿ ಅವರು ಭೋಜನಶಾಲೆ ಮತ್ತು ಯಾಗಶಾಲೆಯನ್ನು ಉದ್ಘಾಟಿಸಿದರು. ರಾಜಗೋಪುರದ ಸೇವಾಕರ್ತ ಎಚ್. ಜಯಶೀಲ ಎನ್. ಶೆಟ್ಟಿ ಅವರನ್ನು ಸ್ವಾಮೀಜಿಯವರು ಮಠದ ವತಿಯಿಂದ ಗೌರವಿಸಿದರು. ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ಉದ್ಯಮಿ ಕಿಶೋರಕುಮಾರ್ ಹೆಗ್ಡೆ, ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ., ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್, ಜಿ.ಪಂ. ಸಿಇಒ ಪ್ರತೀಕ್ ಬಾಯಲ್, ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪದ್ಮನಾಭ ಮರ್ತ, ಖಜಾಂಚಿ ಎಚ್. ವಿಜಯ್ ಶೆಟ್ಟಿ ಉಪಸ್ಥಿತರಿದ್ದರು. ರಾಜಗೋಪುರದ ಸೇವಾಕರ್ತ, ದೇವಳದ ಗೌರವಾಧ್ಯಕ್ಷ ಎಚ್. ಜಯಶೀಲ ಎನ್. ಶೆಟ್ಟಿ ಸ್ವಾಗತಿಸಿ, ಪ್ರಾಸ್ತಾವಿಸಿದರು. ಆರ್‌ಜೆ ನಯನ ಹಾಗೂ ಪತ್ರಕರ್ತ ಕೆ.ಸಿ. ರಾಜೇಶ್ ನಿರೂಪಿಸಿದರು. ಉತ್ಸವದ ಪ್ರಚಾರ ಸಮಿತಿ ಸಂಚಾಲಕ ಬಟ್ವಾಡಿ ಅಣ್ಣಪ್ಪ ಶೆಟ್ಟಿ ವಂದಿಸಿದರು. ಕಾರ್ಯಕ್ರಮದಲ್ಲಿ ಮಧ್ಯಾಹ್ನ ಸಹಸ್ರಾರು ಭಕ್ತರು ಪಾಲ್ಗೊಂಡರು, ಮಹಾಅನ್ನಪ್ರಸಾದ ಸ್ವೀಕರಿಸಿದರು.

ಮಾ. 30ಕ್ಕೆ ಸಾಂಸ್ಕೃತಿಕ ಉತ್ಸವ ಉದ್ಘಾಟನೆಯೊಂದಿಗೆ ಉತ್ಸವಕ್ಕೆ ಚಾಲನೆ

ಮಾ.31ರಿಂದ ಏ.4ರವರೆಗೆ ಮಣೂರು ಜಾತ್ರೆ

ಕೋಟ: ಇಲ್ಲಿನ ಮಣೂರು ಶ್ರೀ ಮಹಾಲಿಂಗೇಶ್ವರ ಶ್ರೀ ಹೇರಂಬ ಮಹಾಗಣಪತಿ ದೇವಸ್ಥಾನ ಇದರ ವಾರ್ಷಿಕ ರಥೋತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಮಾ. 31ರಿಂದ ಏಪ್ರಿಲ್ 4ರವರೆಗೆ ವಿಜೃಂಭಣೆಯಿಂದ ಜರಗಲಿದೆ.
ಮಾ. 30ರಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಉತ್ಸವಕ್ಕೆ ದೇಗುಲ ಅಧ್ಯಕ್ಷ ಸತೀಶ್ ಎಚ್. ಕುಂದರ್ ಚಾಲನೆ ನೀಡಲಿದ್ದಾರೆ.



ಮಾ.31ರಂದು ಪ್ರಾರ್ಥನೆ, ನಾಂದಿ ಪುಣ್ಯಾಹ, ಮುಹೂರ್ತ ಬಲಿ, ಅಂಕುರಾ ಪುಣ್ಯಾಹ, ಧ್ವಜಾಧಿವಾಸ ಹೋಮ, ಧ್ವಜಾರೋಹಣ, ವೇದಾರಂಭ,ಸಂಜೆ ಬಲಿ, ವಾಸ್ತು ರಾಕ್ಷೋಘ್ನ ಹೋಮ, ರಜ್ಜು ಬಂಧನ, ಉತ್ಸವ ಬಲಿ, ಏ. 1ರಂದು ಪುಣ್ಯಾಹ ವಾಚನ, ಅಗ್ನಿ ಜನನ, ಪ್ರಧಾನ ಹೋಮ, ಕಲಶಾಭಿಷೇಕ, ಮಹಾಪೂಜೆ,ಸಂಜೆ ಬಲಿ, ಕಟ್ಟೆಪೂಜೆ, ಉತ್ಸವ ರಂಗಪೂಜೆ, ಉತ್ಸವ ಬಲಿ, ಕ್ಷೇತ್ರಪಾಲ ಪೂಜೆ, ಮಹಾಪೂಜೆ, ಏ.2ರಂದು ಪುಣ್ಯಾಹ ವಾಚನ, ಪ್ರಧಾನಹೋಮ, ಕಲಶಾಭಿಷೇಕ, ರಥ ಶುದ್ದಿಹೋಮ, ರಥಪೂಜೆ, ರಥಾರೋಹಣ, ಬಲಿ ಬೆಳಿಗ್ಗೆ ಗಂಟೆ 11ಕ್ಕೆ ಮಿಥುನ ಶುಭ ಲಗ್ನದಲ್ಲಿ ರಥಾರೋಹಣ ಮಧ್ಯಾಹ್ನ ಗಂಟೆ 12.30ಕ್ಕೆ ಮಹಾ ಅನ್ನಸಂತರ್ಪಣೆ, ರಥಯಾತ್ರೆ, ರಥಾವರೋಹಣ, ಆಲಯ ಪ್ರವೇಶ, ಮಂಗಳಾರತಿ, ಪ್ರಸಾದ ವಿತರಣೆ, ಸಂಹಾರ ಬಲಿ, ದೇವರ ಶಯನೋತ್ಸವ, ವಿಶೇಷ ಆಕರ್ಷಣೆಯಾಗಿ ಕೊಂಬು ಕಹಳೆ, ಡೊಳ್ಳು ಕುಣಿತ, ಕೀಲು ಕುದುರೆ, ಚಂಡೆವಾದನ, ಬ್ಯಾಂಡ್‌ಸೆಟ್, ಸಿಡಿಮದ್ದು ಪ್ರದರ್ಶನ, ಏ. 3ರಂದು ಬೆಳಿಗ್ಗೆ 8ಕ್ಕೆ ಶ್ರೀ ಹೇರಂಬ ಮಹಾಗಣಪತಿ ದೇವಸ್ಥಾನದ ಪ್ರತಿಷ್ಠಾ ವರ್ಧಂತಿ ಉತ್ಸವ, ಪ್ರಭೋದೋತ್ಸವ, ಅಷ್ಟಾವಧಾನ ಸೇವೆ ಹೋಮ, ಕಲಶಾಭಿಷೇಕ ಪೂಜೆಗಳು, ಸಂಹಾರಬಲಿ, ಚೂರ್ಣೋತ್ಸವ, ಅವಭೃತ ಪೂರ್ಣಾಹುತಿ, ಧ್ವಜಾರೋಹಣ, ಮಹಾಮಂಗಳಾರತಿ, ಏ.4ರಂದು ಸಂಪ್ರೋಕ್ಷಣೆ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳು ಜರಗಲಿದೆ.
ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಲಿದೆ.
ಮಾ. 30ರಂದು ಸಂಜೆ 5.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, ಸಂಜೆ 5.30ರಿಂದ 6.30 ಛಾಯ ತರಂಗಿಣಿ ಸಂಗೀತ ಶಾಲೆ ಇವರಿಂದ ಛಾಯಾ ತರಂಗಿಣಿ ಕಲಾ ಮಂಜರಿ, ಸಂಜೆ 6.30ರಿಂದ 7.30 ಸ್ನೇಹಕೂಟ ಮಣೂರು ಇವರಿಂದ ಹಬ್ಬದೊಳಗೊಂದು ಹಬ್ಬ,ರಾತ್ರಿ 7.30ರಿಂದ 9ರವರೆಗೆ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿ, ಮಣೂರು ಬಾಲಕಲಾವಿದರಿಂದ ಯಕ್ಷಗಾನ ಚಕ್ರವರ್ತಿ ಬಲಿ (ವಾಮನಾವತಾರ), ಮಾ.31ರಂದು ಸಂಜೆ 6.30ರಿಂದ ರಾತ್ರಿ 10.00ರ ವರೆಗೆ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿ ಇವರಿಂದ ಯಕ್ಷಗಾನ ರಾಣಿ ಶಶಿಪ್ರಭೆ ಮತ್ತು ಚಕ್ರವ್ಯೂಹ, ಏ. 1ರಂದು ಸಂಜೆ 6.30ರಿಂದ ಮಣೂರು ಫ್ರೆಂಡ್ಸ್ ಮಣೂರು ಇವರ ರಜತ ಸಂಭ್ರಮದ ಅಂಗವಾಗಿ ಸಂಜೆ 6.30ರಿಂದ ಸ್ಥಳೀಯ ಅಂಗನವಾಡಿ ಮಕ್ಕಳಿಂದ ಚಿಣ್ಣರ ಕಲರವ, ಸಂಗೀತ ರಸಮಂಜರಿ ಡ್ಯಾನ್ಸ್ ಧಮಾಕ , ನೃತ್ಯ ಪ್ರದರ್ಶನ , ರಜತ ಸಂಭ್ರಮ ವಿಶೇಷ ಪುರಸ್ಕಾರ ಹಿರಿಯ ನಾಗರಿಕರಿಗೆ ಸನ್ಮಾನ , ಪ್ರತಿಭಾ ಪುರಸ್ಕಾರ ಕಾರ್ಯಕ್ರಮ, ಏ. 2ರಂದು ಭಜನಾ ಸಂಕೀರ್ತನೆ, ಬೆಳಿಗ್ಗೆ 10ರಿಂದ 11.30 ಛಾಯಾ ತರಂಗಿಣಿ ಭಜನಾ ಮಂಡಳಿ, ಬೆಳಿಗ್ಗೆ 11.30ರಿಂದ 1.30 ವಿಪ್ರ ಮಹಿಳಾ ಭಜನಾ ಮಂಡಳಿ ನೀಲಾವರ, ಸಂಜೆ 4.30ರಿಂದ ಶ್ರೀ ರಾಮ ಮಹಿಳಾ ಭಜನಾ ಮಂಡಳಿ, ಮಣೂರು ಇವರಿಂದ ಭಜನಾ ಕಾರ್ಯಕ್ರಮ, ಸಂಜೆ 6ರಿಂದ ಸಾನ್ವಿ ಮತ್ತು ಪ್ರೇರಣಾ, ಮಣೂರು ಪಡುಕರೆ ಅವರಿಂದ ಯಕ್ಷನೃತ್ಯ ಕಾರ್ಯಕ್ರಮ ಜರಗಲಿದೆ ಎಂದು ದೇಗುಲದ ಅಧ್ಯಕ್ಷ ಸತೀಶ್ ಎಚ್. ಕುಂದರ್ ತಿಳಿಸಿದ್ದಾರೆ.

ಹ್ಯಾಕಥಾನ್: ನಿಟ್ಟೆ ವಿದ್ಯಾರ್ಥಿಗೆ ಪ್ರಶಸ್ತಿ



ಕಾರ್ಕಳ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ 2ನೇ ವರ್ಷದ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ಆದಿತ್ಯ ಕುಮಾರ್ ಝಾ ಅವರು ಫೆಬ್ರವರಿ 2026 ರಲ್ಲಿ ನಡೆದ ಎಚ್.ಪಿ. ಇ ಥಿಂಕ್ –ಎ–ಥಾನ್ ಹ್ಯಾಕಥಾನ್ ನಲ್ಲಿ ಅತ್ಯುತ್ತಮ ಸಾಧನೆ ಮಾಡಿದವರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ.
ಈ ಪ್ರತಿಷ್ಠಿತ ಕಾರ್ಯಕ್ರಮದಲ್ಲಿ 10 ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದವು. ಈ ಕಾರ್ಯಕ್ರಮದ ಟಾಪ್ 3 ವಿಜೇತರಲ್ಲಿ ಆದಿತ್ಯ ಕುಮಾರ್ ಝಾ ಒಬ್ಬರಾಗಿದ್ದಾರೆ ಎಂದು ನಿಟ್ಟೆ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ನಿರಂಜನ್ ಎನ್. ಚಿಪ್ಳೂಣ್ಕರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡ ರೋಗಿಗಳಿಗೆ ಆಹಾರ ಕಿಟ್ ವಿತರಣೆ

ಉಡುಪಿ: ನಗರದ ಅಜ್ಜರಕಾಡು ಜಿಲ್ಲಾ ಆಸ್ಪತ್ರೆಯಲ್ಲಿ ಬುಧವಾರ ಎಂ.ಸಿ.ಕೆ.ಎಸ್ ಫುಡ್ ಫಾರ್ ದಿ ಹಂಗ್ರೀ ಫೌಂಡೇಶನ್ ವತಿಯಿಂದ 65 ಬಡ ರೋಗಿಗಳಿಗೆ ಆಹಾರ ಪದಾರ್ಥಗಳ ಕಿಟ್ ಹಾಗೂ ಮಕ್ಕಳಿಗೆ ನೋಟ್ ಪುಸ್ತಕವನ್ನು ವಿತರಿಸಲಾಯಿತು.
ಈ ಸಂದರ್ಭದಲ್ಲಿ ಜಿಲ್ಲಾ ಸರ್ಜನ್ ಡಾ.ಎಚ್ ಅಶೋಕ್ ಮಾತನಾಡಿದರು.
ಎಂ.ಸಿ.ಕೆ.ಎಸ್ ಸಂಚಾಲಕಿ ನಿಧಿ ಮಾತನಾಡಿ, ಈ ಹಿಂದೆ ಸಂಸ್ಥೆಯ ವತಿಯಿಂದ ಕ್ಯಾನ್ಸರ್ ಹಾಗೂ ಕ್ಷಯರೋಗಿಗಳಿಗೆ ಆಹಾರ ಕಿಟ್ ವಿತರಿಸಿದ್ದು, ಅದೇ ರೀತಿ ಫೌಂಡೇಶನ್‌ನ ಸಂಸ್ಥಾಪಕ ಚೋವಾ ಕೋಕ್ ಸುಯಿ ಇವರ ಸವಿನೆನಪಿಗಾಗಿ ಇಂದು ಬಡ ರೋಗಿಗಳಿಗೆ ಆಹಾರ ಕಿಟ್ ವಿತರಿಸಲಾಗಿದೆ ಎಂದರು.
ಜಿಲ್ಲಾ ಆಸ್ಪತ್ರೆ ಎ.ಆರ್.ಟಿ ಕೇಂದ್ರದ ವೈದ್ಯಾಧಿಕಾರಿ ಡಾ. ಶ್ರೀನಾಥ್, ಎ.ಆರ್.ಟಿ ಕೇಂದ್ರದ ಸಿಬ್ಬಂದಿ ಉಪಸ್ಥಿತರಿದ್ದರು. ಜಿಲ್ಲಾ ಆಸ್ಪತ್ರೆ ಆಪ್ತ ಸಮಾಲೋಚಕ ಮನು ಎಸ್.ಬಿ ನಿರೂಪಿಸಿ, ವಂದಿಸಿದರು.

ಗೀತಾನಂದ ಫೌಂಡೇಶನ್‌ನಿಂದ ಬೃಹತ್ ಸ್ವಚ್ಛತಾ ಅಭಿಯಾನ ಯಶಸ್ವಿ



ಕೋಟ: ಗೀತಾನಂದ ಫೌಂಡೇಶನ್ ವತಿಯಿಂದ 96ನೇ ಆನಂದದ ಸೃಷ್ಟಿ ಕಾರ್ಯಕ್ರಮದ ಅಂಗವಾಗಿ ವಡ್ಡರ್ಸೆ, ಸಾಹೆಬ್ರಕಟ್ಟೆ ರಸ್ತೆಯ ಇಕ್ಕೆಲಗಳಲ್ಲಿ ಬ್ರಹತ್ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು.
ನಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. ಈ ನಿಟ್ಟಿನಲ್ಲಿ ವಡ್ಡರ್ಸೆ ಪಂಚಾಯತ್ ಸಹಕಾರದೊಂದಿಗೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿ ನಿಗಾ ವಹಿಸಲು ಯೋಜಿಸಲಾಗಿದೆ. ಗ್ರಾಮದ ಪ್ರತಿಯೊಬ್ಬ ನಾಗರಿಕರೂ ಇದಕ್ಕೆ ಸಹಕರಿಸಬೇಕು ಎಂದು ಆನಂದದ ಸೃಷ್ಟಿ ತಂಡದ ಹಿರಿಯ ಸ್ವಯಂಸೇವಕ ಶ್ರೀನಿವಾಸ ಕುಂದರ್ ಕರೆ ನೀಡಿದರು. ಈ ಅಭಿಯಾನದಲ್ಲಿ ಸಾರ್ವಜನಿಕರು ಎಸೆದ ಕಸವನ್ನು ಸಂಗ್ರಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು. ಫೌಂಡೇಶನ್‌ನ ಸ್ವಯಂಸೇವಕರು, ವಡ್ಡರ್ಸೆ ಎಸ್‌ಎಲ್‌ಆರ್‌ಎಂ ಘಟಕದ ಸದಸ್ಯರು ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸಿದರು.

ಎಸ್‌ಎಲ್‌ಆರ್‌ಎಂ ಘಟಕಕ್ಕೆ ತ್ಯಾಜ್ಯ ಹಸ್ತಾಂತರ
ಒಟ್ಟು 12 ಚೀಲ ಮದ್ಯದ ಬಾಟಲಿಗಳು ಮತ್ತು 61 ಚೀಲ ಕಸ ಸೇರಿದಂತೆ ಒಟ್ಟು 82 ಚೀಲ ತ್ಯಾಜ್ಯ ಸಂಗ್ರಹಿಸಲಾಯಿತು. ಅಭಿಯಾನದಲ್ಲಿ ಸಂಗ್ರಹಿಸಿದ ಕಸವನ್ನು ವಡ್ಡರ್ಸೆ ಪಂಚಾಯತ್ ಸಹಯೋಗದಲ್ಲಿ ಎಸ್‌ಎಲ್‌ಆರ್‌ಎಂ ಘಟಕಕ್ಕೆ ಹಸ್ತಾಂತರಿಸಲಾಯಿತು.



ಶಿರ್ವ ಸಮೀಪದ ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ದ್ವಿತೀಯ ವರ್ಷದ ಎಂಬಿಎ ವಿದ್ಯಾರ್ಥಿಗಳಾದ ರಾಹುಲ್ ಆರ್., ಶ್ರೀಕರ, ಶೆಟ್ಟಿ ಸ್ವಸ್ತಿಕ್ ಸುರೇಶ್, ಆದಿತ್ಯ ರಾವ್, ರಕ್ಷಿತಾ ರಾಘವೇಂದ್ರ ಶೇಟ್, ಸಂಜನಾ, ಮೇಘಾ, ಬುಶ್ರಾ ಅಬ್ದುಲ್ ನಾಸಿರ್, ಸೂರಜ್ ಶೆಟ್ಟಿ ಮತ್ತು ಪೂಜಾರಿ ಅಭಿಲಾಷ್ ಲಕ್ಷ್ಮಣ್ ಅವರು ನಿಟ್ಟೆಯ ಜಸ್ಟಿಸ್ ಕೆಎಸ್ ಹೆಗ್ಡೆ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್‌ನಲ್ಲಿ ನಡೆದ ಏಥಿನ್ - 2026ರಲ್ಲಿ ಬಿ-ಸ್ಕೂಲ್ ಫೆಸ್ಟ್‌ನಲ್ಲಿ ಪ್ರಥಮ ಸ್ಥಾನಗಳಿಸಿ ಟ್ರೋಫಿಯೊಂದಿಗೆ ರೂ. 50,000/- ನಗದು ಬಹುಮಾನ ಪಡೆದಿದ್ದಾರೆ.

ಕುಂದಾಪುರ ತಾಲೂಕು ದೇವರ ದಾಸಿಮಯ್ಯ ಜಯಂತಿ ಆಚರಣೆ

ಕುಂದಾಪುರ: ಕುಂದಾಪುರ ತಾಲೂಕು ಆಡಳಿತ, ತಾ.ಪಂ. ಕುಂದಾಪುರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ದೇವರ ದಾಸಿಮಯ್ಯ ಜಯಂತಿಯನ್ನು ಕುಂದಾಪುರದ ಮಿನಿ ಆಡಳಿತ ಸೌಧದ ಸಭಾಂಗಣದಲ್ಲಿ ಸೋಮವಾರ ಆಚರಿಸಲಾಯಿತು. ಉಪ ತಹಶೀಲ್ದಾರ್ ವಿನಯ್ ಎಸ್.ವಿ. ಅವರು ಉದ್ಘಾಟಿಸಿ, ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನದ ಮೂಲಕ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಉಪತಹಶಿಲ್ದಾರ್ ಚಂದ್ರಶೇಖರ್ ಎಂ., ವಿವಿಧ ಇಲಾಖಾ ಅಧಿಕಾರಿಗಳು, ಕುಂದಾಪುರ ತಾಲೂಕು ಕಚೇರಿಯ ಸಿಬಂದಿ ಉಪಸ್ಥಿತರಿದ್ದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷ ಮೋಹನ ಪೂಜಾರಿ ಸೂಚನೆ

ಬೈಂದೂರು ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಎಲ್ಲಾ ಬಸ್ ಆಗಮನಕ್ಕೆ ಕ್ರಮಕೈಗೊಳ್ಳಿ

ಬೈಂದೂರು: ರಾಜ್ಯ ಸರ್ಕಾರದ ಗ್ಯಾರೆಂಟಿ ಯೋಜನೆ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪಿಸಬೇಕಾಗಿದ್ದು ನಮ್ಮೆಲ್ಲರ ಕರ್ತವ್ಯವಾಗಿದ್ದು ಇದಕ್ಕೆ ಅಧಿಕಾರಿಗಳ ಸಹಕಾರ ಅಗತ್ಯ ಎಂದು ಬೈಂದೂರು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಮೋಹನ ಪೂಜಾರಿ ಹೇಳಿದರು.
ಇಲ್ಲಿನ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ಗ್ಯಾರಂಟಿ ಅನುಷ್ಠಾನ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬೈಂದೂರು ತಾಲೂಕಿನ ಯಡ್ತರೆಯಲ್ಲಿ ಸುಸಜ್ಜಿತವಾದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಆಗಿದ್ದರೂ ಸರ್ವಿಸ್ ರಸ್ತೆ ಆಗದ ಕಾರಣ ಉಡುಪಿ ಭಾಗದ ಬಸ್ಸುಗಳನ್ನು ನಿಲ್ದಾಣಕ್ಕೆ ಬರದೇ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿದೆ. ಇದಕ್ಕೆ



ಸೂಕ್ತ ಕ್ರಮವಹಿಸಲು ಈಗಾಗಲೇ ಕೆಎಸ್‌ಆರ್‌ಟಿಸಿ ಡಿಸಿ ಗಮನಕ್ಕೆ ತರಲಾಗಿದೆ. ಜಿಲ್ಲಾಧಿಕಾರಿಗಳಿಗೂ ಮನವಿ ಮಾಡಲಾಗಿದೆ. ಎಲ್ಲಾ ಬಸ್ಸುಗಳು ನಿಲ್ದಾಣಕ್ಕೆ ಬರುವಂತೆ ಹೆಚ್ಚಿನ ಕ್ರಮವಹಿಸಲು ಸೂಚಿಸಿದರು.

ಫೆಬ್ರವರಿ ತನಕ 283.07ಕೋಟಿ ರೂ.
ಸರ್ಕಾರದ ಪಂಚ ಗ್ಯಾರಂಟಿ ಯೋಜನೆಯಿಂದ ಬೈಂದೂರು ತಾಲೂಕಿಗೆ ಫೆಬ್ರವರಿ ತಿಂಗಳ ತನಕ ಸುಮಾರು 283.07 ಕೋಟಿ ರೂ. ವೆಚ್ಚ ಮಾಡಲಾಗಿದೆ. ಗೃಹಲಕ್ಷ್ಮೀ ಯೋಜನೆಯಿಂದ ಡಿಸೆಂಬರ್‌ನಲ್ಲಿ 27,738 ಫಲಾನುಭವಿಗಳಿಗೆ 140.09 ಕೋಟಿ ಜಮಾ ಆಗಿದೆ. 1289 ಮಂದಿಗೆ ಹಣ ಬರುವುದು ಬಾಕಿ ಇದ್ದು, ಈ ಪೈಕಿ ಆಧಾರ್ ಮ್ಯಾಪಿಂಗ್, ಐಟಿ–ಜಿಎಸ್ಟಿ ಹಾಗೂ ಹೊಸ ನೋಂದಣಿಯವರೂ ಸೇರಿದ್ದಾರೆ ಎಂದರು.

ಬಸ್ ಸ್ಥಗಿತದಿಂದ ಸಾರ್ವಜನಿಕರಿಗೆ ತೊಂದರೆ
ಪರ್ಮಿಟ್ ಹೊಂದಿದ್ದರೂ ಕೆಎಸ್‌ಆರ್‌ಟಿಸಿ ಬಸ್ ಸೇವೆ ಸ್ಥಗಿತಗೊಳಿಸಿ ತಾಲೂಕು ವ್ಯಾಪ್ತಿಯ ಗ್ರಾಮೀಣ ಭಾಗಗಳ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಬೈಂದೂರು ಸರ್ಕಾರಿ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳಿಗೆ ಗ್ಯಾರೆಂಟಿ ಸಮಿತಿಯ ನಿರಂತರ ಒತ್ತಡದ ಫಲವಾಗಿ ಬೆಳಿಗ್ಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಆದರೆ ಮಧ್ಯಾಹ್ನ ಸಮಸ್ಯೆ ಎದುರಿಸುತ್ತಿದ್ದಾರೆ. ಮಧ್ಯಾಹ್ನ 3 ಗಂಟೆ ಸಮಯದಲ್ಲಿಯೂ ಬಸ್ ವ್ಯವಸ್ಥೆ ಒದಗಿಸಲು ಕ್ರಮ ಕೈಗೊಳ್ಳುವಂತೆ ಮತ್ತು ಬೈಂದೂರು ಕೇಂದ್ರಿತವಾಗಿ ಸಿರಸಿ, ಉಡುಪಿ – ಮಂಗಳೂರು – ಹಾಸನ ಮಾರ್ಗಕ್ಕೆ ನೂತನವಾಗಿ ಎಸಿ, ನಾನ್ ಎಸಿ ಬಸ್ಸುಗಳನ್ನು ಒದಗಿಸಲು ಪತ್ರ ಬರೆದು, ಫಾಲೋಅಪ್ ಮಾಡಲು ಸೂಚಿಸಿದರು.

ಗೃಹಜ್ಯೋತಿ ಯೋಜನೆಯಿಂದ ಬೈಂದೂರು ಮೆಸ್ಕಾಂ ವ್ಯಾಪ್ತಿಯ 28512 ಕುಟುಂಬಗಳಿಗೆ 53.03 ಕೋಟಿ ರೂ., ತಲ್ಲೂರು ಮೆಸ್ಕಾಂ ಉಪ ಕೇಂದ್ರ ವ್ಯಾಪ್ತಿಯ 1832 ಕುಟುಂಬಗಳಿಗೆ 3.41 ಕೋಟಿ ರೂ. ಸೇರಿದಂತೆ ಒಟ್ಟು 56.44 ಕೋಟಿ ರೂ. ವೆಚ್ಚವಾಗಿದೆ. ಅನ್ನಭಾಗ್ಯ ಯೋಜನೆಯಡಿ 25,532 ಪಡಿತರ ಚೀಟಿಗಳಿಗೆ 1.91 ಕೋಟಿ ರೂ. ವಿನಿಯೋಗಿಸಲಾಗಿದೆ ಎಂದರು.
ತಾಲೂಕು ಪಂಚಾಯತ್ ಇಒ ರಾಮದಾಸ್. ಸಮಿತಿಯ ಸದಸ್ಯರಾದ ಮಾಲತಿ ಶಿವಾನಂದ, ಅನೀಶ್ ಪೂಜಾರಿ, ಸೂರ್ಯಕಾಂತಿ, ದೇವದಾಸ್ ವಿ.ಜೆ., ಬಾಬು ದೇವಾಡಿಗ, ಮುಕ್ರಿ ಮೊಹಮ್ಮದ್ ಅಲ್ತಾಫ್, ಪ್ರಭಾಕರ ನಾಯ್ಕ್, ಅಣ್ಣಪ್ಪ ಶೆಟ್ಟಿ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.